# ಪ್ರೊ. ಡಿ. ಲಿಂಗಯ್ಯ : ಜೀವನ ಮತ್ತು ಸಾಹಿತ್ಯ ಸಾಧನೆ

**ವಿವಿಧ ಲೇಖಕರು**


**ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ**
ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
3ನೆಯ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ
ಬೆಂಗಳೂರು–560019.
ದೂರವಾಣಿ : 26615877, 26676773
ಇಮೇಲ್ : bmsritrust@gmail.com





**PROF. D. LINGAIAH : JEEVANA MATHU SAHITYA SADHANE**
(Life and Literary Achievement of Prof. D. Lingaiah) by different writers.
Published by : **B.M.SRI Smaraka Prathisthana,** 3rd main Road, Narasimharaja Colony, Bangalore-560019. 080-26615877

Size 1/8 Demmy
First Impression : 2013
Pages : viii + 108
Copies : 1000

© Reserved
Price : **Rs. 60/-**


**ಗ್ರಂಥ ಪ್ರಕಟಣಾ ಸಲಹಾ ಸಮಿತಿ**
ಪ್ರೊ. ಎಂ.ಎಚ್. ಕೃಷ್ಣಯ್ಯ (ಗೌರವಾಧ್ಯಕ್ಷರು)
ಡಾ. ಪಿ.ವಿ. ನಾರಾಯಣ (ಅಧ್ಯಕ್ಷರು)
ಶ್ರೀ ಎಸ್.ವಿ. ಶ್ರೀನಿವಾಸರಾವ್ (ಗೌರವ ಕಾರ್ಯದರ್ಶಿ)
ಪ್ರೊ. ಜಿ. ಅಬ್ದುಲ್ ಬಷೀರ್ (ಗೌರವ ಕಾರ್ಯದರ್ಶಿ)
ಶ್ರೀ ಎಂ.ಎಸ್. ರಾಮಪ್ರಸಾದ್ (ಕೋಶಾಧಿಕಾರಿ)
ಪ್ರೊ. ಎಲ್.ಎಸ್. ಶೇಷಗಿರಿರಾವ್ (ಸದಸ್ಯರು)
ಪ್ರೊ. ಅ.ರಾ. ಮಿತ್ರ (ಸದಸ್ಯರು)
ಪ್ರೊ. ಜಿ. ಅಶ್ವತ್ಥನಾರಾಯಣ (ಸದಸ್ಯರು)



ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ಚಾಮರಾಜಪೇಟೆ, ಬೆಂಗಳೂರು-೧೮
✆ ೨೬೬೧ ೩೧೨೩, ೨೬೬೧ ೮೭೫೨

ಆಚಾರ್ಯ ‘ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ’ವನ್ನು ಕಟ್ಟಿ ಬೆಳೆಸಿದವರಲ್ಲಿ ಪ್ರೊ. ಎಂ.ವಿ. ಸೀತಾರಾಮಯ್ಯನವರು ಮುಖ್ಯರು. ಅವರು ಅದನ್ನು ೦೬ ಮೇ, ೧೯೭೯ರಲ್ಲಿ ಸ್ಥಾಪಿಸಿದರು. ಈ ಪ್ರತಿಷ್ಠಾನವನ್ನು ರಾಷ್ಟ್ರಕವಿ ಕುವೆಂಪು ಅವರು ೧೦ ಮಾರ್ಚ್, ೧೯೮೦ರಂದು ಉದ್ಘಾಟಿಸಿದರು. ಕರ್ನಾಟಕ ಸರ್ಕಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಸಾರ್ವಜನಿಕರ ಸಹಕಾರ, ಸಹಾಯಗಳಿಂದ ಬೆಂಗಳೂರಿನ ನರಸಿಂಹರಾಜ ಕಾಲೋನಿಯಲ್ಲಿ ‘ಬಿ.ಎಂ.ಶ್ರೀ. ಕಲಾ ಭವನ’ ನಿರ್ಮಾಣವಾಗಿದೆ. ಪ್ರತಿಷ್ಠಾನದ ‘ಪ್ರೊ. ಎಂ.ವಿ. ಸೀತಾರಾಮಯ್ಯ ಸಂಶೋಧನಾ ಕೇಂದ್ರ’ದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆಯನ್ನು ಪಡೆದ ಪಿಎಚ್.ಡಿ., ಹಾಗೂ ಎಂ.ಫಿಲ್ ತರಗತಿಗಳು ನಡೆಯುತ್ತಿವೆ. ಪ್ರತಿಷ್ಠಾನ ಅಪರೂಪದ ಹಸ್ತಪ್ರತಿ ಭಂಡಾರವನ್ನು ಹಾಗೂ ಉತ್ತಮ ಗ್ರಂಥಭಂಡಾರವನ್ನು ಹೊಂದಿದೆ. ಹಸ್ತಪ್ರತಿ ವಿಜ್ಞಾನ ಮತ್ತು ಹಳಗನ್ನಡ ಅಧ್ಯಯನ ತರಗತಿಗಳನ್ನು ಪ್ರತಿಷ್ಠಾನ ನಡೆಸುತ್ತಿದೆ. ಪ್ರತಿಷ್ಠಾನ ತ್ರೈಮಾಸಿಕ ‘ವಾರ್ತಾಪತ್ರ’ವನ್ನು ಹಾಗೂ ದ್ವೈವಾರ್ಷಿಕ ವಿದ್ವತ್ ಪತ್ರಿಕೆ ಕರ್ನಾಟಕ ‘ಲೋಚನ’ವನ್ನು ಪ್ರಕಟಿಸುತ್ತಿದೆ. ಕಾಲಕಾಲಕ್ಕೆ ಉತ್ತಮ ಗ್ರಂಥಗಳನ್ನು ಪ್ರಕಟಿಸುತ್ತಿದೆ. ನಿರಂತರವಾಗಿ ಸಂಶೋಧನಾತ್ಮಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರತಿಷ್ಠಾನ ನಡೆಸಿಕೊಂಡು ಬರುತ್ತಿದೆ. ೨೦೦೪ರಲ್ಲಿ ಪ್ರತಿಷ್ಠಾನ ರಜತ ಮಹೋತ್ಸವವನ್ನು ಆಚರಿಸಿತು.



# ಮುಂಮಾತು

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವು ಮೂರು ದಶಕಗಳಿಗೂ ಮೀರಿದ ಅವಧಿಯಿಂದ ಕಾರ್ಯ ನಿರ್ವಹಿಸುತ್ತ ಕನ್ನಡ ಸಾಂಸ್ಕೃತಿಕ ಲೋಕಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡುತ್ತ ಬಂದ ಸಂಸ್ಥೆ. ಇದರ ಬಗ್ಗೆ ನಾಡಿನ ಎಲ್ಲ ವಿದ್ವಾಂಸರೂ ಆದರಾಭಿಮಾನಗಳನ್ನು ಹೊಂದಿ ಸಂಸ್ಥೆಯೊಂದಿಗೆ ಸಹಕರಿಸುತ್ತಿದ್ದಾರೆ. ಹಾಗಾಗಿಯೇ ಅದರ ಪ್ರಕಟಣಕಾರ್ಯವೂ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದೆ. ತಮ್ಮ ಹೊಚ್ಚ ಹೊಸ ಕೃತಿಗಳನ್ನು ಪ್ರಕಟಿಸಲು ನಮಗೆ ಅನುವುಮಾಡಿಕೊಡುತ್ತಿದ್ದಾರೆ.

ಪ್ರತಿಷ್ಠಾನದ ಮೂಲ ನೆಲೆ ಸಂಶೋಧನೆ. ಸಂಶೋಧನೆಯೆಂಬುದು ಹಿಂದಿನದನ್ನು ಕೆದಕುವುದಕ್ಕೆ ಮಾತ್ರ ಸೀಮಿತವಾದದ್ದೇನಲ್ಲ. ಎಲ್ಲ ಕಾಲದ ಸಂದರ್ಭ, ಸನ್ನಿವೇಶ, ಕೃತಿ, ಕಾರ್ಯ ಇವುಗಳಲ್ಲಿ ಅಂತರ್ಗತವಾದ ಸತ್ಯವನ್ನು ಗುರುತಿಸುವ ಕೆಲಸವೇ ಸಂಶೋಧನೆಯೆನ್ನಬಹುದೆಂದು ನನ್ನ ತಿಳಿವಳಿಕೆ. ಹಾಗಾಗಿ ಸಮಕಾಲೀನವಾದದ್ದರ ಬಗ್ಗೆಯೂ ಶಾಶ್ವತದ ಜೊತೆಗೆ ಸದ್ಯದ ಬಗ್ಗೆಯೂ ಸಂಶೋಧನೆ ನಡೆಯಬೇಕಾದುದು, ಆವಶ್ಯಕ. ಸಂಶೋಧನೆಯ ಅರ್ಥ ಹುಡುಕಾಟ ಎಂದಲ್ಲವೇ? ಆಗಲೇ ಹೇಳಿದಂತೆ ’ಸತ್ಯ’ವನ್ನು ಶೋಧಿಸುವುದು. ಆದರೆ ಸತ್ಯ ಎಂದರೇನೆಂಬುದನ್ನೇ ಯಾರೂ ಖಚಿತವಾಗಿ ನಿರ್ವಚಿಸಲಾಗುವುದಿಲ್ಲ! ಒಂದು ಕಾಲಕ್ಕೆ ಸತ್ಯ ಎನ್ನಿಸಿಕೊಳ್ಳುವಂಥದು ಮತ್ತೊಂದು ಕಾಲಕ್ಕೆ ಹಾಗೆ ಕಾಣದೇ ಹೋಗಬಹುದು; ಅಥವಾ ಒಬ್ಬ ವ್ಯಕ್ತಿಗೆ ಸತ್ಯವೆನಿಸಿದ್ದು ಮತ್ತೊಬ್ಬನಿಗೆ ಹಾಗನ್ನಿಸದೇ ಇರಬಹುದು; ಅಷ್ಟೇಕೆ, ಒಬ್ಬನೇ ವ್ಯಕ್ತಿಗೆ ಒಮ್ಮೆ ಸತ್ಯವೆನ್ನಿಸಿದುದು ಕಾಲ ಸರಿದಂತೆ ತನ್ನ ಅನಿಸಿಕೆಯ ಬಗ್ಗೆ ಅವನಿಗೆ ಅನುಮಾನವುಂಟಾಗ ಬಹುದು. ಅಂದರೆ ಸತ್ಯ ಎಂಬುದು ಅನಂತಮುಖಿ; ಅದಕ್ಕನುಗುಣವಾಗಿ ಸಂಶೋಧನೆಯೂ. ಹಳೆಯದನ್ನು ಹಾಗೂ ಹೊಸದನ್ನು ಹೊಸದೃಷ್ಟಿಯಿಂದ ನೋಡುವ, ವಿಶ್ಲೇಷಿಸುವ, ಪರಿಭಾವಿಸುವ, ವ್ಯಾಖ್ಯಾನಿಸುವ, ಅದರ ಪ್ರಸ್ತುತತೆಯನ್ನು ವಿವೇಚಿಸುವ ಎಲ್ಲ ಬೌದ್ಧಿಕ ಸಾಹಸಗಳೂ ಸಂಶೋಧನೆಗಳೇ.

ಇಂತಹ ಸಂಶೋಧನೆ ಹೆಚ್ಚಾಗಬೇಕು, ಅರಿಯುವ, ಬಗೆಯುವ ಪ್ರಕ್ರಿಯೆ ಮೊನಚಾಗಬೇಕು, ಆಳವಾಗಬೇಕು. ಅದಕ್ಕಾಗಿ ಹಿರಿಯರ ಮಾರ್ಗದರ್ಶನ ಬೇಕು, ಕಿರಿಯರ ಉತ್ಸಾಹಬೇಕು. ಪ್ರತಿಷ್ಠಾನವು ತಾನು ಆರಂಭಗೊಂಡ ಕಾಲದಿಂದ ಮೊದಲುಗೊಂಡ ಇಂತಹ ಕಾರ್ಯಗಳಿಗೆ ವೇದಿಕೆಯಾಗಿದೆ; ಉಪನ್ಯಾಸಗಳು, ವಿಚಾರ ಸಂಕಿರಣಗಳು, ಸಂವಾದಗಳು  ಇವುಗಳ ಜೊತೆಗೆ ಎಂ.ಫಿಲ್ ಮತ್ತು ಪಿಎಚ್.ಡಿ ಅಭ್ಯರ್ಥಿಗಳಿಗೆ ತರಬೇತಿ ಮತ್ತು ಮಾರ್ಗದರ್ಶನಗಳು, ಪುಸ್ತಕ ಪ್ರಕಟಣೆ ಇವುಗಳ

ಮೂಲಕ ಇಂಥ ಸಂಶೋಧನೆಗೆ ಪ್ರತಿಷ್ಠಾನವು ವೇದಿಕೆಯಾಗಿದೆ. ಈ ಕಾರ್ಯದಲ್ಲಿ ಎಲ್ಲರ ನೆರವು ಮತ್ತು ಪ್ರೋತ್ಸಾಹಗಳು ಆವಶ್ಯಕ.

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದ ಪ್ರೊ. ಡಿ. ಲಿಂಗಯ್ಯನವರು ೧೨-೦೯-೨೦೧೨ರಂದು ಕಾರ್ಯಕ್ರಮ ನಡೆಯುತ್ತಿರುವಾಗಲೇ ಹಠಾತ್ತಾಗಿ ಕುಸಿದುಬಿದ್ದು ನಿಧನರಾದರು. ಅವರ ನೆನಪಿನಲ್ಲಿ ದಿನಾಂಕ ೩ ಅಕ್ಟೋಬರ್, ೨೦೧೨ ರಂದು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಪ್ರೊ. ಡಿ. ಲಿಂಗಯ್ಯನವರ ಬದುಕು-ಬರಹ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ನಾಡಿನ ಖ್ಯಾತ ಲೇಖಕರೂ ಪ್ರೊ. ಡಿ. ಲಿಂಗಯ್ಯನವರ ಅಭಿಮಾನಿಗಳೂ ಮಿತ್ರರೂ ವಿವಿಧ ವಿಷಯಗಳನ್ನು ಕುರಿತು ಉಪನ್ಯಾಸಗಳನ್ನು ನೀಡಿದರು. ಅದರ ಪುಸ್ತಕ ರೂಪವೇ 'ಪ್ರೊ. ಡಿ. ಲಿಂಗಯ್ಯ: ಜೀವನ ಮತ್ತು ಸಾಹಿತ್ಯ ಸಾಧನೆ'. ಉಪನ್ಯಾಸಗಳನ್ನು ನೀಡಿ ಲೇಖನಗಳನ್ನು ಬರಹ ರೂಪದಲ್ಲಿ ಕಳುಹಿಸಿದ ಮಿತ್ರರಿಗೆ ಹೃತ್ಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ.

ಲೇಖಕರನ್ನು ಸಂಪರ್ಕಿಸಿ, ಶ್ರಮವಹಿಸಿ ಲೇಖನಗಳನ್ನು ತರಿಸಿಕೊಂಡು ಅಚ್ಚುಕಟ್ಟಾಗಿ ಜೋಡಿಸಿ, ಹಸ್ತಪ್ರತಿಯನ್ನು ಮುದ್ರಣಕ್ಕೆ ಕಳುಹಿಸಿ, ಕರಡಚ್ಚನ್ನು ತಿದ್ದಿ, ಪುಸ್ತಕ ಸುಂದರವಾಗಿ ಹಾಗೂ ಶೀಘ್ರವಾಗಿ ಹೊರಬರಲು ಕಾರಣರಾದ ಲಿಂಗಯ್ಯನವರ ಅಭಿಮಾನಿಗಳೂ ಪ್ರತಿಷ್ಠಾನದ ಗೌರವ ಕಾರ್ಯದರ್ಶಿಗಳೂ ಆದ ಪ್ರೊ. ಜಿ. ಅಬ್ದುಲ್ ಬಷೀರ್ ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಈ ಗ್ರಂಥವನ್ನು ಸುಂದರವಾಗಿ, ಶೀಘ್ರವಾಗಿ ಮುದ್ರಿಸಿಕೊಟ್ಟ ಲಕ್ಷ್ಮೀ ಮುದ್ರಣಾಲಯದ ಮಾಲೀಕರಿಗೆ ನಾನು ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

**ದಿನಾಂಕ : ೦೫-೦೯-೨೦೧೩** **ಡಾ॥ ಪಿ. ವಿ. ನಾರಾಯಣ**
ಅಧ್ಯಕ್ಷರು
ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ



# ಪರಿವಿಡಿ


೧. ಗೆಳೆಯನ ಕೆಲವು ನೆನಪುಗಳು –*ಡಾ. ಎಂ.ಎ. ಜಯಚಂದ್ರ* ೧

೨. ಕನ್ನಡವೆ ಎನ್ನುಸಿರು ಎಂದು ಬದುಕಿದ ಪ್ರೊ. ಡಿ. ಲಿಂಗಯ್ಯ –*ಪ್ರೊ. ಎಚ್. ಶೇಷಗಿರಿರಾವ್* ೯

೩. ಜಾನಪದ ಕ್ಷೇತ್ರಕ್ಕೆ ಪ್ರೊ. ಡಿ. ಲಿಂಗಯ್ಯನವರ ಕೊಡುಗೆ –*ಡಾ. ಚಕ್ಕೆರೆ ಶಿವಶಂಕರ್* ೧೯

೪. ಪ್ರೊ. ಡಿ. ಲಿಂಗಯ್ಯನವರ ಚರಿತ್ರೆ ಕೃತಿಗಳು ಮತ್ತು ಕಾದಂಬರಿಗಳು –*ಡಾ. ಬೈರಮಂಗಲ ರಾಮೇಗೌಡ* ೨೮

೫. ಪ್ರೊ. ಡಿ. ಲಿಂಗಯ್ಯನವರ ವಿಮರ್ಶೆ ಮತ್ತು ಕಾವ್ಯಕೃತಿಗಳು –*ಡಾ. ಸುರೇಶ ಪಾಟೀಲ* ೪೦

೬. ಪ್ರೊ. ಡಿ. ಲಿಂಗಯ್ಯನವರ ಆಧುನಿಕ ವಚನಗಳು –*ಪ್ರೊ. ಜಿ. ಅಶ್ವತ್ಥನಾರಾಯಣ* ೪೬

೭. ಪ್ರೊ. ಡಿ. ಲಿಂಗಯ್ಯನವರ ವ್ಯಕ್ತಿಚಿತ್ರ ಗಂಥಗಳು ಮತ್ತು ಜೀವನ ಚರಿತ್ರೆಗಳು –*ಡಾ. ವಿಜಯಾ ಸುಬ್ಬರಾಜ್* ೬೨

೮. ಸಾಹಿತ್ಯ, ಜಾನಪದ ಕ್ಷೇತ್ರ ಎರಡರಲ್ಲಿಯೂ ಪ್ರಬುದ್ಧತೆ ಸಾಧಿಸಿದ್ದ ಪ್ರೊ. ಡಿ. ಲಿಂಗಯ್ಯ –ರಾಮಣ್ಣ. ಎಚ್. ಕೋಡಿಹೊಸಹಳ್ಳಿ ೯೦

೯. ಸ್ವರ್ಗೀಯ ಶ್ರೀ ಡಿ. ಲಿಂಗಯ್ಯನವರಿಗೆ ಅಶ್ರುತರ್ಪಣ –ಎಂ.ಆರ್. ಶಿವರಾಮಯ್ಯ ೯೫

೧೦. ಕಲ್ಪವೃಕ್ಷ –ಎಂ.ಎಸ್. ಭಾಸ್ಕರ್ ೯೬

೧೧. ಪ್ರೊ. ಡಿ. ಲಿಂಗಯ್ಯ ಸಂಸ್ಮರಣ ಗೀತ –ಡಾ. ದೊಡ್ಡರಂಗೇಗೌಡ ೯೮

೧೨. ಪ್ರೊ. ಡಿ. ಲಿಂಗಯ್ಯ : ನಡೆದು ಬಂದ ದಾರಿ ೯೯

# ೧. ಗೆಳೆಯನ ಕೆಲವು ನೆನಪುಗಳು

–ಡಾ. ಎಂ.ಎ. ಜಯಚಂದ್ರ*

**ನ**ನ್ನ ಮತ್ತು ಡಿ.ಲಿಂ. ದೋಸ್ತಿ, ಚಡ್ಡಿ ದೋಸ್ತಿ ಅಲ್ಲ, ಜಿಗ್ರಿ ದೋಸ್ತಿ ಅಲ್ಲ, ಆಲ್ಕೋಹಾಲ್ ದೋಸ್ತಿ ಅಲ್ಲ, ಹಾಲಾಹಲ ದೋಸ್ತಿ ಅಲ್ಲ, ಕೇವಲ ಪರಿಶುದ್ಧ ಹಾಲಿನಂಥ ದೋಸ್ತಿ. ಅಲ್ಲಿ ಅಪೇಕ್ಷೆಯೂ ಇಲ್ಲ ಉಪೇಕ್ಷೆಯೂ ಇಲ್ಲ. ಮೈಸೂರು ಮಹಾರಾಜ ಕಾಲೇಜಿನ ಐಚ್ಛಿಕ ಕನ್ನಡ ತರಗತಿಯಲ್ಲಿ ಮೂಡಿದ ಸ್ನೇಹ.

ನಾವಿಬ್ಬರು ಮಂಡ್ಯದವರಾದರು ಪರಸ್ಪರ ಪರಿಚಯವಿರಲಿಲ್ಲ. ನಾನು ಮುನಿಸಿಪಲ್ ಹೈಸ್ಕೂಲಿನಲ್ಲಿ ಓದಿದವನು. ಆತ ಮೈಶುಗರ್ ಹೈಸ್ಕೂಲಿನಲ್ಲಿ ಓದಿದ ವಿದ್ಯಾರ್ಥಿ. ಅಲ್ಲಿ ಅನೇಕ ಸ್ಪರ್ಧೆಗಳಲ್ಲಿ ಸ್ಪರ್ಧಿಸಿ ಡಿ.ಲಿಂ. ವಿಜಯಶಾಲಿಯಾಗುತ್ತಿದ್ದನಂತೆ. ಆಗ ಬಹುಮಾನವಾಗಿ ಕರಾಕೃ ಅವರ ಜಾನಪದ ಪುಸ್ತಕವೊಂದು ದೊರಕಿತಂತೆ. ಅದು ಮುಂದೆ ಆತನ ಜಾನಪದ ಸಾಹಿತ್ಯ ಸಂಗ್ರಹಣೆಗೆ ಪ್ರೇರಣೆಯಾಗಿರಬೇಕೆಂದು, ಆತನ ಉಪಾಧ್ಯಾಯರು  ಒಮ್ಮೆ ನನಗೆ ತಿಳಿಸಿದರು.

ಡಿ.ಲಿಂ. ಮಂಡ್ಯ ಕಾಲೇಜಿನ ವಿದ್ಯಾರ್ಥಿ. ಆ ಸಂದರ್ಭದಲ್ಲಿ ಡಿ.ಲಿಂ. ಅನಾರೋಗ್ಯದಿಂದ ವಿದ್ಯಾರ್ಥಿನಿಲಯದಲ್ಲಿದ್ದಾಗ, ಆಗ ಆತನ ಕನ್ನಡ ಅಧ್ಯಾಪಕರಾಗಿದ್ದ ಶ್ರೀ ಹಂಪನಾ ಅಲ್ಲಿಗೆ ಹೋಗಿ, ತಮ್ಮ ನೆಚ್ಚಿನ ವಿದ್ಯಾರ್ಥಿಯ ಯೋಗಕ್ಷೇಮ ವಿಚಾರಿಸಿ ಬಂದಿದ್ದರಂತೆ.

ಬಿ.ಎ. ಪ್ರಥಮ ವರ್ಷದ ಹೊತ್ತಿಗೇ ಆತನಲ್ಲಿ ನಾಟಕದ ಆಸಕ್ತಿಯಿತ್ತು. ಬಹುಶಃ 'ದಡ್ಡ ಶಿಖಾಮಣಿ' ಪ್ರಕಟಗೊಂಡಿತ್ತು. 'ಬಡತನದ ಬಾಳು' ನಾಟಕ ಅಚ್ಚಾಗುತ್ತಿತ್ತು. ಕರಡು ತಿದ್ದಿಕೊಡಲು ಕೇಳಿಕೊಂಡ. ತಿದ್ದುವ ನಿಯಮಗಳು ಗೊತ್ತಿರಲಿಲ್ಲ. ಮೊದಲ ಸಲ ತಿದ್ದಿದ್ದು ಸಾಕಷ್ಟು ತಪ್ಪುಗಳಿದ್ದಿರಬೇಕು. ಅದನ್ನು ಕಂಡು ಆತನಿಗೆ ಸಿಟ್ಟು ಬಂದಿರಬೇಕು. ಬೇಸರದಿಂದ ಹಿರಿಯರು ಗದರುವ ಹಾಗೆ ವರ್ತಿಸಿದ. ಆಗ ಆದ ಒಂದು ತರಹದ 'ಫೀಲಿಂಗ್' ಈಗಲೂ ಮಾಸಿಲ್ಲ. ಹೀಗಾಯಿತು ನಮ್ಮಿಬ್ಬರ ನಡುವಿನ ಗೆಳತನದ ಬೆಸುಗೆ.

* ವಿಳಾಸ : # ೩೧೭, ೭ನೇ 'ಬಿ' ಮುಖ್ಯರಸ್ತೆ, ೩ನೇ ಅಡ್ಡರಸ್ತೆ, ೧ನೆಯ ವಿಭಾಗ, ಕಲ್ಯಾಣನಗರ, ಬೆಂಗಳೂರು–೫೬೦೦೪೩. ಮೊಬೈಲ್ : ೯೪೪೮೮೦೨೩೭೪



ಅಂದಿನ ಅವನ ವರ್ತನೆಯಿಂದ ಅವನು ನನ್ನ ಸಮವಯಸ್ಕನಲ್ಲ ಎನಿಸಿತು. ಹಿರಿಯ, ಸುಮಾರು ಐದು ವರ್ಷದಷ್ಟು. ಅನಾರೋಗ್ಯದ ವಿಘ್ನವನ್ನು ದಾಟಿದ ನಂತರ ಮೈಸೂರಿನಲ್ಲಿ ನಾವಿಬ್ಬರು ಸಹಪಾಠಿಗಳಾದೆವು. ಇದೆಲ್ಲ ನನ್ನ ಅರಿವಿಗೆ ಬಂದದ್ದು ಅನೇಕ ವರ್ಷಗಳ ನಂತರ.

ಬಿ.ಎ. ವ್ಯಾಸಂಗದ ಸಂದರ್ಭದಲ್ಲಿ ನಮಗೆ ಹೆಚ್ಚು ಪ್ರಭಾವ ಬೀರಿದ ಉಪನ್ಯಾಸಕರೆಂದರೆ 'ಸುಜನಾ' (ಪ್ರೊ. ಎಸ್. ನಾರಾಯಣಶೆಟ್ಟಿ). ಅವರ ಮನೆಗೆ ಆಗಾಗ ಹೋಗುತ್ತಿದ್ದೆವು. ನಮ್ಮ ಕವನಗಳನ್ನು ತೋರಿಸಿ ತಿದ್ದಿಸಿಕೊಳ್ಳುತ್ತಿದ್ದೆವು. ಅವರ ಮನೆಯಲ್ಲಿ ಕಾಫಿ ಕುಡಿಸು ತಾಸುಗಟ್ಟಲೆ ಅವರ ಮಾತುಗಳನ್ನು ಆಲಿಸುತ್ತಿದ್ದೆವು. ಅವರ ವೈಚಾರಿಕತೆ ನಮ್ಮನ್ನು ಆಕರ್ಷಿಸಿತ್ತು. 'ಆದಿಪುರಾಣ ಸಂಗ್ರಹ' ಪಾಠ ಮಾಡಿದರು. ಆಗ ಅವರು ತೋರುತ್ತಿದ್ದ ತೌಲನಿಕ ದೃಷ್ಟಿ ಹಾಗೂ ಕಾವ್ಯ ವಿಮರ್ಶೆ ನಮಗೆ ಹೃದ್ಯವೆನಿಸಿತು.

ಆಗತಾನೆ ಪ್ರೊ. ಜಿ.ಎಸ್. ಶಿವರುದ್ರಪ್ಪನವರು ಹೈದರಾಬಾದಿನಿಂದ ಬಂದಿದ್ದರು. ಅವರು 'ವಡ್ಡಾರಾಧನೆ' ಪಾಠ ಮಾಡಿದರು. ಪಾಠ ಮಾಡುವಾಗ ಎರಡು–ಮೂರು ಕ್ಷಣ ತಡೆದು, ಮನಸ್ಸಿನಲ್ಲೇ ಸೂಕ್ತ ಪದಗಳನ್ನು ಹುಡುಕಿ ಹೇಳುತ್ತಿದ್ದರು. ಅದು ನಮ್ಮ ಗಮನ ಸೆಳೆದಿತ್ತು. ಅವರೊಮ್ಮೆ ಪಾಠ ಮಾಡುವಾಗ ಸಾಂದರ್ಭಿಕವಾಗಿ ಕಡಲ ತೀರದ ಕವಿ ರತ್ನಾಕರನ ಕಾವ್ಯದಲ್ಲಿ ಜಲಪ್ರತಿಮೆಗಳನ್ನು ಕಾಣಬಹುದಾಗಿದೆ ಎಂದಿದ್ದರು. ಇದೇ ಮುಂದೆ ಡಿ.ಲಿಂ. ಮೂಡಬಿದಿರೆಯಲ್ಲಿ ಜರುಗಿದ ರತ್ನಾಕರ ಕವಿಯ ವಿಚಾರ ಸಂಕಿರಣದಲ್ಲಿ ಒಂದು ಪ್ರಬಂಧವನ್ನು ಮಂಡಿಸಲು ನೆಪವಾಯಿತು.

ಬಿ.ಎ. ತರಗತಿಯಲ್ಲಿ ಡಾ. ಜಿ. ವರದರಾಜರಾವ್ ಅವರು ಆ ವರ್ಷದ  ಪಠ್ಯವನ್ನು ಮುಗಿಸುತ್ತಾ, "ನಿಮಗೆಲ್ಲ ಮೂರು ಪುಣ್ಯಗಳು ಲಭಿಸಲಿ" ಎಂದು ವಿದ್ಯಾರ್ಥಿಗಳನ್ನು ಹರಸಿದರು. ಅವರ ಪ್ರಕಾರ, ನಮಗೆ ಒಗ್ಗುವ ವಿದ್ಯೆಯನ್ನು ಕಲಿಯುವುದು ಮೊದಲನೆಯ ಪುಣ್ಯ. ನಾವು ಕಲಿತ ವಿದ್ಯೆಗೆ ತಕ್ಕ ಉದ್ಯೋಗವನ್ನು ಪಡೆಯುವುದು ಎರಡನೆಯ ಪುಣ್ಯ. ನಮ್ಮ ಸ್ವಭಾವಕ್ಕೆ ಹೊಂದಿಕೊಳ್ಳುವ ಮಡದಿಯನ್ನು ಪಡೆಯುವುದು ಮೂರನೆಯ ಪುಣ್ಯ. ಅನುಭವದ ಮಾತು, ನಿಜ ಅನಿಸುತ್ತೆ. ಈ ಮೂರು ಪುಣ್ಯಗಳು ನಮ್ಮಿಬ್ಬರಿಗೂ ಲಭಿಸಿತು. ಆದರೆ ನಾಲ್ಕನೆಯ ಪುಣ್ಯವೆಂದರೆ, ಅದು ನನಗೆ ದೊರಕುತ್ತಿಲ್ಲ, ಆದರೆ ಆತನಿಗೆ ದೊರಕಿತು. ಅದೇನೆಂದರೆ ಕನ್ನಡ ಕಲಿತು, ಕನ್ನಡ ಕಲಿಸುತ್ತಾ, ಕನ್ನಡ ಕೃತಿಗಳನ್ನು ರಚಿಸುತ್ತಾ, ಕನ್ನಡಕ್ಕಾಗಿ ಮೀಸಲಾದ ಸಾಹಿತ್ಯ ಸಂಸ್ಥೆಗಳಲ್ಲಿ ಸ್ವಾರ್ಥವಿಲ್ಲದೆ ಸಕ್ರಿಯವಾಗಿ ಸೇವೆ ಸಲ್ಲಿಸುವ, ಸೇವೆ ಸಲ್ಲಿಸುತ್ತಾ, ಆ ಕನ್ನಡ ಭಾವನೆಯಲ್ಲೇ ಸಮಾಧಿಯಾಗುವ ಮಹಾಪುಣ್ಯ. ಪ್ರಾಕೃತ ಭಾಷೆಯ ಮಂತ್ರವೊಂದರಲ್ಲಿ,"...ಬೋಹಿ ಲಾಹೋ, ಸಮಾಹಿ ಮರಣಂ ಹೋ ಉ ಮಜ್ಝಂ" (ಬೋಧಿ ಲಾಭ, ಸಮಾಧಿ ಮರಣ ನನಗುಂಟಾಗಲಿ) ಎಂಬ ಆಶಯವಿದೆ. ಈ ಹಿನ್ನೆಲೆಯಲ್ಲಿ ಡಿ.ಲಿಂ.ಗೆ ಕನ್ನಡ ಬೋಧಿಯೂ ಪ್ರಾಪ್ತವಾಗಿತ್ತು

ಹಾಗೂ ಕನ್ನಡ ಸಮಾಧಿ ಮರಣವೂ ಪ್ರಾಪ್ತವಾಯಿತು. ಇದು ಆತನ ಅಪೂರ್ವವಾದ ನಾಲ್ಕನೆಯ ಮಹಾಪುಣ್ಯ.

ನಾವು ಕನ್ನಡ ಎಂ.ಎ.ಗೆ ಸೇರಿದಾಗ, ಮೊಟ್ಟಮೊದಲ ಬಾರಿಗೆ ಜಾನಪದ ಸಾಹಿತ್ಯ ಒಂದು ಪತ್ರಿಕೆಯಾಗಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆಯಿತು. ಅದನ್ನು ಐಚ್ಛಿಕವಾಗಿ ಆರಿಸಿಕೊಂಡ ಮೊದಲ ತಂಡದಲ್ಲಿ ನಾವಿಬ್ಬರು ಸೇರಿದ್ದೆವು. ಜಾನಪದ ಸಾಹಿತ್ಯವನ್ನು ಶಾಸ್ತ್ರೀಯ ಹಿನ್ನೆಲೆಯಲ್ಲಿ ಬೋಧಿಸಿದ ಪ್ರಥಮ ಗುರು ಡಾ. ಜಿ. ವರದರಾಜರಾವ್. ಅವರು ನಮ್ಮನ್ನು ಜಾನಪದ ವಿಷಯಗಳನ್ನು ಸಂಗ್ರಹಿಸಲು ಪ್ರೇರೇಪಿಸಿದರು, ಹುರುದುಂಬಿಸಿದರು. ಕ್ಷೇತ್ರಕಾರ್ಯದ ನೆಪದಲ್ಲಿ ಕರಾಕೃ ಅವರ ಮನೆಗೆ ಕರೆದುಕೊಂಡು ಹೋಗಿ ಅವರ ಪರಿಚಯ ಮಾಡಿಸಿದರು. ಕೆಲವು ಧ್ವನಿಮುದ್ರಿಕೆಗನ್ನು ಕೇಳಿಸಿದರು. "ಈ ಕ್ಷೇತ್ರ ಕನ್ನೆನೆಲ. ನೀವು ಏನು ಮಾಡಿದರು ಅದು ಮಹತ್ವದಾಗುತ್ತದೆ" ಎಂದು ಹೇಳಿದರು. ನಾವು ಜಾನಪದದ ಬಗ್ಗೆ ಒಂದು ಕನಸು ಕಟ್ಟಿಕೊಳ್ಳುವ ಹಾಗೆ ಮಾಡಿದರು. ಈ ಕನಸಿನ ಗುಂಗಿನಲ್ಲಿ ಮಾನಸಗಂಗೋತ್ರಿಯ ಆವರಣದಲ್ಲಿ ಸುತ್ತಾಡುತ್ತಿದ್ದಾಗ, ಡಿ.ಲಿಂ. ದೊಡ್ಡ ಪ್ರಮಾಣದಲ್ಲಿ ಜಾನಪದ ಗೀತೆಗಳನ್ನು ಸಂಗ್ರಹಿಸುವ ಇಚ್ಛೆ ವ್ಯಕ್ತಪಡಿಸಿದರೆ, ನಾನು ಒಂದು ಸಾವಿರ ಜಾನಪದ ಕಥೆಗಳನ್ನು ಸಂಗ್ರಹಿಸಿ, ಅಭ್ಯಸಿಸುವ ಸಂಕಲ್ಪ ಮಾಡಿದೆ. ನಮ್ಮ ನಮ್ಮ ವೃತ್ತಿಯ ಹಾಗೂ ಬದುಕಿನ ಇತಿಮಿತಿಯಲ್ಲಿ ಸಾಕಷ್ಟು ಸಾಧನೆಯನ್ನು ಮಾಡಿದ್ದೇವೆ. ಚರಿತ್ರೆಕಾರರು ಒಂದು ಸಾಲಿನಲ್ಲಾದರು ನಮ್ಮ ನಮ್ಮ ಸಾಧನೆಯನ್ನು ಗುರುತಿಸಿದ್ದಾರೆ.

ಡಾ. ಹಂಪನಾ ಅವರು ಕಸಾಪ ಅಧ್ಯಕ್ಷರಾಗುವ ಸಂದರ್ಭದಲ್ಲಿ ಅವರ ಪರವಾಗಿ ಕೆಲಸ ಮಾಡಿದವರಲ್ಲಿ ನಾನೂ ಒಬ್ಬ. ಅವರು ಅಧ್ಯಕ್ಷರಾದ ಮೇಲೆ ಇಬ್ಬರು ಕಾರ್ಯದರ್ಶಿ ಹಾಗೂ ಒಬ್ಬ ಕೋಶಾಧಿಕಾರಿಯನ್ನು ನೇಮಿಸಿಕೊಳ್ಳುವಾಗ ನನ್ನ ಸಲಹೆ ಕೇಳಿದ್ದರು. ನಾನೂ ಒಬ್ಬ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಬೇಕೆಂಬ ಆಸೆಯಿದ್ದರೂ, ಸರ್ಕಾರಿ ವೃತ್ತಿಯಲ್ಲಿದ್ದ ನಾನು ಬೆಂಗಳೂರಿನಿಂದ ವರ್ಗವಾಗಬಹುದೆಂಬ ಸೂಚನೆಯಿದ್ದುದ್ದರಿಂದ, ನನ್ನ ಆಸೆಯನ್ನು ಅದುಮಿಟ್ಟುಕೊಂಡು, ಡಿ.ಲಿಂ., ಅನಾಜಿ (ಶ್ರೀ ಜಿ. ಅಶ್ವತ್ಥನಾರಾಯಣ) ಹಾಗೂ ಶ್ರೀ ಎಂ.ಪಿ. ದೇವರಾಜ್ ಅವರನ್ನು ಸೂಚಿಸಿದೆ. ಅದು ಹಂಪನಾ ಅವರಿಗೆ ಒಪ್ಪಿಗೆಯಾಗಿ, ತಮ್ಮ ಮಂಡ್ಯದ ಶಿಷ್ಯ ಡಿ.ಲಿಂ. ಅನ್ನು ಕಾರ್ಯದರ್ಶಿಯನ್ನಾಗಿ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟರು. ಅದನ್ನು ಡಿ.ಲಿಂ. ಸಾರ್ಥಕವಾಗಿ ಬಳಸಿಕೊಂಡರು. ಜನ ಸಂಪರ್ಕ ಬೆಳೆಸಿಕೊಂಡರು. ಹೊಸ ಅನುಭವ ಪಡೆದರು. ಹೊಸ ದಿಗಂತವನ್ನೇ ಕಂಡರು.

ಕಸಾಪ ಜನತಾ ವಿಶ್ವವಿದ್ಯಾಲಯದಂತೆ ಕೆಲಸ ಮಾಡುತ್ತಿದೆ. ಈಗ ಅನೇಕರು ಜಾನಪದ ಸಾಹಿತ್ಯ ಸಾಮಗ್ರಿಯನ್ನು ಸಂಗ್ರಹಿಸಿದ್ದಾರೆ. ಅವೆಲ್ಲ ಪ್ರಕಟವಾಗಬೇಕು. ಅವರೆಲ್ಲರ ಕೃತಿಗಳನ್ನು ಮುಕ್ತವಾಗಿ ಆಹ್ವಾನಿಸಿ, ಕನಿಷ್ಠ ನೂರು ಪುಸ್ತಕಗಳನ್ನಾದರೂ ಪ್ರಕಟಿಸಬೇಕು. ಇದುವರೆಗೆ ಯಾವ ವಿಶ್ವವಿದ್ಯಾಲಯವೂ ಮಾಡಿಲ್ಲದ ಕಾರ್ಯವನ್ನು



ಪರಿಷತ್ತು ಮಾಡಿದಂತಾಗುತ್ತದೆ ಎಂದು ಪರಿಷತ್ತಿನ ವಾರ್ಷಿಕ ಸಾಮಾನ್ಯ ಸದಸ್ಯರ ಸಭೆಯಲ್ಲಿ ಸೂಚಿಸಿದೆ. ಸಭೆ ಕರತಾಡನದ ಮೂಲಕ ಸೂಚನೆಯನ್ನು ಸ್ವಾಗತಿಸಿತು. ಅಧ್ಯಕ್ಷರು ಸಹ ಮುಕ್ತ ಮನಸ್ಸಿನಿಂದ ಸಮ್ಮತಿಸಿದರು. ಆದರೆ ಆ ವರ್ಷ ಆ ಯೋಜನೆ ಜಾರಿಯಾಗಲೇ ಇಲ್ಲ. ಮರುವರ್ಷದ ವಾರ್ಷಿಕ ಸಭೆಯಲ್ಲಿ ಮತ್ತೆ ಈ ಸೂಚನೆಯನ್ನು ಮಂಡಿಸಿ, ಅಧ್ಯಕ್ಷರ ವರ್ತನೆಯ ಬಗ್ಗೆ ಕಟುವಾಗಿ ಆಕ್ಷೇಪಿಸಿದೆ. ಇದರ ಫಲವಾಗಿ ಆ ಯೋಜನೆಯನ್ನು ಕೈಗೆತ್ತಿಕೊಂಡರು. ಆ ಕಾರ್ಯವನ್ನು ಕಾರ್ಯದರ್ಶಿಯಾಗಿದ್ದ ಡಿ.ಲಿಂ. ಅವರಿಗೆ ವಹಿಸಿದರು. ಆ ಯೋಜನೆಯ ಫಲವಾಗಿ ನೂರಾರು ಜಾನಪದ ಗ್ರಂಥಗಳು ಹೊರಬಂದವು. ಇಂದಿನ ಅನೇಕ ಜಾನಪದ ವಿದ್ವಾಂಸರ (ಚೊಚ್ಚಲ) ಕೃತಿಗಳು ಅಂದು ಬೆಳಕು ಕಂಡವು. ಪರಿಷತ್ತಿನ ಆ ಶ್ರೇಯಸ್ಸಿನಲ್ಲಿ ಡಿ.ಲಿಂ. (ಹಾಗೂ ಹಂಪನಾ) ಅವರ ಪಾಲಿರುವುದನ್ನು ಮರೆಯುವ ಹಾಗಿಲ್ಲ.

ನಾವು ಮೈಸೂರಿನಲ್ಲಿ ವಿದ್ಯಾರ್ಥಿಗಳಾಗಿದ್ದಾಗಲೇ ಕೆಲವು ಕವನಗಳನ್ನು 'ಗುರುದೇವ' 'ಮೊಗವೀರ' ಮೊದಲಾದ ಪತ್ರಿಕೆಗಳಿಗೆ ಕಳಿಸುತ್ತಿದ್ದೆವು. ಅವು ಪ್ರಕಟಗೊಂಡಾಗ ಖುಷಿ ಪಡುತ್ತಿದ್ದೆವು. ಎಂ.ಎ. ವ್ಯಾಸಂಗದ ಸಂದರ್ಭದಲ್ಲಿ ಶ್ರವಣಬೆಳಗೊಳದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಆ ಸಮ್ಮೇಳನಕ್ಕೆ ನಾವಿಬ್ಬರು ಹೋಗಿದ್ದೆವು. ನಾವು ಕಂಡ ಮೊದಲ ಸಾಹಿತ್ಯ ಸಮ್ಮೇಳನ. ಸಮ್ಮೇಳನಾಧ್ಯಕ್ಷರು ಡಾ. ಆ.ನೇ. ಉಪಾಧ್ಯೆ, ಕವಿಗೋಷ್ಠಿಯ ಅಧ್ಯಕ್ಷರಾಗಿದ್ದವರು ನಮಗೆ ಗುರುಗಳಾಗಿದ್ದ ಪ್ರೊ. ಎಸ್.ವಿ. ಪರಮೇಶಭಟ್ಟರು. ಅವರ ಸಮ್ಮುಖದಲ್ಲಿ ಯುವ ಕವಿಗಳಾಗಿದ್ದ ನಮ್ಮಿಬ್ಬರಿಗೆ ಒಂದೊಂದು ಕವನ ಓದಲು ಅವಕಾಶ ಸಿಕ್ಕಿತ್ತು. ಆ ಸಂದರ್ಭದಲ್ಲಿ ಸಾಹಿತಿಗಳಿಗಾಗಿಯೇ ಇಂದ್ರಗಿರಿಯ ಭಗವಾನ್ ಶ್ರೀ ಗೊಮ್ಮಟೇಶ್ವರನ ಮಹಾಮಸ್ತಕಾಭಿಷೇಕವನ್ನು ಏರ್ಪಡಿಸಲಾಗಿತ್ತು. ಬಹುಶಃ ಇದು ಡಿ.ಲಿಂ. ನೋಡಿದ ಮೊದಲ ಮಹಾಮಸ್ತಕಾಭಿಷೇಕ.

ಎಂ.ಎ. ವ್ಯಾಸಂಗ ಮಾಡುತ್ತಿದ್ದಾಗ ನಾವಿಬ್ಬರು ಮಾನಸ ಗಂಗೋತ್ರಿಯ ಹಾಸ್ಟಲ್ಲಿನಲ್ಲಿದ್ದೆವು. ಇದರಿಂದ ಕಾಲೇಜಿಗೆ ಹೋಗಿಬರಲು ಅನುಕೂಲವಾಗುತ್ತಿತ್ತು. ಅಲ್ಲದೆ ಸಾಕಷ್ಟು ಸಮಯ ಉಳಿಯುತ್ತಿತ್ತು. ಹಾಸ್ಟಲ್ಲಿನಲ್ಲಿ ನಮ್ಮಿಬ್ಬರದು ಅಕ್ಕಪಕ್ಕದ ಕೊಠಡಿಗಳು. ಒಟ್ಟಿಗೆ ತಿಂಡಿ ಊಟಕ್ಕೆ ಹೋಗುತ್ತಿದ್ದೆವು. ಒಟ್ಟಿಗೆ ಕಾಲೇಜಿಗೆ ಹೋಗುತ್ತಿದ್ದೆವು. ಮನೆಯಿಂದ ತಂದ ತಿಂಡಿಯನ್ನು ಹಂಚಿಕೊಂಡು ತಿನ್ನುತ್ತಿದ್ದೆವು. ಅಂತಿಮ ಪರೀಕ್ಷೆ ಮುಗಿಯುವ ಸಂದರ್ಭದಲ್ಲೇ ಆತನ ಲಗ್ನದ ಪ್ರಸ್ತಾಪ ಶುರುವಾಗಿತ್ತು. ಒಳ್ಳೆಯ ಹುಡುಗ. ಅನೇಕರ ಕಣ್ಣು ಬಿದ್ದಿತ್ತು. ಒತ್ತಾಯಗಳು, ಆಮಿಷಗಳು, ಮೇಲಾಟ, ಕೊಸರಾಟಗಳು ನಡೆಯುತ್ತಿದ್ದವು. ನನಗೆ ಅದರಲ್ಲಿ ಅನಾಸಕ್ತಿ. ಈ ಬಗ್ಗೆ ಆತ ಏನೂ ಬಾಯಿ ಬಿಟ್ಟು ಮಾತನಾಡುತ್ತಿರಲಿಲ್ಲ. ಕೆಲಸಕ್ಕೆ ಸೇರಿದ ಮೇಲೆ ಮದುವೆ ಆಗುವ ಮನಸ್ಸು ಆತನಿಗೆ ಇದ್ದಂತೆ ಇತ್ತು. ಆದರೆ ಕುಟುಂಬದ ಒತ್ತಡ ಹೆಚ್ಚು ಇತ್ತು. ತನ್ನ ಅಕ್ಕನ ಮಗಳನ್ನೇ ಮದುವೆಯಾಗಲು ಒಪ್ಪಿಕೊಂಡ. ಪರೀಕ್ಷೆಯ ಫಲಿತಾಂಶ ಬರುವ ಮೊದಲೇ ಲಗ್ನ ಏರ್ಪಟ್ಟಿತು. ಆತ ಮದುವೆಗೆ ಆತನ ಸಹಪಾಠಿ ಮಿತ್ರನಾಗಿ, ಆತನ ಹಳ್ಳಿ ಪೀ ಹಳ್ಳಿಗೆ ಹೋಗಿದ್ದೆ. ಈ ರೀತಿ ಬೇರೆ ಜನಾಂಗದ ಹಳ್ಳಿಯ ವಿವಾಹಕ್ಕೆ ನಾನು

ಹೋದದ್ದು ಇದೇ ಮೊದಲು. ಜಾನಪದ ದೃಷ್ಟಿಯಿಂದ ಮದ್ವೆ ಆಚರಣೆಗಳನ್ನು ನೋಡಬೇಕೆಂಬ ಇಚ್ಛೆಯೂ ಇತ್ತು. ಅಲ್ಲಿ ನನ್ನ ಗಮನ ಸೆಳೆದದ್ದು 'ಮುಯ್ಯಿ ಬರೆಯಿಸುವ ಪದ್ಧತಿ'. ಅಂದು ಅದು ನನಗೆ ಸೋಜಿಗವೆನಿಸಿತ್ತು.

ಡಿ.ಲಿಂ. ಹಳ್ಳಿಯ ಹೈದ, ನಿಜ. ಆದರೆ ಶಾರೀರಿಕವಾಗಿ ದುರ್ಬಲನಾಗಿದ್ದ. ಅದನ್ನು ವ್ಯಕ್ತಪಡಿಸುತ್ತಿರಲಿಲ್ಲ. ಒಮ್ಮೆ ತಂಡಿಯ ವಾತಾವರಣದಲ್ಲಿ ಬಿಸಿ ಬಿಸಿ ಕಾಫಿ ಕುಡಿಯುತ್ತಿದ್ದೆವು. ಆ ಬಿಸಿ ಹಿತವಾಗಿತ್ತು. ಆದರೆ ಡಿ.ಲಿಂ. ಬಿಸಿ ಕಾಫಿ ಮುಂದಿಟ್ಟುಕೊಂಡು ಅದು ಇದು ಮಾತನಾಡುತ್ತ ಸಮಯ ಕಳೆಯುತ್ತಿದ್ದ. ಇದೇನು ಹೀಗೆ ಅನಿಸುತ್ತಿತ್ತು. ವಾಸ್ತವ ಸಂಗತಿಯೇ ಬೇರೆ ಆಗಿತ್ತು. ಬಿಸಿ ಕಾಫಿ ಕುಡಿದರೆ ಆತನ ಹಲ್ಲು ಜುಮ್ಮೆನ್ನುತ್ತಿತ್ತು. ಆದ್ದರಿಂದ ಕಾಫಿಯ ಬಿಸಿ ಆರಲು ಬಿಡುತ್ತಿದ್ದ. ಆದರೆ ತನ್ನ ಹಲ್ಲಿನ ಬಗ್ಗೆ ಹೇಳುತ್ತಿರಲಿಲ್ಲ. ಆರೋಗ್ಯದ ಬಗ್ಗೆಯೇ ಆಗಲಿ, ಇತರ ವಿಷಯಗಳ ಬಗ್ಗೆಯೇ ಆಗಲಿ ಅಹಿತವನ್ನು ವ್ಯಕ್ತಪಡಿಸುತ್ತಿರಲಿಲ್ಲ. ಅದನ್ನು ವೈಭವೀಕರಿಸಿ ಅನುಕಂಪೆ, ಸಹಾನುಭೂತಿ ಗಿಟ್ಟಿಸುವ ಕಾರ್ಯ ಮಾಡುತ್ತಿರಲಿಲ್ಲ. ಇದು ಆತನ ಸ್ವಭಾವ, ನಾನು ಕಂಡಂತೆ.

ಬೆಂಗಳೂರಿನಲ್ಲಿ ಆತನ ಮನೆಗೆ ಅನೇಕ ಬಾರಿ ಹೋಗಿದ್ದೇನೆ. ಗಂಟೆಗಟ್ಲೆ ಕುಳಿತು ಅದು ಇದು ಹರಟೆ ಹೊಡೆದಿದ್ದೇನೆ. ತಿಂಡಿ ಊಟ ಮಾಡಿದ್ದೇನೆ. ಒಂದೆರಡು ಸಲ ನನ್ನ ಹೆಂಡತಿಯೂ ಬಂದಿದ್ದಳು. ಆದರೆ ಒಮ್ಮೆಯೂ ನಮ್ಮ ಮನೆಗೆ ತನ್ನ ಪತ್ನಿಯೊಂದಿಗೆ ಬರಲಿಲ್ಲ. ಹಾಗೆ ಹೋಗಿ ಬಂದು ಸ್ನೇಹ ಸಂಬಂಧ ಕುದುರಿದ್ದರೆ ಎಷ್ಟು ಚೆನ್ನಾಗಿತ್ತು ಎನಿಸುತ್ತಿತ್ತು. ಇದಕ್ಕೆ ಕಾರಣ ಆತನ ಅನಾರೋಗ್ಯವೂ; ಸ್ವಲ್ಪ ಮಟ್ಟಿಗೆ ಆತನಲ್ಲಿದ್ದ ಗುಪ್ತ ಕೀಳರಿಮೆಯೂ ಕಾರಣವೆಂದು ನನಗೆ ಅನಿಸುತ್ತಿತ್ತು. ಈ ನನ್ನ ಗ್ರಹಿಕೆ ಎಷ್ಟರಮಟ್ಟಿಗೆ ಸರಿಯೋ ತಿಳಿಯದು.

ಡಿ.ಲಿಂ. ಬೆಂಗಳೂರಿನಲ್ಲಿ ವೃತ್ತಿಯಲ್ಲಿ ಇದ್ದುದೂ, ಪರಿಷತ್ತಿನಲ್ಲಿ ಗೌರವ ಕಾರ್ಯದರ್ಶಿಯಾಗಿ ಹೆಸರು ಗಳಿಸಿದ್ದು, ಆತನ ಗಂಭೀರ ಸ್ವಭಾವ, ಸಭ್ಯತೆ, ಸಜ್ಜನಿಕೆ ಮೊದಲಾದ ಆತನ ಗುಣಗಳು, ಒಕ್ಕಲಿಗ ಜನಾಂಗದ ಕೆಲವು ಮುಖಂಡರ ಗಮನ ಸೆಳೆಯಿತು. ಅವರಲ್ಲಿ ಬಹಳ ಮುಖ್ಯರಾದವರು ಸನ್ಮಾನ್ಯರುಗಳಾದ ಶ್ರೀ ಕೆಂಗಲ್ ಹನುಮಂತಯ್ಯ ಹಾಗೂ ಶ್ರೀ ವೀರಣ್ಣಗೌಡರು. ಇವರ ಸಂಪರ್ಕ ಹಾಗೂ ಪ್ರೇರಣೆಯಿಂದ ಕೆಲವು ಐತಿಹಾಸಿಕ ಕೃತಿಗಳು ರಚನೆಯಾಗಲು ಸಾಧ್ಯವಾಯಿತು. ಈ ಕಾರ್ಯ ಸಂಬಂಧವಾಗಿ ವಿಧುರಾಶ್ವತ್ಥ ಹೋರಾಟದ ಬಗ್ಗೆ ಕೆಲವು ಸ್ವಾತಂತ್ರ್ಯ ಹೋರಾಟಗಾರರಿಂದ ವಿಷಯ ಸಂಗ್ರಹಿಸಲು ಡಿ.ಲಿಂ. ಜೊತೆ ಕಾರಿನಲ್ಲಿ ತುಮಕೂರಿಗೆ ಹೋಗಿದ್ದೆ. ಆ ಸಂದರ್ಭದಲ್ಲಿ ಶ್ರೀ ಕೆಂಗಲ್ ಅವರ ಜೊತೆ ನಡೆದ ಕೆಲವು ಮಾತುಕತೆಗಳನ್ನು ಹೇಳುತ್ತಿದ್ದ. ಅದರಲ್ಲಿ ಒಂದು ಸಂಗತಿ ಮಾತ್ರ ಇಂದೂ ಸಹ ನನ್ನ ಮನಸ್ಸಿನಲ್ಲಿ ಅಚ್ಚಳಿಯದಿದೆ.

"ಗಾಂಧೀಜಿ ಅವರನ್ನು ಮಹಾತ್ಮಾ ಮಹಾತ್ಮಾ ಅನ್ನುತ್ತೀರಲ್ಲ. ಏನು ಅಂಥ ಮಹಾನ್ ಗುಣ ಕಂಡಿರಿ ? ಕಲಿತಿರಿ ?"–ಎಂದು ಕೆಂಗಲ್ ಅವರನ್ನು ಪ್ರಶ್ನಿಸಿ ಕೆಣಕಿದನಂತೆ. ಆಗ ಅವರು ಭಾವಾವೇಶದಿಂದ, "ಛೇ, ಹಾಗೆನ್ನಬೇಡ. ಆತ ಅನೇಕ



ಸುಧಾರಣೆಗಳನ್ನು ತಂದ ಮಹಾತ್ಮ. ಜಾತಿ–ಭೇದವಿಲ್ಲದೆ, ವರ್ಗ–ಭೇದವಿಲ್ಲದೆ, ಮೇಲು–ಕೀಳು ಎಣಿಸದೆ, ಯಾರೋ ಮಾಡಿದ ಅಡಿಗೆಯನ್ನು ಎಲ್ಲರೂ ಒಂದೇ ಪಂಕ್ತಿಯಲ್ಲಿ ಕುಳಿತು ಊಟ ಮಾಡುವುದನ್ನು ಕಲಿಸಿದ ಮಹಾತ್ಮ" ಎಂದರಂತೆ.

ಅದನ್ನು ಕೇಳಿದಾಗ ನಾನು ಮೂಕನಾದೆ. ಎಂಥ ಅರ್ಥಗರ್ಭಿತ ಮಾತು ! ಎಂಥ ಮೂಲ ಸುಧಾರಣೆ ಎನಿಸಿತು.

ನಾನು ಕಂಡಂತೆ ಡಿ.ಲಿಂ. ಅತ್ಯಂತ ಸ್ವಾಭಿಮಾನಿ. ಭ್ರಷ್ಟತೆಯ ವಿರೋಧಿ. ಲಂಚ ರುಷವತ್ತುಗಳಿಗೆ ಅವಕಾಶವಿಲ್ಲ. ಕೊಡುವುದೂ ಇಲ್ಲ ಸ್ವೀಕರಿಸುವುದೂ ಇಲ್ಲ. ಸ್ವಾರ್ಥಕ್ಕಾಗಿ ಶಿಫಾರಸ್ಸು ಮಾಡಿಸುವವನಲ್ಲ. ಗೋಗರೆಯುವವನಲ್ಲ. ನೇರ ವ್ಯವಹಾರ. ಸಾಮಾನ್ಯರಿಗಾಗಿ ತೆರೆದಿರುವ ಮುಕ್ತ ಮಾರ್ಗ. ಆತನ ಈ ಕಡು ಸ್ವಭಾವ, ಅನೇಕ ಸಂದರ್ಭಗಳಲ್ಲಿ ಆತನ ವೈಯಕ್ತಿಕ ವ್ಯವಹಾರಗಳಿಗೆ ತೊಡಕಾಗಿತ್ತೇನೋ ?

ಒಂದು ಸಲ ಭೇಟಿ ಆಗಿದ್ದಾಗ ಇದ್ದಕ್ಕಿದ್ದಂತೆ, 'ಕೆಂಗಲ್‌ರು ಸೈಟು ಕೊಡುತ್ತಾರಂತೆ ತೆಗೆದುಕೊಳ್ಳಲೇ ?' ಎಂದು ಕೇಳಿದ. 'ಅವರೆಲ್ಲಿಂದ ಸೈಟು ಕೊಡುತ್ತಾರೆ ? ಬಹುಶಃ ಸೈಟು ಕೊಡಿಸಬಹುದು' ಎಂದುಕೊಂಡೆ. "ನಿನಗೆ ಬೆಂಗಳೂರಿನಲ್ಲಿ ನಿವೇಶನವಿಲ್ಲ. ಯಾವಾಗ ಸಿಗುತ್ತೋ ಗೊತ್ತಿಲ್ಲ. ತಡವಾಗಿ ಸಿಗುವುದನ್ನು ಅವರು ಬೇಗ ಕೊಡಿಸಬಹುದು. ಬೇಡವೆನ್ನದೆ ಸುಮ್ಮನಿರು" ಎಂದೆ. ಈ ಸಂಗತಿಯನ್ನು ಉದಾಹರಿಸಿದ ಉದ್ದೇಶವೇನೆಂದರೆ, ಇಂಥ ವಿಷಯಗಳನ್ನು ಸಹ ಆತ ಸೂಕ್ಷ್ಮವಾಗಿ ತೆಗೆದುಕೊಳ್ಳುತ್ತಿದ್ದ. ಬಹುಶಃ ಅವರ ಶಿಫಾರಸ್ಸಿನಿಂದ ವಿಶೇಷ ವರ್ಗದಲ್ಲಿ ಆತನಿಗೆ ಬೇಗ ಸೈಟು ಅಲಾಟ್ ಆಗಿರಬಹುದು. ಅದರಲ್ಲಿ ತಪ್ಪೇನಿಲ್ಲ. ಸೈಟು ಸಿಕ್ಕಿದ್ದರಿಂದ ಒಂದು ಮನೆ ಅಂತ ಮಾಡಿಕೊಂಡ. ಅದರಿಂದ ಹೆಂಡತಿ ಮಕ್ಕಳಿಗೆ ಸ್ವಲ್ಪವಾದರು ನೆಮ್ಮದಿ ಸಿಕ್ಕಿತು.

ನಾನು ಬೆಂಗಳೂರಿನ ಮಹಾರಾಣಿ ಕಲಾ ಕಾಲೇಜಿನಲ್ಲಿ ಸೀನಿಯರ್ ಪ್ರಿನ್ಸಿಪಾಲ್ ಆಗಿದ್ದ ಸಂದರ್ಭ. ಅಡ್ಮಿಶನ್ ಸಮಯ. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುತ್ತಿದ್ದೆ. ಗಿಜಿಗಿಜಿ ವಾತಾವರಣ. ಆಗ ಸರದಿಯಲ್ಲಿ ಬಂದ ಒಬ್ಬ ಹುಡುಗಿ, "ಸರ್ ನಾನು ನಿಮ್ಮ ಫ್ರೆಂಡ್ ಡಿ. ಲಿಂಗಯ್ಯನವರ ಮಗಳು. ಪರಿಚಯ ಸಿಕ್ಕಿತೇ ?" ಎಂದಳು. ಇಲ್ಲ ಅನ್ನುವ ಹಾಗೆ ತಲೆಯಾಡಿಸಿದೆ. "ನಾನು ಎರಡನೇ ಮಗಳು" ಎಂದಳು. ತಟ್ಟನೆ ಏನೋ ನೆನಪಾಗಿ, "ಓಹ್, ಆಗಸ್ಟ್ ೧೫ರಂದು ಹುಟ್ಟಿದ ಸ್ವಾತಂತ್ರ್ಯದೇವಿಯೋ ನೀನು ?"–ಎಂದೆ. ನಕ್ಕಳು. "ನೀನಾದರು ಐಚ್ಛಿಕ ಕನ್ನಡ ಓದಲು ಬಂದೆಯಲ್ಲ, ಅದೇ ಸಂತೋಷ"–ಎಂದೆ.

ಸ್ವಲ್ಪ ಹೊತ್ತಿನ ನಂತರ ಅದೇ ಹುಡುಗಿ ಆತಂಕದಿಂದ ಬಂದು, "ಸರ್, ಫೀಜು ಕಟ್ಟಲು ಇಂದೇ ಕಡೆ ದಿನವಂತೆ, ಹಣ ಸ್ವಲ್ಪ ಕಡಿಮೆ ಇದೆ. ನಾಳೆ ಫೀಜು ಕಟ್ಟಲು ಅವಕಾಶ ಕೊಡಿ" ಎಂದಳು. ಅವಕಾಶ ಕೊಡುವುದು ಬಿಡುವುದು, ಅದರ ಪರಿಣಾಮವನ್ನು ಮುಂದೆ ನೋಡಿಕೊಳ್ಳುವುದು ಬೇರೆಯೇ ಪ್ರಶ್ನೆಯಾಗಿತ್ತು. ಆ ಕಡೆ ನನ್ನ ಗಮನ ಹರಿಯಲಿಲ್ಲ. ತತ್‌ಕ್ಷಣ ಆ ಕೊರತೆಯ ಹಣವನ್ನು ತುಂಬಿಸಿ, ಫೀಜು ಕಟ್ಟಿಸಿ, ಆ

ದುಡ್ಡು ತಂದುಕೊಡಬೇಡ, ಚೆನ್ನಾಗಿ ಓದು"–ಎಂದು ಹೇಳಿಕಳಿಸಿದೆ. ನನ್ನ ವೃತ್ತಿಯಲ್ಲಿ ಇಂಥ ಪ್ರಸಂಗ ಎಷ್ಟೋ ಬಂದಿದ್ದವು. ಅವನ್ನೆಲ್ಲ ಇದೇ ರೀತಿ ನಿಭಾಯಿಸಿದ್ದೆ. ಇದೇನು ನನಗೆ ಹೊಸದಾಗಿರಲಿಲ್ಲ. ಆದರೆ, "ಡಿ.ಲಿಂ. ತನ್ನ ಮಗಳ ಅಡ್ಮಿಶನ್ ವಿಷಯದಲ್ಲಿ ನನಗೊಂದು ಫೋನು ಮಾಡಬಹುದಾಗಿತ್ತು" ಎನಿಸಿತು. ಅದೇ ಡಿ.ಲಿಂ. ವೈಶಿಷ್ಟ್ಯ. ಎಲ್ಲ ಶ್ರೀ ಸಾಮಾನ್ಯರ ಮಕ್ಕಳಂತೆ ತನ್ನ ಮಗಳೂ ಪ್ರವೇಶ ಪಡೆಯಬೇಕು ಎಂಬುದು ಆತನ ಉದ್ದೇಶ ಆಗಿದ್ದಂತೆ ತೋರುತ್ತದೆ. ಇಂಥ ವಿಷಯಗಳಲ್ಲೇ ಆತ ಎಲ್ಲರಿಗಿಂತ ಬೇರೆಯಾಗಿ ಗೋಚರಿಸುತ್ತಾನೆ.

ನನಗಿಂತ ಮುಂಚೆ ಡಿ.ಲಿಂ. ವೃತ್ತಿಯಿಂದ ನಿವೃತ್ತನಾಗಿದ್ದ. ನಾನು ಸಹ ನಿವೃತ್ತನಾಗಿ ಕೆಲವು ತಿಂಗಳುಗಳು ಕಳೆದಿದ್ದ ಸಮಯ. ಡಿ.ಲಿಂ. ಮನೆಯಿಂದ ಫೋನ್ ಬಂದಿತು. ಡಿ.ಲಿಂ.ದಲ್ಲ, ಆತನ ಮಗ ಅನಂತುವಿನದು. 'ಅಂಕಲ್ ಅಮ್ಮ ಮಾತನಾಡಬೇಕಂತೆ'– ಅಂದ. ಸರಿ ಎಂದೆ. ಆ ತಾಯಿ ಡಿ.ಲಿಂ. ಇಲ್ಲದ ವೇಳೆಯಲ್ಲಿ ಕರೆ ಮಾಡಿದ್ದರು. ಬಹಳ ದುಃಖದಿಂದ ಕೆಲವು ಸಂಗತಿಗಳನ್ನು ತಿಳಿಸಿದರು. ಸಾರಾಂಶವಿಷ್ಟೆ : ಡಿ.ಲಿಂ. ನಿವೃತ್ತನಾಗಿ ಕೆಲವು ವರ್ಷಗಳೇ ಕಳೆದಿತ್ತು. ಆದರೆ ಪೂರ್ತಿ ಪೆನ್‌ಷನ್ ಬರುತ್ತಿರಲಿಲ್ಲ. ಏನಾಗಿದೆ ಅಂತ ಮನೆಯಲ್ಲಿ ಹೇಳಿರಲಿಲ್ಲ. ಕೇಳಲು ಯಾರಿಗೂ ಧೈರ್ಯವಿಲ್ಲ. ಕೇಳಿದರೂ ಆತ ಹೇಳುತ್ತಿರಲಿಲ್ಲ. ಆತನ ದೇಹಸ್ಥಿತಿ ಸೂಕ್ಷ್ಮವಾಗಿತ್ತು. ಏನನ್ನು ಒತ್ತಾಯ ಮಾಡುವ ಹಾಗಿರಲಿಲ್ಲ. ಆದಾಯ ಕಡಿಮೆ. ಮನೆ ನಡೆಸುವುದು ಆಕೆಗೆ ಕಷ್ಟವಾಗಿತ್ತು. "ಅಣ್ಣ ಈಗ ನಿಮ್ಮ ಸಹಾಯ ಬೇಕು, ಆದರೆ ಅವರಿಗೆ ಗೊತ್ತಾಗಬಾರದು"–ಎಂದರು.

ಅವರ ಮಾತನ್ನು ಕೇಳಿದ ತತ್‌ಕ್ಷಣ, ಎಲ್ಲೋ ಓದಿದ್ದ ಐನ್‌ಸ್ಟಿನ್‌ರ ಒಂದು ಘಟನೆ ನೆನಪಾಯಿತು. ಆ ಮಹಾನ್ ವಿಜ್ಞಾನಿ ತುರ್ತಾಗಿ ಅಮೆರಿಕದ ಅಧ್ಯಕ್ಷರನ್ನು, ಒಂದು ಗೌಪ್ಯ ವಿಷಯಕ್ಕಾಗಿ ಭೇಟಿಯಾಗಲು ರಾಜಧಾನಿ ನಗರಕ್ಕೆ ಪ್ರಯಾಣ ಹೊರಟರು. ಸಿದ್ಧರಾಗುತ್ತಿದ್ದಾಗ, ಅವರ ಪತ್ನಿ, ಯಾರನ್ನಾದರು ಜೊತೆಯಲ್ಲಿ ಕರೆದುಕೊಂಡು ಹೋಗಿ ಎಂದರಂತೆ. ಇವರು ಯಾರು ಬೇಡವೇ ಬೇಡ ಎಂದು ಹಠ ಹಿಡಿದರಂತೆ. "ಇವರಿಗೆ ಹೇಳಿ ಪ್ರಯೋಜನವಿಲ್ಲವೆಂದು ತಿಳಿದು, ಅವರ ಹೆಂಡತಿ, ಐನ್‌ಸ್ಟಿನ್ನರ ಶಿಷ್ಯರೊಬ್ಬರಿಗೆ ದೂರವಾಣಿ ಮೂಲಕ ಪರಿಸ್ಥಿತಿಯ ಸೂಕ್ಷ್ಮವನ್ನು ತಿಳಿಸಿದರಂತೆ." ಆ ಶಿಷ್ಯ ಗುರುವನ್ನು ಆಕಸ್ಮಿಕವಾಗಿ ಭೇಟಿಯಾದಂತೆ ನಟಿಸಿ, ಅವರ ಜೊತೆ ಪ್ರಯಾಣ ಮಾಡಿ, ಅವರ ಯೋಗಕ್ಷೇಮ ನೋಡಿಕೊಂಡರಂತೆ.

ಈಗ ಆ ಶಿಷ್ಯೋತ್ತಮನ ಪಾತ್ರವನ್ನು ನಾನು ನಿರ್ವಹಿಸಬೇಕಾಗಿದೆ ಎನಿಸಿತು. ತತ್‌ಕ್ಷಣ ಆತನ ಮನೆಗೆ ಹೋದೆ. ಬಹಳ ದಿನಗಳ ನಂತರ ಹೋದದ್ದು. ಸ್ವಲ್ಪ ಮನೆ ಹುಡುಕುವುದು ಕಷ್ಟವಾಯಿತು. ಅದು ಇದು ಮಾತನಾಡುತ್ತಾ ಹಳೆಯ ನೆನಪುಗಳನ್ನು ಕೆದುಕುತ್ತಾ ಬಹಳ ಹೊತ್ತಿನ ನಂತರ ಸಹಜವಾಗಿ ಪೆನ್‌ಷನ್ ವಿಷಯಕ್ಕೆ ಬಂದೆ. ವಿಷಯ ಸಂಗ್ರಹಿಸಿದೆ. ಸಮಸ್ಯೆ ಜಟಿಲವಾಗಿರಲಿಲ್ಲ. 'ಫಾಲೋ ಅಪ್' ಆಗಿರಲಿಲ್ಲ ಅಷ್ಟೆ. ಒಂದು ಸಲ ಅವರ ಕಾಲೇಜು ಕಚೇರಿಗೆ, ಮತ್ತೊಂದು ಸಲ ಕಾಲೇಜು ಶಿಕ್ಷಣ



ಇಲಾಖೆಯ ಪೆನ್‌ಷನ್ ಸೆಕ್ಷನ್‌ಗೆ ಹೋದೆ. ಅಲ್ಲಿದ್ದ ಅಧಿಕಾರಿಗಳು, ಕೇಸ್ ವರ್ಕರ್ ಅವರು ನನಗೆ ಪರಿಚಿತರಾಗಿದ್ದರು, ನನ್ನ ಜೊತೆ ಕೆಲಸ ಮಾಡಿದವರಾಗಿದ್ದರು, ಎಲ್ಲಕ್ಕಿಂತ ಹೆಚ್ಚಾಗಿ ನನ್ನ ಬಗ್ಗೆ ಒಳ್ಳೆ ಅಭಿಪ್ರಾಯವಿಟ್ಟುಕೊಂಡವರಾಗಿದ್ದರು. ಅವರಿಗೆ ಪರಿಸ್ಥಿತಿ ವಿವರಿಸಿ ಹೇಳಿದೆ. ಬೇಗ ಕೆಲಸ ಮಾಡಿಕೊಡುವುದಾಗಿ ಭರವಸೆ ಕೊಟ್ಟರು. ಡಿ.ಲಿಂ. ಮಗ ಅನಂತುವಿಗೆ ಕೆಲವರನ್ನು ಪರಿಚಯಿಸಿದ್ದೆ. ಅಗತ್ಯ ಬಿದ್ದರೆ ಕೆಲವು ದಾಖಲೆಗಳನ್ನು ಒದಗಿಸುವಂತೆ ಸೂಚಿಸಿದ್ದೆ. ಆತನೂ ಸಹ ನಾಲ್ಕಾರು ಸಲ ಓಡಾಡಿರಬೇಕು. ಸ್ವಲ್ಪ ದಿನದಲ್ಲೇ ಪೂರ್ಣ ಪ್ರಮಾಣದ ವಿಶ್ರಾಂತಿ ವೇತನ ಬಿಡುಗಡೆ ಆದುದು, ದೊಡ್ಡ ಮೊತ್ತದಲ್ಲಿ ಬಾಕಿ ಹಣ ಬಂದುದು ತಿಳಿಯಿತು. ಮನಸ್ಸಿಗೆ ನೆಮ್ಮದಿ ಆಯಿತು.

ಒಂದು ದಿನ ಇದ್ದಕ್ಕಿದ್ದಂತೆ ಡಿ.ಲಿಂ. ಫೋನ್ ಮಾಡಿ, "ಅಯ್ಯಾ, ನನ್ನದೊಂದು ಪುಸ್ತಕ ನಿನಗೆ ಅರ್ಪಿಸಿದ್ದೇನೆ. ಪೋಸ್ಟಿನಲ್ಲಿ ಕಳಿಸಿದ್ದೀನಿ ಸ್ವೀಕರಿಸು" ಎಂದ. "ನನಗೆ ಏಕೆ ಅರ್ಪಿಸಲು ಹೋದೆ ?" ಎಂದು ಪ್ರಶ್ನಿಸಿದರೆ, ಆತ ನನಗೇ ಮರುಪ್ರಶ್ನೆ ಹಾಕಿದ– "ನೀನು ಏಕೆ ನನ್ನ ಫ್ರೆಂಡ್ ಆದೆ ?"

ಹೌದು, ನಾನು ಏಕೆ ಆತನ ಫ್ರೆಂಡ್ ಆದೆ ?!

# ೨. ಕನ್ನಡವೆ ಎನ್ನುಸಿರು ಎಂದು ಬದುಕಿದ ಪ್ರೊ. ಡಿ. ಲಿಂಗಯ್ಯ

–ಪ್ರೊ. ಎಚ್. ಶೇಷಗಿರಿರಾವ್*

**ಪ್ರೊ.** ಲಿಂಗಯ್ಯನವರ ಪರೋಕ್ಷ ಪರಿಚಯ ಅವರ ಪುಸ್ತಕಗಳ ಮೂಲಕ ಹಲವು ದಶಕಗಳಿಂದ ಇದೆ. ಮತ್ತು ಮೌಲ್ಯ ಮಾಪನಕ್ಕೆ ಬಂದಾಗ ಹಲವು ಕನ್ನಡ ಕಾರ್ಯಕ್ರಮಗಳಲ್ಲಿ ಅವರನ್ನು ನೋಡಿದ ನೆನಪು. ಪ್ರತ್ಯಕ್ಷ ಪರಿಚಯ ಮಾತ್ರ ಮೂರು ವರ್ಷಗಳಿಂದ ಈಚೆಗೆ; ಹಳೆಯ ಬೆಂಗಳೂರಿನ ಭಾಗವಾದ ಬಸವನಗುಡಿಗೆ ಹೊಂದಿಕೊಂಡಿರುವ ನರಸಿಂಹರಾಜಾ ಕಾಲನಿಯಲ್ಲಿ ವಾಸಕ್ಕೆ ಬಂದಾಗಿನಿಂದ. ಪಕ್ಕದ ರಸ್ತೆಯಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನದ ಹೆಸರು ಹೊತ್ತ ಸುಂದರ ಭವನ. ಅಲ್ಲಿನ ಉಚಿತ ವಾಚನಾಲಯಕ್ಕೆ ಆಗಾಗ ಭೇಟಿ ನೀಡುವುದು ವಾಡಿಕೆ ಮತ್ತು ಅಲ್ಲಿ ನಡೆದ ಒಂದಲ್ಲ ಒಂದು ಕಾರ್ಯಕ್ರಮದಲ್ಲಿ ವೇದಿಕೆಯ ಮೇಲೆ ಕುಳಿತ ಎತ್ತರದ ನಿಲುವಿನ ಸಾಧಾರಣ ಮೈಕಟ್ಟಿನ ತಿಳಿ ಬಣ್ಣದ ಅಚ್ಚುಕಟ್ಟಾಗಿ ಉಡುಪು ಧರಿಸಿದ, ಅತಿಥಿಗಳನ್ನು, ಪರಿಚಿತರನ್ನು ಸದಾ ಮುಗುಳುನಗೆಯಿಂದ ಮೃದು ಮಾತಿನಿಂದ ಸ್ವಾಗತಿಸುವ ವ್ಯಕ್ತಿ ಯಾರಿರಬಹುದೆಂಬ ಕುತೂಹಲ. ಅವರನ್ನು ಹಿಂದೆ ಅನೇಕ ಸಾಹಿತ್ಯ ಕಾರ್ಯಕ್ರಮಗಳಲ್ಲಿ ನೋಡಿದ ನೆನಪು ಸಹಾಯಕ್ಕೆ ಬರಲಿಲ್ಲ. ಒಂದೆರಡು ಸಮಾರಂಭದಲ್ಲಿ ಹಾಜರಿ ಹಾಕಿದ ನಂತರ ಕುತೂಹಲ ತಣಿಯಿತು. ಅವರ ವಾಗ್‌ವೈಖರಿ ಅಸದಳ. ಪುಸ್ತಕದ ಬಿಡುಗಡೆ ಇರಲಿ, ಖ್ಯಾತ ನಾಮರ ಜಯಂತಿಯೇ ಇರಲಿ, ಕಥೆಗಾರ, ಕಾದಂಬರಿಕಾರ, ಕವಿ, ಜಾನಪದ ತಜ್ಞ, ಹಸ್ತಪ್ರತಿ ತಜ್ಞರ ಸನ್ಮಾನವಿರಲಿ, ವಿಷಯ ಯಾವುದೇ ಇದ್ದರೂ ಅವರ ಅಧ್ಯಕ್ಷೀಯ ಭಾಷಣ ಎಂದರೆ ತಲಸ್ಪರ್ಶಿ ವಿಚಾರಪೂರಿತ ಮಾತುಗಳ ಮಳೆ. ಅದರ ಸ್ವಾದ ಕೇಳಿಯೇ ತಿಳಿಯಬೇಕು.

ನಾನು 'ಆರರಿಂದ ಅರವತ್ತು' ಎಂಬ ಸರಣಿಯನ್ನು ಕೆಂಡ ಸಂಪಿಗೆಯಲ್ಲಿ ಪ್ರಕಟಿಸುವಾಗ ಶಿವಪುರದ ಸತ್ಯಾಗ್ರಹಕ್ಕೆ ಸಂಬಂಧಿಸಿದ ಕೆಲವು ಮಾಹಿತಿ ತಿಳಿಯಲು ಅವರ ಬಳಿ ಹೋದಾಗ ಸುಮಾರು ಒಂದು ಗಂಟೆ ಕಾಲ ಎಲ್ಲ ವಿವರಗಳನ್ನು ಆಗಿಂದಾಗಲೇ ತಿಳಿಸಿದರು. ಅಷ್ಟು ಪ್ರಖರ ಅವರ ಜ್ಞಾಪಕ ಶಕ್ತಿ. ಅಷ್ಟು ಸರಳ ಅವರ ನಡೆ.

ಪ್ರತಿಷ್ಠಾನವು ನಡೆಸುತ್ತಿದ್ದ ಹಸ್ತಪ್ರತಿ ಅಧ್ಯಯನದ ತರಗತಿಗೆ ನಾನು ಸೇರಿದ ಮೇಲೆ ಜೊತೆಗೆ ರಾಮಚಂದ್ರಾಪುರ ಮಠದಲ್ಲಿ ನಡೆಸಿದ ಹಸ್ತಪ್ರತಿ ಅಧ್ಯಯನ

* ವಿಳಾಸ : # ೫/೬, ೨ನೇ ಮಹಡಿ, ೨ನೇ ಮುಖ್ಯರಸ್ತೆ, ಎನ್.ಆರ್. ಕಾಲೋನಿ, ಬೆಂಗಳೂರು–೫೬೦೦೧೯. ಮೊಬೈಲ್ : ೯೪೪೮೪೪೨೩೨೩



ಸಮಾವೇಶದಲ್ಲಿ ಭಾಗವಹಿಸಿದಾಗ ಅವರ ಬಹು ಮುಖ ಪ್ರತಿಭೆಯ ಸರಳ ವ್ಯಕ್ತಿತ್ವದ ಪರಿಚಯವಾಯಿತು. ಅವರು ರಚಿಸಿರುವುದು ಸುಮಾರು ಎಂಬತ್ತಕ್ಕೂ ಹೆಚ್ಚು ಕೃತಿಗಳು, ಅದೂ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿನ ಅವರು ಸಾಧನೆ ಮಾಡಿರುವುದು ಮೆಚ್ಚಿಗೆ ಮೂಡಿಸಿತು.

ಲಿಂಗಯ್ಯನವರದು ಸತತ ಐದು ದಶಕಗಳ ನಿರಂತರ ಸಾಹಿತ್ಯ ಸೇವೆ. ಕಾಲೇಜು ಕಟ್ಟೆ ಹತ್ತಿದಾಗಲೇ ವಿದ್ಯಾರ್ಥಿ ದೆಶೆಯಲ್ಲಿ ೧೯೬೨ರಲ್ಲಿ ಮೊದಲ ನಾಟಕ 'ದಡ್ಡ ಶಿಖಾಮಣಿ' ಪ್ರಕಟ, ಅವರದೇ ದಿನಕರ ಪ್ರಕಟನಾಲಯ. ಅದರಲ್ಲೇ ಬಹುಪಾಲು ಅವರ ಕೃತಿಗಳ ಪ್ರಕಟಣೆ. ಸತತ ಸಾಹಿತ್ಯ ಸೇವೆ. ಕೆಂಗಲ್ ಕುರಿತಾದ ಕೃತಿ ಗ್ರಂಥ ಕರ್ಮವೀರದಲ್ಲಿ ಸರಣಿಯಾಗಿ ಸತತ ಒಂದು ವರ್ಷ ಪ್ರಕಟವಾಯಿತು. ಅದರಲ್ಲಿ ಪ್ರೊ. ಲಿಂಗಯ್ಯನವರ ಇತಿಹಾಸ ಪ್ರಜ್ಞೆ, ಸಾಮಾಜಿಕ ಕಳಕಳಿ ಮತ್ತು ಸರಳ ಶೈಲಿಯಿಂದ ಸಾವಿರಾರು ಓದುಗರ ಮನ ಸೆಳೆಯಿತು. ಅವರ ಅಂತಿಮ ಕೃತಿಯೂ ಅವರ ನೆಚ್ಚಿನ ಜಾನಪದ ಲೋಕದ ದಿಗ್ಗಜ ಎಸ್.ಕೆ. ಕರೀಂಖಾನರ ಬದುಕು ಮತ್ತು ಬರಹಗಳ ಕುರಿತದ್ದು. ಅವರು ಐದು ದಶಕಗಳ ಅವಧಿಯಲ್ಲಿ ನಾಲ್ಕು ನಾಟಕಗಳು, ಮೂರು ಕಥಾ ಸಂಗ್ರಹಗಳು, ನಾಲ್ಕು ವಿಮರ್ಶಾ ಗ್ರಂಥಗಳು, ಹನ್ನೆರಡು ಕವನ ಸಂಗ್ರಹಗಳು, ಐದು ವ್ಯಕ್ತಿಚಿತ್ರ ಗ್ರಂಥಗಳು, ಐದು ಜೀವನ ಚರಿತ್ರೆಗಳು, ನಾಲ್ಕು ಪ್ರಬಂಧ ಸಂಕಲನಗಳು, ಮೂರು ಸ್ವಾತಂತ್ರ್ಯ ಚಳುವಳಿ ಸಂಬಂಧಿತ ಗ್ರಂಥಗಳು, ಎರಡು ಕಾದಂಬರಿಗಳು, ೨೧ ಜಾನಪದ ಸಂಬಂಧಿತ ಕೃತಿಗಳು, ೨೦ ಸಂಪಾದಿತ ಗ್ರಂಥಗಳು, ಇನ್ನು ನೂರಾರು ಕಿರುಲೇಖನಗಳು, ಸಾಕ್ಷ್ಯ ಚಿತ್ರಗಳಿಗೆ ಸಾಹಿತ್ಯರಚನೆ ಮತ್ತು ದೂರದರ್ಶನಗಳಲ್ಲಿ ಸಂವಾದಗಳು ಅವರ ಆಸಕ್ತಿಯ ಪಾಂಡಿತ್ಯದ ವ್ಯಾಪ್ತಿಗೆ ಸಾಕ್ಷಿಯಾಗಿವೆ.

ಪ್ರೊ. ಡಿ. ಲಿಂಗಯ್ಯ ಹುಟ್ಟಿದ್ದು ೧೯೩೯ರಲ್ಲಿ, ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಪೀ ಹಳ್ಳಿಯ ರೈತ ಕುಟುಂಬದಲ್ಲಿ. ತಂದೆ ದೇವೇಗೌಡ ಸಣ್ಣ ರೈತ. ತಾಯಿ ಸಿದ್ದಮ್ಮ, ಇವರಿಗೆ ಇಬ್ಬರು ಸೋದರರು ಮತ್ತು ಇಬ್ಬರು ಸೋದರಿಯರು. ಸಾಧಾರಣ ಕುಟುಂಬ. ಕೃಷಿ ಕೆಲಸದಲ್ಲಿ ಸಹಾಯ ಮಾಡುತ್ತಾ ಶಿಕ್ಷಣ ಮುಂದುವರಿಸಿದರು. ಮಂಡ್ಯದ ಮೈ ಶುಗರ್ ಶಾಲೆಯಲ್ಲಿ ಶಿಕ್ಷಣ. ಮಂಡ್ಯ ಜಿಲ್ಲೆ ಏಕೈಕ ಅಪ್ಪಟ ಕನ್ನಡ ಮಾತನಾಡುವ ಪ್ರದೇಶ. ಅಲ್ಲಿನವರಿಗೆ ಅನ್ಯಭಾಷೆಯ ಗಾಳಿ ಕೂಡಾ ಸೋಕುವುದಿಲ್ಲ. ಮೇಲಾಗಿ ಮಂಡ್ಯ ಜನಪದ ಸಾಹಿತ್ಯದ ಕಣಜ. ಅಲ್ಲಿ ೪೦ ವಿಧದ ಜಾನಪದ ಕುಣಿತಗಳಿವೆ, ಹಲವು ಜನಪದ ಪ್ರಕಾರಗಳು ಇವೆ. ಇನ್ನು ಸಾಹಿತ್ಯದ ಬೆಳೆಯಂತೂ ಬಹು ಹುಲಸು. ಅಲ್ಲಿನ ಕ.ರಾ.ಕೃ. ಅವರು ಜಾನಪದ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿದವರು. ಹೀಗಾಗಿ ಲಿಂಗಯ್ಯನವರ ಮೇಲೆ ಜಾನಪದದ ಪ್ರಭಾವ ಗಾಢವಾಗಿತ್ತು.

ವಿದ್ಯಾರ್ಥಿ ಇದ್ದಾಗಲೇ ಸಾಹಿತ್ಯದ ಒಲವು. ಓರಗೆಯ ಹುಡುಗರು ಆಡುತ್ತಿದ್ದಾಗ, ಗೆಳೆಯರು ಹಳ್ಳಿಯ ಕಾಲುವೆಯಲ್ಲಿ ಈಜುತ್ತಿದ್ದಾಗ ಇವರು ಪುಸ್ತಕ ಹಿಡಿದು ಕೂಡುತ್ತಿದ್ದರು, ಆದರೆ ದೈಹಿಕ ದೃಢತೆಗೆ ಪ್ರಾಮುಖ್ಯತೆ ಕೊಡುವರು. ನಿತ್ಯ ಲಘು ವ್ಯಾಯಾಮ ಮತ್ತು

ನಡೆದಾಟ. ಕೊನೆಯವರೆಗೂ ಅಭ್ಯಾಸ ಮಾಡಿಕೊಂಡಿದ್ದರು. ಇಂಟರ್‌ಮೀಡಿಯಟ್ ಮಂಡ್ಯದ ಸರ್ಕಾರಿ ಕಾಲೇಜಿನಲ್ಲಿ. ಆಗ ಅವರಿಗೆ ಹಂ.ಪ. ನಾಗರಾಜಯ್ಯ ಗುರುಗಳಾಗಿ ದೊರೆತರು. ಅವರ ಸತತ ಪ್ರೋತ್ಸಾಹದಿಂದ ಸಾಹಿತ್ಯದಲ್ಲಿ ಆಸಕ್ತಿ ಕುದುರಿತು. ಹಂಪನಾ ಅವರೊಡಗಿನ ಸಂಬಂಧ ಕೊನೆತನಕ ಉಳಿದು ಬೆಳೆಯಿತು. ಅವರ ಉತ್ತೇಜನದ ಫಲವಾಗಿ ಬೆಂಗಳೂರಿಗೆ ಉದ್ಯೋಗಕ್ಕೆ ಬಂದಾದ ಮೇಲೆ ಕನ್ನಡ ಸಾಹಿತ್ಯ ಪರಿಷತ್ತಿನ ಕೆಲಸಕ್ಕೆ ಮುಂದಾದರು, ಜಿ. ನಾರಾಯಣರು ಅಧ್ಯಕ್ಷರಾಗಲು ದುಡಿದರು, ಮತ್ತು ಜ್ವಾಲನಯ್ಯನವರ ಅವಧಿಯಲ್ಲಿ ಸಕ್ರಿಯವಾಗಿ ಕನ್ನಡದ ಕೆಲಸದಲ್ಲಿ ತೊಡಗಿಸಿಕೊಂಡರು. ಹಂಪನಾ ಅವರ ಅವಧಿಯಲ್ಲಿ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾದ ಮೇಲೆ ಕನ್ನಡದ ಕೆಲಸದ ವ್ಯಾಪ್ತಿ ನಾಡಿನಾದ್ಯಂತ ವಿಸ್ತರಿಸಿತು. ಜಾನಪದ ವಿಭಾಗದ ಪೂರ್ಣ ಹೊಣೆ ನಿರ್ವಹಿಸಿದರು. ಇವರ ಸಂಘಟನಾ ಸಾಮರ್ಥ್ಯಕ್ಕೆ ಸಾಹಿತ್ಯ ಪರಿಷತ್ತಿನ ಪದಾಧಿಕಾರಿ ಹುದ್ದೆ ಸಾಣೆ ಹಿಡಿಯಿತು. ಸಾಹಿತ್ಯ ಲೋಕದ ಹೆಸರಾಂತ ವ್ಯಕ್ತಿಗಳ ಸಂಪರ್ಕಕ್ಕೆ ಅದೇ ಸೋಪಾನವಾಯಿತು. ಅದರ ಫಲವಾಗಿ ಹಲವಾರು ವ್ಯಕ್ತಿ ಚಿತ್ರಣಗಳು ಮೂಡಿ ಬಂದವು. ಅವರ ಬರಹದಲ್ಲಿ ಗಟ್ಟಿತನ ಬರಲು ಕಾರಣ ಅವರ ಬರವಣಿಗೆ, ಬರಿ ಓದು ಅಥವಾ ಅವರಿವರ ಮಾತು ಕೇಳಿ ಬರೆದದ್ದಲ್ಲ. ತಾವೇ ಸ್ವತಃ ಒಡನಾಡಿ ಬರೆದುದು.

ಇಂಟರ್‌ಮೀಡಿಯಟ್‌ನಲ್ಲಿ ವಿಜ್ಞಾನ ವಿದ್ಯಾರ್ಥಿಯಾದರೂ ಪದವಿಯಲ್ಲಿ ಕನ್ನಡ ಮುಖ್ಯ ವಿಷಯ. ಅದೂ ಮಹಾರಾಜ ಕಾಲೇಜಿನಲ್ಲಿ ವ್ಯಾಸಾಂಗ. ಮುಂದೆ ಮಾನಸ ಗಂಗೋತ್ರಿಯ ಆಡಳಿತ ವಿಭಾಗದಲ್ಲಿನ ಅಧ್ಯಯನ ಪೀಠದಲ್ಲಿ ಇವರದೇ ಜಾನಪದ ಸ್ನಾತಕೋತ್ತರ ವ್ಯಾಸಂಗ ಮಾಡಿದ ಪ್ರಥಮ ತಂಡ.

ಘಟಾನುಘಟಿ ಗುರುವೃಂದದಿಂದ ಮಾರ್ಗದರ್ಶನ ದೊರೆಯಿತು. ಪ್ರೊ. ಎಸ್.ವಿ. ಪರಮೇಶ್ವರ ಭಟ್ಟ, ಎಚ್. ತಿಪ್ಪೆರುದ್ರಸ್ವಾಮಿ, ದೇ. ಜವರೇಗೌಡ, ವರದರಾಜರಾವ್, ಹಾ.ಮಾ. ನಾಯಕ, ಚಿದಾನಂದಮೂರ್ತಿ, ಪ್ರಭುಶಂಕರ್, ಸಿಪಿಕೆಯವರುಗಳ ಶಿಷ್ಯತ್ವ. ಆಗಾಗ ಡಿಎಲ್‌ಎನ್ ಮತ್ತು ತಿ.ನಂ.ಶ್ರೀ.ಗಳ ಅತಿಥಿ ಉಪನ್ಯಾಸ ಕೇಳುವ ಭಾಗ್ಯ. ೧೯೬೭–೬೮ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ಪದವಿ. ಎಲ್ಲ ಗುರುವರ್ಯರ ಮಾರ್ಗದರ್ಶನ ಪಡೆದರೂ ದೇ. ಜವರೇಗೌಡರ ಪಟ್ಟದ ಶಿಷ್ಯರು ಮತ್ತು ಸಿಪಿಕೆಯವರ ಸಾಹಿತ್ಯ ಕೃಷಿಯಿಂದ ಪ್ರಭಾವಿತರು. ಅವರ ಜೀವನ ಮತ್ತು ಬರಹದ ಮೇಲೆ ಅವರಿಬ್ಬರ ಗಾಢ ಪ್ರಭಾವ. ದೇ. ಜ. ಅವರದೂ ಆತ್ಮೀಯ ಸಂಬಂಧ. ಒಂದೇ ಪ್ರದೇಶದಿಂದ ಮತ್ತು ಹಿನ್ನೆಲೆಯಿಂದ ಬಂದವರೆಂಬ ನಂಟು ಬೇರೆ. ದೇ.ಜ. ಅವರ ಸಂಘಟನಾ ಚಾತುರ್ಯವೆ ಲಿಂಗಯ್ಯನವರ ಜೀವನದುದ್ದಕ್ಕೂ ಬೆನ್ನಿಗೆ ನಿಂತಿತು. ಸಿಪಿಕೆಯವರ ಸತತ ಪರಿಶ್ರಮದ ಬರವಣಿಗೆಯಿಂದ ಸ್ಫೂರ್ತಿ ಹೊಂದಿದ ಅವರು ವಿವಿಧ ರಂಗಗಳಲ್ಲಿ ಅಧ್ಯಯನ ಮತ್ತು ಕೃತಿ ರಚನೆಗೆ ಕಾರಣ. ಅವರ ಸಹಪಾಠಿಗಳಲ್ಲಿ ಅನೇಕರು ಹೆಸರಾಂತ ಬರಹಗಾರರಾಗಿದ್ದಾರೆ. ಶ್ರೀ ಜಯಚಂದ್ರ, ಇವರ ಆತ್ಮೀಯ ಒಡನಾಡಿ. ಇಬ್ಬರಲ್ಲೂ ನಾ ಮುಂದು ತಾ ಮುಂದು ಎಂದು



ಸ್ಪರ್ಧಾತ್ಮಕ ಬರವಣಿಗೆ. ತಿಪಟೂರಿನ ಕಲ್ಪತರು ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಕೆ.ಆರ್. ಬಸವರಾಜ್, ಶೃಂಗೇರಿಯಲ್ಲಿ ಸಿಕ್ಕಾಗ ತಮ್ಮ ಗೆಳೆಯನ ಮೃದು ನುಡಿ, ವಿನಯದ ನಡೆ, ಗರಿ ಮುರಿಯದ ಉಡುಪು, ವಾದ ವಿವಾದಗಳಿಂದ ದೂರವಿರುವ ಗುಣ ನೆನೆದು ಹನಿಗಣ್ಣಾದರು. ಈಗ ವಿದೇಶ ವಾಸಿಯಾಗಿರುವ ಪರಮೇಶ್ವರ ಭಟ್ಟರ ಮಗಳಾದ ಶ್ರೀಮತಿ ನಾಗರತ್ನ, ರುಜುವಾತು ಪತ್ರಿಕೆಯ ಕಾರ್ಯನಿರ್ವಹಿಸಿದ ಶ್ರೀಮತಿ ಸರ್ವಮಂಗಳ ಅವರ ಸಹಪಾಠಿಗಳು.

ಇವರಿಗಿಂತ ಒಂದು ವರ್ಷ ಕಿರಿಯರಾದ ಶ್ರೀ ಕೆ. ರಾಮದಾಸ ಮತ್ತು ಆಲನಹಳ್ಳಿ ಕೃಷ್ಣ ಅವರು ಆಗಲೇ ವಿಚಾರ ವಾದದ ಮೋಡಿಗೆ ಒಳಗಾದವರು. ಆದರೂ ತೇಜಸ್ವಿಯವರ ಪ್ರಭಾವಲಯದಲ್ಲಿದ್ದವರು. ಸಾಹಿತ್ಯ ಲೋಕದಲ್ಲಿ ತಮ್ಮದೆ ಆದ ಅಭಿಪ್ರಾಯ ಹೊಂದಿದವರು. ಅವರು ಆಗಾಗ ಲಿಂಗಯ್ಯನವರ ನಿರಂತರ ಕೃಷಿಯನ್ನು, ಶ್ರದ್ಧೆಯನ್ನು ಕಿಚಾಯಿಸಿದರೂ ಇವರು ಮಾತ್ರ ತಲೆ ಕೆಡಿಸಿಕೊಳ್ಳದೆ ತಮ್ಮ ಗುರಿಸಾಧನೆಯಿಂದ ವಿಚಲಿತರಾಗದೆ ಮುಂದುವರಿದರು. ಆ ಗುಣವೇ ಅವರನ್ನು ಕೊನೆತನಕ ಸಾಮಾಜಿಕ ವಲಯದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಕೈ ಹಿಡಿದು ನಡೆಸಿತು ಮತ್ತು ಅಪಾರ ಗೆಳೆಯರ ಬಳಗವನ್ನು ಗಳಿಸಿ ಕೊಟ್ಟಿತು.

ಓದುತ್ತಿದ್ದಾಗಲೇ ಅಕ್ಕನ ಮಗಳು ಕವಿತಾರೊಂದಿಗೆ ಮದುವೆ. ಅಕ್ಕರೆಯ ಸಂಸಾರ. ಮನೆವಾರ್ತೆಯನ್ನೆಲ್ಲ ಮಡದಿಗೆ ಒಪ್ಪಿಸಿ ಸದಾ ತಾವಾಯಿತು ತಮ್ಮ ಕನ್ನಡದ ಕೆಲಸವಾಯಿತು. ಒಂದೇ ಓದು ಇಲ್ಲವೆ ಬರಹ, ಹೊರಗೆ ಹೋದರೂ ಅದೂ ಕನ್ನಡ ಕಾರ್ಯಕ್ರಮಗಳ ಸಂಘಟನೆ, ನಿರ್ವಹಣೆ ಮತ್ತು ಪಾಲ್ಗೊಳ್ಳಲು ಮಾತ್ರ. ಸಿನೆಮಾ, ನಾಟಕದ ಹಂಬಲವಿಲ್ಲ. ಟಿವಿಯನ್ನು ಕನ್ನಡ ವಾರ್ತೆ ನೋಡಲು ಬಳಕೆ. ಸವಿತಾ ಪ್ರಿಯದರ್ಶಿನಿ ರೂಪಾಪ್ರಿಯದರ್ಶಿನಿ ಇಬ್ಬರು ಹೆಣ್ಣುಮಕ್ಕಳು ಮತ್ತು ಅನಂತರಾಜು ಒಬ್ಬನೇ ಗಂಡು ಮಗ. ಐವರ ಚಿಕ್ಕ ಮತ್ತು ಚೊಕ್ಕ ಸಂಸಾರ ಅವರದು.

ವೃತ್ತಿ ಪ್ರಾರಂಭವಾದುದು ವಿಶ್ವೇಶ್ವರಪುರ ಪದವಿ ಕಾಲೇಜಿನಲ್ಲಿ. ೧೯೬೮ರಲ್ಲಿ ಮೊದಲು ಉಪನ್ಯಾಸಕರಾಗಿ, ಹಂತ ಹಂತವಾಗಿ ಮೇಲೇರಿ ಪ್ರಾಧ್ಯಾಪಕ ನಂತರ ಪ್ರಾಚಾರ್ಯರಾಗಿ ಸೇವೆ. ೧೯೯೭ರಲ್ಲಿ ನಿವೃತ್ತಿಯಾದದ್ದು ಅಲ್ಲಿಯೆ. ಸಾವಿರಾರು ವಿದ್ಯಾರ್ಥಿಗಳಿಗೆ ನೆಚ್ಚಿನ ಕನ್ನಡ ಮೇಷ್ಟ್ರು. ನೂರಾರು ಸಹೋದ್ಯೋಗಿಗಳಿಗೆ ಆತ್ಮೀಯ ಒಡನಾಡಿ, ಲಕ್ಷಾಂತರ ಓದುಗರ ಮನೆಯಲ್ಲಿ ಮನದಲ್ಲಿ ನೆಚ್ಚಿನ ಸಾಹಿತಿ.

ಆಡಳಿತಗಾರರಾಗಿ ಸೌಮ್ಯ ಸ್ವಭಾವದ ಇವರು ಶಿಸ್ತಿನ ವಿಷಯ ಬಂದಾಗ ಕಟ್ಟುನಿಟ್ಟು. ವಿಶ್ವೇಶ್ವರಪುರಂ ಕಲೆ ಮತ್ತು ವಾಣಿಜ್ಯ ಕಾಲೇಜು ವಿದ್ಯಾರ್ಥಿಗಳು ಯಾವುದೇ ಚಳುವಳಿಯಲ್ಲಿ ಸದಾ ಮುಂದು. ಚಿಕ್ಕ ಕಾರಣಕ್ಕೂ ತೀವ್ರವಾಗಿ ಪ್ರತಿಕ್ರಿಯಿಸುವರು. ಬಹು ಬೇಗ ಬೀದಿಗಿಳಿದು ಹೋರಾಟಕ್ಕೆ ಅಣಿಯಾಗುವರು. ಅದರಲ್ಲೂ ವಿದ್ಯಾರ್ಥಿ ಸಂಘವಂತೂ ಹೋರಾಟಗಾರರ ವೇದಿಕೆ. ಯಾವುದೇ ಚಳುವಳಿಯಲ್ಲೂ ಅವರೇ ಮುಂಚೂಣಿಯಲ್ಲಿರುವರು. ಅನೇಕ ಬಾರಿ ರಾಜಕೀಯ ವಲಯದ ಪ್ರಭಾವವೂ

ದಟ್ಟವಾಗಿ ಅಲ್ಲಿನ ಚುನಾವಣೆ ಒಂದು ಕಿರು ವಿಧಾನಸಭಾ ಚುನಾವಣೆಯ ತಾಲೀಮು ಎನ್ನಬಹುದು. ಪ್ರಿನ್ಸಿಪಾಲರಾದ ಹೊಸದರಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಅಗತ್ಯ ಮನಗಂಡು ವಿದ್ಯಾರ್ಥಿ ಸಂಘದ ಚುನಾವಣೆಗೆ ನಿರ್ಬಂಧ ಹೇರುವ ಕಠಿಣ ನಿರ್ಧಾರ ತೆಗೆದುಕೊಂಡರು. ಅದರ ಪರಿಣಾಮವಾಗಿ ಒಂದು ಗುಂಪು ತೀವ್ರ ಪ್ರತಿಭಟನೆ ಮಾಡಿತು. ಬೆದರಿಕೆಯ ಕರೆ ಬಂದವು. ಮನೆಯ ಹತ್ತಿರ ಗಲಭೆಗೆ ಮುಂದಾದರೂ ಜಗ್ಗದೆ ನಿರ್ಧಾರಕ್ಕೆ ಅಂಟಿಕೊಂಡರು. ಪರಿಣಾಮವಾಗಿ ಅಶಿಸ್ತಿನ ಬೇರು ಒಣಗಿ ಹೋಯಿತು. ಅವರಿರುವವರೆಗೆ ಹೆಚ್ಚಿನ ಗಲಭೆ ಗಲಾಟೆಗೆ ಅವಕಾಶ ದೊರಕಲಿಲ್ಲ. ಆ ಕಾಲೇಜಿನಲ್ಲಿ ಅತ್ಯಂತ ಹೆಚ್ಚು ಕಾಲ ಪ್ರಾಂಶುಪಾಲರಾದ ಹಿರಿಮೆ ಅವರದು.

ಮನೆಗೆ ಬಂದ ಮೇಲೆ ಮುಗಿಯಿತು ಅವರದು ಸದಾ ಕನ್ನಡದ ಧ್ಯಾನ. ಅಧ್ಯಯನ ಬರವಣಿಗೆ ಬಿಟ್ಟು ಬೇರೆ ಹವ್ಯಾಸವೇ ಇಲ್ಲ. ಮನೆಗೆ ಯಾರೇ ನೆಂಟರಿಷ್ಟರು ಬಂದರು ಅವರು ತಮ್ಮ ಪಾಡಿಗೆ ತಾವು ಕೋಣೆಯಲ್ಲಿ ವ್ಯಾಸಂಗನಿರತರು. ಒಂದೊಂದು ಸಾರಿ ಬಂದವರು ಯಾರೆಂಬ ನೆನಪೂ ಅವರಿಗೆ ಇಲ್ಲದಷ್ಟು ಪರಧ್ಯಾನ. ಮದುವೆ ಮುಹೂರ್ತ, ಗೃಹಪ್ರವೇಶ ಪೂಜೆ ಪುನಸ್ಕಾರ ಎಂದು ಎಲ್ಲಿಗೂ ಹೆಚ್ಚಾಗಿ ಹೋಗರು. ಅತೀವ ಆತ್ಮೀಯರಾದರೆ ಭೇಟಿ ನೀಡಿ ಕೆಲವೇ ಗಂಟೆಗಳಲ್ಲಿ ವಾಪಸ್ಸು ಬರುವರು. ಮನೆ ದೇವರು ಮಲೆ ಮಾದೇಶ್ವರ. ನಿತ್ಯ ಪೂಜೆ ಮಾಡುವ ಆಸ್ತಿಕತೆ ಇರಲಿಲ್ಲ. ಅವರ ಕೋಣೆಯಲ್ಲಿ ತಾಯಿಯ ಫೋಟೋ ಒಂದು ಮಾತ್ರ. ಅದಕ್ಕೆ ಬೆಳಗ್ಗೆ ಎದ್ದು ಕೈ ಮುಗಿದರೆ ಮುಗಿಯಿತು. ನಂತರ ಕನ್ನಡದ ಕೈಂಕರ್ಯ ಕನ್ನಡ ತಾಯಿಯೇ ಎಲ್ಲ. ಅವರ ಗೆಳೆಯರ ಬಳಗವೂ ಅತಿ ಹಿತ ಮಿತ. ಡಾ. ಜಯಚಂದ್ರ, ಹರಿಹರ ಪ್ರಿಯ, ಎಲ್ಲೇಗೌಡರು, ಕ್ಯಾತನಹಳ್ಳಿ ರಾಮಣ್ಣ ಮತ್ತು ಡಾ. ಮಾದಯ್ಯ ಅವರ ಆಪ್ತರು.

ಕಾಲೇಜಿನ ಉದ್ಯೋಗಕ್ಕೆ ಹೋಗುವಾಗ ಬಹುಶಿಸ್ತಿನ ಉಡುಗೆ. ಫುಲ್ ಸೂಟು ಇಲ್ಲವೆ ಸಫಾರಿ. ಮನೆಗೆ ಬಂದಾಗ ಖಾದಿಧಾರಿ. ಒಳ ಉಡುಪಿನಿಂದ ಹಿಡಿದು ಪಂಚೆಯವರೆಗೆ ಶುಭ್ರ ಬಿಳಿಯ ಖಾದಿ ಬಳಕೆ. ೧೯೭೪ರ ಅವಧಿಯಲ್ಲಿ ದ್ವಿಚಕ್ರವಾಹನ ಓಡಿಸುತ್ತಿದ್ದರು. ನಂತರ ಅವರ ಪುತ್ರ ನ್ಯಾಷನಲ್ ಕಾಲೇಜಿನಲ್ಲಿ ಅಧ್ಯಯನ ಮಾಡುವವರೆಗೆ ಅವನೇ ಇವರ ಸಾರಥಿ. ಅದಾಗದಿದ್ದರೆ ನೆಮ್ಮದಿಯಾಗಿ ಬಿಟಿಎಸ್ ಬಸ್ಸಿನಲ್ಲಿ ಪಯಣಿಸುತ್ತಿದ್ದರು.

ವೃತ್ತಿ ಮತ್ತು ಪ್ರವೃತ್ತಿಗಳು ಪರಸ್ಪರ ಪೂರಕವಾದ ಸೌಭಾಗ್ಯ ಅವರದು. ಹಳ್ಳಿಗಾಡಿನಿಂದ ಬಂದ ಅವರಿಗೆ ಜಾನಪದ ಸಂಸ್ಕೃತಿ ರಕ್ತಗತ. ಹಳ್ಳಿಯ ಜನ ಹೃದಯಕ್ಕೆ ಹತ್ತಿರ. ಅಂತೆಯೇ ತಮ್ಮ ಸಮಯವನ್ನು ಗ್ರಾಮೀಣ ಸೊಗಡಿನ ಅನಾವರಣಕ್ಕೆ ಮೀಸಲಿರಿಸಿದರು. ಅವಿರತ ಕ್ಷೇತ್ರ ಕಾರ್ಯ ಮಾಡಿ, ಜನಪದ ಗೀತೆಗಳು, ಜನಪದ ಕಾವ್ಯಗಳು, ಪ್ರಾಣಿ ಕಥೆಗಳು ಹೀಗೆ ಸುಮಾರು ೨೧ ಪುಸ್ತಕಗಳನ್ನು ಪ್ರಕಟಿಸಿರುವ ಹಿರಿಮೆ ಇವರದು. ಲಿಂಗಯ್ಯನವರು ಕೃಷಿ ಮಾಡದ ಸಾಹಿತ್ಯ ಕ್ಷೇತ್ರವನ್ನು ಕನ್ನಡದಲ್ಲಿ ಹುಡುಕುವುದು ಕಷ್ಟ ಎನ್ನುವುದು ಕ್ಲೀಷೆಯಲ್ಲ. ನಾಟಕ, ಕಥೆ, ಕವನ, ಜೀವನ ಚರಿತ್ರೆ,



ವ್ಯಕ್ತಿಚಿತ್ರಗಳು, ಪ್ರಬಂಧ ಮತ್ತು ಗ್ರಂಥ ಸಂಪಾದನಾ ಕ್ಷೇತ್ರದಲ್ಲಿ ತಮ್ಮ ಹೆಜ್ಜೆ ಗುರುತು ಮೂಡಿಸಿರುವರು.

ಅವರ ಕಾಣಿಕೆ ಬರಿ ಸಾಹಿತ್ಯಕ್ಕೆ ಸೀಮಿತವಾಗದೆ ಜನಪರ ಚಳುವಳಿಗಳಲ್ಲೂ ವ್ಯಕ್ತವಾಗಿದೆ. ಕನ್ನಡಪರ ಚಳುವಳಿಯಲ್ಲಿ ಅವರು ಸದಾ ಎದ್ದು ಕಾಣುತ್ತಿದ್ದರು. ಹಂಪನಾ ಅವರ ಪ್ರೇರಣೆಯಿಂದ ಬೆಂಗಳೂರಿಗೆ ಬಂದ ಹೊಸತರಲ್ಲೇ ಜಿ. ನಾರಾಯಣರನ್ನು ಸಾಹಿತ್ಯ ಪರಿಷತ್ತಿಗೆ ಅಧ್ಯಕ್ಷರಾಗಿಸಲು ಶ್ರಮಿಸಿದರು. ವಿಪರ್ಯಾಸವೆಂದರೆ ಅವರ ಅಸಾಹಿತ್ಯಿಕ ನಡೆಗೆ ರೋಸಿ ೧೯೭೭ರಲ್ಲಿ ಸಮಕಾಲೀನ ವಿಚಾರವೇದಿಕೆಯಿಂದ ಅನೇಕ ಹೆಸರಾಂತ ಸಾಹಿತಿಗಳು ನಡೆಸಿದ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ವಿರೋಧಿಗಳ ಕಿರುಕುಳಕ್ಕೂ ಒಳಗಾದರು. ನಂತರ ನಡೆದ ಚುನಾವಣೆಯಲ್ಲಿ ಹಂಪನಾ ಅವರನ್ನು ಬೆಂಬಲಿಸಿದರು. ಅವರು ಆಯ್ಕೆಯಾದಾಗ ನಾಲ್ಕು ವರ್ಷಗಳ ಕಾಲ ಕಾರ್ಯದರ್ಶಿಯಾಗಿ ದುಡಿದರು. ಅವರು ಬರಿ ಪತ್ರಿಕಾ ಹೇಳಿಕೆ ನೀಡಿ ಪ್ರತಿಭಟಿಸುವ ಕಾಗದದ ಹುಲಿಯಲ್ಲ. ಕನ್ನಡ ಕ್ರೈಸ್ತರ ಚಳುವಳಿ ಮೊದಲುಗೊಂಡು ಹಲವಾರು ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗಿಗಳು. ೧೯೮೨ರಲ್ಲಿ ಗೋಕಾಕ ಚಳುವಳಿಯಲ್ಲಿ ಸರಕಾರದ ವಿಳಂಬ ನೀತಿ ಪ್ರತಿಭಟಿಸಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌ. ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಜನಪರ ನಿಲುವಿನಿಂದಾಗಿ ಅವರು ಜನಪ್ರಿಯರೂ ಆಗಿದ್ದರು ಹಾಗಾಗಿ ಅನೇಕ ಸಾಹಿತ್ಯ ಸಂಘಟನೆಗಳಲ್ಲಿ ಪದಾಧಿಕಾರಿಯಾಗಿ ಕೊನೆಯುಸಿರು ಇರುವವರೆಗೆ ಶ್ರಮಿಸಿದರು.

ಬಹುಮುಖ ಪ್ರತಿಭೆ ಹೊಂದಿದ ಅವರನ್ನು ಪ್ರಶಸ್ತಿಗಳು ಬೆನ್ನು ಹತ್ತಿ ಬಂದವು. ರಾಜ್ಯ ಪ್ರಶಸ್ತಿ, ಜಾನಪದ ತಜ್ಞ ಪ್ರಶಸ್ತಿ, ಚುಂಚ ಶ್ರೀ ಪ್ರಶಸ್ತಿ ಅವರಿಗೆ ಬಂದ ಹತ್ತಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಮುಖ್ಯವಾದವು. ಅವರ 'ಬಯಲು ಸೀಮೆಯ ಜನಪದ ಗೀತೆಗಳು' ಕನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ಪಡೆದರೆ, ಕರ್ನಾಟಕ ಜಾನಪದ ಕಾವ್ಯವು, ದೇವರಾಜ ಬಹದ್ದೂರ್ ಪ್ರಶಸ್ತಿಗೆ ಭಾಜನವಾಗಿದೆ. 'ವಚನ ದವನ' ಜಾನಪದ ಸಾಹಿತ್ಯ ಅಕಾಡೆಮಿಯ ಬಹುಮಾನ ಪಡೆದಿದೆ. 'ಸತ್ಯಾಗ್ರಹಿಗಳ ಸಂದರ್ಶನ', ಕರ್ನಾಟಕ ಗಾಂಧಿ ಪ್ರತಿಷ್ಠಾನ ಪ್ರಶಸ್ತಿ ಪಡೆದಿದೆ. ಅವರ ವ್ಯಾಪಕ ಕ್ಷೇತ್ರಾನುಭವ ಮತ್ತು ಜನಸಂಪರ್ಕ ದಿಂದಾಗಿ ಅನೇಕ ಪ್ರಶಸ್ತಿ ಸಮಿತಿಗಳ ಸದಸ್ಯರಾಗಿ ದುಡಿದರು. ಹಿರಿಯರಿಗೆ ಮನ್ನಣೆ ನೀಡಿ ಕಿರಿಯರಿಗೆ ಬೆನ್ನು ತಟ್ಟಿ ಅರ್ಹರಿಗೆ ಪ್ರಶಸ್ತಿ ನೀಡಿ ಬೆನ್ನು ತಟ್ಟುವಲ್ಲಿ ಸದಾ ಮುಂದು.

ಅವರ ಅವಿರತ ಶ್ರಮವೇ ಸಂಘಸಂಸ್ಥೆಗಳ ಪಾಲಿಗೆ ಸಂಜೀವಿನಿ. ಎತ್ತರದ ನಿಲುವಿನ ಸಾಧಾರಣ ಮೈಕಟ್ಟಿನ ಮೃದು ಮಾತಿನ ಅವರಲ್ಲಿ ಸಂಘರ್ಷದ ಮಾತೇ ಇಲ್ಲ. ಸಾಮರಸ್ಯದಿಂದ ಎಲ್ಲರೊಡನೆ ಒಂದಾಗಿ ಹೋಗುವ ಗುಣ ಅವರನ್ನು ಸರ್ವಗ್ರಾಹಿಯನ್ನಾಗಿಸಿತು. ಹಾಗಾಗಿ ಇಳಿವಯಸ್ಸಿನಲ್ಲೂ ಏರು ಜವ್ವನಿಗರು ನಾಚುವ

ಉತ್ಸಾಹದ ಕೆಲಸ ಅವರದು. ಸಾಹಿತ್ಯ ವಲಯದ ಗುಂಪೊಂದರ ಸದಸ್ಯ ಎಂಬ ಮಾತಿಗೆ ಮುಗುಳ್ ನಗುತ್ತ ಮಾಡುವ ಕೆಲಸವೇ ಅವರ ಉತ್ತರ.

ಕನ್ನಡದ ಏಳಿಗೆಗಾಗಿ ಸಾಹಿತ್ಯ ಸಂಸ್ಕೃತಿ ಪ್ರಸಾರಕ್ಕಾಗಿ ಹೊಸ ಹಾದಿ ಹಿಡಿಯಲು ಹಿಂಜರಿಕೆ ಇರಲಿಲ್ಲ. ಅವರು ತಾವು ಇನ್ನೂ ಕಾಗದ ಪೆನ್ನು ಬಳಕೆ ಮಾಡಿ ಸಾಹಿತ್ಯ ರಚನೆ ಮಾಡಿದರೂ, ವಿದ್ಯುನ್ಮಾನ ಮಾಧ್ಯಮದ ಅಗಾಧ ಸಾಧ್ಯತೆಯ ಅರಿವು ಅವರಿಗಿತ್ತು. ಅದಕ್ಕಾಗಿ ಪ್ರತಿಷ್ಠಾನದಲ್ಲಿ ಕಂಪ್ಯೂಟರೀಕರಣವನ್ನು ಬೆಂಬಲಿಸಿ ಅತ್ಯಾಧುನಿಕ ಕಂಪ್ಯೂಟರ್ ಕೊಳ್ಳಲು ಕಾರ್ಯಕಾರಿ ಸಮಿತಿಯಲ್ಲಿ ನಿರ್ಧರಿಸಿದ್ದರು. ಗ್ರಂಥಾಲಯದಲ್ಲಿನ ಎಲ್ಲ ಪುಸ್ತಕಗಳ ಯಾದಿಯ ಗಣಕೀಕರಣಕ್ಕೆ ಚಾಲನೆ ನೀಡಿದರು. ನಾನು ಪ್ರತಿಷ್ಠಾನದಲ್ಲಿರುವ ಹಸ್ತಪ್ರತಿಗಳ ವಿವರವಾದ ಯಾದಿಯನ್ನು ಕಂಪ್ಯೂಟರೀಕರಿಸಿ ಅವರ ಗಮನಕ್ಕೆ ತಂದಾಗ ಅದನ್ನು ಪ್ರತಿಷ್ಠಾನದ ವೆಬ್‌ಸೈಟ್‌ನಲ್ಲಿ ಹಾಕಿ ಆಸಕ್ತರಿಗೆ ಮಾಹಿತಿ ತಕ್ಷಣ ಲಭ್ಯವಾಗುವಂತೆ ಮಾಡಬಹುದು ಎಂಬ ಸಲಹೆಯನ್ನು ಕಾರ್ಯಗತಗೊಳಿಸಲು ಸಮ್ಮತಿಸಿದ್ದರು. ತಮಗೂ ಒಂದು ಇ–ಮೇಲ್ ಐಡಿಯನ್ನು ರಚಿಸಿಕೊಡಲು ಹೇಳಿದ್ದರು.

'ಶರಣರ ಸಾವು ಮರಣದಲ್ಲಿ ನೋಡು' ಎಂಬ ಮಾತು ಬಹು ಪ್ರಸಿದ್ಧ. ಆದರೆ ಅದರ ಪ್ರತ್ಯಕ್ಷದರ್ಶನ ನನಗೆ ಇತ್ತೀಚೆಗೆ ಆಯಿತು. ಬಿ.ಎಂ.ಶ್ರೀ. ಪ್ರತಿಷ್ಠಾನವು ಬೆಂಗಳೂರು ಮೂಲದ ವಿಶಿಷ್ಟ ಸಾಂಸ್ಕೃತಿಕ ಸಂಸ್ಥೆ. ಖ್ಯಾತ ಸಾಹಿತಿ ಎಂ.ವಿ. ಸೀತಾರಾಮಯ್ಯನವರ ಕನಸಿನ ಕೂಸು. ಅಳಿದು ಹೋಗುತ್ತಿರುವ ಹಸ್ತಪ್ರತಿ ಸಂರಕ್ಷಣೆಗಾಗಿ ಶ್ರಮಿಸುತ್ತಿರುವ ಮೊಟ್ಟ ಮೊದಲ ಸಂಸ್ಥೆ. ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಮತ್ತು ಸಂಪಾದನೆಯ ಗುರಿ ಅದರದು. ಕನ್ನಡ ಸಾಹಿತ್ಯ ಲೋಕದ ಘಟಾನುಘಟಿಗಳೆಲ್ಲರ ಸಹಯೋಗದ ಭಾಗ್ಯ ಅದಕ್ಕಿದೆ. ಕಳೆದ ವಾರ ಕನ್ನಡದ ಹಿರಿಯ ವಿದ್ವಾಂಸರಾದ ಡಾ. ಜಿ. ನಾಡೋಜ ಪ್ರೊ. ಜಿ. ವೆಂಕಟಸುಬ್ಬಯ್ಯನವರು, ಸಾಹಿತ್ಯ ಸಾಧನೆಗಾಗಿ ಇರುವ ಎಂ.ವಿ.ಸೀ ಪ್ರಶಸ್ತಿಯನ್ನು, ಕೆ. ಸತ್ಯನಾರಾಯಣ ಅವರಿಗೆ ಪ್ರದಾನ ಮಾಡುವ ಸಮಾರಂಭ. ಡಾ. ಚಿದಾನಂದಮೂರ್ತಿ, ವೆಂಕಟಾಚಲ ಶಾಸ್ತ್ರೀ, ಎಲ್.ಎಸ್. ಶೇಷಗಿರಿರಾಯರುಗಳನ್ನು ಗೌರವಿಸುವ ಸಮಾರಂಭ. ಸಭಾಂಗಣ ಸಾಹಿತಿಗಳಿಂದ ವಿದ್ವಾಂಸರಿಂದ ಕಿಕ್ಕಿರಿದಿತ್ತು. ಅವರ ದರ್ಶನ ಪಡೆವ, ಅನುಭವಾಮೃತ ಆಸ್ವಾದಿಸುವ ಸವಿಗಳಿಗೆಗಾಗಿ ಕಾತುರದಿಂದ ಕಾಯುತ್ತಿತ್ತು ಜನ. ಶತಾಯುಷಿಗಳಿಗೆ ಸನ್ಮಾನವಾಯಿತು. ಈ ಎಲ್ಲ ಕಾರ್ಯಕ್ರಮದ ರೂವಾರಿ ಪ್ರೊ. ಡಿ. ಲಿಂಗಯ್ಯ, ಪ್ರತಿಷ್ಠಾನದ ಅಧ್ಯಕ್ಷರು, ಹೆಮ್ಮೆಯಿಂದ ಬೀಗುತ್ತಿದ್ದರು. ಹೀಗೆ ಹಿರಿತಲೆಗಳನ್ನೆಲ್ಲ ಒಟ್ಟುಗೂಡಿಸಿರುವುದಕ್ಕೆ ಅವರಿಗೆ ಕಣ್ಣು ತುಂಬಿ ಬಂದಿತ್ತು. ಶಾಲು ಹೊದಿಸಿ ಹಾರ ಹಾಕಿ ವೇದಿಕೆಯಲ್ಲೇ ಕುಸಿದರು. ವೇದಿಕೆಯ ಮೇಲೆ ಮತ್ತು ಮುಂದೆ ಇರುವವರು ಆತಂಕಕ್ಕೆ ಒಳಗಾದರು. ಲಿಂಗಯ್ಯನವರನ್ನು ತಕ್ಷಣ ಆಸ್ಪತ್ರೆಗೆ ಸಾಗಿಸಲಾಯಿತು. ಕಾರ್ಯಕ್ರಮ ಮೊಟಕುಗೊಳಿಸಿ ಆತಂಕದಿಂದ ಕಾಯುತ್ತಿರುವಾಗ ಅವರು ವಿಧಿವಶರಾದ ವಾರ್ತೆ ಬಂದಿತು.

ಕೆಲವೇ ಗಂಟೆಗಳಲ್ಲಿ ಅವರ ಕಳೇಬರವನ್ನು ಅವರ ಕಾರ್ಯಕ್ಷೇತ್ರದಲ್ಲೇ ಅಂತಿಮ ಗೌರವ ಸಲ್ಲಿಸಲು ತರಲಾಯಿತು. ಸಂತೋಷ ಸಭೆ ಸಂತಾಪ ಸೂಚಕ ಸಭೆಯಾಯಿತು.



ಜನಪದ ವಿದ್ವಾಂಸ, ಸಾಹಿತಿ ಮತ್ತು ಉತ್ತಮ ಆಡಳಿತಗಾರರು ತಮ್ಮ ಎಪ್ಪತ್ತನಾಲ್ಕನೆ ವಯಸ್ಸಿನಲ್ಲೂ ಚುರುಕಾಗಿದ್ದ ಅವರ ಆಕಸ್ಮಿಕ ಅಂತ್ಯವನ್ನು ಕಂಡ ಜನರೆಲ್ಲ ಮರುಗಿದರೂ ಎಂತಹ ಪುಣ್ಯದ ಸಾವು. ಕನ್ನಡದ ಸೇವೆಯಲ್ಲೇ ವೇದಿಕೆಯಲ್ಲೇ ಕಾಲವಶರಾದರು ಎಂದು ಅಶ್ರುತರ್ಪಣ ಅರ್ಪಿಸಿದೆವು. ಅಂತಿಮಗೌರವ ಸಲ್ಲಿಸಲಾಯಿತು. ತಮ್ಮ ಪ್ರೀತಿಯ ಕಾಯಕದ ನಿರ್ವಹಣೆಯಲ್ಲೇ ಕೈಲಾಸ ಸೇರಿದ ಅವರ ಜೀವನ ಧನ್ಯ ಎನಿಸಿತು.

ಎರಡು ವರ್ಷಗಳ ಹಿಂದೆ ಖ್ಯಾತ ವಿಮರ್ಶಕ ಕಿ.ರಂ. ನಾಗರಾಜ ಅವರು ಬೇಂದ್ರೆ ಕುರಿತು ಸತತ ೨ ತಾಸು ಮಾತನಾಡಿ, ಕೇಳುಗರನ್ನು ಮಂತ್ರ ಮುಗ್ಧಗೊಳಿಸಿ ಮನೆಗೆ ಹೋಗುವ ಹಾದಿಯಲ್ಲೇ ಮರಣವನ್ನಪ್ಪಿದ್ದು ನೆನಪಿಗೆ ಬಂತು. ಅವರ ನೆನಪಿನಲ್ಲಿ ಈಗ ಪ್ರತಿವಾರ ಶನಿವಾರ ಕಿರಂ ನುಡಿ ಮನೆಯಲ್ಲಿ ಸಾಹಿತ್ಯ ಕಾರ್ಯಕ್ರಮವನ್ನು ತಪ್ಪದೆ ಸುಚಿತ್ರ ಸೊಸೈಟಿಯವರು ನಡೆಸಿಕೊಡುತ್ತಾ ನಿರಂತರ ಸಾಹಿತ್ಯ ಸೇವೆ ಮಾಡುತ್ತಿದ್ದಾರೆ. ಅನಂತಮೂರ್ತಿಯವರಿಂದ ಹಿಡಿದು ಯುವ ಸಾಹಿತಿಗಳವರೆಗೆ ಎಲ್ಲ ಹಿರಿ ಕಿರಿಯರಿಗೆ ವೇದಿಕೆ ದೊರಕಿದೆ. ಸಾಹಿತಿಗಳ ಸಂವಾದದಲ್ಲಿ ಭಾಗವಹಿಸುವ ಸೌಭಾಗ್ಯ ಆಸಕ್ತರಿಗೆ ದೊರಕುತ್ತಿದೆ. ಕಲ್ಲು, ಕಾಂಕ್ರೀಟಿನ ಕಟ್ಟಡ, ಲೋಹದ ಪುತ್ಥಳಿಗಳಿಗಿಂತ ಈ ಮಾದರಿಯ ಸ್ಮರಣೆ ಹೆಚ್ಚು ಸುಸಂಗತ.

ಇಂದಿನ ವಿಚಾರ ಸಂಕಿರಣದಲ್ಲಿ ನೂರಾರು ಜನ ಭಾಗವಹಿಸಿರುವರು. ಇದನ್ನೇ ಪುಸ್ತಕ ರೂಪದಲ್ಲಿ ಪ್ರಕಟಿಸಿದಾಗ ಸಾವಿರಾರು ಜನರನ್ನು ತಲುಪಬಹುದು. ಇದರ ಜೊತೆಗೆ ಅಂತರ್‌ಜಾಲದಲ್ಲಿ ಇಲ್ಲಿನ ಕಾರ್ಯಕ್ರಮಗಳನ್ನು ಸಾದರಪಡಿಸಿದರೆ ಭೌಗೋಳಿಕ ಎಲ್ಲೆಯ ಮಿತಿ ದಾಟಿ ಲಕ್ಷಾಂತರ ಆಸಕ್ತರಿಗೆ ದೇಶ ಕಾಲಗಳ ಗಣನೆ ಇಲ್ಲದೆ ತಲುಪ ಬಹುದು.

ದಿವಂಗತರ ಸಾಹಿತ್ಯ ಪ್ರಸಾರದ ಆಶಯ ಪೂರೈಸಲು, ಸ್ಥಗಿತವಾಗಿರುವ ವೆಬ್‌ಸೈಟನ್ನು ಪುನರಾರಂಭಿಸಿ ಇಲ್ಲಿ ನಡೆಯುವ ಎಲ್ಲ ಕಾರ್ಯಕ್ರಮಗಳ ಮಾಹಿತಿಯನ್ನು ನಾಡಿನಾದ್ಯಂತ ಇರುವ ಸಾಹಿತ್ಯಾಸಕ್ತರಿಗೆ ನೀಡಿ ಮತ್ತು ಕನ್ನಡದ ಕೆಲಸದಲ್ಲಿ ಎಲ್ಲರನ್ನೂ ತೊಡಗಿಸಿಕೊಳ್ಳುವಂತೆ ಮಾಡುವುದೇ ಅವರಿಗೆ ನಿರ್ಮಿಸುವ ಉತ್ತಮ ಸ್ಮಾರಕವಾಗುವುದು.

ಈಗ ಸಾಹಿತ್ಯ ರಚನೆ ಹುಲುಸಾಗಿ ಸಾಗಿದೆ. ಆದರೆ ಪುಸ್ತಕ ಸಂಸ್ಕೃತಿ ಇಳಿಮುಖ ವಾಗಿದೆ. ಈಗ ಮೊಳೆ ಜೋಡಿಸಿ ಮುದ್ರಿಸುವ ಕಾಲ ಇಲ್ಲ. ಹೇಗಿದ್ದರೂ ಸಾಫ್ಟ್ ಕಾಪಿ ಸಿಡಿಯಲ್ಲಿ ಸಿಗುವುದು. ಅದನ್ನೇ ಬಳಸಿ ಅಂತರ್‌ಜಾಲದಲ್ಲಿ ಹಾಕಬಹುದು. ತಿ.ನಂ.ಶ್ರೀ. ಅವರ ಪುತ್ರ ನಾಗಭೂಷಣ ಅವರು, ಮುಗುಳಿಯವರ ಮಗ ಶ್ರೀರಾಮು ಅವರೂ ತಮ್ಮ ಹಿರಿಯರ ಸಮಗ್ರ ಕೃತಿಗಳನ್ನು ಅಪಾರಶ್ರಮ ಮತ್ತು ವೆಚ್ಚದಿಂದ ಪ್ರಕಟಿಸಿರುವರು. ಕೆ.ಎಸ್.ನ, ತೇಜಸ್ವಿ, ಅಡಿಗರು, ಜಿ.ಎಸ್. ಶಿವರುದ್ರಪ್ಪ ಮೊದಲಾದವರ ಸಮಗ್ರ ಕೃತಿಗಳು ಬಂದಿವೆ. ಎಲ್ಲದಕ್ಕೂ ಸರಕಾರದವರೇ ಮಾಡಲಿ ಎನ್ನುವುದು ಎಷ್ಟು ಸರಿ ? ಅವೆಲ್ಲವುಗಳ ಜೊತೆಗೆ ಇನ್ನು ಮೇಲೆ ಪ್ರಕಟವಾಗುವ ಕೃತಿಗಳನ್ನು ಅಂತರ್‌ಜಾಲದ ಮೂಲಕ ಲಕ್ಷಾಂತರ ಜನರಿಗೆ ತಲುಪಿಸಬಹುದು. ಮತ್ತು ಭವಿಷ್ಯದ ಓದುರಿಗೆ ಸಂರಕ್ಷಿಸಿ

ಇಡಬಹುದು. ಸೃಜನ ಶೀಲ ಸಾಹಿತ್ಯ ಕೃತಿಗಳ ಹಕ್ಕು ಸ್ವಾಮ್ಯಕ್ಕೆ ಚ್ಯುತಿ ಬರುವುದು ಎಂದಾದರೆ ಅವನ್ನು ಇ-ಪುಸ್ತಕ ರೂಪದಲ್ಲಿ ಪ್ರಕಟಿಸಬಹುದು. ಈಗ ಹಣಕ್ಕೆ ಕೊರತೆ ಇಲ್ಲ; ಆದರೆ ಸಮಯದ ಅಭಾವವಿದೆ. ಪುಸ್ತಕ ಹುಡುಕಿ ಓದಲು ಶ್ರಮವಾಗುವುದು ಎನ್ನುವ ಕಾಲ. ಈಗ ಎಲ್ಲರ ಕೈನಲ್ಲೂ ಲ್ಯಾಪ್‌ಟಾಪು, ಐಪ್ಯಾಡು, ಟ್ಯಾಬ್ಲೆಟ್ ಕೊನೆ ಪಕ್ಷ ಮೊಬೈಲಂತೂ ಇದ್ದೇ ಇರುವುದು. ಅವುಗಳ ಮೂಲಕ ಕೆಲಸ ಮಾಡುವಾಗ, ಗಂಟೆಗಟ್ಟಲೆ ಪ್ರಯಾಣ ಮಾಡುವಾಗ ಓದುವ ಮತ್ತು ಕೇಳುವ ಸಾಧ್ಯತೆ ಬಳಸಿ ಸಾಹಿತ್ಯ ಪರಿಚಯ ಮಾಡಿಸಬಹುದು. ಈಗ ಈ ಕೆಲಸವನ್ನು ಕಣಜ ಮೊದಲಾದ ಕೆಲ ತಾಣಗಳು ಮಾಡುತ್ತಿರುವುದು ನಿಜವಾದರೂ, ಅದರ ಬಳಕೆ ಹೆಚ್ಚಾಗಬೇಕಿದೆ. ಅದನ್ನೇ ವ್ಯಾಪಕವಾಗಿ ಎಲ್ಲ ಹಂತದಲ್ಲೂ ಮಾಡಿದರೆ ಪುಸ್ತಕದ ಗಂಟು ಹೊತ್ತು ಸಾಹಿತ್ಯ ಪ್ರಸಾರ ಮಾಡಿದ ಗಳಗನಾಥರ, ಭಾಷಣ ಮಾಡಲು ಆಹ್ವಾನಿಸಿದರೆ ಹಾರ ತುರಾಯಿ ಬದಲು ಪುಸ್ತಕ ಕೊಂಡುಕೊಳ್ಳಿ ಎಂದು ಸಾಹಿತ್ಯ ಪರಿಚಾರಿಕೆ ಮಾಡಿದ ಜಿ.ಪಿ. ರಾಜರತ್ನಂ ಅವರ ಸಾಹಿತ್ಯ ಪ್ರಚಾರವನ್ನು ವಿಭಿನ್ನ ರೀತಿಯಲ್ಲಿ ಮುಂದುವರಿಸಿದಂತಾಗುವುದು.

ಕನ್ನಡವನ್ನು ಕಟ್ಟಿ ಬೆಳೆಸುವ ಕೆಲಸ ಕರ್ನಾಟಕದಲ್ಲಿ ಮಾತ್ರ ನಡೆದರೆ ಸಾಲದು. ಕನ್ನಡದ ಕಂಪು, ವಿಶ್ವದ ಇತರೆಡೆಯಲ್ಲೂ ಪಸರಿಸುವಂತೆ ನೋಡಿಕೊಳ್ಳಬೇಕು. ಅದಕ್ಕಾಗಿ ನಾವು ಗಣಕೀಕರಣದತ್ತ ಗಮನಹರಿಸಬೇಕಾಗಿದೆ. ಗಣಕೀಕರಣ ಅಂದರೆ, ಬರೀ ಬ್ಲಾಗುಗಳು, ವೆಬ್‌ಸೈಟುಗಳು ಮಾತ್ರ ಅಲ್ಲ. ನಮ್ಮ ಸಾಹಿತ್ಯದ ಸಂರಕ್ಷಣೆ ಹಾಗೂ ಸಂವಹನಕ್ಕಾಗಿ ಆಧುನಿಕ ತಂತ್ರಜ್ಞಾನದ ಎಲ್ಲ ಸಾಧ್ಯತೆ ಬಳಸಿಕೊಳ್ಳಬೇಕು.

ಈಗ ವಿಶ್ವ ಜಾಗತಿಕ ಗ್ರಾಮವಾಗಿದೆ. ಎಲ್ಲೆಡೆ ಕನ್ನಡಿಗರಿದ್ದಾರೆ. ಅವರನ್ನು ತಲುಪಬಹುದು. ಆದರೆ ತಂತ್ರಜ್ಞಾನದ ಮಿತಿ ಅರಿಯಬೇಕು. ಸ್ವಾನ್ ಪೆನ್ನಿನಿಂದ ಬರೆಯುವವರೆಲ್ಲ ಹಂಸಲೇಖ ಆಗುವುದಿಲ್ಲ. ಪಾರ್ಕರ್ ಪೆನ್ನು ಬಳಸಿದವರು ಪು.ತಿ.ನ. ಆಗಲಾರರು. ಹಾಗೆ ನೋಡಿದರೆ ನಮ್ಮ ಜಾನಪದ ಸಾಹಿತಿಗಳು ಅನಕ್ಷರಸ್ಥರು. ಅವರಂತೆ ಸಾಹಿತ್ಯ ರಚಿಸಲು ನಮ್ಮಿಂದ ಸಾಧ್ಯವೆ ? ಸಾಹಿತ್ಯದ ಉಗಮ ಶ್ರದ್ಧೆಯಿಂದ, ಸಾಧನೆಯಿಂದ, ಅಂತಃಸತ್ವದಿಂದ, ವಿದ್ವತ್ ಬರುವುದು ನಿರಂತರ ಅಧ್ಯಯನದಿಂದ, ಕಂಪ್ಯೂಟರ್ ಇದ್ದವರೆಲ್ಲ ಕವಿಗಳಾಗರು. ಲ್ಯಾಪ್‌ಟಾಪ್ ಹೊಂದಿದವರು ಲೇಖಕರಾಗುವುದಿಲ್ಲ ಎಂಬ ಮಾತು ಸಾರ್ವಕಾಲಿಕ ಸತ್ಯ. ವಿಜ್ಞಾನ ಸಾಧನಗಳು ಸಾಹಿತ್ಯ ಪ್ರಸಾರದ ವಾಹಕಗಳು ಮಾತ್ರ.

ಒಂದು ಮಾತ್ರ ನಿಜ. ಜನಪದ ಗೀತೆಗಳ ಸೊಗಡಿನ ಆಸ್ವಾದನೆ ಆಗುವುದು ಅವನ್ನು ಕೇಳಿದಾಗ ಮಾತ್ರ. ಓದಿದಾಗ ಅಲ್ಲ. ದೇಶ ಕಾಲಗಳ ಮಿತಿ ದಾಟಿ ಅವುಗಳನ್ನು ಆಲಿಸುವ ಅನುಕೂಲ ಇರುವಾಗ ಬಳಕೆ ಮಾಡಿಕೊಳ್ಳುವ ಮನಸ್ಸು ನಮಗೆ ಬೇಕು. ಒಂದು ಚಿಕ್ಕ ಉದಾಹರಣೆ. ಈಗ ಮಂಡಿಸಿದ ಪ್ರಬಂಧಗಳನ್ನು ನೂರಾರು ಜನ ಕೇಳಿದಿರಿ. ಕೆಲವು ಸಮಯದ ನಂತರ ಮುದ್ರಣ ರೂಪದಲ್ಲಿ ಬಂದಾಗ ಸಾವಿರಾರು ಜನ ಓದಲೂಬಹುದು. ಆದರೆ ಈಗ ಈ ಲೇಖನಗಳನ್ನು ಬ್ಲಾಗ್‌ಗೆ ಹಾಕಿದರೆ



ಎರಡೇ ನಿಮಿಷದಲ್ಲಿ ಅರಸಿಕೆರೆಯಲ್ಲಿರುವ ಅಜ್ಜ, ಗೋವಾದಲ್ಲಿರುವ ಗೆಳೆಯ, ಮಾಸ್ಕೋದಲ್ಲಿರುವ ಮಗ, ಮಿಚಗನ್‌ನಲ್ಲಿರುವ ಮೊಮ್ಮಗ ತಕ್ಷಣ ಓದಬಹುದು. ದೂರದ ಊರಿಗೆ ಹೋಗಲು ಕಾರು ಇರುವಾಗ ಕಾಲ್ನಡಗೆಯೇ ಉತ್ತಮ ಎನ್ನುವ ಭಾವನೆ ಸೂಕ್ತವೆ ? ಎಂಬ ಚಿಂತನೆ ಮಾಡಬೇಕಿದೆ.

ಕನ್ನಡದ ಕಂಪು ಕರ್ನಾಟಕದಲ್ಲಿ ಹರಡಿದರೆ ಸಾಲದು, ವಿಶ್ವದ ಖ್ಯಾತ ಯೂನಿವರ್ಸಿಟಿಗಳಲ್ಲಿ ಕನ್ನಡ ವಿಭಾಗಗಳು ಬರಲಿ, ಇತರ ರಾಜ್ಯಗಳ ವಿಶ್ವವಿದ್ಯಾಲಯಗಳಲ್ಲಿರುವ ಕನ್ನಡ ವಿಭಾಗಗಳಿಗೆ ಕರ್ನಾಟಕ ಸರ್ಕಾರ ಮತ್ತು ಲೇಖಕರ ನೆರವು ದೊರೆಯಲಿ. ನಮ್ಮ ಪುಸ್ತಕಗಳನ್ನು ಲೈಬ್ರರಿ ಆಫ್ ಕಾಂಗ್ರೆಸ್, ನ್ಯೂಯಾರ್ಕ್ ಪಬ್ಲಿಕ್ ಲೈಬ್ರರಿಗಳಲ್ಲಿಯೂ ಸಿಗುವಂತಾಗಲಿ. ಭೌತಿಕ ಪುಸ್ತಕಗಳು ಮಾತ್ರವಲ್ಲ. ಇ-ಪುಸ್ತಕಗಳೂ ವಿಶ್ವದ ಪುಸ್ತಕ ಸಂಗ್ರಹಾಲಯಗಳಾದ, ಆರ್ಕೈವ್ಸ್.ಆರ್ಗ್, ವಿಶ್ವದ ಡಿಜಿಟಲ್ ಲೈಬ್ರರಿ, ಭಾರತೀಯ ಡಿಜಿಟಲ್ ಲೈಬ್ರರಿಗಳಲ್ಲಿಯೂ ದೊರಕಬೇಕು. ಈ ನಿಟ್ಟಿನಲ್ಲಿ ನಾವೆಲ್ಲ ಪುಟ ತಿರುಗಿಸಿ ನೋಡುವುದು ಮಾತ್ರವಲ್ಲ. ಪುಟದಾಚೆಯೂ ನೋಡಬೇಕಾಗಿರುವುದು ಇಂದಿನ ಅಗತ್ಯ.

ಆ ಮೂಲಕ ಜ್ಞಾನಕ್ಕೆ ವಿಜ್ಞಾನದ ಮೆರಗು ನೀಡಿ ಪ್ರೊ. ಲಿಂಗಯ್ಯನವರ ಕನ್ನಡ ಸೇವೆಯನ್ನು ಅರ್ಥಪೂರ್ಣವಾಗಿಸೋಣ.

# ೩. ಜಾನಪದ ಕ್ಷೇತ್ರಕ್ಕೆ ಪ್ರೊ. ಡಿ. ಲಿಂಗಯ್ಯನವರ ಕೊಡುಗೆ

**–ಡಾ. ಚಕ್ಕೆರೆ ಶಿವಶಂಕರ್***

**ಜಾ**ಗತಿಕ ಮಹಾಯುದ್ಧಗಳ ನಂತರ ವಿಶ್ವದಲ್ಲಿ ಜರುಗಿದ ವಿದ್ಯಮಾನಗಳು, ಗ್ರಾಮೀಣ ಸಮುದಾಯಗಳ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಬುಡಗಳನ್ನು ಬೇರು ಸಹಿತ ಅಲ್ಲಾಡಿಸಿದವು. ಅಂತಹ ಸಂದರ್ಭದಲ್ಲಿ ಭಾರತದ ನೆಲದಲ್ಲಿ ವಸಾಹತೀಕರಣವು ಜಾನಪದ ಅಧ್ಯಯನವನ್ನು ಹುಟ್ಟುಹಾಕಿತು. ವರ್ತಮಾನದ ಸಂಕಷ್ಟಗಳನ್ನು ಗೆಲ್ಲಲು, ಭೂತಕಾಲದ ಭವ್ಯ ಮೌಲ್ಯಗಳನ್ನು ಎತ್ತಿ ಹಿಡಿದು ಹೊರಟಿದ್ದು ಜಾನಪದ ಅಧ್ಯಯನದ ಆರಂಭದ ಚಿಂತನೆಯಾಗಿದ್ದಿತು.

ಬ್ರಿಟಿಷರು ಭಾರತಕ್ಕೆ ಬರುವವರೆಗೂ ಭಾರತೀಯರಿಗೆ ಜಾನಪದದ ಬಗೆಗಿನ ತಿಳಿವಳಿಕೆ ಇರಲಿಲ್ಲ. ಭಾರತದಲ್ಲಿ ಜಾನಪದ ಸಂಗ್ರಹಕಾರ್ಯ ನಡೆದದ್ದು ಕ್ರೈಸ್ತ ಮಿಷನರಿಗಳಿಂದ ಮತ್ತು ಬ್ರಿಟಿಷ್ ಅಧಿಕಾರಿಗಳಿಂದ. ಭಾರತವನ್ನು ತಮ್ಮ ವಸಾಹತು ರಾಷ್ಟ್ರವನ್ನಾಗಿಸಿಕೊಂಡ ಈಸ್ಟ್ ಇಂಡಿಯಾ ಕಂಪೆನಿಯು ರಾಜಕೀಯ ಮತ್ತು ಧಾರ್ಮಿಕ ಕಾರಣಗಳಿಗಾಗಿ ಸ್ಥಳೀಯ ಸಂಸ್ಕೃತಿ, ಭಾಷೆಯತ್ತ ಗಮನ ಹರಿಸಬೇಕಾಗಿ ಬಂತು. ತಮ್ಮ ಆಡಳಿತದ ಅನುಕೂಲ ಮತ್ತು ಕ್ರೈಸ್ತ ಧರ್ಮದ ಪ್ರಚಾರಕ್ಕಾಗಿ ಜನರ ಬದುಕನ್ನು ಅರಿಯಬೇಕಾಗಿ ಬಂತು. ಕನ್ನಡ ನಾಡಿನ ಜನ ಸಮುದಾಯಗಳ ಬದುಕು ಜಾನಪದದ ವೈವಿಧ್ಯಮಯ ಪ್ರಕಾರಗಳಿಂದ ಪ್ರಭಾವಿಸಲ್ಪಟ್ಟಿದ್ದುದನ್ನು ಬ್ರಿಟಿಷ್ ಅಧಿಕಾರಿಗಳು ಮತ್ತು ಮತ ಪ್ರಚಾರಕರು ಗ್ರಹಿಸಿದರು. ಜನಪದ ಗೀತೆ, ಕಥೆ, ಗಾದೆ, ಒಗಟು, ಆಚರಣೆಗಳಂತಹ ವಿಷಯಗಳತ್ತ ಸಹಜವಾಗಿ ಆಕರ್ಷಿತರಾದರು. ಪ್ರಾದೇಶಿಕ ಸಂಸ್ಕೃತಿಗಳ ಅಧ್ಯಯನದಲ್ಲಿ ತಮ್ಮನ್ನೇ ತೊಡಗಿಸಿಕೊಂಡರು. ಜನಭಾಷೆಯನ್ನು ಕಲಿಯುವುದರ ಮೂಲಕ ಜನರ ನಡವಳಿಕೆಗಳನ್ನು ತಿಳಿದುಕೊಂಡರು. ಜನರಿಗೆ ಸುಲಭವಾಗಿ ಅರ್ಥವಾಗುವ, ಜನರಲ್ಲಿ ವ್ಯಾಪಕವಾಗಿ ರೂಢಿಯಲ್ಲಿದ್ದ ಜನಪದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತಮ್ಮ ಧರ್ಮದ ಸುವಾರ್ತೆಗಳನ್ನು ಬಿತ್ತರಿಸಲಾರಂಭಿಸಿದರು. ತಮ್ಮನ್ನು ಆಕರ್ಷಿಸಿದ ಜನಪದ ಗೀತ–ಸಂಗೀತದ ದನಿಗಳನ್ನು ಸಂಗ್ರಹಿಸಿ ದಾಖಲಿಸುವ ಕ್ರಿಯೆಯೆಡೆಗೆ ಹೊರಳಿಕೊಂಡರು. ಇದರಿಂದಾಗಿ ಕನ್ನಡ ಜಾನಪದ ಕ್ಷೇತ್ರಕ್ಕೆ ಅಮೂಲ್ಯವಾದ ಆಕರಗಳು ದೊರೆತವು. ಬ್ರಿಟಿಷರು ಜಾನಪದದ ಮೇಲಿನ ಪ್ರೀತಿಯಿಂದ ಈ ಕೆಲಸ ಮಾಡಿದರೊ ಇಲ್ಲಾ

* ವಿಳಾಸ : # ೨೧, 'ಪುಷ್ಯ' ೧೧ನೇ 'ಎ' ಅಡ್ಡರಸ್ತೆ, ಕವಿ ಕೇಶಿರಾಜ ರಸ್ತೆ, ಶ್ರೀನಗರ, ಬೆಂಗಳೂರು–೫೬೦೦೦೫. ಮೊಬೈಲ್ : ೯೯೪೫೦೦೩೦೨೯



ಸ್ವಲಾಭಕ್ಕಾಗಿ ಈ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡರೊ ಎನ್ನುವುದು ಅನುಷಂಗಿಕ ವಿಚಾರ. ಆದರೆ ಈ ಕಾಲಘಟ್ಟದಲ್ಲಿ ಕನ್ನಡ ಜಾನಪದ ಕ್ಷೇತ್ರಕ್ಕೆ ದೊರೆತಿದ್ದು ಮಾತ್ರ ಅತ್ಯಂತ ಪ್ರಾಮಾಣಿಕ ದಾಖಲೆಗಳೆಂಬುದು ನಿರ್ವಿವಾದ. ಜನ ಬದುಕಿನೊಂದಿಗೆ ನೇರ ಸಂಬಂಧವನ್ನಿರಿಸಿಕೊಂಡು ಕ್ಷೇತ್ರಕಾರ್ಯ ನಡೆಸಿ, ಊರೂರು ಸುತ್ತಿ ಜಾನಪದ ಸಾಮಗ್ರಿಯನ್ನು ಸಂಗ್ರಹಿಸಿದ್ದರ ಫಲವಾಗಿ ಕಾಲಗರ್ಭದಲ್ಲಿ ಕಣ್ಮರೆಯಾಗಿ ಹೋಗುತ್ತಿದ್ದ ಬಹುಪಾಲು ಜನಪದ ಸಾಹಿತ್ಯ ಮತ್ತು ಚಾರಿತ್ರಿಕ ದಾಖಲೆಗಳು ಲಭಿಸಿದವು. ಈ ದೃಷ್ಟಿಯಿಂದ ಆಂಗ್ಲರ ಜಾನಪದ ಆಸಕ್ತಿ ಮತ್ತು ಕಳಕಳಿಗಳನ್ನು ಮೆಚ್ಚಬೇಕಾದ್ದೇ ಸರಿ.

ಹೀಗೆ ಕರ್ನಾಟಕ ಜಾನಪದ ಅಧ್ಯಯನಕ್ಕೆ ಸಹಜ ಕುತೂಹಲದಿಂದ ಕೈಯಿಕ್ಕಿದ ವಿದೇಶದ ವಿದ್ವಾಂಸರುಗಳಲ್ಲಿ ಅಬೆಡುಬಾಯ್ಸ್, ಜಾನ್ ಲೇಡನ್, ಕರ್ನಲ್ ಮೆಕೆಂಜಿ, ಮೋಗ್ಲಿಂಗ್, ಬಿ.ಎಲ್. ರೈಸ್, ಚಾರ್ಲ್ಸ್ ಗೋವರ್, ಫರ್ಡಿನೆಂಡ್ ಕಿಟಲ್, ಜಾನ್ ಎಫ್ ಫ್ಲೀಟ್, ಮೇರಿ ಫ್ರೀರೆ ಮೊದಲಾವರು ಮುಖ್ಯರು.

ಬ್ರಿಟಿಷರ ಜಾನಪದ ಅಧ್ಯಯನದಿಂದ ಪ್ರೇರಿತವಾದ ಕನ್ನಡ ಜಾನಪದ ಪ್ರಜ್ಞೆಯು ತೀವ್ರತೆಯನ್ನು ಪಡೆದುಕೊಂಡಿತು. ಜಯಕರ್ನಾಟಕ, ವಿಶ್ವಕರ್ನಾಟಕ, ಜೀವನ, ಜಯಂತಿ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಪ್ರಬುದ್ಧ ಕರ್ನಾಟಕದಂತಹ ಪತ್ರಿಕೆಗಳು ಜಾನಪದೀಯ ಲೇಖನಗಳನ್ನು ಪ್ರಕಟಿಸಲಾರಂಭಿಸಿದವು. ದೇವುಡು, ಮಾಸ್ತಿ, ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ, ಅರ್ಚಕ ರಂಗಸ್ವಾಮಿಭಟ್ಟ, ಪಂಡಿತ ಸ್ವಾಮಿಗೌಡ, ಹಲಸಂಗಿ ಸೋದರರು, ಸಿಂಪಿ ಲಿಂಗಣ್ಣ, ಸಿ. ಧೂಲಾ, ವಿ.ವಿ. ತೊರ್ಕೆ, ಮತಿಘಟ್ಟ ಸೋದರರು, ಗೊರೂರು, ಕರೀಂಖಾನ್, ಕರಾಕೃ ಮೊದಲಾದ ಪ್ರಜ್ಞಾವಂತರು, ಬರಹಗಾರರು, ಶಾಲಾ ಮಾಸ್ತರರು, ಹಾಡುಗಾರರು ಜನಪದ ಸಾಹಿತ್ಯದೆಡೆಗೆ ಆಕರ್ಷಿತರಾದರು. ಗೀತ ಸಾಹಿತ್ಯದ ಹಿರಿಮೆ–ಗರಿಮೆ, ಸಾರ–ಸತ್ವ, ಸೊಗಸು–ಸಂರಕ್ಷಣೆಗಳ ಅಗತ್ಯವನ್ನು ನಾಡಿನಾದ್ಯಂತ ಸಾರಲಾರಂಭಿಸಿದರು. ಈ ರೀತಿ ಜಾನಪದ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡವರೆಲ್ಲರೂ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ವ್ಯಾಖ್ಯಾನದಲ್ಲಿ ನಿರತರಾದರು. ಇವರ ಜಾನಪದ ಆಸಕ್ತಿ ಪ್ರಕಟಗೊಂಡಿದ್ದು ಸ್ವಾತಂತ್ರ್ಯ ಚಳವಳಿ ಮತ್ತು ನವೋದಯ ಸಾಹಿತ್ಯ ಚಳವಳಿಯ ಜತೆಜತೆಯಲ್ಲಿ ರಾಷ್ಟ್ರೀಯ ಪ್ರಜ್ಞೆ, ದೇಶಾಭಿಮಾನ, ಸಂಸ್ಕೃತಿಪ್ರಿಯತೆ ಮತ್ತು ನಾಡು ನುಡಿಗಳ ಅಭಿಮಾನ ಇವರ ಪ್ರಧಾನ ನೆಲೆಗಳಾಗಿದ್ದವು. ವಸಾಹತೀಕರಣ ಪ್ರಕ್ರಿಯೆಗೆ ವಿರುದ್ಧವಾಗಿ ಮತ್ತು ಸ್ವಾತಂತ್ರ್ಯ ಹೋರಾಟದ ಸಾಧನವಾಗಿ ಈ ಎಲ್ಲಾ ಬರಹಗಾರರು ಜನಪದ ಸಾಹಿತ್ಯವನ್ನು ಸಂಗ್ರಹಿಸಿದರು, ವ್ಯಾಖ್ಯಾನಿಸಿದರು. ಕೆಲವೇ ಮಂದಿಯನ್ನು ಹೊರತುಪಡಿಸಿದರೆ ಉಳಿದಂತೆ ಜನಪದ ಸಾಹಿತ್ಯವನ್ನು ಕುರಿತಾದ ಅತಿಯಾದ ಭಾವುಕತೆ, ಮೇರೆ ಮೀರಿದ ಪ್ರಶಂಸೆ, ದೇಶೀ ಸಂಸ್ಕೃತಿಯ ವೈಭವೀಕರಣವು ಢಾಳಾಗಿ ಎದ್ದು ಕಾಣುತ್ತಿತ್ತು ಎಂಬುದು ನಿಜವಾದರೂ ಆ ಹೊತ್ತಿಗೆ ಅದು ಅನಿವಾರ್ಯವೂ ಆಗಿದ್ದಿತು ಎಂಬುದು ಅಷ್ಟೇ ಸತ್ಯ.

೧೯೩೧ರಲ್ಲಿ ಹಲಸಂಗಿ ಸೋದರರು (ಚನ್ನಮಲ್ಲಪ್ಪ, ರೇವಪ್ಪ, ಲಿಂಗಪ್ಪ) ಪ್ರಕಟಿಸಿದ ಗರತಿಯ ಹಾಡುಗಳು 'ಸಂಕಲನಕ್ಕೆ ಮುನ್ನುಡಿ ಬರೆದ ಬಿಎಂಶ್ರೀಯವರು ಘೋಷಿಸಿದ 'ಜನವಾಣಿ ಬೇರು, ಕವಿವಾಣಿ ಹೂವು' ಎಂಬ ಹೇಳಿಕೆಯು ಅದುವರೆಗಿನ ಹಳಗನ್ನಡ ಸಾಹಿತ್ಯದ ಪರಿಕಲ್ಪನೆಯನ್ನು ಒಮ್ಮೆಗೇ ಮಗುಚಿಹಾಕಿತು. ಕನ್ನಡ ಸಾರಸ್ವತ ಲೋಕದಲ್ಲಿ ಅಸ್ಪೃಶ್ಯವಾಗಿಯೇ ಉಳಿದಿದ್ದ ಜಾನಪದವು ಎದೆತೆರೆದು ಮನಬಿಚ್ಚಿ ಮಾತನಾಡಲಾರಂಭಿಸಿತು. ವಿಸ್ಮೃತಿಯಲ್ಲಿ ಮುಳುಗಿದ್ದವರನ್ನು ಬಿಎಂಶ್ರೀ ಹೇಳಿಕೆಯು ಎಚ್ಚರಿಸಿತು. ಸ್ವಾತಂತ್ರ್ಯ ದೀವಿಗೆಯೊಂದಿಗೆ ಜಾನಪದ ದೀವಿಗೆಯನ್ನು ಎತ್ತಿ ಹಿಡಿದು ಜನ ಹೆಜ್ಜೆ ಹಾಕಲಾರಂಭಿಸಿದರು. ಜಾನಪದ ಆಸಕ್ತಿಯು ಸ್ವಾತಂತ್ರ್ಯ ಚಳವಳಿಗೆ ಪೂರಕವಾಗಿ ಗರಿಗಟ್ಟಿಕೊಳ್ಳಲಾರಂಭಿಸಿತು. ವಿದೇಶೀ ವಿದ್ವಾಂಸರ ಕಾರ್ಯಯೋಜನೆಗಳು, ದೇಶೀ ಚಿಂತನೆಗಳ ಮುಂದುವರಿಕೆಯೊಂದಿಗೆ ವೈಚಾರಿಕ ಚಿಂತನೆಗಳ ಪ್ರಭಾವದಿಂದಾಗಿ ಸ್ವಾತಂತ್ರ್ಯಾ ನಂತರದ ದಿನಗಳಲ್ಲಿ ಜಾನಪದ ಅಧ್ಯಯನದಲ್ಲಿ ಬದಲಾವಣೆಗಳು ಗೋಚರಿಸಿದವು.

ಮಾಹಿತಿ ಸಂಗ್ರಹಣೆ ನಿರೂಪಕ ಸಂಗ್ರಾಹಕರ ನಡುವೆ ತಾತ್ವಿಕವಾದ ಸಂಬಂಧಗಳು ಏರ್ಪಟ್ಟವು. ಜನಪದ ಸಾಹಿತ್ಯದ ಜತೆಜತೆಗೆ ಜನಪದರ ಬದುಕಿನ ಅಧ್ಯಯನ ವಿಧಾನಗಳು ರೂಪುಗೊಂಡವು. ಜನಪದರ ವೃತ್ತಿಗಳು, ಉಡುಗೆ–ತೊಡುಗೆಗಳು, ಆಚಾರ–ವಿಚಾರಗಳು, ಹಬ್ಬ ಹರಿದಿನಗಳು, ಊರು–ಕೇರಿ, ನಂಬಿಕೆ–ಸಂಪ್ರದಾಯಗಳು, ದೇವರು–ದಿಂಡರು, ವೈವಿಧ್ಯಮಯ ಜನಪದ ಪ್ರದರ್ಶಕ ಕಲೆಗಳು ಇತ್ಯಾದಿಗಳನ್ನು ಕುರಿತಾದಂತೆ ಪ್ರಾದೇಶಿಕ ಚೌಕಟ್ಟಿನ ನೆಲೆಯಲ್ಲಿ ಅಧ್ಯಯನ–ಸಂಶೋಧನೆಗಳು ಆರಂಭವಾದವು. ಇದರಿಂದಾಗಿ ಜಾನಪದ ಜಗತ್ತು ವಿಸ್ತಾರಗೊಂಡಿತು. ಜಾನಪದಕ್ಕೆ ಬಹುವಿಧ ಆಯಾಮ ಲಭಿಸಿತು. ಜಾನಪದದ ವ್ಯಾಪಕತೆ ಮತ್ತು ಸೂಕ್ಷ್ಮತೆಗಳಿಂದಾಗಿ, ಜಾನಪದವು ಅಧ್ಯಯನ ಶಾಸ್ತ್ರವಾಗಿ ಬೆಳೆಯುವ ಎಲ್ಲಾ ಲಕ್ಷಣಗಳು ಪ್ರಕಟಗೊಳ್ಳಲಾರಂಭಿಸಿದವು. ಜಾನಪದಕ್ಕೆ ಸೈದ್ಧಾಂತಿಕವಾದ ಚೌಕಟ್ಟು ಮತ್ತು ವೈಜ್ಞಾನಿಕವಾದ ಶಿಸ್ತು ಎರಡೂ ಸಿದ್ಧಿಸುವ ಕಾಲಘಟ್ಟದಲ್ಲಿ ಪ್ರೊ. ಡಿ. ಲಿಂಗಯ್ಯನವರಂತಹ ಜಾನಪದ ವಿದ್ವಾಂಸರು ಕಾಣಿಸಿಕೊಂಡರು. ಅವರ ಜಾನಪದ ಕೊಡುಗೆಯನ್ನು ವಿವೇಚಿಸುವ ಮುನ್ನ ಇಷ್ಟೆಲ್ಲಾ ಹಿನ್ನೆಲೆ ಅಗತ್ಯವಿದ್ದಿತೆಂಬುದು ನನ್ನ ಗ್ರಹಿಕೆಯಾಗಿದೆ.

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು ಅರಕೆರೆ ಹೋಬಳಿಗೆ ಸೇರಿದ ಪೀಹಳ್ಳಿಯ ಕೆಳಗಲಹಟ್ಟಿಯಲ್ಲಿ ೧೯೩೯ರ ಡಿಸೆಂಬರ್ ೧೬ರಂದು ದೇವೇಗೌಡ–ಸಿದ್ದಮ್ಮ ದಂಪತಿಗಳ ನಾಲ್ಕನೆಯ ಮಗನಾಗಿ ಜನಿಸಿದ ಲಿಂಗಯ್ಯನವರು ತಮ್ಮ ಶೈಕ್ಷಣಿಕ ಬದುಕನ್ನು ಪೀಹಳ್ಳಿಯ ಕೂಲಿಮಠದಿಂದ ಆರಂಭಿಸಿ ಕೊತ್ತತ್ತಿ, ಮಂಡ್ಯಗಳಲ್ಲಿ ಮುಂದುವರಿಸಿ ಕನ್ನಡ ಎಂ.ಎ. ಪದವಿ ಪಡೆಯುವ ಮೂಲಕ ಮೈಸೂರಿನಲ್ಲಿ ಮುಕ್ತಾಯಗೊಳಿಸಿದರು.

ಲಿಂಗಯ್ಯನವರು ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ ಬೆಳೆದವರಾದರೂ, ಬಾಲ್ಯದಿಂದಲೂ ಜಾನಪದದ ಕಡೆಗೆ ಆಕರ್ಷಿತರಾದವರೇನಲ್ಲ. ತಮ್ಮೂರಿನ ಹಬ್ಬ



ಹರಿದಿನಗಳಲ್ಲಿ, ದೇವರ ಜಾತ್ರೆ, ಉತ್ಸವಗಳಲ್ಲಿ, ದನ ಮೇಯಿಸುವ ಸಂದರ್ಭಗಳಲ್ಲಿ, ನಾಟಿ ಸಂದರ್ಭಗಳಲ್ಲೆಲ್ಲಾ ಜನಪದ ಗೀತೆಗಳು ಕೇಳಿಬರುತ್ತಿದ್ದವಾದರೂ ಲಿಂಗಯ್ಯನವರು ಅವುಗಳಿಗೆ ಕಿವಿ ತೆರೆದವರಲ್ಲ. ಅಷ್ಟೇ ಏಕೆ ಅವರ ಮನೆಯಲ್ಲೇ ಕೋಳಿ ಕೂಗುವ ಹೊತ್ತಿಗೆ ಕೇಳಿ ಬರುತ್ತಿದ್ದ ಬೀಸುವ ಪದಗಳ ಜೋಗುಳಕ್ಕೆ ಅವರು ಎದೆ ತೆರೆದಿರಲಿಲ್ಲ. ಆದರೆ, ಹೈಸ್ಕೂಲಿನಲ್ಲಿ ಸ್ಪರ್ಧೆಯೊಂದರಲ್ಲಿ ಅವರಿಗೆ ಬಹುಮಾನವಾಗಿ ಬಂದ ಕ.ರಾ.ಕೃ. ಅವರ ಅಂಬಿಗರ ಗಂಗ ಜನಪದ ಗೀತೆಗಳ ಸಂಗ್ರಹ ಮತ್ತು ಪಿ.ಯು.ಸಿ. ಯಲ್ಲಿ ಕೇಳಿದ ಜನಾಬ್ ಕರೀಂಖಾನ್‌ರ ಜನಪದ ಗೀತ ಗಾಯನ ಅವರನ್ನು ಜಾನಪದದೆಡೆಗೆ ಹೊರಳಿಕೊಳ್ಳಲು ಸ್ಫೂರ್ತಿ ನೀಡಿದವು. ಜನಪದ ಸಾಹಿತ್ಯ ಸಂಗ್ರಹಕ್ಕೆ ಪ್ರೇರಣೆ ನೀಡಿದವು.

ಲಿಂಗಯ್ಯನವರು ಕನ್ನಡ ಸಾಹಿತ್ಯ ಮತ್ತು ಜಾನಪದ ಕ್ಷೇತ್ರಗಳೆರಡನ್ನು ಶ್ರೀಮಂತಗೊಳಿಸಿದವರು. ಕವಿಯಾಗಿ, ಕಾದಂಬರಿಕಾರರಾಗಿ, ನಾಟಕಕಾರರಾಗಿ, ಜೀವನ ಚರಿತ್ರಕಾರರಾಗಿ, ಪ್ರಬಂಧಕಾರರಾಗಿ, ವಚನಕಾರರಾಗಿ ಸೃಜನಶೀಲ ಸಾಹಿತ್ಯವನ್ನು ಬೆಳೆಸಿದರು. ಕನ್ನಡ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಕೈಯಾಡಿಸಿದ್ದ ಲಿಂಗಯ್ಯನವರಿಗೆ ಪದ್ಯದಂತೆ ಗದ್ಯವೂ ಸಿದ್ಧಿಸಿದ್ದಿತು. ಸುಲಭಗ್ರಾಹ್ಯವಾದ ಬರವಣಿಗೆಯಿಂದ ಕನ್ನಡದ ಭರವಸೆಯ ಬರಹಗಾರರಾಗಿದ್ದರು. ಅವರ ಕೃತಿಗಳ ಸಂಖ್ಯೆ ಎಂಬತ್ತಕ್ಕೂ ಹೆಚ್ಚು.

ಸೃಜನಶೀಲ ಸಾಹಿತ್ಯದಂತೆಯೇ ಲಿಂಗಯ್ಯನವರು ಕನ್ನಡ ಜಾನಪದ ಕ್ಷೇತ್ರಕ್ಕೆ ನೀಡಿದ ಕೊಡುಗೆಯೂ ಅನನ್ಯವಾದುದು. ಸಂಗ್ರಹ, ಅಧ್ಯಯನ, ವ್ಯಾಖ್ಯಾನ ಕೃತಿಗಳೆಲ್ಲವೂ ಸೇರಿ ಅವರ ಜಾನಪದ ಕೃತಿಗಳು ಹದಿನೇಳು. ಲಿಂಗಯ್ಯನವರ ಒಟ್ಟು ಜಾನಪದ ಸಾಧನೆಯನ್ನು ಸಂಗ್ರಹ–ಅಧ್ಯಯನ–ವ್ಯಾಖ್ಯಾನ–ಪ್ರವರ್ಧನ–ಚರಿತ್ರೆ ಹೀಗೆ ಐದು ನೆಲೆಗಳಲ್ಲಿ ವಿವೇಚಿಸಬಹುದು.

**೧. ಸಂಗ್ರಹ ನೆಲೆ :** ಜಾನಪದದಲ್ಲಿ ಸಂಗ್ರಹ ಮೊದಲು. ಅದರ ವಿಶ್ಲೇಷಣೆ ಏನಿದ್ದರೂ ಕೊನೆಗೆ ಎಂಬ ವಾದವಿದೆ. ಈ ಕಾರಣದಿಂದಾಗಿ ನಮ್ಮ ತೊಂಬತ್ತೊಂಬತ್ತು ಭಾಗ ಜಾನಪದ ವಿದ್ವಾಂಸರು ಮೊದಲು ಸಂಗ್ರಾಹಕರು. ಆದರೆ ಇವರಲ್ಲಿ ಎರಡು ವರ್ಗಗಳಿವೆ. ಜಾನಪದವನ್ನು ಸರಿಯಾಗಿ ತಿಳಿದ ಸಂಗ್ರಾಹಕರು, ಜಾನಪದವನ್ನು ಅರೆಬರೆ ಅರಿತ ಸಂಗ್ರಾಹಕರು. ಸರಿಯಾಗಿ ತಿಳಿದ ಸಂಗ್ರಾಹಕರು ಸಂಗ್ರಹಿಸಿದ ಸಾಮಗ್ರಿಯ ಮುಂದಿನವರ ಚರ್ಚೆ, ಚಿಂತನಗಳಿಗೆ ಹಾದಿ ಮಾಡಿಕೊಟ್ಟರೆ, ಅರೆಬರೆ ತಿಳಿದವರ ಸಂಗ್ರಹಗಳು ಜಾನಪದವನ್ನು ಸಂಪೂರ್ಣ ಗೊಂದಲದಲ್ಲಿ ಕೆಡಹುವ ಸಾಧ್ಯತೆ ಇದ್ದು, ಜಾನಪದದ ಬಗ್ಗೆ, ವಕ್ತೃವಿನ ಬಗ್ಗೆ ಸಮರ್ಪಕ ಮಾಹಿತಿ ಕೊಡದೆ ತಮಗನ್ನಿಸಿದ್ದನ್ನು ದಾಖಲಿಸಿರುವ ಈ ಸಂಗ್ರಹಗಳು ಕೇವಲ ಸಗಣಿ ಎತ್ತುವ ಸಂಗ್ರಾಹಕರ ಕೆಲಸಗಳಾಗಿರುತ್ತವೆ.

ಲಿಂಗಯ್ಯನವರ ಸಂಗ್ರಹಗಳು ಮೊದಲಿನ ವರ್ಗಕ್ಕೆ ಸೇರಿದವುಗಳಾಗಿದ್ದು ಪ್ರಾತಿನಿಧಿಕ ಸಂಗ್ರಹಗಳೆನಿಸಿವೆ. ಕ.ರಾ.ಕೃ ಅವರ ಅಂಬಿಗರ ಗಂಗ ಸಂಗ್ರಹದಲ್ಲಿನ ಹಾಡುಗಳನ್ನು ಕಂಡು ಲಿಂಗಯ್ಯನವರಿಗೆ ಅರರೆ ಈ ಹಾಡುಗಳನ್ನು ನಮ್ಮೂರಿನಲ್ಲೇ

ಕೇಳಿದ್ದೇನಲ್ಲ. ನಾನ್ಯಾಕೆ ಸಂಗ್ರಹಕ್ಕೆ ಕೈ ಹಾಕಬಾರದೆಂಬ ಒತ್ತಡಕ್ಕೆ ಸಿಲುಕಿದರು. ತಮ್ಮೂರಿನಿಂದಲೇ ಸಂಗ್ರಹಕಾರ್ಯ ಆರಂಭಿಸಿದರು. ಹುಲ್ಲುಕೆರೆ, ಕೊತ್ತತ್ತಿ, ಮೈಸೂರು, ಬೆಂಗಳೂರು ಇವರ ಸಂಗ್ರಹ ಕ್ಷೇತ್ರಗಳಾದವು. ಲಿಂಗಯ್ಯನವರು ಜನಪದ ಗೀತೆ, ಕಥನಗೀತೆ, ಖಂಡಕಾವ್ಯ, ಮಹಾಕಾವ್ಯ ಮತ್ತು ಜನಪದ ಕಥೆಗಳನ್ನು ಸಂಗ್ರಹಿಸಿರುತ್ತಾರೆ.

ಬಯಲು ಸೀಮೆಯ ಜನಪದ ಗೀತೆಗಳು–ಪಿರಿಯಾಪಟ್ಟಣದ ಜಗಳ–ಕರ್ನಾಟಕ ಜನಪದ ಕಾವ್ಯಗಳು–ಮಲೆ ಮಾದೇಶ್ವರ (ಅಪ್ರಕಟಿತ) ಇವರ ಗೀತ ಸಂಗ್ರಹಗಳಾದರೆ, ಮಣ್ಣಿನ ಮಿಡಿತ–ಪಡಿನೆರಳು–ಜನಪದ ಕಥಾಸಂಗಮ, ಜನಪದ ಪ್ರಾಣಿ ಕಥೆಗಳು ಕಥಾ ಸಂಗ್ರಹಗಳಾಗಿವೆ.

೧೯೭೩ರಲ್ಲಿ ಪ್ರಕಟವಾದ ಲಿಂಗಯ್ಯನವರ ಮೊತ್ತಮೊದಲ ಗೀತ ಸಂಕಲನ 'ಬಯಲು ಸೀಮೆಯ ಜನಪದ ಗೀತೆಗಳು' ಮೌಲ್ಯದ ದೃಷ್ಟಿಯಿಂದ ಸಾಕಷ್ಟು ಜನಪ್ರಿಯತೆಯನ್ನು ತಂದುಕೊಟ್ಟ ಸಂಕಲನವಿದು. ಜನಪದ ಸಾಹಿತ್ಯ ಸಂಗ್ರಹಣೆಯ ಅಗತ್ಯವನ್ನು ಪ್ರತಿಪಾದಿಸುವ ಈ ಸಂಕಲನದಲ್ಲಿ ಜನಪದ ಕಥನ ಕಾವ್ಯಗಳು, ದೇವರ ಪದಗಳು, ಮದುವೆಯ ಪದಗಳು, ಒಸಗೆಯ ಪದಗಳು, ಜನಪದ ಭಾವಗೀತೆಗಳ ಐದು ವಿಭಾಗಗಳಿದ್ದು ಕೇವಲ ಸಂಗ್ರಹ ಕಾರ್ಯಕ್ಕಷ್ಟೇ ಮೀಸಲಾಗಿರದೆ ಅಧ್ಯಯನಗಾರರ ಕೃತಿಯಾಗಿಯೂ ಪರಿಣಮಿಸಿದೆ. ವಿದ್ವತ್ಪೂರ್ಣವಾಗಿ ಪ್ರಸ್ತಾವನೆ, ಪ್ರತಿಯೊಂದು ಹಾಡಿಗೂ ಒದಗಿಸಿರುವ ಟಿಪ್ಪಣಿಗಳು, ಅರ್ಥಕೋಶ, ನಿರೂಪಕರ ಪರಿಚಯಗಳು ಈ ಸಂಕಲನದ ಮಹತ್ವವನ್ನು ಹೆಚ್ಚಿಸಿದೆ. ಅಲ್ಲದೆ, ಕನ್ನಡ ಜನಪದ ಸಾಹಿತ್ಯ ಸಂಗ್ರಹದ ಸಂದರ್ಭದಲ್ಲಿ ಪಾಠಾಂತರಗಳು ಎಷ್ಟು ಮುಖ್ಯ ಎಂಬುದರ ಬಗೆಗಿನ ವಿಶ್ಲೇಷಣೆ ನಡೆಸಿದ್ದು, ಜನಪದ ಗ್ರಂಥ ಸಂಪಾದನೆಗೆ ಮಾರ್ಗಸೂಚಿ ಸೂತ್ರಗಳನ್ನು ಪ್ರಸ್ತಾಪಿಸಿದ್ದಾರೆ. ವೈವಿಧ್ಯಮಯ ಗೀತೆಗಳಿಂದ ಕೂಡಿದ ಈ ಸಂಕಲನಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಶಸ್ತಿ ನೀಡಿ ಗೌರವಿಸಿದೆ.

೧೯೭೬ರಲ್ಲಿ ಪ್ರಕಟವಾದ 'ಕರ್ನಾಟಕ ಜನಪದ ಕಾವ್ಯಗಳು' ಸಂಕಲನವು ಎರಡು ಕಾರಣಗಳಿಗಾಗಿ ಮುಖ್ಯವೆನಿಸಿದೆ. ಮೊದಲನೆಯದಾಗಿ, ಜನಪದ ಸಾಹಿತ್ಯ ಸಂಗ್ರಹಗಳಿಗೆ ಅರ್ಥಕೋಶ ಏಕೆ ಬೇಕು ಎಂಬುದರ ಚರ್ಚೆ. ಎರಡನೆಯದಾಗಿ ವಾಕ್‌ಪರಂಪರೆ, ಜನಪದ ಸಂಪ್ರದಾಯ, ಜನಪದ ಪರಂಪರೆ, ಜನಪದ ಕಾರ್ಯ, ಜನಪದ ಜನಪ್ರಿಯ ಕಾವ್ಯ ಇವುಗಳನ್ನು ಕುರಿತಾದ ಸೋದಾಹರಣ ಚಿಂತನೆ.

"ಜನಪದ ಸಾಹಿತ್ಯ ಸಂಗ್ರಹಗಳಿಗೆ ಅರ್ಥಕೋಶ ಅವಶ್ಯ. ಆದರಿದು ಸುಲಭದ ಕಾರ್ಯವಲ್ಲ. ಎಷ್ಟೋ ಪದಗಳಿಗೆ ಕನ್ನಡದಲ್ಲಿ ಈವರೆಗೆ ಲಭ್ಯವಿರುವ ನಿಘಂಟುಗಳಲ್ಲೂ ಅರ್ಥ ಸಿಗುವುದಿಲ್ಲ. ಕಾರಣ, ಕನ್ನಡ ನಿಘಂಟುಕಾರರು ಬಹುಮಟ್ಟಿಗೆ ಕನ್ನಡ ಪ್ರಾಚೀನ ಗ್ರಂಥಗಳನ್ನು, ಸ್ವಲ್ಪಮಟ್ಟಿಗೆ ಆಧುನಿಕ ಗ್ರಂಥಗಳನ್ನು ಬಳಸಿಕೊಂಡಿದ್ದಾರೆ. ಜನಪದ ಗ್ರಂಥಗಳನ್ನು ಸಂಪೂರ್ಣವಾಗಿ ಕೈ ಬಿಟ್ಟಿದ್ದಾರೆ. ಜನಪದ ಸಾಹಿತ್ಯ, ಸಂಗ್ರಹಗಳ ಪರಿಚಯವಿಲ್ಲದವರಿಂದ ಈ ಕ್ಷೇತ್ರದ ನಿಘಂಟು ಸಾಧ್ಯವಿಲ್ಲ. ಅಭ್ಯಾಸದ ದೃಷ್ಟಿಯಿಂದ



ಜನಪದ ನಿಘಂಟು ಅಗತ್ಯ. ಈವರೆಗೆ ಪ್ರಕಟವಾಗಿರುವ ಜನಪದ ಗ್ರಂಥಗಳನ್ನು ಬಳಸಿಕೊಂಡರೂ ಒಂದು ಸಾಧಾರಣ ನಿಘಂಟನ್ನು ತಯಾರಿಸಬಹುದು. ಸರಿಯಾದ ನಿಘಂಟು ರಚನೆಯಾಗಬೇಕಾದರೆ ಜನಪದ ಸಾಹಿತ್ಯ ಸಂಗ್ರಹಗಳ ಜೊತೆಗೆ, ಜನಪದ ಬದುಕಿನ ಎಲ್ಲ ಕ್ಷೇತ್ರದ ಶಬ್ದಗಳನ್ನು ಕ್ರೋಢೀಕರಿಸಬೇಕು. ಇದು ಒಬ್ಬಿಬ್ಬರಿಂದ ಆಗುವ ಕೆಲಸವಲ್ಲ; ಇದಕ್ಕೆ ಜಾನಪದ ವಿದ್ವಾಂಸರ ದೊಡ್ಡ ಪಡೆಯೇ ಬೇಕು." ೧೯೭೬ರಲ್ಲೇ ಲಿಂಗಯ್ಯನವರು ಜನಪದ ನಿಘಂಟಿನ ಅಗತ್ಯ ಕುರಿತು ನಡೆಸಿರುವ ಚಿಂತನೆ ಇದು. ಆದರೆ ಇದುವರೆವಿಗೂ ಅವರ ಚಿಂತನೆ ಕಾರ್ಯರೂಪಕ್ಕೆ ಬಂದಿರುವುದಿಲ್ಲ.

ಮೈಸೂರಿನ ದಳವಾಯಿಗೂ, ಪಿರಿಯಾಪಟ್ಟಣದ ಅರಸು ವೀರರಾಜನಿಗೂ ನಡೆದ ಯುದ್ಧವನ್ನು ಬಣ್ಣಿಸುವ ಕಥನ ಕಾವ್ಯ 'ಪಿರಿಯಾಪಟ್ಟಣದ ಜಗಳ' ಸಂಕಲನ. ಗ್ರಾಮೀಣರು ಕದನ, ಯುದ್ಧ, ಕಾಳಗಗಳಿಗೆ ಕರೆಯುವ 'ಜಗಳ' ಎಂಬ ರೂಪವನ್ನೇ ಕಾವ್ಯದಲ್ಲಿ ಉಳಿಸಿಕೊಂಡಿದ್ದಾರೆ. ಮೈಸೂರು ಮತ್ತು ಪಿರಿಯಾಪಟ್ಟಣದ ಇತಿಹಾಸಗಳ ಸೂಕ್ಷ್ಮವಾದ ವಿಶ್ಲೇಷಣೆಯನ್ನು ಸಂಕಲನದ ಮೊದಲಲ್ಲಿ ಕಾಣಬಹುದಾಗಿದೆ.

ಇನ್ನು, ಲಿಂಗಯ್ಯನವರ ಕಥಾಸಂಕಲನದತ್ತ ಕಣ್ಣಾಡಿಸಿದಾಗ, ವೈವಿಧ್ಯಮಯ ಕಥೆಗಳು ಕಂಡುಬರುತ್ತವೆ. ಮಣ್ಣಿನ ಮಿಡಿತ, ಪಡಿನೆರಳು, ಜನಪದ ಕಥಾಸಂಗಮ, ಜನಪದ ಪ್ರಾಣಿಕಥೆಗಳು ಈ ನಾಲ್ಕು ಕಥಾ ಸಂಕಲನಗಳಲ್ಲಿ ಸುಮಾರು ಎಪ್ಪತ್ತಕ್ಕೂ ಹೆಚ್ಚು ಕಥೆಗಳು ಸಂಕಲಿತಗೊಂಡಿವೆ. ಕಥೆ ಎನ್ನುವಂಥದ್ದು ಸಮಷ್ಟಿ ಅಭಿವ್ಯಕ್ತಿ. ವಸ್ತು ಆಶಯ, ವ್ಯಕ್ತಿ ಆಶಯ, ಘಟನಾ ಆಶಯಗಳಿಂದ ಕೂಡಿ ಕಥೆಗಳು ಬೆಳವಣಿಗೆಯತ್ತ ಸಾಗುತ್ತವೆ. ಜನಪದ ಕಥೆಗಳನ್ನು ಹಿಂದಿನಿಂದಲೂ ನಮ್ಮ ಪ್ರಾಚೀನ ಕವಿಗಳು ಬಳಸಿಕೊಂಡಿದ್ದಾರೆ. ವಡ್ಡಾರಾಧನೆಕಾರ, ನಯಸೇನ ಮುಂತಾದವರು ತಂತಮ್ಮ ಧರ್ಮಗಳ ಪ್ರಸಾರಕ್ಕೂ ಬಳಸಿಕೊಂಡಿದ್ದಾರೆ. ಇತ್ತೀಚೆಗೆ ಕಥೆಗಳನ್ನು ಹೇಳುವ ಮತ್ತು ಕೇಳುವ ಪ್ರವೃತ್ತಿ ಕಡಿಮೆಯಾಗುತ್ತಿದೆ. ರಮ್ಯಾದ್ಭುತ ಕಥೆಗಳು ಕಾಣೆಯಾಗುತ್ತಿವೆ.

ಲಿಂಗಯ್ಯನವರ ಕಥಾಸಂಕಲನಗಳು ಅವರಿಗೆ ಜಾಗತಿಕ ಮನ್ನಣೆಯನ್ನು ತಂದುಕೊಟ್ಟಿವೆ. ಈಡಿಪಸ್ ಕಾಂಪ್ಲೆಕ್ಸ್ ಎಂಬುದು ಜಗತ್ತಿನಾದ್ಯಂತ ಪ್ರಸಿದ್ಧವಾಗಿರುವ ಆಶಯ. ಕನ್ನಡದಲ್ಲಿ ಇಂತಹುದೊಂದು ಆಶಯವನ್ನುಳ್ಳ ಕಥೆಯನ್ನು ಹುಡುಕುತ್ತಿದ್ದ ಅಂತಾರಾಷ್ಟ್ರೀಯ ವಿದ್ವಾಂಸರಾದ ಎ.ಕೆ. ರಾಮಾನುಜನ್ ಅವರ ಗಮನ ಸೆಳೆದದ್ದು ಲಿಂಗಯ್ಯನವರ 'ಪಡಿನೆರಳು ಸಂಕಲನದಲ್ಲಿದ್ದ 'ಮಗನನ್ನೆ ಮದುವೆಯಾದಳು ಕಥೆ', ಈಡಿಪಸ್ ಕಾಂಪ್ಲೆಕ್ಸ್ ಆಶಯವನ್ನು ಹೆಚ್ಚು ಪರಿಣಾಮಕಾರಿಯಾಗಿ ಪ್ರತಿಪಾದಿಸುವ ಈ ಕಥೆಯನ್ನು ಇಂಗ್ಲಿಷಿಗೆ ಅನುವಾದಿಸಿದ ರಾಮಾನುಜನ್ ಅವರು 'Folk tales of India' ಎಂಬ ಸಂಕಲನವನ್ನು ಹೊರತರುವುದರ ಮೂಲಕ ಜಗತ್ತಿಗೆ ಕನ್ನಡ ಜನಪದ ಕಥೆಗಳ ಹಿರಿಮೆ–ಗರಿಮೆಗಳನ್ನು ಪರಿಚಯಿಸಿದರು. ಲಿಂಗಯ್ಯನವರ ಕಥಾಸಂಕಲನ ಗಳಾದ 'ದೀಪದ ಮಲ್ಲಿ' ಮತ್ತು 'ಮೂರ್ಖ ರಾಜ ಮುತ್ಠಾಳ ಮಂತ್ರಿ' ಎಂಬ ಮತ್ತೆರಡು ಕಥೆಗಳೂ ಸಹ ಇಂಗ್ಲಿಷಿಗೆ ಭಾಷಾಂತರಗೊಂಡಿವೆ.

**೨. ಅಧ್ಯಯನ ನೆಲೆ :** ಜಾನಪದ ಎನ್ನುವಂಥದ್ದು ಜನಪದರ ಬದುಕಿನ ಪ್ರಕ್ರಿಯೆ. ಈ ಪ್ರಕ್ರಿಯೆಯಲ್ಲಿ ಹುಟ್ಟುವ ಸಾಮಗ್ರಿ ಮತ್ತು ಅದನ್ನು ಕುರಿತಾದ ತಾತ್ವಿಕತೆಯನ್ನರಿತು ವಿಶ್ಲೇಷಿಸುವ ಸೋಪಜ್ಞತೆಯನ್ನು ಜಾನಪದ ಅಧ್ಯಯನ ಎಂದು ಕರೆಯಲಾಗುತ್ತದೆ. ಲಿಂಗಯ್ಯನವರು ಇಂತಹ ಸೋಪಜ್ಞ ಜಾನಪದ ಅಧ್ಯಯನಕಾರರಲ್ಲಿ ಒಬ್ಬರು. ಕರ್ನಾಟಕದಲ್ಲಿನ್ನೂ ಜಾನಪದ ಅಧ್ಯಯನವು ಗರಿಗಟ್ಟಿಕೊಳ್ಳುತ್ತಿದ್ದ ಕಾಲಘಟ್ಟದಲ್ಲಿಯೇ ಲಿಂಗಯ್ಯನವರು ಮಹತ್ವದ ಜಾನಪದ ಅಧ್ಯಯನಕಾರರಾಗಿ ಹೊರಹೊಮ್ಮಿದರು. ಅವರು ಮೊತ್ತಮೊದಲ ಜಾನಪದ ಕೃತಿಯಾದ 'ಕೊಂತಿ ಪೂಜೆಯು' ೧೯೬೭ರಲ್ಲಿ ಪ್ರಕಟಗೊಂಡಿತು. ಸಂಗ್ರಹಕ್ಕಿಂತ ಮೊದಲೇ ಹೊರಬಂದ ಈ ಕೃತಿಯು ತನ್ನಲ್ಲಿನ ವಿಶಿಷ್ಟ ಚರ್ಚೆಗಳಿಂದಾಗಿ ಜಾನಪದ ವಿದ್ವಾಂಸರ ಗಮನ ಸೆಳೆಯಿತು. ಮಂಡ್ಯ, ಮೈಸೂರು, ಹಾಸನ ಜಿಲ್ಲೆಗಳಲ್ಲಿ ಹೆಣ್ಣುಮಕ್ಕಳು ವಾರ ಕಾಲ ಆಚರಿಸುವ 'ಕೊಂತಿ ಪೂಜೆ' ಎಂಬ ಆಚರಣೆಯನ್ನು ಕುರಿತಾದ ಸವಿವರ ದಾಖಲಾತಿ ಇದು. ಸಮಗ್ರ ಅಧ್ಯಯನ ಕೃತಿ. ಕೊಂತಿ ಪೂಜೆಯ ವಸ್ತು, ಕಾಲ, ಪ್ರಾಚೀನತೆ, ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆ, ಆಚರಣೆಯ ವಿಧಿ ವಿಧಾನಗಳು, ಆಚರಣಾ ಸಂಬಂಧ ಪದಗಳು, ಆಚರಣೆಯ ಸ್ಥಳಗಳು ಇವುಗಳನ್ನು ಕುರಿತಾದ ವಿಸ್ತೃತ ಅಧ್ಯಯನ ಇದಾಗಿದ್ದು, ಈ ಹೊತ್ತಿಗೂ ಜಾನಪದ ವಿದ್ಯಾರ್ಥಿಗಳು ಮತ್ತು ಸಂಶೋಧಕರಿಗೆ ಆಕರ ಗ್ರಂಥವಾಗಿದೆ.

೧೯೭೬ರಲ್ಲಿ ಪ್ರಕಟವಾದ 'ಬೋರೇದೇವರು' ಕೃತಿ ಲಿಂಗಯ್ಯನವರ ಜಾನಪದ ಶ್ರದ್ಧೆ, ಸಂಶೋಧನಾ ಅನುರಕ್ತಿಗೆ ಉತ್ತಮ ನಿದರ್ಶನವಾಗಿದೆ. ಈ ಕೃತಿ ಪ್ರಕಟವಾದ ಮೇಲೆ ಈ ಬೋರೇದೇವರು ಯಾರು ಎಂಬುದರ ಬಗ್ಗೆ ವಿದ್ವಾಂಸರಲ್ಲಿ ಜಿಜ್ಞಾಸೆಗಳೇರ್ಪಟ್ಟವು.

'ಬೋರೆ' ಪದದ ನಿಷ್ಪತ್ತಿಯಿಂದ ಮೊದಲುಗೊಂಡು ಬೋರೇದೇವರ ಗುಡಿ, ಒಕ್ಕಲುಗಳು, ಗುಡಿ ಯಜಮಾನನ ಪಾತ್ರ, ಹಕ್ಕು ಬಾಧ್ಯತೆಗಳು, ಹೊಣೆಗಾರಿಕೆ, ಅರ್ಚಕ, ತೋಟಿ, ಗುಡ್ಡನ ಅಸ್ತಿತ್ವ, ಬೋರೇದೇವರ ಹಬ್ಬದ ವಿವರಗಳು, ಕೊಂಡದ ಸಂಪ್ರದಾಯ ಹೀಗೆ ಆಮೂಲಾಗ್ರವಾಗಿ ದರ್ಶಿಸಿ, ಸ್ಪರ್ಶಿಸಿರುವ ಅಧ್ಯಯನ ಯೋಗ್ಯ ಕೃತಿ. ಗ್ರಾಮದೇವತೆಯ ಅಧ್ಯಯನ ಕೈಗೊಳ್ಳುವವರಿಗೆ ಈ ಕೃತಿ ತೋರುಗಂಬವಾಗಿದೆ.

ಜನಪದ ಸಾಹಿತ್ಯ ಸಂವಾದ, ಜಾನಪದ ಶೋಧನ, ಜಾನಪದ ನೋಟಗಳು, ಜನಪದ ಸಾಹಿತ್ಯ ಸಂಗ್ರಹ ಮತ್ತು ಪ್ರಕಟಣೆ ಲಿಂಗಯ್ಯನವರ ಇನ್ನಿತರ ಕೃತಿಗಳಾಗಿದ್ದು ಜಾನಪದದ ವಿವಿಧ ಮುಖಗಳನ್ನು ಕುರಿತಾದ ಚಿಂತನೆಗಳು ಈ ಕೃತಿಗಳಲ್ಲಿ ಹೆಪ್ಪುಗಟ್ಟಿವೆ. ಲಿಂಗಯ್ಯನವರ ಜಾನಪದ ಅಧ್ಯಯನದ ಹರಹು, ಓದಿನ ವಿಸ್ತಾರ, ಸಂಶೋಧನಾತ್ಮಕ ದೃಷ್ಟಿಕೋನ, ವಿಶ್ಲೇಷಣಾ ಮನೋಧರ್ಮಕ್ಕೆ ಈ ಕೃತಿಗಳಲ್ಲಿ ಅಡಕವಾಗಿರುವ ೨೫ಕ್ಕೂ ಹೆಚ್ಚು ಲೇಖನಗಳು ಉತ್ತಮ ನಿದರ್ಶನಗಳನ್ನು ಒದಗಿಸುತ್ತವೆ.

ಡಾ. ಚಕ್ಕೆರೆ ಶಿವಶಂಕರ್ ಅವರೊಂದಿಗೆ 'ಸ್ಥಳನಾಮಗಳು', 'ದೆವ್ವ ಜಾನಪದ' ಮತ್ತು 'ರೋಗ ಜಾನಪದ' ಎಂಬ ಮೂರು ವಿಶಿಷ್ಟ ಕೃತಿಗಳನ್ನು ಪ್ರಕಟಿಸಿದ್ದಾರೆ. ಡಾ.



ಸಂಧ್ಯಾರೆಡ್ಡಿಯವರೊಂದಿಗೆ 'ಜಾನಪದ : ಸ್ವರೂಪ ಮತ್ತು ಸಾಹಿತ್ಯ' ಎಂಬ ಕೃತಿಯನ್ನು ಹೊರತಂದಿದ್ದಾರೆ.

**೩. ವ್ಯಾಖ್ಯಾನ ನೆಲೆ :** ಲಿಂಗಯ್ಯನವರು ಅತ್ಯುತ್ತಮ ಉಪನ್ಯಾಕರು, ವೃತ್ತಿಯಲ್ಲಿಯು ಸಹ ಬೆಂಗಳೂರಿನ ವಿ.ವಿ.ಪುರಂ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದವರು. ವಿಷಯ ಗ್ರಹಣ ಮತ್ತು ನಿರೂಪಣೆಗೆ ಹೆಸರಾದವರು. ವಿಷಯ ಯಾವುದೇ ಇರಲಿ ತಲಸ್ಪರ್ಶಿಯಾಗಿ ಅಧ್ಯಯನ ಕೈಗೊಂಡು ಟಿಪ್ಪಣಿಗಳ ಸಹಿತ ವಿಷಯ ಮಂಡನೆ ಮಾಡುವ ಪ್ರವೃತ್ತಿ ಲಿಂಗಯ್ಯನವರದು. ಹೀಗಾಗಿ ಜಾನಪದ ಕ್ಷೇತ್ರದಲ್ಲಿಯೂ ಅತ್ಯುತ್ತಮ ವ್ಯಾಖ್ಯಾನಕಾರರಾಗಿ ಗೋಚರಿಸಿದರು. ಸರಳತೆ, ಸ್ಪಷ್ಟತೆ ಮತ್ತು ಸೋದಾಹರಣವಾಗಿ ವಿಷಯವನ್ನು ವ್ಯಾಖ್ಯಾನಿಸುವುದರ ಮೂಲಕ ವ್ಯಾಖ್ಯಾನಕ್ಕೊಂದು ಹೊಸ ಅರ್ಥವನ್ನು ಕಲ್ಪಿಸಿಕೊಟ್ಟರು. ಅವರ 'ಎದ್ದೊಂದು ಗಳಿಗೆ ನೆನೆದೇನ', 'ಬಾಳುವೆ ಮಾಡಿದರೆ ಬಾ ತಂಗಿ ಅಂದಾರು', 'ಜ್ಯೋತಿಯೆ ಆಗು ಜಗಕೆಲ್ಲ' ಮೊದಲಾದ ಪುಟ್ಟ ಪುಸ್ತಕಗಳು ಲಿಂಗಯ್ಯನವರ ಜಾನಪದ ವ್ಯಾಖ್ಯಾನದ ವೈಖರಿಗೆ, ಪರಿಣಾಮಕತೆಗೆ ಸಾಕ್ಷಿಯಾಗಿವೆ.

**೪. ಪ್ರವರ್ಧನ ನೆಲೆ :** ಲಿಂಗಯ್ಯನವರು ಕೇವಲ ಜಾನಪದ ಸಂಗ್ರಾಹಕರಾಗಿ, ವಿದ್ವಾಂಸರಾಗಿಯಷ್ಟೇ ಉಳಿಯದೆ ಜಾನಪದದ ಬೆಳವಣಿಗೆಯ ಕಡೆಗೂ ಗಮನಹರಿಸುವುದರ ಮೂಲಕ ಪ್ರವರ್ಧನೆಗೆ ಶ್ರಮಿಸಿದರು. ನಾಡಿನಾದ್ಯಂತ ಹಲವು ವೇದಿಕೆಗಳಲ್ಲಿ ಜಾನಪದ ಪ್ರಚಾರೋಪನ್ಯಾಸಗಳನ್ನು ಕೈಗೊಂಡರು. ಸುಮಾರು ೧೬ ವರ್ಷಗಳಿಗೂ ಹೆಚ್ಚು ಕಾಲ, ಜಾನಪದಕ್ಕೆಂದೇ (ನೂರು ಜಾನಪದ ಕೃತಿಗಳ ಪ್ರಕಟಣೆ ದಿನಕರ ಪ್ರಕಾಶನದಿಂದ, ಜಾನಪದ ಕೃತಿಗಳು) ಮೀಸಲಾದ, ಕರ್ನಾಟಕ ಜಾನಪದ ಪರಿಷತ್ತು ಪ್ರಕಟಿಸುತ್ತಿರುವ 'ಜಾನಪದ ಜಗತ್ತು' ಪತ್ರಿಕೆಯ ಸಂಪಾದಕರಾಗಿ ಮತ್ತೊಬ್ಬ ಸಂಪಾದಕರಾದ ಡಾ. ಚಕ್ಕೆರೆ ಶಿವಶಂಕರ್ ಅವರೊಂದಿಗೆ ಸೇರಿ ಕಾರ್ಯನಿರ್ವಹಿಸಿದರು. ಜಾನಪದ ಜಗತ್ತು ಪತ್ರಿಕೆಯನ್ನು ವಿದ್ವತ್ಪರ್ಶಿ ಪತ್ರಿಕೆಯನ್ನಾಗಿಸುವಲ್ಲಿ ವೈವಿಧ್ಯಮಯ ಲೇಖನಗಳು, ಸಂಶೋಧನಾ ಲೇಖನಗಳು ಒಳಗೊಳ್ಳುವಂತೆ ಮಾಡಿದರು.

**೫. ಚರಿತ್ರೆಯ ನೆಲೆ :** ಲಿಂಗಯ್ಯನವರು ಜಾನಪದವನ್ನು ಸೃಷ್ಟಿಸಿದವರಲ್ಲವಾದರೂ ಕಟ್ಟಿದವರು. ಜಾನಪದ ಇತಿಹಾಸವನ್ನು ರೂಪಸಿದವರು. ಜನಪದ ಕಲಾವಿದರು, ವಿದ್ವಾಂಸರ ವ್ಯಕ್ತಿ ಚಿತ್ರಗಳನ್ನು ದಾಖಲಿಸುವುದರ ಮೂಲಕ ಜಾನಪದ ಇತಿಹಾಸಕಾರರೆನಿಸಿಕೊಂಡರು. ಅವರು ಬರೆದ ಕೆಂಗಲ್ ಹನುಮಂತಯ್ಯನವರ ಜೀವನ ಚರಿತ್ರೆ, ದೊಡ್ಡವರು ಕೃತಿಯಲ್ಲಿನ ನಾಡಿನ ವಿವಿಧ ಸಾಧಕರ ವ್ಯಕ್ತಿಚಿತ್ರಗಳು, ಶಿವಪುರದ ಧ್ವಜ ಸತ್ಯಾಗ್ರಹದ ಚರಿತ್ರೆ, ಸೋಬಾನೆ ಕೃಷ್ಣೇಗೌಡ, ಜಾನಪದ ಜಂಗಮ ಎಸ್.ಕೆ. ಕರೀಂಖಾನ್, ನಾಗೇಶ್ವರಿಶಾಸ್ತ್ರಿ, ಬೆಂಗಳೂರು ಕೆಂಪೇಗೌಡ ಮುಂತಾದ ಕೃತಿಗಳೆಲ್ಲವೂ ಜಾನಪದ ಇತಿಹಾಸದ ಕಥನಗಳಾಗಿವೆ.

ಲಿಂಗಯ್ಯನವರು ಜಾನಪದ ಆರಾಧಕರು, ನಾಡಿನ ಸಾಂಸ್ಕೃತಿಕ ಅಧ್ಯಯನದಲ್ಲಿ ಜಾನಪದದ ಮಹತ್ವ ಎಷ್ಟು ಎಂಬುದನ್ನು ಸರಿಯಾದ ನೆಲೆಯಲ್ಲಿ ಗ್ರಹಿಸಿಕೊಂಡಿದ್ದವರು. ಜಾನಪದವನ್ನು ಕುರಿತು ಅಧಿಕಾರ ವಾಣಿಯಿಂದ ಮಾತನಾಡಬಲ್ಲವರಾಗಿದ್ದರು. ಜಾನಪದದ ಜೀವಾಳವನ್ನು ದಕ್ಕಿಸಿಕೊಂಡವರಾಗಿದ್ದರು. ಲಿಂಗಯ್ಯನವರು ಜಾನಪದವನ್ನು ಸಂಗ್ರಹಿಸಿದರು, ಸಂಗ್ರಹಿಸಿದ ಸಾಮಗ್ರಿಯೊಂದಿಗೆ ಅನುಸಂಧಾನ ನಡೆಸಿದರು. ಈ ಅನುಸಂಧಾನವೇ ಲಿಂಗಯ್ಯನವರನ್ನು ಜಾನಪದದಲ್ಲಿ ಜೀವಂತವಾಗಿರಿಸಿದೆ. ಅವರಿಗೆ ಜಾನಪದದ ಅಸ್ಮಿತೆಯ ಬಗೆಗೆ, ಶಾಶ್ವತತೆಯ ಬಗೆಗೆ, ಬದುಕಿನ ಅವಿಭಾಜ್ಯ ಅಂಗವಾಗಿರುವ ಬಗೆಗೆ ಹೆಮ್ಮೆ ಇದ್ದಿತು. ಆದ್ದರಿಂದ ಲಿಂಗಯ್ಯನವರು ವರ್ತಮಾನದಲ್ಲಿಯೂ ಜಾನಪದವನ್ನು ಗ್ರಹಿಸಿದರು, ಅರ್ಥಯಿಸಿದರು, ಬಾಳಿದರು. ಯಾವುದೇ ಲಾಭಗಳಿಗೆ ಆಶಿಸದೆ ಎಲೆಯ ಮರೆಯ ಕಾಯಿಯಾಗಿ ನಿಶ್ಶಬ್ದದಿಂದ ಅವಿಶ್ರಾಂತ ದುಡಿಮೆಗೈದು ಜಾನಪದ ಕ್ಷೇತ್ರದಲ್ಲಿ ತಮ್ಮ ವಿಶಿಷ್ಟ ಹೆಜ್ಜೆ ಗುರುತುಗಳನ್ನು ಬಿಟ್ಟುಹೋಗಿರುವ ಲಿಂಗಯ್ಯನವರು ಚಿರಸ್ಮರಣೀಯರು.

[ಈ ಲೇಖನವನ್ನು ಸಿದ್ಧಪಡಿಸುವಲ್ಲಿ ಶ್ರೀ ಕ್ಯಾತನಹಳ್ಳಿ ರಾಮಣ್ಣನವರಿಗೆ ಋಣಿಯಾಗಿರುತ್ತೇನೆ.]

❍



# ೪.ಪ್ರೊ. ಡಿ. ಲಿಂಗಯ್ಯನವರ ಚರಿತ್ರೆ ಕೃತಿಗಳು ಮತ್ತು ಕಾದಂಬರಿಗಳು

**–ಡಾ. ಬೈರಮಂಗಲ ರಾಮೇಗೌಡ***

'ಶಿವಪುರ ಧ್ವಜಸತ್ಯಾಗ್ರಹ', 'ಸತ್ಯಾಗ್ರಹಿಗಳ ನೆನಪುಗಳು', 'ಸತ್ಯಾಗ್ರಹಿಗಳ ಸಂದರ್ಶನ' ಈ ಮೂರೂ ಕೃತಿಗಳು ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯನ್ನು ಕಟ್ಟಿಕೊಡುವ, ಈಗಾಗಲೇ ರಚಿತವಾಗಿರುವ ಸ್ವಾತಂತ್ರ್ಯ ಹೋರಾಟದ ಇತಿಹಾಸಕ್ಕೆ ಪೂರಕ ಸಂಗತಿಗಳನ್ನು ಜೋಡಿಸುವ, ತಪ್ಪಿದ ಎಳೆಗಳನ್ನು ಎಲ್ಲೆಲ್ಲಿ ಎಷ್ಟೆಷ್ಟು ಕೂಡಿಸಬಹುದೋ ಆ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿಕೊಡಬೇಕೆನ್ನುವ ಉದ್ದೇಶದವು. ಕುವೆಂಪು ಒಂದು ಕಡೆ ಹೇಳುತ್ತಾರೆ: "ಸ್ವಾತಂತ್ರ್ಯ ಹೋರಾಟದಲ್ಲಿ ನಾನು ನೇರವಾಗಿ ಭಾಗವಹಿಸದಿದ್ದರೂ ಆ ಹೋರಾಟಕ್ಕೆ ಜನತೆಯನ್ನು ಅಣಿಗೊಳಿಸಲು ಅಗತ್ಯವಾದ ಭಾಷಣಗಳನ್ನು ಮಾಡಿದ್ದೇನೆ. ಲೇಖನಗಳನ್ನು ಬರೆದಿದ್ದೇನೆ. ಇದು ಸಾಮಾನ್ಯವಾದ ಸಂಗತಿಯೇನೂ ಅಲ್ಲ". ಡಿ. ಲಿಂಗಯ್ಯನವರು ಹುಟ್ಟಿದ್ದು ೧೯೩೯ರಲ್ಲಿ. ದೇಶಕ್ಕೆ ಸ್ವಾತಂತ್ರ್ಯ ಬಂದಾಗ ೮ ವರ್ಷದ ಬಾಲಕ. ಸ್ವಾತಂತ್ರ್ಯ ಹೋರಾಟದ ಸ್ವರೂಪವನ್ನು ಅವರು ಅರ್ಥ ಮಾಡಿಕೊಂಡಿದ್ದು ನಂತರದ ವರ್ಷಗಳಲ್ಲಿ. ಅವರ ತಾರುಣ್ಯಾವಸ್ಥೆಯ ದಿನಗಳಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ನೊಂದವರನ್ನು ಬೆಂದವರನ್ನು ಅವರು ಕಾಣುವುದು ಸಾಧ್ಯವಾಯಿತು. ಅವರ ರಾಷ್ಟ್ರ ಪ್ರೇಮದ, ಸಾಹಸದ, ದಿಟ್ಟತನದ, ಛಲದಂಕಮಲ್ಲತನದ ಹಾಗೂ ಕರುಣಾಶ್ರಾವಣವೆನಿಸುವ ಗೋಳಿನ ಕಥೆಗಳನ್ನು ಅವರು ಹಸಿಹಸಿಯಾಗಿ ಬಿಸಿಬಿಸಿಯಾಗಿ ಕೇಳಿಸಿಕೊಳ್ಳುವುದು ಸಾಧ್ಯವಾಯಿತು. ಈ ಕಂಡು ಕೇಳಿದ ಕಥೆಗಳು, ಘಟನಾವಳಿಗಳು, ಸಂಗತಿಗಳು ಈ ಮೂರು ಕೃತಿಗಳಲ್ಲಿ ವೈವಿಧ್ಯಮಯವಾಗಿ ಹರಿಯಲು ಕಾರಣವಾಗಿದೆ. ಇಂಥ ಕೆಲಸ ರಾಷ್ಟ್ರವನ್ನು ಪ್ರೀತಿಸದವರು, ರಾಷ್ಟ್ರವಾಸಿಗಳನ್ನು ಪ್ರೀತಿಸದವರು ಮಾಡುವುದು ಸಾಧ್ಯವಿಲ್ಲ. ಆದ್ದರಿಂದ ಕುವೆಂಪು ಸ್ವಾತಂತ್ರ್ಯ ಹೋರಾಟಕ್ಕೆ ಯಾವ ರಾಷ್ಟ್ರಾಭಿಮಾನದಿಂದ ಬರವಣಿಗೆಯ ಮೂಲಕ ಜನತೆಯನ್ನೆಚ್ಚರಿಸುವ, ಸಜ್ಜುಗೊಳಿಸುವ ಕೆಲಸ ಮಾಡಿದರೋ ಅದೇ ಕೆಲಸವನ್ನು ಲಿಂಗಯ್ಯನವರು ಸ್ವಾತಂತ್ರ್ಯಾನಂತರ, ಲಭ್ಯವಾಗಿರುವುದರಿಂದ ಅಲಭ್ಯವಾದುದರ ಅಗಾಧತೆಯನ್ನು ಜನತೆ ಅರಿತುಕೊಳ್ಳಬೇಕೆನ್ನುವ ಸದುದ್ದೇಶದಿಂದ ಮಾಡಿದ್ದಾರೆ. ಮಹಾ ಮಾನವಪ್ರೇಮಿಯೂ ಅಸಾಧಾರಣ ದೇಶಭಕ್ತರೂ ಸಂಸ್ಕೃತಿ ಹರಿಕಾರರೂ ಆದ ಮಹಾತ್ಮ ಗಾಂಧೀಜಿಯವರ ರಕ್ತ ಚೆಲ್ಲದ ಅಹಿಂಸೆ ಹಾಗೂ ಸತ್ಯಾಗ್ರಹತತ್ವಗಳಲ್ಲಿ

* ವಿಳಾಸ : # ೮೪, 'ಚಿತ್ತಾರ', ೪ನೇ ತಿರುವು, ಪುಷ್ಪಗಿರಿ ನಗರ, ಬನಶಂಕರಿ ೩ನೇ ಹಂತ, ಹೊಸಕೆರೆಹಳ್ಳಿ ಅಂಚೆ, ಬೆಂಗಳೂರು–೫೬೦೦೮೫. ಮೊಬೈಲ್ : ೯೩೪೧೨೫೮೧೪೨

ವಿಶ್ವಾಸವಿಲ್ಲದಿದ್ದಲ್ಲಿ, ಇವತ್ತಿನ ಸಾಮಾಜಿಕ ರಾಜಕೀಯ ಅನಿಷ್ಟಗಳನ್ನು ತೊಡೆದುಹಾಕಲು ಸತ್ಯಾಗ್ರಹವನ್ನು ಅಸ್ತ್ರವಾಗಿ ಬಳಸಿಕೊಳ್ಳಬಹುದೆಂಬುದನ್ನು ಒಪ್ಪದಿದ್ದಲ್ಲಿ ಲಿಂಗಯ್ಯನವರು ಸತ್ಯಾಗ್ರಹವನ್ನೇ ಕೇಂದ್ರವಾಗಿಸಿಕೊಂಡ ಈ ಮೂರೂ ಕೃತಿಗಳನ್ನು ಹೊರತರುತ್ತಿರಲಿಲ್ಲ.

ಇವುಗಳಲ್ಲಿ ಕಾಲದ ದೃಷ್ಟಿಯಿಂದ ೧೯೭೯ರಲ್ಲಿ ಪ್ರಕಟವಾದ 'ಶಿವಪುರ ಧ್ವಜಸತ್ಯಾಗ್ರಹ' ಮೊದಲನೆಯದು. ರಾಷ್ಟ್ರರತ್ನ ಕೆಂಗಲ್ ಹನುಮಂತಯ್ಯನವರು ಮುನ್ನುಡಿ ಬರೆದಿರುವ ಈ ಪುಸ್ತಕದಲ್ಲಿ ಮೈಸೂರು ಸಂಸ್ಥಾನಕ್ಕೆ ಪ್ರಜಾರಾಜ್ಯವನ್ನು ಸಂಪಾದಿಸಿಕೊಟ್ಟ ಮೂಲಶಕ್ತಿಯಾದ ಶಿವಪುರ ಧ್ವಜಸತ್ಯಾಗ್ರಹ, ಅದರ ಹೋರಾಟದ ಸ್ವರೂಪ ಮತ್ತದರ ಪರಿಣಾಮಗಳನ್ನು ಹಲವು ಮೂಲಗಳಿಂದ ಕಲೆಹಾಕಿದ ಮಾಹಿತಿಗಳ ಆಧಾರದಿಂದ ಐತಿಹಾಸಿಕ ಪ್ರಜ್ಞೆಗೆ ಎಲ್ಲೂ ಚ್ಯುತಿಯಾಗದಂತೆ ಕರಾರುವಾಕ್ಕಾಗಿಯೂ ನಿಷ್ಪಕ್ಷಪಾತವಾಗಿಯೂ ವಿವರಿಸಲಾಗಿದೆ. ಶಿವಪುರ ಧ್ವಜಸತ್ಯಾಗ್ರಹ ನಡೆದದ್ದು ೧೯೩೮ರ ಏಪ್ರಿಲ್‌ನಲ್ಲಿ. ಲಿಂಗಯ್ಯನವರ ಪುಸ್ತಕ ರಚನೆಯಾದದ್ದು ೧೯೭೯ರಲ್ಲಿ. ಎರಡರ ನಡುವೆ ೪೧ ವರ್ಷಗಳ ಅಂತರ. ಅಖಿಲ ಭಾರತ ಖ್ಯಾತಿ ಪಡೆದ ಶಿವಪುರ ಧ್ವಜಸತ್ಯಾಗ್ರಹ ಮಹಾತ್ಮ ಗಾಂಧೀಜಿಯವರ ಮೆಚ್ಚುಗೆಗೆ ಪಾತ್ರವಾದದ್ದು ಮತ್ತು ಮೈಸೂರು ಸಂಸ್ಥಾನಕ್ಕೆ ಪ್ರಜಾರಾಜ್ಯ ಸಂಪಾದಿಸಿಕೊಟ್ಟಿದ್ದು ಅದರ ಹೆಗ್ಗಳಿಕೆಯಾಗಿದೆ. ಇಂಥ ಮಹತ್ವಪೂರ್ಣ ಚಾರಿತ್ರಿಕ ಘಟನೆಗೆ ಸ್ಮಾರಕವೊಂದನ್ನು ನಿರ್ಮಾಣ ಮಾಡಬೇಕೆನ್ನುವ ಬಯಕೆ ಮೊದಲು ಮೂಡಿದ್ದು ಕೆಂಗಲ್ ಹನುಮಂತಯ್ಯನವರ ಮನಸ್ಸಿನಲ್ಲಿ. ಇದಕ್ಕೆ ಅಗತ್ಯ ಹಾಗೂ ಸ್ಮರಣೀಯ ಎನಿಸುವಂಥ ನೆರವು ಒದಗಿಸಿದವರು ಆಗ ಮುಖ್ಯಮಂತ್ರಿಯಾಗಿದ್ದ ಡಿ. ದೇವರಾಜ ಅರಸ್ ಅವರು. ಸತ್ಯಾಗ್ರಹ ಸೌಧ ನಿರ್ಮಾಣದ ಹಿಂದಿನ ಸ್ಫೂರ್ತಿ, ಪ್ರೇರಣೆ, ಸಾಹಸ, ತೊಡಕು, ಕಷ್ಟ, ನಿಷ್ಠುರ ಇತ್ಯಾದಿಗಳನ್ನೆಲ್ಲ ಅಭಿಮಾನಪೂರ್ವಕವಾದ ಶ್ರದ್ಧಾಸಕ್ತಿಗಳಿಂದ ಗುರುತಿಸಿ ರಚಿಸಿರುವ ಡಿ. ಲಿಂಗಯ್ಯನವರ ಈ ಕೃತಿ ಕೂಡ ಸ್ಮಾರಕ ಭವನದಷ್ಟೇ ಚಿರಕಾಲ ಉಳಿಯುವಂಥದ್ದೆಂದು ಕೆಂಗಲ್ಲರು ಮುನ್ನುಡಿಯಲ್ಲಿ ಆಡಿರುವ ಮಾತು ಈ ಪುಸ್ತಕದ ಮಹತ್ವ ಎಂಥದ್ದೆಂಬುದನ್ನು ಮನವರಿಕೆ ಮಾಡಿಕೊಡುತ್ತದೆ.

ಸಿಂಹಾವಲೋಕನ, ಶಿವಪುರ ರಾಷ್ಟ್ರಕೂಟದ ಸಿದ್ಧತೆ, ಹರಿಪುರವೋ ಶಿವಪುರವೋ, ಯುವಜನ ಸಮ್ಮೇಳನ, ಅಧ್ಯಕ್ಷರ ಮೆರವಣಿಗೆ, ಬಂದೂಕುಗಳ ಮುಂದೆ ಧ್ವಜಾರೋಹಣ, ಧ್ವಜಸತ್ಯಾಗ್ರಹದ ಪ್ರಭಾವ, ಸತ್ಯಾಗ್ರಹ ಸೌಧ ಎನ್ನುವ ಎಂಟು ಅಧ್ಯಾಯಗಳಲ್ಲಿ ಆಯಾ ವಿಷಯಗಳಿಗೆ ಸಂಬಂಧಿಸಿದ ಮಾಹಿತಿ, ವಿವರಣೆ, ವಿಶ್ಲೇಷಣೆಯನ್ನು ಯಾವುದೇ ಕೊರತೆ ಬಾಧಿಸದ ಎಚ್ಚರದಲ್ಲಿ ಕಟ್ಟಿಕೊಡಲಾಗಿದೆ. ವಿಷಯ ಜೋಡಣೆ ಮತ್ತು ನಿರೂಪಣೆಯಲ್ಲಿ ಲಿಂಗಯ್ಯನವರ ಪರಿಶ್ರಮ ಎದ್ದುಕಾಣುತ್ತದೆ. ತೊಂಬತ್ತು ಪುಟಗಳಷ್ಟು ದೀರ್ಘವಾಗಿರುವ 'ಬಂದೂಕುಗಳ ಮುಂದೆ ಧ್ವಜಾರೋಹಣ' ಈ ಕೃತಿಯ ಒಂದು ರೋಚಕ ಅಧ್ಯಾಯ. ಅಹಿಂಸಾಮೂರ್ತಿ ಗಾಂಧೀಜಿಯ ಒಂದು ಕರೆಗೆ ಅಖಂಡ ಭಾರತದ ಜನ ಹೇಗೆ ಮರುಳಾದರು? ಅವರ ತತ್ವಗಳಲ್ಲಿ ಅಚಲವಾದ ನಂಬಿಕೆ, ನಿಷ್ಠೆಗಳನ್ನು ಹೇಗೆ ಇರಿಸಿದರು? ಬ್ರಿಟಿಷ್ ಅಧಿಕಾರಾಶಾಹಿಯ ದರ್ಪ ದೌರ್ಜನ್ಯ ದಬ್ಬಾಳಿಕೆಗಳಿಗೆ ಮಾನ ಪ್ರಾಣ ಆಸ್ತಿ ಹಣ ಇತ್ಯಾದಿಗಳನ್ನು ಹಾನಿ ಮಡಿಕೊಂಡೂ ಜನ



ಅದು ಹೇಗೆ ಸತ್ಯವ್ರತರಾಗಿ ನಿಂತರು? ಎನ್ನುವುದಕ್ಕೆ ಜೀವಂತ ಉದಾಹರಣೆಗಳಾಗಬಲ್ಲ ಅನೇಕ ಸಂಗತಿಗಳನ್ನು ಲಿಂಗಯ್ಯನವರು ಈ ಅಧ್ಯಾಯದಲ್ಲಿ ಉಲ್ಲೇಖಿಸಿದ್ದಾರೆ. ಸ್ವಾತಂತ್ರ್ಯಾನಂತರ ಹುಟ್ಟಿದವರೂ ಸ್ವಾತಂತ್ರ್ಯದ ಅರ್ಥ ಮತ್ತು ಮೌಲ್ಯಗಳನ್ನು ಅರಿಯುವ, ತಮ್ಮೊಳಗೆ ತುಂಬಿಕೊಳ್ಳುವ ದೃಷ್ಟಿಯಿಂದ ಓದಲೇಬೇಕಾದ ಅಧ್ಯಾಯವಿದು. ಸ್ವಾತಂತ್ರ್ಯ ಪ್ರಜ್ಞೆಯಿಲ್ಲದ ಜನತೆಯಿಂದ ಕೂಡಿದ ರಾಷ್ಟ್ರ ಸರ್ವನಾಶದತ್ತ ಹೆಜ್ಜೆ ಹಾಕುತ್ತದೆನ್ನುವುದು ಇತಿಹಾಸ ಸಾಬೀತುಪಡಿಸಿರುವ ಸತ್ಯ. ಭಾರತ ವಿನಾಶದತ್ತ ಸಾಗದಿರಬೇಕಾದರೆ ಸ್ವಾರ್ಥ ಮತ್ತು ಮೋಜುಗಳಲ್ಲಿ ಕಳೆದುಹೋಗುತ್ತಿರುವ ಯುವಜನರಿಗೆ ಇಂಥ ಪುಸ್ತಕದ ಮಹತ್ವವನ್ನು ತಿಳಿಸಿಕೊಡಬೇಕು. ಅವರ ಅಧ್ಯಯನದ ಒಂದು ಭಾಗವಾಗಿ ಮಾಡಬೇಕು. ಧ್ವಜರಕ್ಷಣೆಯ ಸಂದರ್ಭ ಕುರಿತು ಕೆಂಗಲ್ಲರು ತಮ್ಮ ದಿನಚರಿಯಲ್ಲಿ ಬರೆದಿರುವ ಕೆಲವು ಮಾತುಗಳನ್ನು ಲಿಂಗಯ್ಯನವರು ಈ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ : "ಬಿಸಿಲೋ ಬೇಸಿಗೆಯ ಬಿಸಿಲು, ಧಗಧಗಿಸುತ್ತಿತ್ತು. ಬಿಸಿಲಿನ ತಾಪವನ್ನರಿಯದ ನಮಗೆ ಬಿಸಿಲಿನ ಝಳವನ್ನು ಸಹಿಸುವದು ಕಷ್ಟಕರವಾಯಿತು. ಸ್ಥೂಲ ಶರೀರವಾದ ದಾಸಪ್ಪನವರಿಗೆ ನನಗಾದ ಕಷ್ಟಕ್ಕಿಂತ ಇಮ್ಮಡಿ ಕಷ್ಟವಾಗಿರಬೇಕು. ಸಾಯಂಕಾಲದ ಹೊತ್ತಿಗೆ ಅವರ ಮುಖ ಸೀದು, ಬಾಡಿ, ಕಪ್ಪೇರಿತು. ಸುಕುಮಾರಿಯರು, ತಮ್ಮ ತಮ್ಮ ಮನೆಗಳಲ್ಲಿ ಕೆಲಸ ಮಾಡಿ ಅರಿಯದ ಕೋಮಲಾಂಗಿಯರು, ಬೆಂದು ಬಾಡಿದರು. ಅಗ್ನಿಯಿಂದ ವ್ಯಾಪ್ತಳಾಗಿ ಬೇಯುತ್ತಿದ್ದರೂ ತನ್ನ ಪತಿಯ ಶವವನ್ನು ಬಿಟ್ಟು ಅಗಲದೆ ಚಿತೆಯ ಮೇಲೆ ಕುಳಿತಿರುವ ಸತಿಯಂತಿದ್ದರು, ಅವರು. ಹೆಂಗಸರೂ ಗಂಡಸರೂ ಮಕ್ಕಳೂ ಎಲ್ಲರೂ ಅಲ್ಲಿದ್ದರು. ಧ್ವಜವನ್ನು ಕಾಯ್ದು ಕಾಪಾಡುವುದು ನಮ್ಮ ಪವಿತ್ರ ಕರ್ತವ್ಯವಾಗಿತ್ತು. ಈ ಕರ್ತವ್ಯಪಾಲನೆಯಲ್ಲಿ ನಾವು ಲಾಠಿ ಏಟುಗಳನ್ನು ತಿನ್ನಲು, ಗುಂಡಿನೇಟುಗಳನ್ನು ಸ್ವೀಕರಿಸಲು ಸಿದ್ಧರಾಗಿ ಕುಳಿತಿದ್ದೆವು." ಇದನ್ನು ಓದಿದರೆ ಕೆಂಗಲ್ ಹನುಮಂತಯ್ಯನವರದು ಒಂದು ಸಂದರ್ಭವನ್ನು ಕಣ್ಣಿಗೆ ಕಟ್ಟುವಂತೆ ಮಾಡುವ ಎಂಥ ಸೊಗಸಾದ ಮತ್ತು ಶಕ್ತಿಯುತವಾದ ಬರವಣಿಗೆ ಎನಿಸುತ್ತದೆ. ಅಂಥವುಗಳನ್ನು ಹುಡುಕಿ ಸಂದರ್ಭೋಚಿತವಾಗಿ ಬಳಸಿಕೊಂಡಿರುವ ಲಿಂಗಯ್ಯನವರ ಅಧ್ಯಯನಶೀಲತೆ ಮತ್ತು ಜಾಣ್ಮೆಯನ್ನೂ ಮೆಚ್ಚಿಕೊಳ್ಳಲೇಬೇಕು. ಅವಿದ್ಯಾವಂತರಲ್ಲಿ, ವಿಚಾರಶಕ್ತಿ ಕಡಿಮೆ ಇರುವವರಲ್ಲಿ ಜಾಗೃತಿಯುಂಟಾಗಬೇಕಾದರೆ ಇಂಥ ಸಾಮೂಹಿಕ ಅಧಿವೇಶನ ಅಗತ್ಯ. ಇದು ಸಾಮೂಹಿಕ ಶಿಕ್ಷಣ ಕೇಂದ್ರ, ಹೀಗಲ್ಲದೆ ಜನರಲ್ಲಿ ಬಹುಬೇಗ ರಾಜಕೀಯ ಪ್ರಜ್ಞೆಯುಂಟಾಗಲು ಸಾಧ್ಯವಿಲ್ಲ. ಹಳ್ಳಿಗರಿಗೆ ಸಾಮಾಜಿಕವಾಗಿ ಸಮಾನತೆ ತಂದುಕೊಡಲು ಸತ್ಯಾಗ್ರಹ ಚಳುವಳಿಯಿಂದ ಸಾಕಷ್ಟು ಅವಕಾಶವಾಯಿತು. ಸ್ವಾತಂತ್ರ್ಯದ ವಿರಾಟ್ ರೂಪದ ದರ್ಶನವಾಯಿತು. ಹಳ್ಳಿಗ ಅಣುಶಕ್ತಿಯಾಗುವ ಇಂಥ ಕ್ರಿಯೆ ಸಾಮಾನ್ಯವಾದುದಲ್ಲ ಎನ್ನುವ ಭಾಷ್ಯವನ್ನು ಲಿಂಗಯ್ಯನವರು ಅಧ್ಯಾಯದ ಅಂತ್ಯದಲ್ಲಿ ಬರೆದಿದ್ದಾರೆ.

ಈ ಗ್ರಂಥ ರಚನೆಗೆ ಸತ್ಯಾಗ್ರಹಿಗಳಿಂದ ಬಂದ ಪತ್ರಗಳಿಂದಲೂ ಲೇಖನಗಳಿಂದಲೂ ನೇರ ಸಂದರ್ಶನದಿಂದಲೂ ಹಿಂದಿನ ಗ್ರಂಥಗಳ ಸಹಾಯದಿಂದಲೂ ಸಂಯುಕ್ತ ಕರ್ನಾಟಕ ಮತ್ತು ಹಿಂದೂ ಪತ್ರಿಕೆಗಳಿಂದಲೂ ವಿಷಯ ಸಂಗ್ರಹಿಸಿರುವುದಲ್ಲದೆ, ಕೆಂಗಲ್ಲರು

ಅಲ್ಲಲ್ಲಿ ಕೊಟ್ಟ ಸಲಹೆ ಸೂಚನೆಗಳನ್ನು ಅಳವಡಿಸಿಕೊಂಡಿರುವುದರಿಂದ ವೈಜ್ಞಾನಿಕ ಎನಿಸಬಹುದಾದ ಮಾದರಿಯಲ್ಲಿ ರೂಪುಗೊಂಡಿದೆ. ೧೯೩೮ಕ್ಕೆ ಮೊದಲಿನ ಮೈಸೂರು ಸಂಸ್ಥಾನದ ರಾಜಕೀಯ ಪರಿಸ್ಥಿತಿ, ಶಿವಪುರ ಧ್ವಜಸತ್ಯಾಗ್ರಹದ ವಿವರಗಳು, ಧ್ವಜಸತ್ಯಾಗ್ರಹದ ಪ್ರಭಾವ–ಇವು ಈ ಕೃತಿಯ ಪ್ರಮುಖ ಘಟ್ಟಗಳಾಗಿವೆ. ಸಾಹಿತ್ಯಾಭ್ಯಾಸಿಗಳಿಗೂ ಇತಿಹಾಸ ಪ್ರಿಯರಿಗೂ 'ನಾವು ಭಾರತೀಯರು, ನಾವು ಕನ್ನಡಿಗರು' ಎನ್ನುವ ಅಭಿಮಾನವುಳ್ಳವರಿಗೂ ಪ್ರಿಯವಾಗುವ ಕೃತಿಯಿದು. ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಸ್ವಯಂಸೇವಕ ಸೇವಕಿಯರ ಹೆಸರು ಮತ್ತು ಊರುಗಳ ಉಲ್ಲೇಖವಿರುವುದರಿಂದ, ಬಹು ಅಪರೂಪದ ಕಪ್ಪುಬಿಳುಪು ಚಿತ್ರಗಳಿರುವುದರಿಂದ ಇದರ ಉಪಯುಕ್ತತೆ ಮತ್ತಷ್ಟು ಹೆಚ್ಚು.

'ಸತ್ಯಾಗ್ರಹಿಗಳ ಸಂದರ್ಶನ' ಇಪ್ಪತ್ತು ಮಂದಿ ಸತ್ಯಾಗ್ರಹಿಗಳ ಹತ್ತೊಂಬತ್ತು ಸಂದರ್ಶನ ಲೇಖನಗಳ ಸಂಕಲನ. ಈ ಸತ್ಯಾಗ್ರಹಿಗಳು ವಿವಿಧ ವರ್ಗ, ವೃತ್ತಿಗಳಿಗೆ ಸೇರಿದವರು. ಇವರಲ್ಲಿ ನಾಲ್ವರು ಮಹಿಳಾ ಸತ್ಯಾಗ್ರಹಿಗಳೂ ಇದ್ದಾರೆ. ಇವರನ್ನು ೧೯೭೬–೭೭ರಲ್ಲಿ ಸಂದರ್ಶಿಸಿ, ಪ್ರಶ್ನೆಗಳ ಮೂಲಕ ಪಡೆದ ಅಭಿಪ್ರಾಯಗಳನ್ನು ಧ್ವನಿಮುದ್ರಣ ಮಾಡಿ, ಅದರ ನೆರವಿನಿಂದ ಲೇಖನಗಳನ್ನು ಸಂಪಾದಿಸಲಾಗಿದೆ. ಮಂಡ್ಯ, ಮದ್ದೂರು, ಮೈಸೂರು, ಬೆಂಗಳೂರು, ತುಮಕೂರು, ಕೋಲಾರ, ದಾವಣಗೆರೆಗಳಲ್ಲಿ ಪ್ರವಾಸ ಮಾಡಿ ಸತ್ಯಾಗ್ರಹಿಗಳನ್ನು ಸಂದರ್ಶಿಸಿದ ಇಪ್ಪತ್ತು ವರ್ಷಗಳ ನಂತರ, ಅಂದರೆ ೧೯೯೮ರಲ್ಲಿ ಈ ಪುಸ್ತಕ ಬೆಳಕು ಕಂಡಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಸತ್ಯಾಗ್ರಹಿಗಳನ್ನೇ ನೇರವಾಗಿ ಸಂದರ್ಶಿಸಿ ಕನ್ನಡದಲ್ಲಿ ಗ್ರಂಥ ಸಿದ್ಧಪಡಿಸಿರುವ ಮೊದಲ ದಾಖಲೆ ಇದಾಗಿದೆ. ಇವತ್ತಿಗೂ ಚರಿತ್ರೆ ಬರೆಯುವವರು ಕೇವಲ ಓದು ಬರಹದಲ್ಲಿ ಮೂಡಿದ ಅಕ್ಷರ ದಾಖಲೆಗಳನ್ನು ಮಾತ್ರವೇ ಅವಲಂಬಿಸುವವರಾಗಿದ್ದು ಅಂಥವರು ಯಾವ ಕಡೆಗಿರುತ್ತಾರೆ, ಹೇಗೆ ರಾಗ ದ್ವೇಷಗಳನ್ನು ಆವಾಹನೆ ಮಾಡಿಕೊಂಡಿರುತ್ತಾರೆ, ಚಾರಿತ್ರಿಕ ಪ್ರಜ್ಞೆಯನ್ನು ಎಷ್ಟರ ಮಟ್ಟಿಗೆ ಮೈಗೂಡಿಸಿಕೊಂಡಿರುತ್ತಾರೆ ಎನ್ನುವುದೆಲ್ಲ ಪುನರ್ ಮೌಲ್ಯೀಕರಣದಿಂದಷ್ಟೇ ಸಾಬೀತಾಗಬೇಕಾಗುತ್ತದೆ. ಇಲ್ಲವಾದಲ್ಲಿ ಚರಿತ್ರೆಯ ಹೆಸರಿನಲ್ಲಿ ಅಸಂಬದ್ಧವಾದುದನ್ನು ಓದುವ ಮತ್ತು ನಂಬುವ ದೌರ್ಭಾಗ್ಯಕ್ಕೆ ದೇಶಬಾಂಧವರು ಒಳಗಾಗಬೇಕಾಗುತ್ತದೆ. ಇದನ್ನರಿತುಕೊಂಡಿರುವ, ಸಾಮಾಜಿಕ ಜವಾಬ್ದರಿಯುಳ್ಳ ಸಾಹಿತಿ ಸಂದರ್ಭ ಎದುರಾದಾಗ ಚರಿತ್ರಕಾರರ ಕಾರ್ಯವನ್ನೂ ನಿರ್ವಹಿಸಬೇಕಾಗುತ್ತದೆ. ಈ ಗುಣಾತ್ಮಕ ಅಂಶಗಳನ್ನು ಮೈಗೂಡಿಸಿಕೊಂಡಿರುವ ಡಿ. ಲಿಂಗಯ್ಯನವರ 'ಸತ್ಯಾಗ್ರಹಿಗಳ ಸಂದರ್ಶನ' ಕೃತಿಯು ಚರಿತ್ರೆ ಬರೆದವರ ಪಠ್ಯಪುಸ್ತಕ ವಾಗದೆ ನೇರವಾಗಿ ಚರಿತ್ರೆಯನ್ನೇ ಸೃಷ್ಟಿಸಿದವರ ಹೃದಯಸಂವಾದವಾಗಿದೆ.

ಸತ್ಯಾಗ್ರಹಿಗಳ ಅನುಭವಗಳು, ಅಭಿಪ್ರಾಯಗಳು ಯಾವ ಕತ್ತರಿ ಪ್ರಯೋಗಕ್ಕೂ ಒಳಗಾಗದೆ ಧ್ವನಿಮುದ್ರಣಗೊಂಡಿರುವಂತೆಯೇ ಓದುಗರೆದುರು ತೆರೆದುಕೊಂಡಿವೆ. ಸತ್ಯಾಗ್ರಹಿಗಳು ಪ್ರಾರಂಭದಲ್ಲಿ ಕಾಂಗ್ರೆಸ್‌ಗೆ ವಿರೋಧವಾಗಿದ್ದರೂ ರಾಷ್ಟ್ರೀಯತೆಯ ಹೆಸರಿನಲ್ಲಿ ಒಂದಾದ, ಜಾತಿಜಾತಿಗಳಾಗಿ ಛಿದ್ರಗೊಂಡವರು ಒಂದೇ ಸಾಲಿನಲ್ಲಿ ಕುಳಿತು ಪ್ರೀತಿಯಿಂದ ಊಟ ಮಾಡುವ, ಅಧಿಕಾರದ ಭ್ರಮೆಯಿಲ್ಲದೆ ಗಂಡು ಹೆಣ್ಣೆಂಬ ಭೇದವಿಲ್ಲದೆ



ಹಗಲುರಾತ್ರಿಗಳ ವ್ಯತ್ಯಾಸವರಿಯದೆ ಪ್ರಾಣ ಮಾನಗಳನ್ನು ಒತ್ತೆಯಿಟ್ಟು ಹೋರಾಡಿದ ವೀರರ ಕಥೆ ಈ ಕೃತಿಯ ಜೀವಕೇಂದ್ರವಾಗಿದ್ದು ಅದು ನಮ್ಮ ಹೃದಯವನ್ನು ಆರ್ದ್ರಗೊಳಿಸುತ್ತದೆ, ಕಣ್ಣುಗಳನ್ನು ತೇವಗೊಳಿಸುತ್ತದೆ.

ಮಹಾತ್ಮ ಗಾಂಧೀಜಿಯವರ ಪ್ರೇರಣೆಯಿಂದ, ದೇಶಭಕ್ತಿ ಜಾಗೃತಗೊಂಡದ್ದರಿಂದ, ಯುಗಧರ್ಮದ ಒತ್ತಾಸೆಯಿಂದ ಕೋಟ್ಯಂತರ ಸಂಖ್ಯೆಯ ಸತ್ಯಾಗ್ರಹಿಗಳು ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಹೋರಾಟ ನಡೆಸಿದಂತೆ ಕರ್ನಾಟಕದಲ್ಲೂ ಲಕ್ಷಾಂತರ ಸಂಖ್ಯೆಯ ಸತ್ಯಾಗ್ರಹಿಗಳು ಹೋರಾಟಕ್ಕಿಳಿದಿದ್ದರು. ಇವರಲ್ಲಿ ಅನಕ್ಷರಸ್ಥರ ಸಂಖ್ಯೆಯೇ ಜಾಸ್ತಿಯಿದ್ದು ಯಾರೂ ತಮ್ಮ ಹೋರಾಟದ ನೆನಪುಗಳನ್ನು ಬರೆದಿಡಲಿಲ್ಲ. ಕೆಲವು ಘಟನೆಗಳು ಪತ್ರಿಕೆಗಳಲ್ಲಿ ದಾಖಲಾದರೂ ಅವುಗಳನ್ನು ಸಂಗ್ರಹಿಸುವ ಆಲೋಚನೆ ಯಾರಿಗೂ ಬರಲಿಲ್ಲ. ಒಬ್ಬಿಬ್ಬರು ದಿನಚರಿಗಳನ್ನು ಬರೆದರೂ ಅವು ಸರಿಯಾಗಿ ಪ್ರಕಟವಾಗಲಿಲ್ಲ. ಪ್ರಕಟವಾದರೂ ಜನರಿಗೆ ತಲುಪಲಿಲ್ಲ. ಹೀಗೆ ಕಾಲಗರ್ಭದಲ್ಲಿ ಕಣ್ಮರೆಯಾದ ಅಸಂಖ್ಯಾತರ ಅನುಭವ, ಚಾರಿತ್ರಿಕ ಅಂಶಗಳನ್ನು ಅಳಿದುಳಿದ ಸತ್ಯಾಗ್ರಹಿಗಳಿಂದ ಸಂಗ್ರಹಿಸುವ 'ಅಳಿಲು ಸೇವೆ'ಯನ್ನು ಮಾಡಲು ತಾವು ಮುಂದಾದದ್ದಾಗಿ ಲಿಂಗಯ್ಯನವರು ಹೇಳಿಕೊಂಡಿದ್ದರೂ ಭಾರತದ ಇತಿಹಾಸ ಮತ್ತು ಕರ್ನಾಟಕದ ಇತಿಹಾಸವನ್ನು ಪುನಾರಚಿಸುವ ಸಂದರ್ಭದಲ್ಲಿ ಈ ಸೇವೆಗೂ ಮಹತ್ವ ಇದೆಯೆಂಬುದನ್ನು ಒಪ್ಪಬೇಕಾಗುತ್ತದೆ.

ಈ ಕೃತಿಯಲ್ಲಿ ಸಂದರ್ಶನಕ್ಕೊಳಗಾಗಿರುವ ೧೯ ಸತ್ಯಾಗ್ರಹಿಗಳಲ್ಲಿ ಟಿ. ಸಿದ್ಧಲಿಂಗಯ್ಯ, ತಗಡೂರು ರಾಮಚಂದ್ರರಾವ್, ಅಗರಂ ರಂಗಯ್ಯ, ಬಿ.ಸಿ. ನಂಜುಂಡಯ್ಯ, ಆರ್.ಪಿ. ಜ್ವಾಲನಯ್ಯ ಇಂಥವರ ನಡುವೆ ಬಳ್ಳಾರಿ ಸಿದ್ದಮ್ಮ, ವೆಂಕಮ್ಮ ಸೀತಾರಾಮಯ್ಯ, ಟಿ. ಸುನಂದಮ್ಮ, ತಾಯಮ್ಮ ವೀರಣ್ಣ ಎನ್ನುವ ಮಹಿಳೆಯರೂ ಇದ್ದಾರೆಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಜನಪ್ರಿಯ ರಾಜಕಾರಣಿ ಎಚ್.ಕೆ. ವೀರಣ್ಣಗೌಡರ ಪತ್ನಿ ತಾಯಮ್ಮನವರು 'ಚಳುವಳಿ ಮಾಡ್ತಿದ್ದಾಗ ಜಾತಿಗೀತಿ ಸಮಸ್ಯೆ, ಬರ್ತಿರಲಿಲ್ಲವೆ ?' ಎನ್ನುವ ಪ್ರಶ್ನೆಗೆ "ಆಗ ನಮಗೆ 'ಜಾತಿ' ಸಮಸ್ಯೆ ಅನಿಸ್ತಿರಲಿಲ್ಲ. ಗಾಂಧೀಜಿಯವರ ಅನುಯಾಯಿಗಳು ನಾವು. ಈವಾಗ್ಲೆ ಸ್ವಲ್ಪ ಜಾತಿ ಬಂದಿದೆ. ಆಗ ಜಾತಿ ಪ್ರಶ್ನೆ ಬರ್ತಾನೆ ಇರಲಿಲ್ಲ. ಆಗ ನಾವು ಜಾತಿ ಮಾತೇ ಆಡ್ತಿರಲಿಲ್ಲ. ಎಲ್ಲಾ ಜಾತಿಯವರೂ ಸೇರಿಕೊಂಡು ಕೆಲಸ ಮಾಡಿದ್ದೊ" ಎಂದು ಉತ್ತರಿಸಿದ್ದಾರೆ. 'ಶಿವಪುರ ಅಧಿವೇಶನದ ದಿನ ಇನ್ನೇನಾದರೂ ಘಟನೆಗಳು ನಡೀತಾ ?' ಎನ್ನುವ ಪ್ರಶ್ನೆಗೆ ಬಳ್ಳಾರಿ ಸಿದ್ದಮ್ಮ "ಪೊಲೀಸರ ಜೊತೆ ಮಾತಾಡಕೂಡ್ದು ಅಂತ ಹೇಳಿದ್ದರು. ಹೆಜ್ಜೆ ಹೆಜ್ಜೆಗೂ ಒಂದೊಂದು ಪೊಲೀಸ್ ಇತ್ತು. ಬಟ್ಟೆಬರೆ ಬಿಗಿಯಾಗಿ ಉಟ್ಟುಕೋರಿ, ಚಡ್ಡಿ ಹಾಕೋತರಿ, ಪೊಲೀಸರಿಂದ ನಿಮಗೇನಾದರೂ ಧಕ್ಕೆ ಆದೀತು ಅಂತ ಹೇಳೋದು ನಾವೆಲ್ಲಾ ಜೀವದ ಹಂಗು ತೊರೆದಿರಬೇಕಾದರೆ ಪೊಲೀಸರು ಏನು ಮಾಡಾರು ಅಂತ" ನಾವಿದ್ವಿ ಎಂದು ಪ್ರತಿಕ್ರಿಯಿಸಿದ್ದಾರೆ.

‘ಸತ್ಯಾಗ್ರಹಿಗಳ ಸಂದರ್ಶನ’ಕ್ಕೆ ಹಿನ್ನುಡಿ ಬರೆದಿರುವ ಹರಿಹರಪ್ರಿಯ “ಘಟನೆ ನಡೆದ ೪೦ ವರ್ಷಗಳ ನಂತರ, ಅದೂ ದೇಶದಲ್ಲಿ ತುರ್ತು ಪರಿಸ್ಥಿತಿಯು ಶೋಚನೀಯ ಸ್ಥಿತಿಯಲ್ಲಿ, ಮತ್ತೊಮ್ಮೆ ಸಾವು ಬದುಕಿನ ನಡುವೆ ನಿಂತು, ಶಿವಪುರ ಧ್ವಜಸತ್ಯಾಗ್ರಹಕ್ಕೆ ಆಡಿರುವ ಮಾತಿನ ಹಿಂದೆ, ಅಕ್ಷರಕ್ಕೆ ಹೊನ್ನಲ್ಲ ರಕ್ತಕ್ಕೆ ಮೀರಿದ ಬೆಲೆಯಿದೆ ಎಂಬುದನ್ನು ನಾಗರಿಕ ಪ್ರಪಂಚ ಅರಿಯಬಹುದಾಗಿದೆ. ಅನೇಕ ಬಗೆಯ ವಾಗ್ವಾದಗಳಿಗೆ ಎಡೆಮಾಡಿ ಕೊಡುವ ಈ ಅಪೂರ್ವ ಕೃತಿಯಲ್ಲಿರುವ ಮಾಹಿತಿಗಳು ಇನ್ನೂ ರೂಪಿಸಿಕೊಳ್ಳ ಬೇಕಾಗಿರುವ ಕನ್ನಡನಾಡಿನ ಸಾಮಾಜಿಕ ಸಾಂಸ್ಕೃತಿಕ ಚರಿತ್ರೆಗೆ ಪೂರಕ ಸಾಹಿತ್ಯವಾಗಿ ನೆರವಾಗುತ್ತವೆ” ಎಂದಿದ್ದಾರೆ. ಜಾನಪದ ವಿದ್ವಾಂಸರಾಗಿ ಬಹುವಿಸ್ತಾರವಾದ ಕ್ಷೇತ್ರಕಾರ್ಯ ಕೈಗೊಂಡು ಬೆಲೆಯುಳ್ಳ ಕೃತಿಗಳನ್ನು ಪ್ರಕಟಿಸಿರುವ ಡಿ. ಲಿಂಗಯ್ಯನವರು ಸ್ವಾತಂತ್ರ್ಯ ಹೋರಾಟದ ಬಗೆಗೆ ಬರೆಯುವಾಗಲೂ ಅಧಿಕೃತ ಮಾಹಿತಿ ಸಂಗ್ರಹಣೆಗೆ ಕ್ಷೇತ್ರಕಾರ್ಯವನ್ನೇ ಅವಲಂಬಿಸಿದ್ದಾರೆ. ೫೦ ಸಾವಿರ ಜನ ‘ನಡೆಯೊಂದೇ ನುಡಿಯೊಂದೇ’ ಎಂಬಂತೆ ಒಟ್ಟಾಗಿ ಇಡೀ ಭಾರತದಲ್ಲೇ ಪ್ರಥಮ ಬಾರಿಗೆ ಶಿವಪುರ ಧ್ವಜ ಸತ್ಯಾಗ್ರಹದ ಹೆಸರಿನಲ್ಲಿ ಹೋರಾಡಿದ ಪವಾಡಸದೃಶ ಘಟನಾವಳಿಗಳನ್ನು ನಮ್ಮೆದುರು ರೋಚಕವಾಗಿ ಮಂಡಿಸಿದ್ದಾರೆ.

ಸ್ವಾತಂತ್ರ್ಯ ಸಮರದಲ್ಲಿ ಪಾಲ್ಗೊಂಡ ಸತ್ಯಾಗ್ರಹಿಗಳು ತಮ್ಮ ನೆನಪುಗಳನ್ನು ಬರೆದು ಕಳುಹಿಸುವಂತೆ ಡಿ. ಲಿಂಗಯ್ಯನವರು ಮಾಡಿಕೊಂಡ ಮನವಿಗೆ ಸ್ಪಂದಿಸಿದವರು ಮತ್ತು ತಮಗೆ ತಿಳಿದಂತೆ ಬರೆದುಕೊಟ್ಟವರು ಕೆಲವೇ ಮಂದಿ. ಅದರ ಫಲವಾಗಿ ಮೂಡಿಬಂದ ಕೃತಿಯೇ ‘ಸತ್ಯಾಗ್ರಹಿಗಳ ನೆನಪುಗಳು’. ಇದೂ ಕೂಡ ‘ಸತ್ಯಾಗ್ರಹಿಗಳ ಸಂದರ್ಶನ’ ಕೃತಿ ಹೊರಬಂದ ವರ್ಷದಲ್ಲೇ ಅಂದರೆ ೧೯೯೮ರಲ್ಲಿ ಪ್ರಕಟವಾಯಿತು. ೭೩ ಸತ್ಯಾಗ್ರಹಿಗಳ ನೆನಪುಗಳನ್ನು ಕಲೆಹಾಕಿರುವ ಈ ಪುಸ್ತಕದಲ್ಲಿ ಮಂಡ್ಯ ಜಿಲ್ಲೆಯ ೪೮, ಮೈಸೂರು ಜಿಲ್ಲೆಯ ೭, ಬೆಂಗಳೂರು ಜಿಲ್ಲೆಯ ೮, ಶಿವಮೊಗ್ಗ ಜಿಲ್ಲೆಯ ೪, ತುಮಕೂರು ಜಿಲ್ಲೆಯ ಇಬ್ಬರು, ಕೋಲಾರ, ದಾವಣಗೆರೆ, ಹಾಸನ, ಚಿಕ್ಕಮಗಳೂರು ಜಿಲ್ಲೆಗಳ ತಲಾ ಒಬ್ಬರು ತಮ್ಮ ನೆನಪಿನ ಬುತ್ತಿಯನ್ನು ಬಿಚ್ಚಿಕೊಂಡು ಬರೆದಿದ್ದಾರೆ. ಇಲ್ಲಿರುವ ಬಹಳಷ್ಟು ಸತ್ಯಾಗ್ರಹಿಗಳು ಗ್ರಾಮೀಣ ಪ್ರದೇಶದವರು. ಇಂಥ ಸಾಮಾನ್ಯ ಜನರೂ ಜನಜಾಗೃತಿಗೆ, ಕಾಂಗ್ರೆಸ್ ಪಕ್ಷದ ಬಲವರ್ಧನೆಗೆ, ಸ್ವಾತಂತ್ರ್ಯ ಗಳಿಕೆಗೆ ಏಕನಿಷ್ಠೆಯಿಂದ ಹೋರಾಡಿದ್ದಾರೆ. ಸ್ವಾತಂತ್ರ್ಯದ ಮಹಾಯಜ್ಞದಲ್ಲಿ ತಮ್ಮ ಕೈಲಾದ ಸೇವೆಯನ್ನು ಸಲ್ಲಿಸಿದ್ದಾರೆ. ಪಿ.ಎನ್. ಜವರಪ್ಪಗೌಡ, ಭೂಪಾಳಂ ಚಂದ್ರಶೇಖರಯ್ಯ, ವಾಸಪ್ಪ ಗೋಗಿ, ಬಳ್ಳಾರಿ ಸಿದ್ದಮ್ಮ ಇಂಥ ನಾಲ್ಕೈದು ಮಂದಿಯನ್ನು ಬಿಟ್ಟರೆ ಉಳಿದವರು ಮೊದಲ ಬಾರಿಗೆ ಸಾಹಿತ್ಯಕೃತಿಯಲ್ಲಿ ಕಾಣಿಸಿಕೊಳ್ಳುತ್ತಿರುವವರಾಗಿದ್ದಾರೆ. ಹಳೆಯ ಮೈಸೂರು ಸಂಸ್ಥಾನದ ಸತ್ಯಾಗ್ರಹಿಗಳ ನೆನಪುಗಳೇ ಹೆಚ್ಚಾಗಿದ್ದು ಕೆ.ಎಲ್. ಅಣ್ಣೇಗೌಡ, ಎ. ದಾಸೇಗೌಡ, ಬಿ.ಎಂ. ಶೀನಪ್ಪ ಇವರು ವಿವರವಾದ ವಿಪುಲವಾದ ಮಾಹಿತಿಗಳನ್ನು ನೀಡಿದ್ದಾರೆ. ಒಂದೆರಡೇ ವಾಕ್ಯಗಳಿಂದ ಹಿಡಿದು ನಾಲ್ಕೈದು ಪುಟಗಳವರೆಗೂ ಸತ್ಯಾಗ್ರಹಿಗಳ ನೆನಪುಗಳು ಹರಡಿಕೊಂಡಿವೆ.



ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ, ಬಲಿದಾನ ಮಾಡಿದ ವೀರರನ್ನು ಮಹಾತ್ಮರನ್ನು ದೇಶಭಕ್ತರನ್ನು ನೆನಪು ಮಾಡಿಕೊಳ್ಳುತ್ತ ಸ್ವಾತಂತ್ರ್ಯ ಹೋರಾಟದ ನೆನಪು ಎಂದೂ ಅಳಿಯದೆ ಹಸಿರಾಗಿ ಉಳಿಯುವಂತೆ ನೋಡಿಕೊಳ್ಳಬೇಕು, ನಾಡು ಕಟ್ಟುವ ಕೆಲಸಕ್ಕೆ ಇಂಬು ಕೊಡುತ್ತ ನಾಡ ರಕ್ಷಕರನ್ನು ಪ್ರೋತ್ಸಾಹಿಸಬೇಕು ಎನ್ನುವ ಕಾಳಜಿಯಿಂದ ರಚಿತವಾಗಿರುವ ಈ ಕೃತಿಯ ಉಪಯುಕ್ತತೆ ಬಹುಮುಖಿಯಾದದ್ದು. ಆಸಕ್ತರಿಗೆ ಸ್ವಾತಂತ್ರ್ಯ ಸಮರದ ವಿವರಗಳಲ್ಲಿ ತಿಳಿಸುವುದು, ದೇಶಭಕ್ತಿಯನ್ನು ಪ್ರೇರೇಪಿಸುವುದು, ಇತಿಹಾಸಕಾರರಿಗೂ ಜಾನಪದ ಅಭ್ಯಾಸಿಗಳಿಗೂ ಅಗತ್ಯ ಮಾಹಿತಿ ಒದಗಿಸುವುದು, ಭಾರತೀಯರು ಮನಸ್ಸು ಮಾಡಿದರೆ ಎಂಥ ಅಸಾಧ್ಯವಾದುದನ್ನು ಬೇಕಾದರೂ ಸಾಧಿಸಬಲ್ಲರೆಂಬುದಕ್ಕೆ ಪುರಾವೆಯನ್ನು ನೀಡುವುದು, ಲಭ್ಯವಾಗಿರುವ ಕೆಲವೇ ಸತ್ಯಾಗ್ರಹಿಗಳ ಅನುಭವ ನಿರೂಪಣೆಯಿಂದ ಅಲಭ್ಯವಾದುದರ ಅಗಾಧತೆ ಮತ್ತು ಮಹತ್ವವನ್ನು ಮನವರಿಕೆ ಮಾಡಿಕೊಡುವುದು, ಅಳಿದುಳಿದಿರುವುದನ್ನು ಸಂಗ್ರಹಿಸಬೇಕೆನ್ನುವ ಹುರುಪನ್ನು ತುಂಬುವುದು ಹೀಗೆ ಇದರ ಪ್ರಯೋಜನ ಮಾತಿನಲ್ಲಿ ಅಳೆಯಲಾಗದ್ದು. ಸತ್ಯಾಗ್ರಹಿಗಳು ಬರೆದ ಶೈಲಿ, ಅನುಭವಗಳನ್ನು ಮೂಲದಲ್ಲಿರುವಂತೆಯೇ ಉಳಿಸಿ ಕೊಂಡಿರುವುದು ಓದು ಮತ್ತು ಗ್ರಹಿಕೆಯ ಸೊಗಸನ್ನು ಹೆಚ್ಚಿಸಲು ಕಾರಣವಾಗಿದೆ. ಬಹು ಅಪರೂಪವೆನಿಸುವಂಥ ಸತ್ಯಾಗ್ರಹಿಗಳ ಬಿಡಿಬಿಡಿ ಚಿತ್ರಗಳನ್ನೂ ಸಮೂಹ ಚಿತ್ರಗಳನ್ನೂ ಹಾಕಿರುವುದು, ಅಂತಿಮ ಭಾಗದಲ್ಲಿ ಸತ್ಯಾಗ್ರಹಿಗಳನ್ನು ಪರಿಚಯಿಸಿರುವುದು ಕೃತಿಗೆ ಹೆಚ್ಚಿನ ಮೆರುಗು ನೀಡಿ ಸಂಗ್ರಹಯೋಗ್ಯವಾಗುವಂತೆ ಮಾಡಿದೆ.

ಈ ಕೃತಿಗೆ ಡಿ. ಲಿಂಗಯ್ಯನವರೇ ಸಾಕಷ್ಟು ದೀರ್ಘವಾದ, ಅರ್ಥವತ್ತಾದ ಮುನ್ನುಡಿಯನ್ನು ಬರೆದಿದ್ದು, ೧೯೯೮ರಷ್ಟು ಹಿಂದೆಯೇ ಅವರು ಬರೆದಿರುವ, ಈ ಮುಂದೆ ಉಲ್ಲೇಖಿಸಿರುವ ಮಾತುಗಳು ಗಮನಿಸಬೇಕಾದಂಥವು ಮಾತ್ರವಲ್ಲ ವಿಚಾರ ಮಾಡಬೇಕಾದಂಥವು ; “ದೇಶದ ನೈತಿಕತೆ, ಸ್ಥೈರ್ಯ, ಏಳಿಗೆಯನ್ನು ಕುಗ್ಗಿಸುತ್ತಿರುವ ಭ್ರಷ್ಟಾಚಾರ, ಭಯೋತ್ಪಾದನೆ, ಅತ್ಯಾಚಾರ, ಅನೈತಿಕ ವರ್ತನೆ, ಒಗ್ಗಟ್ಟಿನ ವಿನಾಶ, ಅಂತಃಕಲಹ, ಅಪನಂಬಿಕೆ, ವಿಶ್ವಾಸದ್ರೋಹ, ದರೋಡೆ, ನರಹಂತಕ ಪ್ರವೃತ್ತಿ ಮುಂತಾದ ಅನಿಷ್ಟಗಳಿಂದ ಭಾರತೀಯರು ದೂರವಾಗಬೇಕು. ವೈಜ್ಞಾನಿಕ ವೈಚಾರಿಕ ಪಥದಲ್ಲಿ ಚಲಿಸುತ್ತ ಮನುಕುಲಕ್ಕೆ ಲೇಸನ್ನೇ ಬಯಸಲು ಭಾರತೀಯರು ಪ್ರತಿಜ್ಞೆ ಮಾಡಬೇಕು.”

ಗ್ರಾಮೀಣ ಮಣ್ಣಿನ ಮಕ್ಕಳ ಬದುಕು ಬವಣೆಗಳೇ ಕೇಂದ್ರವಸ್ತುವಾಗಿರುವ ‘ಬದುಕು’ ೧೯೭೦ರಲ್ಲಿಯೇ ಬರವಣಿಗೆ ಪ್ರಾರಂಭವಾಗಿ, ಒಂದು ಘಟ್ಟಕ್ಕೆ ಬಂದು ನಿಂತು, ಕಾರಣಾಂತರಗಳಿಂದ ಮುಂದೆ ಬರೆಯಲಾಗದೆ ಕೊನೆಗೂ ೧೯೯೮ರಲ್ಲಿ ಪ್ರಕಟಗೊಂಡ ಕಾದಂಬರಿ. ಪ್ರತಿಯೊಂದು ಘಟ್ಟದಲ್ಲಿಯೂ ಪ್ರಕೃತಿ ಪ್ರತಿಸ್ಪರ್ಧಿಯಾಗಿ ಮನೋದೌರ್ಬಲ್ಯ ಸೋಲಿಗೆ ಎಡೆಮಾಡಿದಾಗ ಎದುರಾದ ದಾರಿ ಒಂದೇ – ಪ್ರಕೃತಿಗೆ ಶರಣಾಗಿ ತನ್ನನ್ನು ತಾನು ಇಲ್ಲವಾಗಿಸಿಕೊಳ್ಳುವುದು, ಇಲ್ಲವೇ ಸ್ಪರ್ಧೆಗೆ ಪ್ರತಿಸ್ಪರ್ಧಿಯಾಗಿ ನಿಂತು ಹೋರಾಡುವುದು. ಹೋರಾಟ ಮನುಷ್ಯನ ಆಜನ್ಮಸಿದ್ಧ ಹಕ್ಕು. ಹೋರಾಟದಿಂದಲೇ ಮನುಷ್ಯಕುಲ ಅವತರಿಸಿದೆ. ಹಾಗೇ ಸಾಗುತ್ತಿದೆ. ಹೋರಾಟವಿಲ್ಲದೆ ಬಾಳಿಲ್ಲ, ಹೋರಾಡದ

ಬಾಳು ಬಾಳಲ್ಲ. ಬಾಳಿಗಾಗಿ ಹೋರಾಡಲೇಬೇಕು ಎನ್ನುವ ಮಾತುಗಳು ಬೆನ್ನುಡಿಯಲ್ಲಿ ಕಾಣಿಸಿಕೊಂಡು ಕಾದಂಬರಿಯ ಸ್ವರೂಪವನ್ನು ಕಿರಿದಾಗಿ ಹಿಡಿದಿಡಲು ಯತ್ನಿಸಿವೆ.

ವಸ್ತು ಎಂಥದ್ದೇ ಆದರೂ ಭಾಷೆಯ ಮೂಲಕ ಅದನ್ನು ಸುಲಲಿತವಾಗಿ, ಆಕರ್ಷಕವಾಗಿ, ಅರ್ಥವತ್ತಾಗಿ ಮಂಡಿಸುವ ಕಲೆ ಅಥವಾ ಕೌಶಲ ಲಿಂಗಯ್ಯನವರಿಗೆ ಸಿದ್ಧಿಸಿತ್ತು ಎನ್ನುವುದಕ್ಕೆ ಈ ಕಾದಂಬರಿಯಲ್ಲಿ ಸಾಕಷ್ಟು ನಿದರ್ಶನಗಳು ಸಿಗುತ್ತವೆ. ಲಿಂಗಯ್ಯನವರು ಮೂಲತಃ ಜಾನಪದದ ವಿದ್ಯಾರ್ಥಿ. ಜಾನಪದವನ್ನು ಪ್ರೀತಿಯಿಂದ ಓದಿಕೊಂಡವರು. ಆ ಕ್ಷೇತ್ರದಲ್ಲಿ ಒಳ್ಳೆಯ ಕೆಲಸ ಮಾಡಿ ಬೇರೆಯವರಿಗೆ ಮಾದರಿಯಾದವರು. ಚಿಕ್ಕಂದಿನಿಂದ ಜನಪದಗೀತೆಗಳನ್ನು ಕಿವಿಯ ಮೇಲೆ ಬೀಳಿಸಿಕೊಳ್ಳುತ್ತ, ಗುನುಗಿಕೊಳ್ಳುತ್ತ, ಅದರಲ್ಲಿರುವ ಸ್ವಾರಸ್ಯವನ್ನು ಮನಗಾಣುತ್ತ, ಸಿಕ್ಕಿದ್ದನ್ನು ಧ್ವನಿಮುದ್ರಿಸಿಕೊಂಡು ಸಂಗ್ರಹಿಸಿ ಪ್ರಕಟಿಸುತ್ತ, ಅದರ ಮಹತ್ವವೇನೆಂಬುದನ್ನು ಬರವಣಿಗೆಯ ಮೂಲಕ ಹೊರಹಾಕುತ್ತ ಬಂದವರು. ಮಣ್ಣಿನ ಮಕ್ಕಳ ಬದುಕನ್ನು ನಿರ್ದಿಷ್ಟವೂ ಜೀವಂತವೂ ಆದ ಘಟನಾವಳಿಗಳ ಹಿನ್ನೆಲೆಯಲ್ಲಿ ಕಟ್ಟಿಕೊಡಲೆಳಸುವ ಲಿಂಗಯ್ಯನವರು ಮಣ್ಣಿನ ಮಕ್ಕಳಿಗೂ ಜನಪದ ಗೀತೆಗಳಿಗೂ ಇರುವ ಅವಿನಾಭಾವ ಸಂಬಂಧವನ್ನು ನೇರವಾಗಿ ಜನಪದ ಗೀತೆಗಳಿಂದಲೇ ಹೆಕ್ಕಿಕೊಂಡ ಸಾಲುಗಳನ್ನು ಅಧ್ಯಾಯಗಳಿಗೆ ಶೀರ್ಷಿಕೆಗಳಾಗಿಸುವುದರ ಮೂಲಕ ತೋರ್ಪಡಿಸಿದ್ದಾರೆ. ೬೬ ಪುಟಗಳ ಈ ಕಾದಂಬರಿಯಲ್ಲಿರುವ 'ನನ್ನ ಮನೆಗಿಂದು ಎರವಾದೆ', 'ಎಲ್ಲೆಲ್ಲಿ ನೋಡಿದರೂ ನಲ್ಲನಂಥವರಿಲ್ಲ', 'ಕೂಸು ಇದ್ದ ಮನೆಗೆ ಬೀಸಣಿಗೆ ಯಾತಕೆ', 'ಗಂಡುಳ್ಳ ಬಾಲ್ಯಾರು ಭಿಕ್ಷಾಕ ಹೋದರು', 'ಈ ಜನುಮಕೆ ಏನೇನೋ ತಿರುವ ಮಡಗವನೆ' ಎನ್ನುವ ಐದು ಅಧ್ಯಾಯಗಳೇ ಆಯಾ ಭಾಗದಲ್ಲಿ ಏನೇನು ಸಂಭವಿಸುತ್ತದೆಂಬುದನ್ನು ಸೂಚ್ಯವಾಗಿ ತಿಳಿಸಿಕೊಡುವುದಲ್ಲದೆ, ಕಥೆ ಎಲ್ಲಿಂದ ಪ್ರಾರಂಭವಾಗಿ ಎಲ್ಲಿಗೆ ಸಾಗುತ್ತದೆಂಬುದನ್ನೂ ಸ್ಪಷ್ಟೀಕರಿಸುತ್ತದೆ. ಆಯಾ ಅಧ್ಯಾಯದ ಕಥೆಯನ್ನು ಅರ್ಥವತ್ತಾಗಿ ಮಿಡಿಯುವ ಒಂದೊಂದು ತ್ರಿಪದಿಯನ್ನು ಆರಂಭದಲ್ಲಿಯೇ ಕೊಡುವ ತಂತ್ರವನ್ನು ಇಲ್ಲಿ ಅನುಸರಿಸಲಾಗಿದೆ. ಹಿಂದಿಗಿಂತ ಭಿನ್ನವಾಗಿ, ವಿಶಿಷ್ಟವಾಗಿ ಕತೆ ಕಾದಂಬರಿ ಕವಿತೆಗಳನ್ನು ಬರೆಯುತ್ತಿದ್ದೇವೆಂದು ಓದುಗರಿಗೆ ಮನವರಿಕೆ ಮಾಡಿಕೊಡಲು 'ನವ್ಯ'ರು ತಮ್ಮ ರಚನೆಗಳ ಆರಂಭದಲ್ಲಿ ಇಂಗ್ಲಿಷ್ ಸಾಹಿತಿಯೊಬ್ಬರ ಒಂದೋ ಎರಡೋ ವಾಕ್ಯಗಳನ್ನು ಇಂಗ್ಲಿಷ್‌ನಲ್ಲಿಯೇ ಉದ್ಧರಿಸಿ ಆಮೇಲೆ ಬರೆಯಬೇಕಾದ್ದನ್ನು ಬರೆಯುವ ತಂತ್ರವನ್ನು ಪ್ರಯೋಗಿಸುತ್ತಿದ್ದರೆನ್ನುವುದು ಈಗ ಇತಿಹಾಸ. ಅದರ ಪಳಯುಳಿಕೆಯನ್ನು ಈಗಲೂ ಅಲ್ಲೊಬ್ಬರು ಅನುಸರಿಸುತ್ತಿರುವುದುಂಟು. ಆದರೆ ಉದ್ಧರಿತ ಮಾತುಗಳಿಗೂ ಮುಂದಿನ ರಚನೆಗೂ ಎಷ್ಟೋ ಬಾರಿ ಏನೇನೂ ಸಂಬಂಧವಿರದೆ, ನಾವು ಪಾಶ್ಚಾತ್ಯ ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡಿದ್ದೇವೆ, ಅಲ್ಲಿನ ಮಹಾಮಹಾ ಸಾಹಿತಿಗಳೆಲ್ಲ ನಮಗೆ ಗೊತ್ತು ಎಂದು ಅಹಂಕಾರ ಪ್ರದರ್ಶಿಸುವ ಒಣಜಂಭದ ಗಿಮಿಕ್ ಕೂಡ ಆಗಿರುತ್ತಿತ್ತು. ಅಂಥದ್ದರ ವಿರುದ್ಧ ಲಿಂಗಯ್ಯನವರು ಪ್ರಯೋಗಿಸಿದ ದೇಸಿ ತಂತ್ರವಾಗಿಯೂ ನಾವಿದನ್ನು ಪರಿಭಾವಿಸಲು ಸಾಧ್ಯವಿದೆ. ಜಾಗತೀಕರಣದ ಅಪಾಯ ಅನಾಹುತಗಳೆದುರು



ನೆಲಮೂಲದ್ದನ್ನು, ದೇಸಿಸತ್ವವನ್ನು ಒಂದು ಅಸ್ತ್ರವಾಗಿ ಪ್ರಯೋಗಿಸಬಹುದಾದ ಸಾಧ್ಯತೆಯನ್ನು ಲಿಂಗಯ್ಯನವರು ಬಹು ಹಿಂದೆಯೇ ತೋರಿಸಿಕೊಟ್ಟಿದ್ದಾರೆನ್ನುವುದಕ್ಕೆ ಇದೊಂದು ಉದಾಹರಣೆ ಮಾತ್ರ.

'ಬದುಕು' ಕಾದಂಬರಿಯಲ್ಲಿ ಬರುವ ಕೆಂಪೇಗೌಡ–ಮಾಯಮ್ಮ, ಚಿಕ್ಕಣ್ಣ–ಕರಿಯಮ್ಮ, ಕ್ಯಾತೇಗೌಡ–ಬೋರಮ್ಮ ಈ ಎಲ್ಲ ಪಾತ್ರಗಳು ಮಣ್ಣಿನ ಗುಣವನ್ನು ಮೈಗಂಟಿಸಿಕೊಂಡು ನಿಜ ಪ್ರಕೃತಿಯೊಂದಿಗೆ ಪ್ರಕೃತಿಯೇ ಆಗಿವೆ. ಇವತ್ತು ಹಳ್ಳಿಗಳಾಗಲೀ ಹಳ್ಳಿಯ ಪರಿಸರವಾಗಲೀ ಹಳ್ಳಿಗಳಲ್ಲಿ ಬದುಕುವವರಾಗಲೀ 'ಬದುಕು' ಕಾದಂಬರಿಯಲ್ಲಿರುವಂತೆ ಇಲ್ಲ. ಕಾದಂಬರಿಯನ್ನು ಬರೆಯಲು ಮೊದಲು ಮಾಡಿದ ೧೯೭೦ರ ಸುಮಾರಿಗೆ, ಲಿಂಗಯ್ಯನವರ ಬಾಲ್ಯ ಹಾಗೂ ತಾರುಣ್ಯಾವಸ್ಥೆಯ ಕಾಲಘಟ್ಟಕ್ಕೆ 'ಬದುಕು' ನಮ್ಮನ್ನು ಕರೆದೊಯ್ಯುತ್ತದೆ. ಹಳ್ಳಿಗಳು ಇಂದು ಬದಲಾಗಿವೆ ಎನ್ನುವ ಮಾತನ್ನು ನಾವು ಹಳ್ಳಿಗಳು ಹಾಳಾಗಿವೆ ಎನ್ನುವುದಕ್ಕೆ ಪರ್ಯಾಯವಾಗಿ ಬಳಸುತ್ತಿದ್ದೇವೆ. ನಗರದ ಎಲ್ಲ ಅನಿಷ್ಟಗಳು ಮತ್ತು ಅಸಹ್ಯಗಳು ಹಳ್ಳಿಗಳನ್ನು ಆವರಿಸಿಕೊಂಡು ಅಲ್ಲಿನ ಸಾಮರಸ್ಯ, ಸಹಬಾಳ್ವೆ, ಸಹಕಾರ, ನೆಮ್ಮದಿಗಳನ್ನು ಕೊಂದು ಅಲ್ಲಿನ ಮೂಲಗುಣವಾಗಿದ್ದ ಮನುಷ್ಯತ್ವವನ್ನು ಹೊಸಕಿಹಾಕಿವೆ. ೧೯೭೦ರಷ್ಟಕ್ಕೇ ಇದರ ಉದ್ಘಾಟನೆಯಾಗಿತ್ತು, ಆದರೆ ಹಳ್ಳಿಗಳು ಅವತ್ತು ಇಷ್ಟೊಂದು ಕೆಟ್ಟಿರಲಿಲ್ಲ ಎನ್ನುವ ವಿಚಾರ ಕಾದಂಬರಿಯ ಘಟನಾವಳಿಗಳನ್ನು ಓದುತ್ತ ಹೋದ ಹಾಗೆ ಮನಸ್ಸನ್ನು ತಟ್ಟುತ್ತದೆ.

ಡಿ. ಲಿಂಗಯ್ಯನವರ ಹುಟ್ಟೂರಾದ ಮಂಡ್ಯ ಜಿಲ್ಲೆಯ ಪೀಹಳ್ಳಿ ಮತ್ತು ಅದರ ಸುತ್ತಮುತ್ತಣ ಹಳ್ಳಿಗಳಲ್ಲಿ ನಡೆಯುವ ಘಟನಾವಳಿಗಳಲ್ಲೇ ಕಾದಂಬರಿಯ ಜೀವಕೇಂದ್ರವಿದೆ. ಕಾದಂಬರಿಯ ಮೊದಲ ಅಧ್ಯಾಯದಲ್ಲೇ ಪೀಹಳ್ಳಿಯ ಪರಿಸರ, ಭೌಗೋಳಿಕ ಹಿನ್ನೆಲೆ, ಐತಿಹಾಸಿಕ ವಿವರಣೆಗಳನ್ನು ಒದಗಿಸಲಾಗಿದೆ. ಹೆಣ್ಣು ಎಂದೆಂದಿನಿಂದಲೂ ಶೋಷಿತಳು ಎನ್ನುವುದಕ್ಕೆ ಪುರಾಣದಲ್ಲಿ, ಇತಿಹಾಸದಲ್ಲಿ, ವರ್ತಮಾನದಲ್ಲಿ ಸಾವಿರ ಸಾವಿರ ಉದಾಹರಣೆಗಳು ಬಾಯ್ತೆರೆದುಕೊಂಡು ನಿಂತಿವೆ. ಕಾದಂಬರಿಯ ಪ್ರಧಾನ ಪಾತ್ರಗಳಲ್ಲಿ ಒಂದಾದ ಕೆಂಪೇಗೌಡನ ಚಿಂತೆಗೆ ಅವನ ವಂಶದಲ್ಲಿ ಸಂಭವಿಸಿದ ಇಂಥದೇ ಒಂದು ಅಹಿತಕರ ಘಟನೆ ಕಾರಣವೆನ್ನುವ ವಿವರಣೆ ಆರಂಭದಲ್ಲೇ ಕಾಣಿಸಿಕೊಳ್ಳುತ್ತದೆ. ಮಾನವಂತೆಯಾಗಿದ್ದ ಕೆಂಪೇಗೌಡನ ಅಕ್ಕನ ಮೇಲೆ ಅವಳ ಮೈದುನನೇ ಲೈಂಗಿಕ ದೌರ್ಜನ್ಯವೆಸಗಲು ಪ್ರಯತ್ನಿಸಿ ಆ ಬಗ್ಗೆ ಅವಳು ಗಂಡ, ಅತ್ತೆ, ಮಾವ, ತಂದೆ ಬಳಿ ಪರಿಪರಿಯಾಗಿ ಬಿನ್ನವಿಸಿ ಮೈದುನನ ಕಾಟದಿಂದ ತಪ್ಪಿಸುವಂತೆ ಬೇಡಿಕೊಂಡರೂ ಕೇಳಿಸಿಕೊಂಡ ಎಲ್ಲರೂ ಅವಳಿಗೇ ಬುದ್ಧಿವಾದ ಹೇಳಿ ಅವಳನ್ನೇ ಅನುಮಾನಿಸಿದಾಗ ಆಕೆಗೆ ದಿಕ್ಕು ತೋಚದೆ ಮಾನ ಉಳಿಸಿಕೊಳ್ಳುವ ಸಲುವಾಗಿ ಜೋಳದ ಕಡ್ಡಿಯ ಮೆದೆಗೆ ಬೆಂಕಿ ಹಚ್ಚಿ ಊರಜನ ನಿಬ್ಬೆರಗಾಗಿ ನೋಡುತ್ತಿರುವಂತೆಯೇ ಉರಿದುಹೋದಳು. ಅದಕ್ಕೆ ಮುಂಚೆ "ನಾನು ಸತ್ವಂತೆಯಾದ್ರೆ ನನ್ನ ಮಾವನ ಮನೆ ಹಾಳಾಗೋಗ್ಲಿ. ನನ್ನ ಅಪ್ಪನ ಮನೆಗೆ ಸಂತಾನವಾಗದಿರಲಿ, ಒಂದು ಪಕ್ಷ ಸಂತಾನವಾದರೂ ಒಂದೇ ಸುಳಿ ಉಳಿಯಲಿ!"

ಎಂಬ ಶಾಪದ ನುಡಿಯನ್ನು ಗುಡುಗಿಯೇ ಹೋದಳು. ಅದು ಕೆಂಪೇಗೌಡನ ವಂಶವನ್ನು ನಿರಂತರವಾಗಿ ಕಾಡುತ್ತ ಹೋಗುತ್ತದೆ.

ಒಬ್ಬಳೇ ಮುದ್ದಿನ ಮಗಳು ಬೋರಮ್ಮನನ್ನು ಕಾಸರವಾಡಿಯ ಕಟ್ಟುಮಸ್ತಾದ, ಸುಂದರಾಂಗನೂ ಆದ ಕ್ಯಾತೇಗೌಡನಿಗೆ ಮದುವೆ ಮಾಡಿ ಅವರೂರಿಗೆ ಕಳಿಸಿಕೊಡುವಾಗ ಕೆಂಪೇಗೌಡ–ಮಾಯಮ್ಮ ದಂಪತಿಗಳನ್ನು ಆವರಿಸಿಕೊಳ್ಳುವ ತಳಮಳ, ಸಂಕಟ ಅಷ್ಟಿಷ್ಟಲ್ಲ. ಬೋರಮ್ಮ–ಕ್ಯಾತೇಗೌಡ ಆರಂಭದಲ್ಲಿ ಸುಖ ನೆಮ್ಮದಿಯಿಂದ ಇದ್ದರೂ ಬೇಸಾಯಗಾರರ ಮೇಲೆ ಆಗಾಗ ಎರಗುತ್ತಲೇ ಇರುವ ಆಕಸ್ಮಿಕ ಬರಸಿಡಿಲುಗಳು ಅವರ ಸಂಸಾರದ ಮೇಲೂ ಬಡಿದು, ತುಪ್ಪದಲ್ಲೇ ಕೈ ತೊಳೆಯುತ್ತಿದ್ದವರು ಭಿಕ್ಷಾನ್ನಕ್ಕೆ ಕೈಚಾಚುವಂಥ ದಯನೀಯ ಅವಸ್ಥೆಯಲ್ಲಿ ನಲುಗಿ, ಇನ್ನೇನು ಅವರು ನಂಬಿದ ದೇವರೂ ಅವರಿಗೆ ಕೈಕೊಟ್ಟ ಎಂದು ಕೈಚೆಲ್ಲುವಂತಾದಾಗ ಮತ್ತೆ ಮಂಗಳದ ಮುಂಬೆಳಗು ಕಾಣಿಸಿಕೊಂಡು ಕುಸಿದ ಬದುಕು ನೆಮ್ಮದಿಯ ನೆಲೆಯತ್ತ ಸಾಗುವುದರೊಂದಿಗೆ ಕಾದಂಬರಿ ಮುಕ್ತಾಯಗೊಳ್ಳುತ್ತದೆ. ಕೊನೆಯವರೆಗೂ ಕಥನ ಕುತೂಹಲವನ್ನುಳಿಸಿಕೊಂಡೇ ಸಾಗುವ ಕಾದಂಬರಿ ಚುರುಕಾದ ಸಂಭಾಷಣೆಗಳಿಂದ, ಸಹಜ ಸನ್ನಿವೇಶಗಳ ನಿರ್ಮಾಣದಿಂದ ಗ್ರಾಮಾಂತರಂಗದ ಎಲ್ಲ ಒಳಿತು ಕೆಡಕುಗಳನ್ನು ಹಿಡಿದುಕೊಡುತ್ತ ಪ್ರಾದೇಶಿಕ ಕಾದಂಬರಿಯೊಂದರ ಜೀವಸತ್ವವನ್ನೆಲ್ಲ ತುಂಬಿಕೊಂಡು ನಳನಳಿಸುತ್ತದೆ, ಓದಿನ ಖುಷಿ ಕೊಡುತ್ತದೆ.

೧೯೮೨ರಲ್ಲಿ ಮೊದಲ ಬಾರಿ ಪ್ರಕಟವಾಗಿ, ಮುಂದಿನ ಹತ್ತು ವರ್ಷಗಳಲ್ಲಿ ಮರುಮುದ್ರಣ ಕಂಡ ಮೇಲೆ ಸಾಕಷ್ಟು ಚರ್ಚೆಗೊಳಗಾದ, ಲಿಂಗಯ್ಯನವರಂಥ ಸಾತ್ವಿಕ ಜೀವಿಗಳೂ ಲೈಂಗಿಕ ಸಂಬಂಧಗಳ ವಿವರಣೆಯನ್ನು ಹಸಿಹಸಿಯಾಗಿ ಕೊಡುವ ಉದ್ದೇಶ ತಾವು ಕಂಡ ಅಸಹ್ಯಗಳನ್ನು ಕಾದಂಬರಿಯಲ್ಲಿ ಯಥಾವತ್ತಾಗಿ ತರುವುದೋ ಓದುಗರು ಇಂಥ ವರ್ಣನೆಗಳಿಂದ ಆಕರ್ಷಿತರಾಗುತ್ತಾರೆಂದು ಭಾವಿಸಿ ಅಂಥವರನ್ನು ತೃಪ್ತಿಪಡಿಸುವ ಕೀಳು ಅಭಿರುಚಿಯೋ ಎನ್ನುವ ಅಭಿಪ್ರಾಯಗಳೆಲ್ಲ ತೇಲಿತೇಲಿ ಮುಳುಗಿದ್ದುಂಟು. “ಶಿಕ್ಷಣದ ಬಗೆಗೆ, ವಿದ್ಯಾರ್ಥಿ ಸಮುದಾಯದ ಬಗೆಗೆ ಆಶಾಭಾವನೆ ಇಟ್ಟುಕೊಂಡಿರುವ ವಿಚಾರವಂತರನ್ನು ಚಿಂತನಕ್ಕೆ ಈಡುಮಾಡಿದರೆ ಈ ಕಾದಂಬರಿ ಬರೆದದ್ದಕ್ಕೆ ಸಾರ್ಥಕ” ಎಂದು ಲಿಂಗಯ್ಯನವರು ಭಾವಿಸಿಕೊಂಡಿದ್ದಾರಾದರೂ ತಮ್ಮ ಬದುಕಿನಲ್ಲೇ ಆಗಿಹೋದ, ಸಹನೆಯ ಮಿತಿಯನ್ನು ಮೀರುವಂತೆ ಮಾಡಿದ ನೈಜ ಪ್ರಸಂಗಗಳನ್ನು ಪಾತ್ರಗಳ ಹೆಸರುಗಳನ್ನಷ್ಟೇ ಬದಲಿಸಿ ಸಹೃದಯವರೆದುರು ಕಠೋರ ವಾಸ್ತವವೊಂದನ್ನು ತೆರೆದಿಡಬೇಕೆನ್ನುವ ಗುಪ್ತ ಆಸೆಯೇ ಅವರನ್ನು ಈ ಕಾದಂಬರಿ ಬರೆಯಲು ಪ್ರೇರೇಪಿಸಿದೆ ಎನಿಸುತ್ತದೆ. ‘ಅಸಹಾಯಕರು’ ಲೇಖಕರ ಆತ್ಮಕತೆಯಲ್ಲ, ಒಂದು ವಿಶ್ವವಿದ್ಯಾಲಯದ ಅಥವಾ ಒಂದು ವಿಭಾಗದ ಅಥವಾ ಮುಖ್ಯಸ್ಥನ ಚರಿತ್ರೆಯಲ್ಲ ಎಂದು ಏನೇ ಡಂಗುರ ಹೊಡೆದರೂ ಕಾದಂಬರಿಯ ಮುಖ್ಯ ಭೂಮಿಕೆಯಲ್ಲಿರುವ ಅನಂತೇಗೌಡನ ಕಣ್ಣಳತೆಯಲ್ಲಿ, ಅವನ ಅನುಭವ ವಲಯದಲ್ಲಿ, ಪರಿಚಿತ ಸಂದರ್ಭ ಸನ್ನಿವೇಶಗಳ ಜೊತೆಯಲ್ಲಿ ಸಾಗುವ ಕಥೆಯನ್ನು, ಅನೇಕ ಸಾರಿ ಭಾಷಣ ಅಥವಾ



ವರದಿಯ ಮಟ್ಟಕ್ಕೆ ಇಳಿದುಬಿಡುವ ನಿರೂಪಣೆಯನ್ನು ಡಿ. ಲಿಂಗಯ್ಯನವರು ‘ಕೇವಲ ಕಲ್ಪಿಸಿಕೊಂಡ ಕಥೆ’ ಎಂದು ಮೂರ್ಖ ವಾದವನ್ನು ಮಂಡಿಸುವುದು ಸಾಧ್ಯವಿಲ್ಲ. ಲಿಂಗಯ್ಯನವರು ಕನ್ನಡ ಎಂ.ಎ. ಪದವಿಯನ್ನು ಪಡೆದದ್ದು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ, ಅವುಗಳ ಸುತ್ತಲೇ ಹೆಣೆದುಕೊಂಡಿರುವ ಸ್ವಾನುಭವ ಪ್ರಧಾನವಾದ ಕಥನದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥನ ಗೋಮುಖ ವ್ಯಾಘ್ರತನ, ಉತ್ತಮ ದರ್ಜೆ ಮತ್ತು ಉದ್ಯೋಗ ಕೊಡಿಸುವ ಆಮಿಷವೊಡ್ಡಿ ವಿದ್ಯಾರ್ಥಿನಿಯರನ್ನೇ ಹಾಸಿಗೆಗೆ ಬರಮಾಡಿಕೊಂಡು ಮಜಾಮಾಡುವ ಕಚ್ಚೆಹರುಕ ಬುದ್ಧಿ, ದರ್ಪ, ನೀಚತನ, ಕಾಮುಕತೆ, ಕರುಬುವಿಕೆ, ಜಾತಿವಾದ ಇತ್ಯಾದಿ ನೀಚತನಗಳಿಗೆ ಮುಗ್ಧ ಅನಂತೇಗೌಡ ಬಲಿಯಾಗುವುದು–ಇಂಥ ಘಟನೆಗಳೆಲ್ಲ ಒಂದು ಕಾಲಘಟ್ಟದ, ಒಂದು ವಿಶ್ವವಿದ್ಯಾಲಯದ ಒಂದು ವಿಭಾಗದ ಕರಾಳ ಚರಿತ್ರೆಯನ್ನೇ ಪರೋಕ್ಷವಾಗಿ ಬಯಲುಗೊಳಿಸುತ್ತವೆ. ಇದೇ ಕ್ರಮದಲ್ಲಿ, ಇದೇ ರೀತಿಯಲ್ಲಿ ಪ್ರಸಂಗಗಳು ಜರುಗದಿದ್ದರೂ ಅಲ್ಲಿ ಇಲ್ಲಿ ಊಹಿತ ಮತ್ತು ಕಥೆಯ ಓಟಕ್ಕೆ ಅಗತ್ಯವಾದ ಕಲ್ಪನೆಯ ಎಳೆಗಳು ಸೇರಿಕೊಂಡಿರಬಹುದಾದರೂ ಇದರ ಹಿಂದಿರುವ ನೈಜತೆ ಲಿಂಗಯ್ಯನವರಿಗೆ ಮತ್ತು ಬೇರೆ ಹೆಸರುಗಳಿಂದ ಮರೆಮಾಚಲಾಗಿರುವ ಮೂಲ ವ್ಯಕ್ತಿಗಳಾದ ಪಾತ್ರಧಾರಿಗಳಿಗೆ ಚೆನ್ನಾಗಿ ಗೊತ್ತು.

ಗ್ರಾಮೀಣ ಪರಿಸರದಿಂದ ಬಂದ ಅನಂತೇಗೌಡ ಪ್ರತಿಭಾವಂತ, ವಿನಯಶಾಲಿ, ಸಾಹಿತ್ಯ ಪ್ರೇಮಿ, ಗುರುಹಿರಿಯರಲ್ಲಿ ಭಕ್ತಿಯಿರಿಸಿಕೊಂಡವನಾಗಿ ತರಗತಿಗೇ ಮೊದಲನೆಯವನಾಗಿದ್ದರೂ ತನ್ನ ಮಗಳನ್ನು ಮದುವೆಯಾಗಲು ಒಪ್ಪಲಿಲ್ಲವೆಂಬ ಕಾರಣಕ್ಕೆ ರುದ್ರೇಗೌಡ ಅನಂತನನ್ನು ಸ್ಥಾನಪಲ್ಲಟಗೊಳಿಸಿ ಕೆಳಕ್ಕಿಳಿಸಿ ಮೊದಲ ರ್‍ಯಾಂಕ್ ದೊರೆಯುವಂತೆ ಮಾಡಿದ್ದನ್ನು ಇವತ್ತು ಥರಾವರಿಯಾಗಿ ಬಯಲಿಗೆ ಬರುತ್ತಿರುವ ಕೆ.ಪಿ.ಎಸ್.ಸಿ. ಕರ್ಮಕಾಂಡದ ಇಂಥವೇ ಹಗರಣಗಳ ಜೊತೆಯಲ್ಲಿ ಹೋಲಿಸಬಹುದು. ಕಾದಂಬರಿಯ ಮತ್ತೊಂದು ಮುಖ್ಯಪಾತ್ರವಾದ, ಕಂಡಕಂಡವರೊಡನೆ ಸಲೀಸಾಗಿ ಬೆರೆತು ವಿವೇಚನಾರಹಿತವಾದ ನಡವಳಿಕೆಯಿಂದ ತೀರಾ ಅನೈತಿಕವೆನ್ನುವ ವ್ಯವಹಾರಗಳಿಗೂ ಇಳಿದು ಬದುಕನ್ನು ಹಾಳುಮಾಡಿಕೊಳ್ಳುವ ಚಂಚಲಳು ಓದುಗರಿಂದ ಥೂ, ಅಸಹ್ಯ ಎನಿಸಿಕೊಳ್ಳುವಂತೆಯೇ ಸಹಾನುಭೂತಿಗೂ ಪಾತ್ರಳಾಗುತ್ತಾಳೆ. ಚಿಕ್ಕಂದಿನಲ್ಲೇ ತಾಯನ್ನು ಕಳೆದುಕೊಂಡ ಮಗಳ ಭವಿಷ್ಯದ ಬಗೆಗೆ ಕಿಂಚಿತ್ತೂ ಕಾಳಜಿಯಿಲ್ಲದೆ ಅಕ್ರಮ ಸ್ತ್ರೀಸಂಬಂಧಗಳಿಗೆ ಹಾತೊರೆಯುವ ಅಪ್ಪನನ್ನು ಪಡೆದ ಹೆಣ್ಣುಮಕ್ಕಳ ಬದುಕು ಹೇಗೆ ವಿನಾಶದತ್ತ ಚಲಿಸುತ್ತದೆನ್ನುವುದಕ್ಕೆ ಚಂಚಲಳ ಪಾತ್ರ ನಿದರ್ಶನವಾಗಿದೆ.

ವಿದ್ಯಾರ್ಥಿಸ್ನೇಹಿಯಾಗಿರಬೇಕಾದ ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳು ಅವರ ಬದುಕು ಕಟ್ಟಲು ಒತ್ತಾಸೆಯಾಗುವ ಬದಲು ಭವಿಷ್ಯವನ್ನು ಹಾಳುಮಾಡುವ ಕಸಾಯಿಖಾನೆಗಳಾಗಿ ಅಸಹಾಯಕರ ಹಿಂಡನ್ನು ಉತ್ಪಾದನೆ ಮಾಡುತ್ತಿವೆಯೆಂಬ ನಿಷ್ಠುರ ಸತ್ಯವನ್ನು ‘ಅಸಹಾಯಕರು’ ಕಾದಂಬರಿ ಬಿಂಬಿಸುವಲ್ಲಿ ಯಶಸ್ವಿಯಾಗಿದೆ. ಪ್ರತಿಭಾವಂತನಾಗಿದ್ದೂ ವಿಶ್ವವಿದ್ಯಾಲಯಗಳಲ್ಲಿ ತುಂಬಿತುಳುಕುತ್ತಿರುವ ಕೆಟ್ಟ ರಾಜಕೀಯಕ್ಕೆ ಬಲಿಯಾಗುವ ಅನಂತ, ಅನಿವಾರ್ಯವಾಗಿ ತನ್ನ ಶೀಲವನ್ನು ವಿಶ್ವವಿದ್ಯಾಲಯಗಳಲ್ಲಿ

ನಡೆಯುತ್ತಲೇ ಇರುವ ಕಾಮಯಜ್ಞಕ್ಕೆ ಆಜ್ಯವಾಗಿ ಅರ್ಪಿಸಬೇಕಾದ ಚಂಚಲ, ಅಧ್ಯಾಪಕರ ಜಾತಿಕಾರಣದಿಂದ ಬವಣೆಪಡುವ ವಿದ್ಯಾರ್ಥಿಗಳು, ಅಕ್ಕನ ಮದುವೆ ಬೇಗ ಆದರೆ ತಮಗೂ ಕಂಕಣಭಾಗ್ಯ ಕೂಡಿ ಬರುತ್ತದೆನ್ನುವ ನೀರಿಕ್ಷೆಯಲ್ಲಿ ದಿನಗಳನ್ನು ದೂಡುವ ರುದ್ರೇಗೌಡನ ಹೆಣ್ಣುಮಕ್ಕಳು–ಹೀಗೆ ಇಡೀ ಕಾದಂಬರಿಯಲ್ಲಿ ಎಲ್ಲೆಲ್ಲೂ ಅಸಹಾಯಕರ ಮೂಕಸಂಕಟ, ರೋದನ, ಕಣ್ಣೀರು, ನಿಟ್ಟುಸಿರುಗಳೇ ತುಂಬಿಕೊಂಡು ನಮ್ಮ ಶಿಕ್ಷಣ ವ್ಯವಸ್ಥೆ ಎಂಥ ಅಸಹಾಯಕರ ನಿರ್ಮಾಣಕ್ಕೆ ಕಾರಣವಾಗುತ್ತಿದೆಯಲ್ಲ ಎಂದು ಮನಸ್ಸಿಗೆ ಖೇದವಾಗುತ್ತದೆ.

‘ಅಸಹಾಯಕರು’ ಕಾದಂಬರಿಯ ಬಗೆಗೆ ಪ್ರತಿಕ್ರಿಯಿಸಿರುವ ಬಸವರಾಜ ಕಟ್ಟೀಮನಿ “ವಿಶ್ವವಿದ್ಯಾಲಯಗಳಲ್ಲಿ ನಡೆಯುವ ವಾಸ್ತವ ಜೀವನದ ಚಿತ್ರಗಳು ಇಲ್ಲಿವೆ. ಕೆಲವೆಡೆ ‘ಅಶ್ಲೀಲ’ವೆನಿಸುವ ಭಾಗಗಳಿದ್ದರೂ ಈ ಲೋಕದಲ್ಲಿ ನಡೆಯಬಾರದ್ದೇನನ್ನೂ ನೀವು ಬರೆದಿಲ್ಲ. ಮಡಿವಂತರೆಂದು ನಟಿಸುವವರ ನೈಜ ಚಿತ್ರವನ್ನು ಕೊಟ್ಟು ನಿಮ್ಮ ದಿಟ್ಟತನ ತೋರಿದ್ದೀರಿ” ಎಂದು ಮೆಚ್ಚಿಗೆಯ ಮಾತುಗಳನ್ನು ಆಡಿದ್ದಾರೆ. ವಿಶ್ವವಿದ್ಯಾನಿಲಯ, ಅಲ್ಲಿನ ಶಿಕ್ಷಣ ಕ್ರಮಗಳನ್ನು ಅರಿತವರಿಗಂತೂ ಈ ಕಾದಂಬರಿ ಪ್ರಿಯವಾಗುವುದರಲ್ಲಿ ಸಂದೇಹವಿಲ್ಲ. ಶಿಕ್ಷಣ ಕ್ಷೇತ್ರದ ಹೊಲಸು ರಾಜಕೀಯ, ಸಣ್ಣತನ, ಅನೈತಿಕ ವ್ಯವಹಾರ, ಹಣ ಹೆಣ್ಣುಗಳ ಪ್ರಭಾವದಿಂದ ನೀತಿಯ ನೆಲೆಗಟ್ಟು ಕುಸಿಯುತ್ತಿರುವುದು ಇತ್ಯಾದಿಗಳನ್ನೆಲ್ಲ ನಿರ್ದಾಕ್ಷಿಣ್ಯವಾಗಿ ಬಯಲಿಗೆಳೆದಿರುವ ಡಿ. ಲಿಂಗಯ್ಯನವರ ‘ಅಸಹಾಯಕರು’ ಕಾದಂಬರಿ ಓದಿದ ಮೇಲಾದರೂ ಭ್ರಷ್ಟರು ನೀಚರು ತಮ್ಮನ್ನು ತಡಕಿನೋಡಿಕೊಳ್ಳುವಂತಾಗಲಿ, ವಿದ್ಯಾರ್ಥಿ–ಅಧ್ಯಾಪಕರು ವಿಶ್ವವಿದ್ಯಾನಿಲಯಗಳಲ್ಲಿ ನಡೆಯುವ ಎಂಥದೇ ಅನ್ಯಾಯ ಅಕ್ರಮ ಅಸಮಾನತೆ ಶೋಷಣೆಗಳ ವಿರುದ್ಧ ತಿರುಗಿ ಬೀಳುವಂಥ ಪ್ರಜ್ಞಾವಂತರಾಗಲಿ ಎಂದು ಆಶಿಸುತ್ತೇನೆ.



# ೫. ಪ್ರೊ. ಡಿ. ಲಿಂಗಯ್ಯನವರ ವಿಮರ್ಶೆ ಮತ್ತು ಕಾವ್ಯಕೃತಿಗಳು

–ಡಾ. ಸುರೇಶ ಪಾಟೀಲ*

**ಪ್ರೊ.** ಲಿಂಗಯ್ಯನವರ ವಿಮರ್ಶಾ ಕೃತಿಗಳನ್ನು ಕುರಿತು ಮಾತನಾಡಲು ಒಪ್ಪಿದ ಮೇಲೆ ಜೊತೆಗೇ ಕಾವ್ಯವನ್ನೂ ಕುರಿತು ಮಾತನಾಡುವಂತೆ ಪ್ರೊ. ಜಿ. ಅಬ್ದುಲ್ ಬಷೀರ್ ಅವರು ಕೇಳಿಕೊಂಡಾಗ ತಕ್ಷಣಕ್ಕೆ ಒಪ್ಪಿದರೂ ಆಮೇಲೆ ಒಂದಿಷ್ಟು ಯೋಚಿಸುವಂತೆ ಆಯಿತು. ಎರಡನ್ನೂ ಒಟ್ಟಿಗೆ ಸೇರಿಸಿ ನಿರ್ದಿಷ್ಟ ಅವಧಿಯಲ್ಲಿ ಮಾತನಾಡುವುದೆಂದರೆ ಒಂದು ರೀತಿಯಲ್ಲಿ ಕಲಸು ಮೇಲೋಗರ ಆದೀತಲ್ಲವೆ ? ಆದರೇನು ಮಾಡುವುದು ? ಹೀಗೆ ಯೋಚಿಸತೊಡಗಿದ ಮನಸ್ಸು ಸಹಜವಾಗಿಯೆ ಹಿಂದಿನ ಕವಿಗಳತ್ತ ಹರಿಯಿತು.

ಉದಾಹರಣೆಗೆ ಪಂಪ ಮಹಾಕವಿಯ ‘ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ’ ಎಂದೇ ಎರಡು ಭಿನ್ನಕಾವ್ಯಗಳನ್ನು ರಚಿಸಿದ. ಇದರ ಬಗ್ಗೆ ವಿದ್ವಾಂಸರು ಅವನ ಪ್ರತಿಭೆ ಎರಡು ಕವಲುಗಳಾಗಿ ಹರದಿದೆ ಎನ್ನುವುದಿದೆ. ಕಾವ್ಯಕಲ್ಪನೆ–ಧೋರಣೆ ಪ್ರಯೋಜನ ಕುರಿತಂತೆ ಎರಡೂ ಕಾವ್ಯಗಳಲ್ಲಿ ಸ್ವಲ್ಪ ಭಿನ್ನತೆ ಇದ್ದಂತೆ ತೋರುತ್ತದೆ. ಹೀಗಾಗಿ ಅದೇ ಬೇರೆ ಇದೇ ಬೇರೆ ಎಂಬಂತೆ ಒಬ್ಬನ ಕೃತಿಗಳನ್ನೇ ಬೇರೆ ಬೇರೆ ರೀತಿಯಲ್ಲಿ ನೋಡುವುದಿದೆ. ಅಷ್ಟಕ್ಕೂ ಅಂದಿನ ಕಾಲದಲ್ಲಿ ಒಂದೋ ಎರಡೋ ಹೆಚ್ಚೆಂದರೆ ನಾಲ್ಕು ಕೃತಿಗಳನ್ನು ಕವಿಗಳು ರಚಿಸಿದ್ದರೆ ಹೆಚ್ಚು. ವಚನಕಾರರು–ಹರಿದಾಸರು ಮಾತ್ರ ಹೆಚ್ಚಿನ ಸಂಖ್ಯೆಯ ಬಿಡಿ ರಚನೆಗಳನ್ನು ಮಾಡಿದ್ದಾರೆ. ಇಂಥವುಗಳನ್ನು ಯಾವ ರೀತಿ ನೋಡಬೇಕು ಎನ್ನುವುದು ಇಲ್ಲಿನ ಪ್ರಶ್ನೆ. ಬಿಡಿಬಿಡಿಯಾಗಿಯೋ ಇಡಿಯಾಗಿಯೋ ಆಧುನಿಕ ಕಾಲಕ್ಕೆ ಬಂದರಂತೂ ಈ ಮೂಲಕ ಲೇಖಕನ ವಿಭಿನ್ನ ಮುಖ ಕಾಣುತ್ತದೆ. ಈ ಎಲ್ಲ ಮುಖಕ್ಕೆ ಕೇಂದ್ರ ಯಾವುದು (ಬೇಂದ್ರೆ ಒಂದೆಡೆ ತಮ್ಮ ಬಗ್ಗೆ ಚತುರ್ಮುಖ ಎಂದು ಹೇಳಿಕೊಂಡಿದ್ದಾರೆ.), ಈ ವಿಭಿನ್ನ ಮುಖದ ವಿಭಿನ್ನ ರಚನೆಗಳ ವಿಚಾರಕ್ಕೆ ಬಂದಾಗ ಎಷ್ಟೋ ಸಾರಿ ಪರಸ್ಪರ ವಿರುದ್ಧವೆನ್ನಿಸುವ ಸಂಗತಿ–ಧೋರಣೆ ಕಾಣಿಸುವುದುಂಟು. ಅಂಥ ಸಂಗತಿ–ಧೋರಣೆ ಆ ಕ್ಷಣದ ಪ್ರತಿಕ್ರಿಯೆಯೋ ಅಥವಾ ಲೇಖಕನ ವ್ಯಕ್ತಿತ್ವದ ವಿಕ್ಷಿಪ್ತತೆಯೊ? ಈ ಎಲ್ಲವನ್ನೂ ಒಟ್ಟಿಗೆ ಇದ್ದು ನೋಡುವುದೊ ಈ ಬಗೆಯ ಅನೇಕ ಪ್ರಶ್ನೆಗಳು ಉದಿಸುತ್ತವೆ.

---

* ವಿಳಾಸ : ಕನ್ನಡ ಪ್ರಾಧ್ಯಾಪಕರು ಮತ್ತು ವಿಭಾಗದ ಮುಖ್ಯಸ್ಥರು, ಎಪಿಎಸ್ ಕಲೆ ಮತ್ತು ವಿಜ್ಞಾನ ಪದವಿ ಕಾಲೇಜು, ಎನ್.ಆರ್. ಕಾಲೋನಿ, ಬೆಂಗಳೂರು–೫೬೦ ೦೧೯. ಮೊಬೈಲ್ : ೯೪೪೮೭೦೦೩೧೫

ಕಾವ್ಯ (ಸಾಹಿತ್ಯ) ಮತ್ತು ವಿಮರ್ಶೆಗಳ ನಡುವಣ ಸಂಬಂಧವಂತೂ ಇನ್ನೂ ಸಂಕೀರ್ಣವಾದುದು. ಅವೆರಡೂ ಭಿನ್ನ–ಸ್ವತಂತ್ರ ಶಿಸ್ತು ಅಥವಾ ಜ್ಞಾನ ಶಾಖೆಗಳು. ತುಂಬ ಸ್ಥೂಲವಾಗಿ ಹೇಳುವುದಾದರೆ ಕಾವ್ಯವೆನ್ನುವುದು ಭಾವಮೂಲ ಪ್ರತಿಭೆಯ ಫಲವಾದರೆ ವಿಮರ್ಶೆಯು ಬುದ್ಧಿಜನ್ಯ ವಿವೇಚನೆ, ಇಷ್ಟೇ ಅಲ್ಲ, ಈ ಎರಡಕ್ಕೂ ಅನೇಕತ್ವ ಇದೆ. ಎಷ್ಟೋ ಸಾರಿ ಈ ಎರಡನ್ನೂ ಪರಸ್ಪರ ವಿರುದ್ಧವೆಂಬಂತೆ ಬಿಂಬಿಸಲಾಗಿದೆ. ಇದರಲ್ಲಿ ಸ್ವಲ್ಪಮಟ್ಟಿಗೆ ಸತ್ಯಾಂಶವಿದೆ. ಒಂದು ಮಾತ್ರ ನಿಜ. ಎರಡೂ ಒಂದನ್ನೊಂದು ಅವಲಂಬಿಸಬೇಕಾದ್ದು ಅನಿವಾರ್ಯ. ವಿಮರ್ಶೆ ಎನ್ನುವುದು ಒಂದು ಕೃತಿಯನ್ನು ಅರ್ಥೈಸುವ ಒಳನೋಟವಾದರೆ ಸಾಹಿತ್ಯವು ಜೀವನವನ್ನು ಅರ್ಥೈಸುವ ಒಳನೋಟವಾಗಿದೆ. ಅಂತೂ ಎರಡಕ್ಕೂ 'ಒಳನೋಟ' ಬೇಕು. ಇಷ್ಟರ ಮೇಲೆ 'ಬುದ್ಧಿಜನ್ಯ'ಕ್ಕೆ ಭಾವಸ್ಪರ್ಶ ಭಾವಜಗತ್ತಿಗೆ ಬುದ್ಧಿಯ ಕಣ್ಣು ಇದ್ದರೇನೆ ಚೆನ್ನು. ಅಷ್ಟರಮಟ್ಟಿಗೆ ಒಂದನ್ನೊಂದು ಅವಲಂಬಿಸಿವೆ. ಈ ಒಂದು ಮೂಲಭೂತ ಪರಿಕಲ್ಪನೆಯನ್ನಿಟ್ಟುಕೊಂಡು ನಾವು ಕಾವ್ಯ ಮತ್ತು ವಿಮರ್ಶೆಗಳನ್ನು ಕುರಿತು ಮಾತನಾಡಬೇಕಾಗುತ್ತದೆ. ಇದನ್ನು ಇನ್ನಷ್ಟು ಸರಳೀಕರಿಸಿ ಹೇಳುವುದಾದಲ್ಲಿ, ಲೇಖಕನಾದವನು ತನ್ನ ಅನುಭವವನ್ನು ಅನನ್ಯ ಅಭಿವ್ಯಕ್ತಿ ಆಗಿಸುವಲ್ಲಿ (ನಿರೂಪಣೆ, ಭಾಷೆ, ಶೈಲಿ ಪಾತ್ರಾದಿ ವಿಚಾರಗಳೆಲ್ಲ ಇದರಲ್ಲೇ ಅಂತರ್ಗತವಾಗಿರುತ್ತವೆ) ಈ 'ವಿಮರ್ಶಾ ಪ್ರಜ್ಞೆ' ಎನ್ನುವುದು ಸುಪ್ತವಾಗಿ ಕೆಲಸ ಮಾಡುತ್ತದೆ. ಹಾಗೆಯೇ ವಿಮರ್ಶಕನ ವಿಶ್ಲೇಷಣಾ ಪ್ರಜ್ಞೆಯ ಭಿತ್ತಿಯಲ್ಲಿ ಭಾವದ ಸೆಲೆ ಇರಲೇಬೇಕಾಗುತ್ತದೆ.

ಹೀಗೆಂದ ಮಾತ್ರಕ್ಕೆ ತನ್ನ ಇಂಥ ವಿಮರ್ಶಾ ಪ್ರಜ್ಞೆಯಿಂದಲೇ ಅಥವಾ ತಾನು ರೂಪಿಸಿಕೊಂಡ ವಿಮರ್ಶಾ ಮೀಮಾಂಸೆಯಿಂದ ಕೃತಿಕಾರನು ಕೃತಿಗಳನ್ನು ರಚಿಸಲು ಸಾಧ್ಯವಿಲ್ಲ. ಆದರೆ ಸುಪ್ತಪ್ರಜ್ಞೆಯ ಯಾವುದೊ ಒಂದು ನೆಲೆಯಲ್ಲಿ ಅವು ಏಕೀಭವಿಸಿ ಪರಸ್ಪರ ರೂಪುಗೊಳ್ಳುವಲ್ಲಿ ನೆರವಾಗಬಹುದು. ಈ ಒಂದು ಪರಿಪ್ರೇಕ್ಷ್ಯದ ಹಿನ್ನೆಲೆಯಲ್ಲಿ ಲಿಂಗಯ್ಯನವರ ವಿಮರ್ಶಾ ಸಂಕಲನಗಳನ್ನು ಆಧರಿಸಿದ ವಿಮರ್ಶಾ ಚಿಂತನಗಳನ್ನು ನೋಡಬಹುದು. ಲಿಂಗಯ್ಯನವರು ಬರೀ ಕವಿತೆ ಅಥವಾ ವಿಮರ್ಶೆ ಮಾತ್ರ ಬರೆದಿಲ್ಲ. ನಾಟಕ, ಸಣ್ಣಕತೆ, ಪ್ರಬಂಧ, ಜೀವನಚರಿತ್ರೆ, ಕಾದಂಬರಿ, ವ್ಯಕ್ತಿಚಿತ್ರ, ಜಾನಪದದಲ್ಲಿ ಅವರ ಸಾಧನೆ ದೊಡ್ಡದು ನಿಜ. ಆದರೆ ಅದರ ಢಾಳ ಬೆಳಕಿನಲ್ಲಿ ಅವರ ಇತರ ಸಾಹಿತ್ಯವನ್ನು ಅಲಕ್ಷಿಸಲಾಗಿದೆ ಇರಲಿ. ಲಿಂಗಯ್ಯನವರು ನಾಲ್ಕು ವಿಮರ್ಶಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಕಾವ್ಯಾಸ್ವಾದನ (೧೯೬೯) ಕಾವ್ಯ ಚಿಂತನ (೧೯೮೨) ಕಾವ್ಯಾನುಭವ (೧೯೯೬) ಮತ್ತು ಕಾವ್ಯಪರುಷ (೨೦೦೬).

ಪ್ರೊ. ಲಿಂಗಯ್ಯನವರು ಕನ್ನಡ ಅಧ್ಯಯನ ಅಧ್ಯಾಪನಗಳಿಂದ ವಿದ್ವತ್ತು ಗಳಿಸಿದವರು. ಜೊತೆಗೆ ಜಾನಪದದಲ್ಲಿ ವಿಶೇಷ ಪರಿಶ್ರಮ ಉಳ್ಳವರು. ಈ ಎರಡೂ ಸಂಗತಿಗಳು ಅವರ ವಿಮರ್ಶಾ ದೃಷ್ಟಿಕೋನವನ್ನು ರೂಪಿಸಿವೆ. ಹಾಗೆಯೆ ಹೊಸಗನ್ನಡ ಕಾವ್ಯ ಸಹ ಅವರ ಆಸಕ್ತಿಯ ಕ್ಷೇತ್ರವೇ ಆಗಿದೆ.



ಸಾಂಪ್ರದಾಯಿಕ ಪಂಡಿತ ಪರಂಪರೆಯ ಮುಂದುವರಿಕೆಯನ್ನು ಅವರ ವಿಮರ್ಶೆಯಲ್ಲಿ ಪ್ರಕಟಗೊಂಡಿರುವುದನ್ನು ನಾವು ಮೊದಲ ಬದಿಗೇ ಕಾಣುತ್ತೇವೆ. ಈ ನಾಲ್ಕು ಸಂಕಲನಗಳಲ್ಲಿರುವ ಅನೇಕ ಇಂಥ ಲೇಖನಗಳಲ್ಲಿ ಅವರು ಮತ್ತೆ ಮತ್ತೆ ಮರು ಓದು ಅಧ್ಯಯನಕ್ಕೆ ಒಳಪಡಿಸುವ ಕವಿಗಳೆಂದರೆ ಜೇಡರ ದಾಸಿಮಯ್ಯ, ಕುಮಾರವ್ಯಾಸ, ರತ್ನಾಕರವರ್ಣಿ ಮತ್ತು ಜನ್ನ. ಈ ಕವಿಗಳ ಕಾವ್ಯ ಅಥವಾ ಕಾವ್ಯಭಾಗಗಳ ವಿಶ್ಲೇಷಣೆ ಕನ್ನಡ ವಿದ್ವದ್ವಲಯದಲ್ಲಿ ಹೊಸತಲ್ಲ, ಚರ್ವಿತ ಚರ್ವಣವೆನ್ನಬಹುದಾದ ಲೇಖನಗಳೂ ಪ್ರಕಟ ಆಗುತ್ತವೆ ಆದರೆ ಲಿಂಗಯ್ಯನವರ ಇಲ್ಲಿನ ಅನೇಕ ಲೇಖನಗಳು ಹಾಗಲ್ಲದೆ ವಿಶೇಷ ಒಳನೋಟವನ್ನು ಒಳಗೊಂಡು ಆ ಸಾಹಿತ್ಯವನ್ನು ಅರ್ಥೈಸಿಕೊಳ್ಳುವಲ್ಲಿ ನೆರವಾಗುತ್ತವೆ. ಈ ದೃಷ್ಟಿಯಿಂದ ಜೇಡರದಾಸಿಮಯ್ಯ, ರತ್ನಾಕರವರ್ಣಿ ಮತ್ತು ಕುಮಾರ ವ್ಯಾಸನನ್ನು ಕುರಿತ ಲೇಖನಗಳನ್ನು ಪರಿಶೀಲಿಸಬೇಕು. ಉದಾಹರಣೆಗಾಗಿ ನಾನು 'ರತ್ನಾಕರನ ಜಲಪ್ರತಿಮೆಗಳು' ಲೇಖನದತ್ತ ಮಾತ್ರ ಎಲ್ಲರ ಗಮನ ಸೆಳೆಯುತ್ತೇನೆ.

ಸಮುದ್ರ ವರ್ಣನೆ ಅಷ್ಟಾದಶ ವರ್ಣನೆಗಳಲ್ಲಿ ಒಂದು. ಆದರೆ ಎಷ್ಟೋ ಘಟಾನುಘಟಿ ಕವಿಗಳೂ ಸಮುದ್ರವನ್ನೆ ನೋಡದೆ ಶಾಸ್ತ್ರೋಕ್ತ ವರ್ಣನೆ ಮಾಡಿದ್ದಾರೆ. ಆದರೆ ರತ್ನಾಕರವರ್ಣಿ ಸಮುದ್ರವನ್ನು ಪ್ರತ್ಯಕ್ಷ ಕಂಡವನು. ಸಮುದ್ರದ ಆಳ–ವಿಸ್ತಾರಗಳಿಗೆ ಮಾರು ಹೋದವನು. ಹೀಗಾಗಿ ಬೇರೆಯವರಲ್ಲಿ ಕವಿ ಸಮಯವಾದ ಸಮುದ್ರ ರತ್ನಾಕರನಲ್ಲಿ 'ಪ್ರಾತ್ಯಕ್ಷಿಕೆ' ಆಗಿ ಬರುತ್ತದೆ. ರತ್ನಾಕರನು ಹೀಗೆ ಜಲಪ್ರತಿಮೆಗಳನ್ನು ಅರ್ಥಪೂರ್ಣವಾಗಿ ಬಳಸುತ್ತ ಸಮುದ್ರ ವರ್ಣನೆ ಮಾಡಿದ್ದಾನೆಂಬುದರತ್ತ ಲಿಂಗಯ್ಯನವರು ನಮ್ಮ ಗಮನ ಸೆಳೆದಿದ್ದಾರೆ.

ಪ್ರಾಚೀನ ಸಾಹಿತ್ಯ ಕುರಿತಂತೆ ಒಲವು, ವಿದ್ವತ್ತು ಕಡಿಮೆಯಾಗುತ್ತಿರುವ, ಅದರ ಮಹತ್ವವನ್ನು ಕಡೆಗಣಿಸುತ್ತಿರುವ ಇವತ್ತಿನ ಸಂದರ್ಭದಲ್ಲಿ ಈ ಬಗೆಯ ವಿಮರ್ಶಾ ಲೇಖನಗಳು ಸಾಹಿತ್ಯದಲ್ಲಿ ಪರಂಪರೆಯ ಪ್ರಜ್ಞೆಯನ್ನು ಮೂಡಿಸುವುದರಲ್ಲಿ ಸಂದೇಹವಿಲ್ಲ.

ಲಿಂಗಯ್ಯನವರ ವಿಮರ್ಶೆ ಹಳಗನ್ನಡಕ್ಕಷ್ಟೆ ಸೀಮಿತ ಆಗಿಲ್ಲ. ಹೊಸ ಕಾವ್ಯ ಸಂದರ್ಭದಲ್ಲಿ ಅನೇಕ ಕವಿಕೃತಿಗಳ ವಿಮರ್ಶೆಯ ಮೂಲಕವೆ ಇದೇ ಬಗೆಯ ಒಳನೋಟಗಳನ್ನು ನೀಡಿದ್ದಾರೆ. ಜಿ.ಎಸ್.ಎಸ್. ಅವರ 'ಸಂಜೆ ದಾರಿ', ಚನ್ನವೀರ ಕಣವಿಯವರ 'ಯುಗಾದಿ' ಕವಿತೆಗಳು ಕುವೆಂಪು ಅವರ ಎರಡು ವಚನಗಳು, ದೇವರು ರುಜು ಮಾಡಿದನು, ಕೆ.ಎಸ್.ನ ಅವರ ಬುದ್ಧಸ್ಮಿತ' ಕುರಿತ ಲೇಖನಗಳು ಶ್ರೀಯುತರ ಪ್ರಾಯೋಗಿಕ ವಿಮರ್ಶೆಯ ಮಾದರಿಗಳಾಗಿವೆ ಅದೇ ಬಗೆಯಲ್ಲಿ ಮಂಕುತಿಮ್ಮನ ಕಗ್ಗ, ನಿಸಾರ್ ಅಹಮದ್ ಅವರ ಕವಿತೆ ಕುರಿತ ಲೇಖನಗಳು ಸೋಪಜ್ಞತೆ ಮೆರೆದಿವೆ. ನವೋದಯದ ಸಂದರ್ಭದ ನಾಡು–ನುಡಿ–ರಾಷ್ಟ್ರಪ್ರೇಮ ಗೀತೆಗಳು ವಿಶ್ಲೇಷಣೆ (ಇದು ಅವರ ಕವಿತೆಗಳಲ್ಲೂ ಕಂಡಿದೆ) ಮತ್ತು ನಮ್ಮ ಅನೇಕ ಕವಿಗಳ ಮೇಲೆ ಜನಪದದ ಪ್ರಭಾವ ಕುರಿತಂತಾಗಿ ಲೇಖನಗಳೂ ಉಲ್ಲೇಖನೀಯ.

ಹೀಗೆ ಇಂಥ ಲೇಖನಗಳು ನಮ್ಮ ಪ್ರಾಚೀನ ಅರ್ವಾಚೀನ ಕಾವ್ಯಗಳ ಓದು–ಮರು ಓದಿಗೆ ಅವಕಾಶ ಮಾಡಿ ಕೊಡುವುದಲ್ಲದೆ ಹೊಸ ಹೊಳಹು–ಸುಳಿವು ನೀಡುವುದಲ್ಲದೆ ಸ್ವತಃ ಕವಿಯಾದ ಲಿಂಗಯ್ಯನವರ ಅನೇಕ ಕವಿತೆಗಳ ಹಿಂದಿನ ಪ್ರೇರಕ ಶಕ್ತಿಯೂ ಆಗಿವೆ.

ಹೀಗೆ ಒಂದೆಡೆ ಪ್ರಾಚೀನ ಸಾಹಿತ್ಯ ಸತ್ವ ಇನ್ನೊಂದೆಡೆ ಜಾನಪದ ಸತ್ವಗಳು ಮೇಳೈಸಿ ಜನವಾಣಿ ಬೇರು–ಕವಿವಾಣಿ ಹೂ ಎನ್ನುವಂತೆ ಇವರ ಕವಿತೆಗಳನ್ನು ರೂಪಿಸಿವೆ ಎಂದರೆ ತಪ್ಪಾಗದು ಮತ್ತು ಇಲ್ಲಿ ಹೇಳಲೇಬೇಕಾದ ಇನ್ನೊಂದು ಮಾತೆಂದರೆ, ಪ್ರತಿಯೊಬ್ಬ ಸೃಜನಶೀಲ ಲೇಖಕನಿಗೂ ಸಾಹಿತ್ಯ ರಚನೆಗೆ ಸಂಬಂಧಿಸಿದಂತೆ ಒಂದು ಸ್ಪಷ್ಟ ಕಲ್ಪನೆ–ಗುರಿ ಇರುತ್ತದೆ. ಅದನ್ನು ಸಾಕಾರಗೊಳಿಸುವುದೇ ಅವನ ಪ್ರತಿ ರಚನೆಯ ಹಿಂದಿನ ಉದ್ದೇಶ. ಅದು ಸಫಲವಾಗುವುದೋ ಇಲ್ಲವೋ ಬೇರೆ ಮಾತು. ಆದರೆ ಪ್ರತಿ ಪ್ರಯತ್ನವೂ ಸಾರ್ಥಕವೆ. ಲೇಖಕನಿಗೆ ಆರಂಭದಲ್ಲೇ ಇಂಥ ಗುರಿ ರೂಪಗೊಂಡಿಲ್ಲದಿರಬಹುದು. ಆದರೆ ಬರವಣಿಗೆ ಗಂಭೀರವಾಗುತ್ತ ನಡೆದಂತೆ ಅದು ತನ್ನ ತಾನೆ ರೂಪುಗೊಳ್ಳುವುದು ಅನಿವಾರ್ಯ. ಪ್ರೊ. ಲಿಂಗಯ್ಯನವರ ಅನೇಕ ಸಂಕಲನಗಳಲ್ಲಿ ಈ ಒಂದು ಆಶಯ ಅನುರಣನಗೊಂಡಿರುವುದನ್ನು ನೋಡುತ್ತೇವೆ. ಅವರು ಒಂದು ಮುನ್ನುಡಿಯಲ್ಲಿ ಹೇಳುತ್ತಾರೆ (ವೀಕ್ಷಕ) ಬದುಕಿನ ಹಾಗೂ ವ್ಯಕ್ತಿಯ ಒಳಹೊರಗುಗಳನ್ನು ಗಮನಿಸಿದಾಗ, ನಮ್ಮ ಇರುವಿಕೆಯನ್ನು ಬೇರು ಸಹಿತ ಅಲುಗಾಡಿಸುವಂತೆ ದುಷ್ಟ ಶಕ್ತಿಗಳು ನಮ್ಮ ಹೆಕ್ಕತ್ತಿಗೆ ಮಿದ್ದುವ ಅನುಭವವಾದಾಗ, ನಾವು ನಿತ್ಯ ಉಸಿರಾಡುವ ಪರಿಸರ ನಾತಗೊಂಡಾಗ ಒಬ್ಬ ಪ್ರಜ್ಞಾವಂತ ತೋರಬಹುದಾದ ಪ್ರತಿಕ್ರಿಯೆಗಳೇ ಈ ಕವನಗಳು. 'ಹಾಗೆಯೇ ಇನ್ನೊಂದೆಡೆ (ಗಂಧವತಿ) ಹೇಳುತ್ತಾರೆ.' ವಸ್ತು ಗಾಂಭೀರ್ಯದೊಂದಿಗೆ ಕಲಾತ್ಮಕತೆಯೂ ಕೂಡಿಕೊಂಡರೆ ಕಾವ್ಯಕಳಶಕ್ಕೆ ಹೊಳಪು ಅಪಾರ. ಸಮಕಾಲೀನನಾಗಿದ್ದೂ ಸಾರ್ವಕಾಲಿಕತೆ ಉಳ್ಳ ಕವಿತೆಯ ಮಹತ್ವ ಒತ್ತಿ ಹೇಳುವ ಲಿಂಗಯ್ಯನವರು ಉತ್ತಮ ಕಾವ್ಯದ ಬಗೆಗೆ ನಾವಿಟ್ಟುಕೊಂಡ ವಿಶಾಲ ಪರಿಕಲ್ಪನೆಗೆ ಪೂರಕವಾಗಿ ತಮ್ಮ ಕವಿತೆಗಳು ಹೊರಹೊಮ್ಮಿವೆ ಎಂದುಕೊಳ್ಳುತ್ತಾರೆ.

ಲಿಂಗಯ್ಯನವರಲ್ಲಿ ನಾಲ್ಕು ಬಗೆಯ ಕವಿತಾರಚನೆ ಕಂಡು ಬರುತ್ತದೆ. ೧) ಮಕ್ಕಳ ಕವಿತೆಗಳು ೨) ಚುಟಕ ೩) ವಚನಗಳು ೪) ಕವಿತೆಗಳು.

ಅವರ ಪ್ರಕಟಿತ ಕವನ ಸಂಕಲನಗಳು ೧) ಅಂತರಂಗದ ಹಾಡು (೧೯೭೦), ೨) ವೀಕ್ಷಕ (೧೯೭೪), ೩) ಕಲಬೆರಕೆ (೧೯೭೮), ೪) ಭಗ್ನ ಪ್ರತಿಮೆ (೧೯೯೨), ೫) ಪುಣ್ಯಭೂಮಿ ಭಾರತ (೧೯೯೯) ಮತ್ತು ಗಂಧವತಿ (೨೦೦೩). ಈ ಕವನಗಳ ವಸ್ತು ವೈವಿಧ್ಯ ಬೆರಗು ಹುಟ್ಟಿಸುವಂತಹುದು. ಭಾವಗೀತೆಗಳು ಮತ್ತು ಮುಕ್ತ ಛಂದಸ್ಸು ಈ ಎರಡೂ ರೂಪದಲ್ಲಿ ಅವರು ಕವನಗಳನ್ನು ರಚಿಸಿದ್ದು ವಸ್ತುವಿಗೆ ಅನುಗುಣವಾಗಿ ಅವು ರೂಪುಗೊಂಡಿವೆ. ಆರಂಭಿಕ ಹಂತದಲ್ಲಿ 'ಪ್ರಾಯದಲ್ಲಿ ಅಥವಾ ಯಾವಾಗಲಾದರೂ ಕಾಡಬಹುದಾದ ಕಾಮಭಾವನೆಗಳು ಅನೇಕ ಕವಿತೆಗಳಿಗೆ ವಸ್ತುವಾಗಿವೆ. ಅದೇ ಬಗೆಯಲ್ಲಿ



ದಿನನಿತ್ಯದ ಸಾಮಾನ್ಯ–ಸಹಜ ಸಂಗತಿ, ಅನುಭವಗಳು ಬದುಕನ್ನು ಸಂಕೀರ್ಣಗೊಳಿಸುವ ಬಗೆಯನ್ನು ಅನೇಕ ಕವಿತೆಗಳು ಒಳಗೊಂಡಿವೆ.

ನಾಡು–ನುಡಿ, ದೇಶಭಕ್ತರು, ಸಾಹಿತಿಗಳು ರಾಷ್ಟ್ರಪ್ರೇಮದಂಥ ಅನೇಕ ಮೌಲ್ಯಗಳು ಶ್ರೀಯುತರ ಕವನಗಳ ವಸ್ತುಗಳಾಗಿವೆ. ಗೆಳೆತನ, ಪ್ರಕೃತಿ ಪ್ರೇಮ, ದೈವಭಕ್ತಿ, ಹೆಣ್ಣಿನ ಕುರಿತ ಚಿಂತನೆ, ಸಾಮಾಜಿಕ ತರತಮಗಳು ಹೀಗೆ ವಸ್ತುವೈವಿಧ್ಯತೆ ಚುಟಕಗಳಲ್ಲಿ ಅಲ್ಲದೆ ಮುಖ್ಯ ಕವನಗಳಲ್ಲಿಯೂ ಕಂಡುಬರುತ್ತದೆ. ಇಂಥ ಎಲ್ಲ ಕವನಗಳ ಮೂಲಕವೆ ನಾವು ಲಿಂಗಯ್ಯನವರು ಬದುಕಿಗೆ ಮತ್ತು ಸಮಾಜಕ್ಕೆ, ಸಮಕಾಲೀನತೆಗೆ ತೋರಿದ ಪ್ರತಿಕ್ರಿಯೆ, ಅವರು ನಂಬಿದ ಮತ್ತು ಶೋಧಿಸುವ ತತ್ವಗಳು, ಪ್ರತಿಪಾದಿಸ ಹೊರಟಿರುವ ಜೀವನ ಮೌಲ್ಯಗಳು ಇವುಗಳನ್ನು ಕಾಣಬಹುದಾಗಿದೆ. ಹೀಗೆ ಸುತ್ತಮುತ್ತಲನ್ನು ನೋಡುವ ದೃಷ್ಟಿಯಲ್ಲೇ ಅವರ ವ್ಯಕ್ತಿತ್ವ ಎದ್ದು ಕಾಣುತ್ತದೆ. ನಮ್ಮ ಬದುಕು ವೈಯಕ್ತಿಕ. ಆದರೆ ಅದರಿಂದ ಆಗುವ ಅನುಭವ ಸಾಮಾಜಿಕ. ಹೀಗೆ ಏಕಾಂತದಿಂದ ಲೋಕಾಂತವನ್ನು ಅರಳಿಸುವುದೆ ಕವಿತ್ವ. ಈ ದೃಷ್ಟಿಯಿಂದ ಲಿಂಗಯ್ಯನವರ ಅನೇಕ ಕವಿತೆಗಳು ಮೂಡಿಬಂದಿವೆ. ಈ ದೃಷ್ಟಿಯಿಂದ ನನ್ನ ಗಮನ ಸೆಳೆದ ಕೆಲವು ಕವನಗಳ ಹೆಸರುಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಲು ಸಾಧ್ಯ. 'ಅಂತರಂಗದ ಹಾಡು' ಸಂಕಲನದ ನಾ ಮೆಚ್ಚಿದ ಹುಡುಗಿ, ನಾನು–ನನ್ನವಳು, ಕವಿತೆಯನು ಕೈ ಹಿಡಿದು, ಮೈಸೂರು ಪೇಟ, ವೀಕ್ಷಕದ ಕೆಸರು, ಮೆಲುಕು, ನಮ್ಮೂರಲ್ಲಿ ಜಾಗರಣೆ, ಬೆತ್ತಲೆ; ಬ್ರಹ್ಮಚಾರಿ, ಗೇಣಿದಾರ; ಭಗ್ನ ಪ್ರತಿಮೆ ಸಂಕಲನದ ಭಗ್ನ ಪ್ರತಿಮೆ, ಪಲ್ಲಿ, ಹೋಗೋಣ ಬಾರೆ ಗೆಳತಿ, ಕಾಣದ ಕೈ, ಪೀಹಳ್ಳಿ, 'ಗಂಧವತಿ' ಸಂಕಲನದ ಗಂಧವತಿ, ತಿರೆ ಚೆಲುವು, ಯುಗಾದಿಯನ್ನು ಕುರಿತ ಅನೇಕ ಕವನಗಳು, ಪಿಂಡದ ಕಾಗೆ, ಹಿತಶತ್ರು.

ಇವುಗಳಲ್ಲದೆ ಅವರೇ ಬರೆದ ಮಕ್ಕಳ ಕವನಗಳು, ಚುಟಕ ಮತ್ತು ವಚನಗಳಲ್ಲಿ ಬದುಕನ್ನು ಲಿಂಗಯ್ಯನವರು ಕಂಡರಿಸಿದ ರೀತಿಯನ್ನು ಮನಗಾಣಬಹುದಾಗಿದೆ. ಚೇತನ ಚಿಲುಮೆ, ಮಹಾತ್ಮಗಾಂಧಿ ಇವು ಮಕ್ಕಳ ಕವನಗಳು. ಇವುಗಳಲ್ಲಿ ಚೇತನ ಚಿಲುಮೆಯಲ್ಲಿ ಮಗುವಿನ ದಿನನಿತ್ಯದ ಚಟುವಟಿಕೆಯನ್ನೇ ಕವಿತೆ ಆಗಿಸುವ ಪ್ರಯತ್ನ ಸ್ವಂತದ ಅನುಭವವನ್ನೇ ಸಾರ್ವತ್ರಿಕಗೊಳಿಸುವ ಎಲ್ಲರ ಅನುಭವವಾಗಿಸುವ ಭಾಷೆ ಇದೆ. ಇಲ್ಲಿ ಏಕಾಂತವೇ ಲೋಕಾಂತವಾಗಿದೆ. ಇನ್ನು ಮಹಾತ್ಮಗಾಂಧಿಯವರ ಕತೆಯನ್ನು ತಮ್ಮದೇ ಆದ ರೀತಿಯಲ್ಲಿ ಮಕ್ಕಳಿಗೆ ಹೇಳಿದ್ದಾರೆ.

ಕಾಲಮಿತಿಯ ಹಿನ್ನೆಲೆಯಲ್ಲಿ ಸದ್ಯಕ್ಕೆ ಇಷ್ಟನ್ನು ಮಾತ್ರ ಹೇಳಬಹುದು. ತಮ್ಮ ಕಾವ್ಯರಚನೆಯ ಹಿನ್ನೆಲೆಯನ್ನು ಕುರಿತು ಲಿಂಗಯ್ಯನವರೆ ಬರೆದ 'ಅಭಿವ್ಯಕ್ತಿ' ಕವನದಲ್ಲಿ ಅವರ ಈ ಎಲ್ಲ ಆಶಯ ಸುಸ್ಪಷ್ಟವಾಗಿರುವ ಹಿನ್ನೆಲೆಯಲ್ಲಿ ಅದರ ಮೂಲಕ ಈ ಲೇಖನ ಮುಗಿಸಬಹುದು.

ಅನುಭವ ತೆಕ್ಕೆಗೆ ಒಗ್ಗುವುದೆಲ್ಲವು
ಅಕ್ಷರಕ್ಕಿಳಿದರೆ ಅಂದ

ಕಾವ್ಯದ ರೂಪದಿ ಭಾವವು ಹರಿದರೆ
ಹಾಡುವುದಕ್ಕೇ ಚೆಂದ
ನಿಗೂಢ ರೂಪಕಗಳೆಲ್ಲ
ಆಕೃತಿ ಪಡೆದರೆ ಸೊಗಸು
ಸಾಕಾರವು ನಿರಾಕಾರಗೊಂಡರೆ
ಬದುಕಿನ ಭಾಗ್ಯವು ಹುಲುಸು.

ತಮ್ಮ ಕಾವ್ಯ ಪಯಣದಲ್ಲಿ ಲಿಂಗಯ್ಯನವರು ಈ ದಿಕ್ಕಿನಲ್ಲಿ ಹೆಜ್ಜೆ ಹಾಕಿ ಅನೇಕ ಕವಿತೆಗಳನ್ನು ರಚಿಸಿದ್ದಾರೆ.

❍



# ೬. ಪ್ರೊ. ಡಿ. ಲಿಂಗಯ್ಯನವರ ಆಧುನಿಕ ವಚನಗಳು

–ಪ್ರೊ. ಜಿ. ಅಶ್ವತ್ಥನಾರಾಯಣ*

## ಡಿ.ಲಿಂ. ಅವರ ವ್ಯಕ್ತಿತ್ವ

ನನ್ನ ಆತ್ಮೀಯ ಮಿತ್ರರಲ್ಲಿ ಒಬ್ಬರಾಗಿದ್ದ ಡಿ. ಲಿಂಗಯ್ಯನವರು ೧೯೬೮ರಲ್ಲಿ ಬೆಂಗಳೂರು ವಿಶ್ವೇಶ್ವರಪುರದ ಕಾಲೇಜಿಗೆ ಕೆಲಸಕ್ಕೆ ಸೇರಿದಾಗ ನಾನು ದಯಾನಂದ ಕಾಲೇಜಿನಲ್ಲಿ ಅಧ್ಯಾಪಕನಾದೆ. ಚಾಮರಾಜಪೇಟೆ ನಿವಾಸಿಗಳಾಗಿ ದಿನನಿತ್ಯ ಭೇಟಿ ಮಾಡುತ್ತಾ ವಿಚಾರ ವಿನಿಮಯ ಮಾಡುತ್ತಿದ್ದ ಸ್ನೇಹಿತರಾಗಿದ್ದೆವು. ಅವರ ಆತ್ಮೀಯ ಮಿತ್ರ, ನನ್ನ ಸಹೋದ್ಯೋಗಿ ಕುಟುಂಬ ಮಿತ್ರನೆನಿಸಿದ ಜಯಚಂದ್ರ ಅವರು ಒಟ್ಟಿಗೆ ಬೆರೆತು ಚರ್ಚಿಸುತ್ತಿದ್ದೆವು ಸಾಹಿತ್ಯದ ಅನೇಕ ವಿಚಾರಗಳ ಬಗ್ಗೆ. ಇಂದು ನನಗಿಂತ ಆಪ್ತರಾಗಿದ್ದ ಜಯಚಂದ್ರ ಅವರು ಡಿ. ಲಿಂಗಯ್ಯನವರನ್ನು ಕುರಿತು ಮಾತನಾಡುತ್ತಿರುವುದರಿಂದ ನಾನು ಅವರ ಬಗ್ಗೆ ಹೆಚ್ಚಿಗೆ ಏನೂ ಹೇಳುವುದಿಲ್ಲ. ಅವರ ಬಗ್ಗೆ ಒಂದು ಮಾತನ್ನು ಮಾತ್ರ ಹೇಳಿ ನನ್ನ ಪ್ರಬಂಧ ಮಂಡನೆ ಮಾಡಲಿದ್ದೇನೆ.

ಡಿ. ಲಿಂಗಯ್ಯನವರು ಜಾನಪದ ವಿದ್ವಾಂಸ, ವಚನಕವಿ, ನವ್ಯಕವಿ, ರಮ್ಯಕವಿ, ಕನ್ನಡ ಚಳವಳಿಕಾರ, ಹಲವಾರು ಪ್ರಶಸ್ತಿಗಳ ವಿಜೇತ, ಸಂಘಸಂಸ್ಥೆಗಳ ವ್ಯವಸ್ಥಾಪಕ, ಸಂಘಟಕ, ಅಧ್ಯಕ್ಷ, ಕಾರ್ಯದರ್ಶಿ, ಕಾರ್ಯನಿರ್ವಾಹಕ, ಸಾರ್ವಜನಿಕ ಸೇವಾ ಧುರಂಧರ. ನಾಟಕ, ಜೀವನಚರಿತ್ರೆ, ಇತಿಹಾಸ, ಪ್ರಬಂಧ, ವಿಮರ್ಶೆ, ಕಥೆ ಮೊದಲಾದ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಗಮನಾರ್ಹ ಕೃತಿಗಳನ್ನು ರಚಿಸಿದ ಕನ್ನಡದ ಮುಖ್ಯ ಸಾಹಿತಿಗಳಲ್ಲಿ ಒಬ್ಬರು.

ಆದರೆ ನನಗೆ ಇವೆಲ್ಲಕ್ಕಿಂತ ಮುಖ್ಯವಾಗಿ ಅವರು ಸಚ್ಚಾರಿತ್ಯ ಸಾಹಿತಿ ಆಗಿ ಬದುಕಿ ಬಾಳಿದ ವ್ಯಕ್ತಿ, ಸದ್ಗೃಹಸ್ಥ ಸಾಹಿತಿ ಎಂಬುದು ಮುಖ್ಯ. ಈವತ್ತು ಕೆಲವರಿಗೆ ಅಥವಾ ಕುಟುಂಬದಲ್ಲಿ ಬಹುಮಂದಿಗೆ ಜೀವನದಲ್ಲಿ ಒಳ್ಳೆಯ, ಉಪಕಾರಿ, ಸಾತ್ತ್ವಿಕ ಸದ್ಗುಣ ವ್ಯಕ್ತಿಗಳಾಗಿ ಬಾಳಿರುವ ಸಾಹಿತಿಗಳು ಅನೇಕರಿದ್ದಾರೆ. ಆದರೆ ಎಂ.ಆರ್.ಶ್ರೀ ವಿ.ಸೀ ಅವರಂತೆ (ನಾನು ಕಂಡಂತೆ) ಸಾತ್ತ್ವಿಕ ವ್ಯಕ್ತಿಗಳಾಗಿ ಬದುಕಿ ಬಾಳಿದ ಸಾಹಿತ್ಯಜೀವಿ ಡಿ. ಲಿಂಗಯ್ಯನವರು.

---

* ವಿಳಾಸ : # ೯೫, ೩೪ 'ಬಿ' ಕ್ರಾಸ್, ೧೬ನೇ ಮುಖ್ಯರಸ್ತೆ, ೪ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು–೫೬೦೦೪೧. ದೂರವಾಣಿ : ೦೮೦–೨೬೬೩೭೭೮೩.

'ಸುಮಾರು ಅರ್ಧ ಶತಮಾನದಷ್ಟು ನನ್ನ ಅವರ ಒಡನಾಟ, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಗಲೂ ರಾತ್ರಿ ಒಟ್ಟಿಗೆ ಕಾರ್ಯದರ್ಶಿಗಳಾಗಿ ದುಡಿದಿದ್ದೇವೆ. ಯಾವುದೇ ಪುಸ್ತಕದ ವಿಚಾರ, ಸಾಹಿತ್ಯ ಚರ್ಚೆ ಇದ್ದಾಗ ನನ್ನೊಡನೆ 'ನೀವೇನು ಹೇಳುತ್ತೀರಿ ಈ ಬಗ್ಗೆ' ಎಂದು ಕೇಳಿದ್ದಾರೆ. ಅವರು ಕೇಳಿದಾಗಲೆಲ್ಲ ನನ್ನ ಬಳಿ ಇದ್ದ ಪುಸ್ತಕಗಳನ್ನು ಕೊಟ್ಟಿದ್ದೇನೆ. ಅದು ಮುಖ್ಯವಲ್ಲ. ಹಾಗೆ ಕೊಟ್ಟ ಪುಸ್ತಕಗಳನ್ನೆಲ್ಲ ಮರೆಯದೆ ಹಿಂತಿರುಗಿಸಿದ್ದಾರೆ. ಎಸ್.ಕೆ. ಕರೀಂಖಾನ್‌ರ ಜನಪದ ಗೀತೆಗಳು ಪುಸ್ತಕ ಒಂದನ್ನು ಅವರ ಬಗ್ಗೆ ಅವರು ಬರೆದ ಪುಸ್ತಕದೊಡನೆ ಹಿಂದಿರುಗಿಸುವೆ ಎಂದಿದ್ದರು. ಬಾಕಿ ಉಳಿಯಿತು. ತಮ್ಮ ಪ್ರತಿ ಪುಸ್ತಕವನ್ನು ಕೊಟ್ಟು ಓದಿ ಹೇಳಿ ನಿಮಗನ್ನಿಸಿದ್ದನ್ನು ಎನ್ನುತ್ತಿದ್ದರು. ಓದಿ ಆ ಬಗ್ಗೆ ನಿರ್ದಾಕ್ಷಿಣ್ಯವಾಗಿ ಒದರಿದ್ದೇನೆ. ಈ ಮಾತುಗಳನ್ನು ಹೇಳುತ್ತಿರುವ ಉದ್ದೇಶ ಇಷ್ಟೆ. ಈವತ್ತು ಅನೇಕ ಸಾಹಿತಿಗಳಲ್ಲಿ ಈ ಬಗೆಯ ಸದ್ಗುಣ ಮಧುರ ಬಾಂಧವ್ಯ ನಾನು ಕಂಡಿಲ್ಲ. ಅಷ್ಟೇ ಅಲ್ಲ ಎಂಥ ಸಂದರ್ಭದಲ್ಲೂ ದನಿ ಎತ್ತಿ ಆವೇಶದಲ್ಲಿ ಮಾತಾಡಿಲ್ಲ. ಅವರಿಗೆ ಕೋಪ ಬಂದರೂ ದನಿಯಲ್ಲಿ ಕೂಗು, ಕಿರುಚಾಟ ಎಂದೂ ಆಗಲಿಲ್ಲ. ಗಟ್ಟಿದನಿ ಆದರೂ ಎಂದು ಆರ್ಭಟದನಿ ಆಗಲೇ ಇಲ್ಲ. ಯಾವುದೇ ಸಭೆ ಇರಲಿ ಮಾನಸಿಕವಾಗಿ ಸಾಹಿತ್ಯಿಕವಾಗಿ ಪೂರ್ವಭಾವಿ ಸಿದ್ಧತೆ ಮಾಡಿಕೊಂಡು ಸಮಯೋಚಿತವಾಗಿ ಮಾತನಾಡುತ್ತಿದ್ದರು. ಮಿತಾಹಾರಿ ಸರ್. ಎಂ. ವಿಶ್ವೇಶ್ವರಯ್ಯನವರ ಹಾಗೆ ಸದಾ ಸೂಟುಧಾರಿ, ಪೇಟ ಇಲ್ಲ ವೇಷಭೂಷಣದಲ್ಲಿ. ಚಳಿ ಮಳೆ ಗಾಳಿ ಬೇಕಾದ್ದು ಇರಲಿ ಡಿ. ಲಿಂಗಯ್ಯನವರು ಸದಾ ಸೂಟುಧಾರಿ. ಯಾವುದೇ ಕಾರ್ಯಕ್ರಮಕ್ಕೂ ಅವರು ಸೂಟಬಲ್ ವ್ಯಕ್ತಿ, ಅವರೆಡು ವೇಷ ಬದಲಾಯಿಸಿದವರಲ್ಲಿ ಮಾತು ಬದಲಾಯಿಸದವರಲ್ಲ. ಇಂಥವರನ್ನು ನಾನು ಕಳೆದುಕೊಂಡಿದ್ದು ನನ್ನ ದುಃಖವಾಗಿದೆ.

ಬಿ.ಎ.ಶ್ರೀ. ಸಂಸ್ಥೆಯಲ್ಲಿ ಅವರು ಅಚ್ಚುಕಟ್ಟಾಗಿ ಕೆಲಸ ಮಾಡುತ್ತಿದ್ದರು. ಎಲ್ಲರೊಡನೆ ಸಮಾಲೋಚನೆ ಮಾಡುತ್ತಿದ್ದರು. ನಿಧನರಾದುದು ಬುಧವಾರ. ಸೋಮವಾರದಂದು ಸಂಜೆ ಸುಮಾರು ಅರ್ಧ ಗಂಟೆ ನನ್ನೊಡನೆ ಚರ್ಚಿಸುತ್ತಿದ್ದಾಗ ಅವರು ಹೇಳಿದ ಮಾತು ಸ್ಮರಣೀಯವಾಗಿದೆ.

"ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಸಂಶೋಧನ ಸಂಸ್ಥೆ, ಸಂಶೋಧನೆಗೆ ಒತ್ತು ಇರಬೇಕು. ಕಥೆ, ಕಾದಂಬರಿ, ನಾಟಕ, ವಿಮರ್ಶೆ ಮೊದಲಾದವಕ್ಕೆ ಸಾಕಷ್ಟು ಬರೆಯಲು ಜನರಿದ್ದಾರೆ. ಕಾರ್ಯಕ್ರಮಗಳಿಗೆ ಸಂಸ್ಥೆಗಳಿವೆ. ಆದರೆ ಗ್ರಂಥ ಸಂಪಾದನೆ, ಹಸ್ತಪ್ರತಿ ಸಂರಕ್ಷಣೆ, ಅಭ್ಯಾಸ, ಹಳಗನ್ನಡ ಕಲಿಕೆ, ಅಲಂಕಾರ, ಛಂದಸ್ಸು, ವ್ಯಾಕರಣ, ಜಾನಪದ ಇಂಥ ಕ್ಷೇತ್ರಗಳಲ್ಲಿ ವಿದ್ವತ್ಪೂರ್ಣವಾಗಿ ಈ ಸಂಸ್ಥೆ ಕೆಲಸ ಮಾಡಬೇಕು, ಈಗ ನೋಡಿ, ಚಿದಾನಂದಮೂರ್ತಿ, ವೆಂಕಟಾಚಲಶಾಸ್ತ್ರೀ, ಎಲ್.ಎಸ್. ಶೇಷಗಿರಿರಾಯರು ಸಮಿತಿ ಸದಸ್ಯತ್ವಕ್ಕೆ ರಾಜೀನಾಮೆ ಇತ್ತಿದ್ದಾರೆ. ಅವರ ಬದಲು ಅವರಂಥವರನ್ನು ಎಲ್ಲಿಂದ ತರೋಣ? ಇದೇ ದೊಡ್ಡ ಸಮಸ್ಯೆಯಾಗಿದೆ. ಹಸ್ತಪ್ರತಿ ಕ್ಯಾಟಲಾಗು ತರುವುದು ಯಾವಾಗ ? ಇತ್ಯಾದಿ ಮಾತಾಡಿದರು. ಬಿ.ಎಂ.ಶ್ರೀ ವಿದ್ವತ್ ಪರಿಪಾಲನೆಗೆ ಶುದ್ಧವಾಗಿ ಮೀಸಲಾದ ಸಂಸ್ಥೆ ಆಗಬೇಕು; ಅದಕ್ಕೆ ಅನುಸಾರವಾಗಿ ಚಟುವಟಿಕೆಗಳು ನಡೆಯಬೇಕು



ಎಂಬುದು ಅವರ ಗುರಿ ಆಗಿತ್ತು. ಇದೇ ಅವರು ನನ್ನೊಡನೆ ಆಡಿದ ಕೊನೆಯ ಮಾತಾಯಿತು. ಮತ್ತೆ ಅವರ ಭೇಟಿ ಆದುದು ಅಂತಿಮ ದರ್ಶನದಲ್ಲಿ ೧೨-೯-೨೦೧೨ರಲ್ಲಿ.

**ಅರ್ಥಪೂರ್ಣ ನಾಮಕರಣ :** ಡಿ. ಲಿಂಗಯ್ಯನವರು ತಮ್ಮ ವಚನ ಸಂಕಲನಗಳಿಗೆ ಹೆಸರು ಇಟ್ಟಿರುವುದರಲ್ಲಿ ಸ್ವಾರಸ್ಯವಿದೆಯೆಂದು ತಿಳಿಸುತ್ತಾರೆ. 'ವಚನ ರಚನ'ವೆಂದು ಮೊದಲನೆಯ ವಚನ ಸಂಕಲನಕ್ಕೆ ಇಟ್ಟಿರಲು ಕಾರಣವನ್ನು ಹೀಗೆ ತಿಳಿಸಿದ್ದಾರೆ (ಪುಟ ix) "ಶಿವಶರಣರದು ನಿಜವಾದ ವಚನ ; ನಮ್ಮದು ಕೇವಲ ರಚನ, ಅವರದು ಸಹಜ ಅಭಿವ್ಯಕ್ತಿ, ನಮ್ಮದು ಬೌದ್ಧಿಕ ಕಸರತ್ತು... ಈ ಹಿನ್ನೆಲೆಯಲ್ಲಿ ಈ ಸಂಕಲನಕ್ಕೆ ವಚನ ರಚನ" ಎಂದು ಹೆಸರಿಸಿದೆ.

ಎರಡನೆಯ ವಚನ ಸಂಕಲನಕ್ಕೆ 'ವಚನ ದವನ' ಎಂದು ಹೆಸರಿಟ್ಟಿದ್ದಾರೆ. ಏಕೆಂದರೆ "ಚೈತ್ರ ಶುದ್ಧ ಪೂರ್ಣಿಮೆಗೆ ದವನ ಪೂರ್ಣಿಮೆ ಎನ್ನುತ್ತಾರೆ. ದೇವರಿಗೆ ದವನ ಅರ್ಪಿಸುವುದು (ಬಾಳೆಹಣ್ಣು ಜತೆಗೆ) ಶ್ರೇಷ್ಠ ಕಾರ್ಯವೆಂದು ಹಳ್ಳಿಗರು ಭಾವಿಸುತ್ತಾರೆ. ದೇವರಿಗೂ ಮನುಷ್ಯರಿಗೂ ಪ್ರಿಯವಾದ ಪರಿಮಳಯುಕ್ತ ದವನ ಕವಿಗಳಿಗೂ ಪ್ರಿಯವಾಗುವುದರಲ್ಲಿ ಆಶ್ಚರ್ಯವಿಲ್ಲ. ಹಳ್ಳಿಗರು ಹಣ್ಣು ದವನವನ್ನು ದೇವರಿಗೆ ಅರ್ಪಿಸಿದರೆ ನಾನು ವಚನ ದವನವನ್ನು ಸರ್ವೇಶ್ವರನಿಗೆ ಅರ್ಪಿಸಿದ್ದೇನೆ. ಅದಕ್ಕಾಗಿಯೇ ಈ ಸಂಕಲನಕ್ಕೆ 'ವಚನ ದವನ' ಎಂದು ಹೆಸರಿಟ್ಟಿದೆ. ಸರ್ವೇಶ್ವರನ ಅಡಿದಾವರೆಗಳಲ್ಲೇ ಗಿರಕಿ ಹೊಡೆಯುವ ಈ ವಚನದ ಸಂಕಲನಕ್ಕೆ ಈ ಶೀರ್ಷಿಕೆ ಸೂಕ್ತವಾಗಿದೆ ಎಂದು ಭಾವಿಸಿದ್ದೇನೆ.
(ವಚನ ದವನ, ಪುಟ ೪)

'ವಚನ ಹೊಂಬಾಳೆ' ಎಂದು ಏಕೆ ಹೆಸರಿಟ್ಟಿದೆ ಎಂಬುದಕ್ಕೆ ಡಿ. ಲಿಂಗಯ್ಯನವರು ನೀಡಿದ ವಿವರಣೆ ಹೀಗಿದೆ:

"ತೆಂಗಿನ ಹೊಂಬಾಳೆ ಶ್ರೇಷ್ಠ, ಅಡಿಕೆ ಹೊಂಬಾಳೆ ಸರ್ವಶ್ರೇಷ್ಠ, ಹೊಂಬಾಳೆಯ ಬಂಗಾರದ ಬಣ್ಣ, ಈಚುಕಾಳಿನ ಕಲಾತ್ಮಕ ವಿನ್ಯಾಸ ಅನುಪಮ, ಮಾದಕ ಸುವಾಸನೆ ಅವರ್ಣನೀಯ, ಹೊಂಬಾಳೆಯನ್ನು ದೇವರ ಅಲಂಕಾರಕ್ಕೆ, ಕಳಶ ಪೂಜೆಗೆ, ಭೂತಾರಾಧನೆಗೆ ವಿಶೇಷವಾಗಿ ಬಳಸುವರು. ಹೂವು ಹೊಂಬಾಳೆಯಿಂದ ಅಲಂಕಾರ ಮಾಡಿದ ದೇವರ ಪೂಜೆಯ ಮೆರವಣಿಗೆಯನ್ನು ನೋಡುವುದಕ್ಕೆ ಚಂದ. ಪೂಜೆ ಹೊತ್ತ ಗುಡ್ಡ, ವಾದ್ಯಗಳ ಗತ್ತಿಗೆ ಕುಣಿಯುವಾಗ ಕಾಣುವ ಹೊಂಬಾಳೆಯ ಕುಲುಕು ನಯನ ಮನೋಹರ. ನನ್ನ ವಚನಗಳ ಗೊಂಚಲಿಗೆ ಹೊಂಬಾಳೆಯನ್ನು ಸಮೀಕರಿಸಿ ರೂಪಕವಾಗಿ 'ವಚನ ಹೊಂಬಾಳೆ' ಎಂದು ಗ್ರಂಥಕ್ಕೆ ಹೆಸರಿಟ್ಟಿದೆ.
(ವಚನ ಹೊಂಬಾಳೆ, ಪುಟ xiv)

ಡಿ. ಲಿಂಗಯ್ಯನವರು ಮೂಲತಃ ಗ್ರಾಮೀಣ ಬದುಕಿನಿಂದ ಬಂದವರು; ನಗರವಾಸಿಗಳಾದವರು. ಅವರ ಬಾಲ್ಯವೆಲ್ಲ ಹಳ್ಳಿಯ ಬದುಕೇ ಆಗಿದೆ. ಜಾನಪದ

ಅವರ ಜೀವನ ಜೀವಾಳ. ಅವರು ಕನ್ನಡಕ್ಕೆ ಕೊಟ್ಟ ವಿಶೇಷ ಕೊಡುಗೆಯು ಜಾನಪದ ಸಾಹಿತ್ಯವೇ ಹಾಗಾಗಿ ಈ ಎರಡು ವಚನ ಸಂಕಲನಗಳಿಗೆ ದವನ ಹೊಂಬಾಳೆ ಹೆಸರುಗಳನ್ನು ಇಟ್ಟಿರುವುದು ಔಚಿತ್ಯಪೂರ್ಣವಾಗಿದೆ, ವಿಶಿಷ್ಟವಾಗಿದೆ.

**ಪೀಠಿಕೆ : ಡಿ. ಲಿಂಗಯ್ಯನವರ ಆಧುನಿಕ ವಚನಗಳು**

ಈ ಪ್ರಬಂಧ ಸೀಮಿತ ವ್ಯಾಪ್ತಿ ಉಳ್ಳದ್ದು. ಕೇವಲ ಡಿ.ಲಿಂ. ಅವರ ಆಧುನಿಕ ವಚನಗಳನ್ನು ಕುರಿತು ನಾಲ್ಕು ಮಾತಷ್ಟೆ. ಕನ್ನಡದ ಇತರ ಆಧುನಿಕ ವಚನಕಾರರ ವಚನಗಳಿಗೂ ಡಿ. ಲಿಂ. ಅವರ ವಚನಗಳಿಗೂ ಇರುವ ವ್ಯತ್ಯಾಸ, ಗುಣಮೌಲ್ಯ, ವೈಶಿಷ್ಟ್ಯಗಳ ತೌಲನಿಕ ಅಧ್ಯಯನ ಪ್ರತ್ಯೇಕ ಲೇಖನದ ವಿಷಯವಾಗಿದೆ ಮತ್ತು ಆಧುನಿಕ ವಚನಗಳ ಛಂದಸ್ಸು, ಕಾವ್ಯಮೀಮಾಂಸೆ, ವಿಷಯ ವಿಸ್ತಾರ, ಭಾಷೆ, ಶೈಲಿ ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಿಲ್ಲ. ಡಿ. ಲಿಂ. ಅವರ ವಚನಗಳಲ್ಲಿ ಕಂಡುಬರುವ ವೈಶಿಷ್ಟ್ಯಗಳನ್ನು ಕುರಿತಷ್ಟೇ ನಾಲ್ಕು ಮಾತು ಹೇಳಿದ್ದೇನೆ. ಇದು ಅವರ ವಚನಗಳ ಪರಿಚಯಾತ್ಮಕ ಬರಹ.

ಯಾರಾದರೂ ಡಿ. ಲಿಂಗಯ್ಯನವರ ಆಧುನಿಕ ವಚನಗಳನ್ನು ಮತ್ತು ಇತರ ಆಧುನಿಕ ವಚನಕಾರರ ವಚನಗಳನ್ನು ಕುರಿತು ಎಂ.ಫಿಲ್‌ಗಾಗಿ ಸಂಶೋಧನ ಗ್ರಂಥ ರಚಿಸುವಷ್ಟು ವಿಸ್ತಾರವಾದ ವೈವಿಧ್ಯಮಯ ವಚನಗಳು ಅವರ ಮೂರು ವಚನ ಸಂಕಲನಗಳಲ್ಲಿ ಸಂಕಲಿತವಾಗಿದೆ.

ಕನ್ನಡದ ಪ್ರಸಿದ್ಧ ಕಾದಂಬರಿಕಾರರಾದ ಕೃಷ್ಣಮೂರ್ತಿ ಪುರಾಣಿಕರು ದಿನ ಬೆಳಗ್ಗೆ ಎದ್ದು, ಚಾ ಕುಡಿದು, ಕಾದಂಬರಿ ರಚನೆ ಮಾಡುತ್ತಾ ಅನಂತರ ತಮ್ಮ ನಿತ್ಯ ವೃತ್ತಿಯಲ್ಲಿ ತೊಡಗಿ ಶಾಲೆಗೆ ತೆರಳುತ್ತಿದ್ದರಂತೆ. ಅವರು ಅಧ್ಯಾಪಕರಾಗಿದ್ದರು. ಹಾಗೇ ಡಿ. ಲಿಂಗಯ್ಯನವರಿಗೆ ವಚನ ರಚನೆ, ನಿತ್ಯವೃತ್ತಿ ಆಗಿತ್ತೆಂದು ತೋರುತ್ತದೆ. ಪತ್ರಿಕೆ ಓದುವಾಗ ಸುದ್ದಿ ಓದಿದಾಗ ಬರೆದಿದ್ದಾರೆ. ಯಾರೊಡನೆ ಮಾತನಾಡಿದಾಗ ಅನಿಸಿಕೆಯನ್ನು ವಚನ ಮಾಡಿದ್ದಾರೆ. ಕಾರ್ಯಕ್ರಮಗಳಿಗೆ ಭಾಗವಹಿಸಿದಾಗ ವಚನ ರಚನೆ ಮಾಡಿದ್ದಾರೆ. ಪುಸ್ತಕಗಳನ್ನು ಓದಿದಾಗ ವಚನ ರಚನೆ ಮಾಡಿದ್ದಾರೆ. ಹೀಗೆ ಅವರಿಗೆ ವಚನ ರಚನೆ ಸತತ ಕಾಯಕವಾಗಿದ್ದು ೩೦೦೦ಕ್ಕೂ ಮಿಕ್ಕು ವಚನಗಳನ್ನು ಸಮಯಾನುಸಾರ ಬರೆದಿದ್ದಾರೆ. ಆದ್ದರಿಂದ ವಿಷಯವ್ಯಾಪ್ತಿ ಅತಿ ವಿಶಾಲವಾಗಿದೆ.

**ಡಿ.ಲಿಂ. ರಚಿಸಿದ ವಚನಗಳ ಸಂಖ್ಯೆ**

ಆಧುನಿಕ ವಚನಕಾರರಲ್ಲಿ ಸಾವಿರಾರು ವಚನಗಳನ್ನು ರಚಿಸಿದವರು ಕೈ ಬೆರಳಿನಷ್ಟು ಜನ. ಅವರಲ್ಲಿ ಡಿ. ಲಿಂಗಯ್ಯನವರು ಒಬ್ಬರು. ಸಂಖ್ಯಾನುಗುಣದಷ್ಟೆ ವಿಷಯ ವೈವಿಧ್ಯದಿಂದ ಸಾಕಷ್ಟು ವಚನಗಳನ್ನು ರಚಿಸಿದ್ದಾರೆ.

ಅವರು ೩ ವಚನ ಸಂಕಲನಗಳನ್ನು ಅವರೇ ಪ್ರಕಟಿಸಿದ್ದಾರೆ. ವಚನರಚನ ೧೯೯೭, ವಚನ ದವನ ೨೦೦೦, ವಚನ ಹೊಂಬಾಳೆ ೨೦೦೭, ತಮ್ಮ ವಚನ ರಚನೆ ಪ್ರಕಟಣೆಗಳ ಬಗ್ಗೆ ಅವರೇ ಹೇಳಿಕೊಂಡಿರುವ ಮಾತುಗಳಿವು :



“ನಾನು ನನ್ನ ಇತರ ಸಾಹಿತ್ಯ ಪ್ರಕಾರಗಳ ಜೊತೆಗೆ ‘ಸರ್ವೇಶ್ವರ’ ಅಂಕಿತದಲ್ಲಿ ವಚನಗಳನ್ನು ಬರೆದಿದ್ದೇನೆ. ನನ್ನ ಅಂತರಂಗದ ಹಾಡು ಕವನ ಸಂಗ್ರಹದಲ್ಲಿ (೧೯೭೦) ಐದು ವಚನಗಳು ಪ್ರಕಟವಾಗುತ್ತಿವೆ. ಅವುಗಳನ್ನು ಒಳಗೊಂಡಂತೆ ೧೦೫ ವಚನಗಳು ಕಲಬೆರಕೆ ಕವನ ಸಂಕಲನದಲ್ಲಿ (೧೯೭೮) ಪ್ರಕಟವಾಗಿದೆ. ವಚನ ರಚನೆಯಲ್ಲಿ ೪೫೦ ವಚನಗಳು ಪ್ರಕಟವಾಗಿದೆ. (ವಚನ ರಚನ, ಪುಟ ix).

‘ವಚನ ದವನ’ ಡಿ.ಲಿಂ. ಅವರ ಎರಡನೇ ವಚನ ಸಂಕಲನ, ೬೦೬ ವಚನಗಳಿವೆ. ೧೯೯೭ ರಿಂದ ೧೯೯೮ರಲ್ಲಿ ಬರೆದ ವಚನಗಳು ಇವು.

ವಚನ ಹೊಂಬಾಳೆಯಲ್ಲಿ ೧೦೨೫ ವಚನಗಳಿವೆ.

೧೯೬೭ರಲ್ಲಿ ವಚನಗಳನ್ನು ಬರೆಯಲು ಪ್ರಾರಂಭಿಸಿದೆ, ಸುಮಾರು ೪೦ ವರುಷಗಳ ಅವಧಿಯಲ್ಲಿ (೨೦೦೭ರ ವರೆಗೆ) ೩೦೦೦ ವಚನಗಳನ್ನು ಬರೆದಿದ್ದೇನೆ. ಇವುಗಳಲ್ಲಿ ಸುಮಾರು ೨೫೦೦ ವಚನಗಳನ್ನು ಪ್ರಕಟಿಸಿದ್ದೇನೆ. ಈವರೆಗೆ ವಚನ ರಚನೆಯ ಕ್ರಿಯೆ ನಿರಾತಂಕವಾಗಿ ಸಾಗಿದೆ. (ವಚನ ಹೊಂಬಾಳೆ, ಪುಟ xiii).

**ಆಧುನಿಕ ವಚನಗಳ ಲಕ್ಷಣಗಳು**

ಡಿ. ಲಿಂಗಯ್ಯನವರು ಆಧುನಿಕ ವಚನಗಳಿಗೂ ಶಿವಶರಣರ ವಚನಗಳಿಗೂ ಇರುವ ವ್ಯತ್ಯಾಸವನ್ನು ಅರ್ಥಗರ್ಭಿತವಾಗಿ ಹೇಳಿದ್ದಾರೆ.

“ಶಿವಶರಣರದು ನಿಜವಾದ ‘ವಚನ’; ನಮ್ಮದು ಕೇವಲ ‘ರಚನ’; ಅವರದು ಆಧ್ಯಾತ್ಮಿಕ ಅನುಭಾವದ ನೆಲೆ, ‘ನಮ್ಮದು ಕೇವಲ ಲೋಕಾನುಭವ ಅಥವಾ ಆಧುನಿಕ ಅನುಭಾವದ ಸೆಲೆ’. ಅವರ ಅನುಭಾವಕ್ಕೂ ನಮ್ಮ ಅನುಭವಕ್ಕೂ ವ್ಯತ್ಯಾಸವಿದೆ. ಅವರದು ಸಹಜ ಅಭಿವ್ಯಕ್ತಿ, ನಮ್ಮದು ಬೌದ್ಧಿಕ ಕಸರತ್ತು, ಅವರದು ವಿರಕ್ತಿ ನಮ್ಮದು ಪ್ರವೃತ್ತಿ’

(ವಚನ ರಚನ, ಪುಟ ix)

ಶಿವಶರಣರಿಗಿಂತಲೂ ಆಧುನಿಕ ವಚನಗಳಲ್ಲಿ ವಸ್ತು ವೈವಿಧ್ಯ ಅಧಿಕವಾಗಿದೆ. ಜಗತ್ತಿನ ಹಾಗೂ ಬದುಕಿನ ಏನೆಲ್ಲ ವಿದ್ಯಮಾನಗಳನ್ನು ಅಭಿವ್ಯಕ್ತಿಸಿರುವುದರಲ್ಲಿ ಆಧುನಿಕ ವಚನಗಳು ತೊಡಗಿಕೊಳ್ಳುತ್ತವೆ. ಆಧುನಿಕ ವಚನಗಳಲ್ಲಿ ಲೋಕಜ್ಞಾನದ ವೈಶಾಲ್ಯವಿದೆ, ವೈಚಾರಿಕತೆಯಿದೆ, ವೈಜ್ಞಾನಿಕತೆಯಿದೆ.

‘ಆಧುನಿಕ ವಚನಗಳಲ್ಲಿ ಚುಟುಕು ಕವನ, ಭಾವಗೀತೆ, ಒಗಟು, ಮುಕ್ತಕ, ತತ್ವಪದಗಳ ಛಾಯೆಯೂ ಇಲ್ಲದಿಲ್ಲ. ಚುಟುಕ ಎನ್ನಬಹುದಾದ ರಚನೆಗಳು ಅಂತ್ಯದಲ್ಲಿ ಅಂಕಿತ ಸೇರಿಸಿಕೊಂಡು ವಚನವಾಗಿರುವ ಸಂಭವವಿದೆ. ಅಂಕಿತವನ್ನು ತೆಗೆದುಬಿಟ್ಟರೆ ಕೆಲವು ನಾದಮಯ ಭಾವಗೀತೆಗಳಂತಿವೆ. ಸಂಬೋಧನೆಯ ರೆಕ್ಕೆ ಪುಕ್ಕಗಳನ್ನು ಕಳಚಿಬಿಟ್ಟರೆ ಕೆಲವಂತೂ ಗದ್ಯದ ತುಣುಕುಗಳೇ. ಹಲವು ಸಾರಿ ಹೇಳಿಕೆಗಳ ಮೆರವಣಿಗೆಯೇ

ನಡೆದಿರುತ್ತದೆ. ವೈಚಾರಿಕತೆಯದು ಸಿಂಹಪಾಲು. ಅಲ್ಲಲ್ಲಿ ಕಾವ್ಯದ ಮಿಂಚಿನ ಸಿಂಚನ ಹೊಳಪಿಗೂ ಕೊರತೆಯಿಲ್ಲ. ವಚನ ಬಹಿರಂಗದಲ್ಲಿ ವಾಮನನಂತಿದ್ದರೂ ಅಂತರಂಗದಲ್ಲಿ ತ್ರಿವಿಕ್ರಮವಾಗಿರುತ್ತದೆ" (ವಚನ ರಚನ, ಪುಟ viii) ಈ ಮಾತುಗಳು ಲಿಂಗಯ್ಯನವರ ವಚನಗಳಿಗೇ ಹೆಚ್ಚಾಗಿ ಅನ್ವಯವಾಗುತ್ತದೆ.

**ಆಧುನಿಕ ವಚನ ರಚನಾ ಸ್ವರೂಪ :** "ಕನ್ನಡದಲ್ಲಿ ೩೦೦ಕ್ಕೂ ಹೆಚ್ಚು ಮಂದಿ ಆಧುನಿಕ ವಚನಕಾರರಿದ್ದಾರೆ. ಪ್ರಾಚೀನ ವಚನಗಳ ದುಪ್ಪಟ್ಟು ವಚನಗಳು ರಚನೆಯಾಗಿವೆ. ಸಮಾಜದ ಎಲ್ಲಾ ವರ್ಗದವರೂ ಆಧುನಿಕ ವಚನ ರಚನೆಯಲ್ಲಿ ತೊಡಗಿರುವುದು ವಿಶೇಷ. ೨೦ನೇ ಶತಮಾನದಲ್ಲಿ ಸಮೃದ್ಧವಾಗಿ ವಚನಸೃಷ್ಟಿಯಾಗಿ ೨೧ನೇ ಶತಮಾನದಲ್ಲೂ ಮುಂದುವರೆದಿದೆ. ವಚನ ಸಾಹಿತ್ಯ ಪ್ರಚಾರಕ್ಕೆ, ಪ್ರಸಾರಕ್ಕೆ ಸಾಹಿತ್ಯಿಕ, ಸಾಂಸ್ಕೃತಿಕ ಸಂಸ್ಥೆಗಳೂ ಹುಟ್ಟಿಕೊಂಡಿವೆ' ಈ ಮಾತುಗಳು ದಾಸಸಾಹಿತ್ಯದ ಆಧುನಿಕ ಕೀರ್ತನೆಗಳಿಗೂ ಅನ್ವಯಿಸುತ್ತದೆ.

"ಅರ್ವಾಚೀನ ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ದೇಶೀಯ ಹಾಗೂ ವಿದೇಶೀಯ ಪೂರ್ವ ಸಾಹಿತ್ಯವೇ ಹಿಂಬೆಳಕು. "ಆಧುನಿಕ ವಚನ ಸಾಹಿತ್ಯಕ್ಕೂ ಅಷ್ಟೆ. ಆಧುನಿಕ ವಚನ ಸಾಹಿತ್ಯಕ್ಕೆ ಪಾಶ್ಚಾತ್ಯ ಮುಕ್ತ ಛಂದಸ್ಸಿನ ಕಾವ್ಯ ರಚನೆ ಪ್ರೇರಣೆಯಾದರೂ ಕ್ರಮೇಣ ಆದ್ಯ ವಚನಕಾರರ ವಚನಗಳ ಪ್ರಭಾವವನ್ನು ತಪ್ಪಿಸಿಕೊಳ್ಳಲು ಆಗಲಿಲ್ಲ". ಎರಡೂ ಪ್ರೇರಣೆ ಪ್ರಭಾವಗಳಿಂದ ಬಿಡುಗಡೆ ಪಡೆದ ಸೋಪಜ್ಞತೆ ಸ್ಥಾಪಿಸುವಲ್ಲಿ ಆಧುನಿಕ ವಚನ ಯಶಸ್ವಿಯಾಗುತ್ತದೆ.

ವಚನ ವಾಚನವನ್ನು ಕುರಿತು ಡಿ.ಲಿಂ. ಹೇಳಿರುವ ಮಾತುಗಳು ಗಮನಾರ್ಹವಾಗಿವೆ.

"ವಚನಗಳನ್ನು ಒಂದೇ ಉಸುರಿಗೆ ಆತುರ ಆತುರವಾಗಿ ಓದಬಾರದು. ಮಕ್ಕಳು ಪೆಪ್ಪರಮೆಂಟನ್ನು ನಿಧಾನವಾಗಿ ನೊಣೆದು, ಚೀಪುವಂತೆ, ಮಾವಿನಹಣ್ಣನ್ನು ತಿಂದು ಮುಗಿಸಿದರೂ ಓಟೆಯನ್ನು ಚೀಪುವಂತೆ, ದಾಳಿಂಬೆ ಬೀಜವನ್ನು ಹಲ್ಲಿನಿಂದ ನುರಿದು ನಿಧಾನವಾಗಿ ರಸ ಹೀರಿ ಸಂತೋಷಿಸುವಂತೆ, ವಚನಗಳನ್ನು ನಿಧಾನವಾಗಿ ಓದಿ, ಮೌನವಾಗಿ ಆಸ್ವಾದಿಸಿ ಸಂತೋಷಿಸಬೇಕು. ವಚನದ ಓದು ಸಹೃದಯನ ತಾಳ್ಮೆಯನ್ನು ಬಯಸುತ್ತದೆ. ವಚನದ್ದು ಅಂತರಂಗ ಸಂವಾದ".

ಈ ಮಾತುಗಳು ಶಿವಶರಣರ ವಚನಗಳಿಗೆ ಅನ್ವಯಿಸುವ ಹಾಗೆ ಆಧುನಿಕ ವಚನಗಳಿಗೆ ಹೆಚ್ಚಾಗಿ ಅನ್ವಯಿಸುವುದಿಲ್ಲ. ನೂರಾರು ಜೊಳ್ಳು ವಚನಗಳು ಆಧುನಿಕ ವಚನಗಳಲ್ಲಿವೆ. ಡಿ. ಲಿಂಗಯ್ಯನವರ ೩೦೦೦ಕ್ಕೂ ಹೆಚ್ಚಿನ ವಚನಗಳಲ್ಲಿ ಹಲವು ನೂರು ವಚನಗಳಿಗೆ ಮೇಲೆ ಹೇಳಿದ ಲಕ್ಷಣಗಳು ಅನ್ವಯಿಸುವುದಿಲ್ಲ.

ಉದಾಹರಣಗೆ :
ಗಳಗಳ ಎಂದರೆ ಗಂಟೆ, ಮಣಮಣ ಎಂದರೆ ಮಂತ್ರ
ಜುಳುಜುಳು ಎಂದರೆ ನೀರು, ಬಣಬಣ ಎಂದರೆ ಬೋರು
ಅನುಕರಣೆಯ ಅನುರಣನ ಬದುಕು ಸರ್ವೇಶ್ವರ.



ಇಲ್ಲಿ ಈ ವಚನದ ಪೆಪ್ಪರ್‌ಮೆಂಟನ್ನು ನಿಧಾನವಾಗಿ ನೊಣೆದು ಚೀಪುವಂತೆ ಅಲ್ಲ, ದಾಳಿಂಬೆ ಬೀಜವನ್ನು ಹಲ್ಲಿನಿಂದ ನುರಿದು ನಿಧಾನವಾಗಿ ರಸ ಹೀರಿ ಸಂತೋಷಿಸು ವಂಥ ವಚನ ಇದಲ್ಲ. ಇಂಥಾ ನೀರಸ ವಚನಗಳು ಇನ್ನೂ ಎಷ್ಟೋ ಇವೆ. ಡಿ. ಲಿಂಗಯ್ಯನವರ ಆಧುನಿಕ ವಚನಗಳು ಹೂವಿನ ಗಿಡ ಅಲ್ಲ ಹಣ್ಣಿನ ಮರ, ಹೂವಿನ ಗಿಡದಲ್ಲಿ ಗೊಂಚಲು ಗೊಂಚಲು ಹೂ ಬಿಟ್ಟು ಕೆಲವೊಮ್ಮೆ ಎಲೆಗಳಿಗಿಂತ ಹೂಗಳೇ ಹೆಚ್ಚಾಗಿರುತ್ತವೆ. ಹಣ್ಣಿನ ಮರಗಳಲ್ಲಿ ಎಷ್ಟೇ ಹಣ್ಣು ಬಿಟ್ಟರೂ ಎಲೆಗಳೇ ಮರದಲ್ಲಿ ಹೆಚ್ಚಿರುತ್ತವೆ. ಡಿ. ಲಿಂಗಯ್ಯನವರ ಆಧುನಿಕ ವಚನಗಳು ಹಣ್ಣಿನ ಮರದಂತೆ ಒಳ್ಳೆಯ ಹಣ್ಣುಗಳು ಸಾಕಷ್ಟಿವೆ; ಆದರೆ ಅವುಗಳ ಸಂಖ್ಯೆ ಕಡಿಮೆ. ಎಲೆಯ ವಚನಗಳೇ ಹೆಚ್ಚು.

ಎಲೆಯಂಥ ವಚನಕ್ಕೆ ಒಂದು ಉದಾಹರಣೆ :

ಮಾವು ಮಾವಾಗಿರುವುದು ಸೋಜಿಗ
ಬೇವು ಬೇವಾಗಿರುವುದು ಸೋಜಿಗ
ಮಾವು ಬೇವಾದರೆ ಬೇವು ಮಾವಾದರೆ
ಏನೆನ್ನಬೇಕು ಸರ್ವೇಶ್ವರ. ಇದು ಸೋಜಿಗವಯ್ಯಾ
ನೀ ಹೇಳಿದ ಸೋಜಿಗ ಅಲ್ಲವಯ್ಯಾ ಎನ್ನಬೇಕು
ಮಾವು ಮಾವಾಗಿರುವುದು ಸಾಮಾನ್ಯ
ಬೇವು ಬೇವಾಗಿರುವುದು ಸಾಮಾನ್ಯ ಅಲ್ಲವೇನಯ್ಯ (ವಚನ ೪೬, ಹೊಂಬಾಳೆ)

**ವಚನ ಗಾಯನ :** "ಪ್ರಾಚೀನ ವಚನಗಳಂತೆ ಅರ್ವಾಚೀನ ವಚನಗಳನ್ನೂ ಹಾಡುಗಾರಿಕೆಗೆ ಬಳಸಿಕೊಳ್ಳಬಹುದು. ಆರಿಸಿದ ಸ್ವರವಚನಗಳಿಗೆ ನವೀನ ಸ್ವರಸಂಯೋಜನೆ ಮಾಡಿ ಹಾಡುವ ಪ್ರತಿಭಾವಂತ ಸೃಜನಶೀಲ ಗಾಯಕರು ಮುಂದಾಗಬೇಕು. ಹಾಗೆಂದು ಎಲ್ಲವನ್ನೂ ಹಾಡಲೇಬೇಕೆಂದಿಲ್ಲ.

ವಚನ ವಾಚನಕ್ಕೆ ಯೋಗ್ಯ ಹಾಡುಗಾರಿಕೆ ಅಪವಾದ. ಒಟ್ಟಿನಲ್ಲಿ ಒಲಿದಂತೆ ವಚನ, ನುಡಿದಂತೆ ವಚನಗಾಯನ". ಡಿಲಿಂ ಅವರು ಆಧುನಿಕ ವಚನಗಳಲ್ಲಿ ಹತ್ತಾರು ವಚನಗಾಯನಕ್ಕೆ ಅರ್ಹವಾಗಿವೆ. (ವಚನಹೊಂಬಾಳೆ ಪುಟ xi).

ಉದಾ : ಹಾಗಾಗಬೇಕು ಹೀಗಾಗಬೇಕು
ಎಂದು ಏನೆಲ್ಲ ಕನಸು ಕಾಣುವರು ಜೀವನವೆಲ್ಲಾ
ಹಾಗಾಗುವುದೂ ಇಲ್ಲ, ಹೀಗಾಗುವುದೂ ಇಲ್ಲ
ಹೀಗೆ ಹೇಗೂ ಆಗುವುದಲ್ಲಾ ಕನಸು ನಮ್ಮದು,
ನನಸು ದೇವರದು ಸರ್ವೇಶ್ವರ (ವಚನ ರಚನ ಸಂಖ್ಯೆ ೮೪)

ಉದಾ : ಇಲ್ಲಿ ಕೊಟ್ಟು ಅಲ್ಲಿ ಪಡೆದನು.
ಇಲ್ಲಿ ಬಿಟ್ಟು ಅಲ್ಲಿ ನಿಂತವರು
ಇದ್ದುದನ್ನು ತೊರೆದು ಇಲ್ಲದುದನು ಕಂಡವರು

ಇದ್ದದ್ದು ಇಲ್ಲ ಇಲ್ಲದ್ದು ಉಂಟು ಎಂದು ತೋರಿದವರು
ಶಿವದಾಸರೆನಿಸಿದರು ಹರಿದಾಸರೆನಿಸಿದರು
ಮಹಾದಾಸರಾಗಲು ನಮಗೆ ಮಾರ್ಗ ತೋರಿದರು.
ಮಹಾಮಾನವರಾಗಲು ನಮಗೆ ನೆಲೆಯ ತೋರಿದರು.

ಅಂತರ್ಲಯ, ಅಂತರ್ಪ್ರಾಸಗಳಿಂದ ಹಾಡಲು ಅನುಕೂಲವಾದ ಗೇಯತೆ ಈ ವಚನಗಳಲ್ಲಿ ಅಂತರ್ಗತವಾಗಿದೆ. ಡಿ. ಲಿಂಗಯ್ಯನವರು ಕವಿಗಳಾಗಿ ಹತ್ತಾರು ಕವನ ಸಂಕಲನ ಪ್ರಕಟಿಸಿದ್ದಾರೆ. ಕವಿ ಹೃದಯ ಅವರಿಗಿದೆ, ಅದರ ಸಿದ್ಧಿಯನ್ನು ಇಲ್ಲಿ ಕಾಣಬಹುದು.

ಶಿವನ ಪ್ರಾರ್ಥನೆ ಸುಂದರವಾಗಿದೆ. ಪೌರಾಣಿಕ ಸಂಗತಿಗಳನ್ನು ವಿಡಂಬನೆಗೆ ಬಳಸಿದ್ದಾರೆ.

ಸುಡಬೇಡ ಶಿವನೇ ಉರಿಗಣ್ಣ ತೆರೆದು
ಕುಣಿಯಬೇಡ ಶಿವನೇ ಭಸ್ಮವನು ಬಳಿದು
ನಗಬೇಡ ಶಿವನೇ ಸುಡಬಿಸಿಲ ನೀಡಿ
ಮರೆಯಾಗದಿರು ಶಿವನೇ ಸುಡುಗಾಡ ಮಾಡಿ
ತಂಪೆರೆದು ಸಲಹು ಸುಡುಬೇಗೆ ಮರೆಸಿ
ಅನುಗ್ರಹಿಸಿ ಉಳಿದು ಭೂಲೋಕ ಹರಸಿ
ಪರಾವಲಂಬಿಗಳ ಪರಾದಾಡಿಸುವುದು ತರವಲ್ಲ ಸರ್ವೇಶ್ವರ
(ವಚನ ಹೊಂಬಾಳೆ, ೧೬೩)

ರಾಮಾಯಣದ ಪಂಡಿತ ರಾಮನಾಗುವುದಿಲ್ಲ
ಕೃಷ್ಣಾಯಣದ ಪಂಡಿತ ಕೃಷ್ಣನಾಗುವುದಿಲ್ಲ
ಕಾಮಾಯಣದ ಪಂಡಿತ ಕಾಮನಾಗುವುದಿಲ್ಲ
ಕರ್ಮ್ಮಾಯಣದ ಪಂಡಿತ ಕರ್ಮವಾಗುವುದಿಲ್ಲ
ಅರಿವು ಬೇರೆ ಅಸ್ತಿತ್ವ ಬೇರೆ ಸರ್ವೇಶ್ವರ (ವಚನ ದವನ ೫೯೪)

(ಬರೆಯುವ ಓಟದಲ್ಲಿ ಪದದರ್ಥ ಏನಾಗುತ್ತೆ ಗಮನಿಸಬೇಕು. ಇಲ್ಲದಿದ್ದರೆ ತಪ್ಪಾಗುತ್ತದೆ. ಕರ್ಮ್ಮಾಯಣದ ಪಂಡಿತ ಕರ್ಮಿಯಾಗುವುದಿಲ್ಲ ಎಂದಿರಬೇಕು ಕರ್ಮವಾಗುವುದಲ್ಲ ಎಂದಲ್ಲ).

ಬರಗೆಟ್ಟಾಗ ಬಾಯಿ ಬರುವುದು
ಬವಣೆಗೆಟ್ಟಾಗ ಬಡಾಯಿ ಹೆಚ್ಚುವುದು
ಬಳಲಿಕೆ ಬಂದಾಗ ಬಯಕೆ ಬತ್ತುವುದು
ಭರವಸೆ ನಿಂತಾಗ ಭಾಗ್ಯ ಬಳಲುವುದು
ಭೂತದಯೆ ಭವಿಷ್ಯದ ಬೆನ್ನೆಲುಬು ಸರ್ವೇಶ್ವರ (ವಚನ ದವನ ೫೯೬)



(ಒಂದಕ್ಕೂ ಇನ್ನೊಂದಕ್ಕೂ ಸಂಬಂಧವಿಲ್ಲ. ಎಲ್ಲ ಸಾಲುಗಳು ಬರಿಯ ಹೇಳಿಕೆಗಳಾಗಿವೆ. ಭರವಸೆ ನಿಂತಾಗ ಭಾಗ್ಯ ಬಳಲುವುದು ಎಂದರೇನರ್ಥ)

**ವಚನಗಳ ವರ್ಗೀಕರಣ :** ಶಿವಶರಣರ ವಚನಗಳನ್ನು ಷಟ್‌ಸ್ಥಲ ವಚನಗಳನ್ನಾಗಿ ಅಥವಾ ಶಿವಶಣರ ಹೆಸರಿನಲ್ಲಿ ವರ್ಗೀಕರಿಸುತ್ತಾರೆ; ಭಕ್ತಸ್ಥಲದ ವಚನಗಳು, ಮಾಹೇಶ್ವರ ಸ್ಥಲದ ವಚನಗಳು ಇತ್ಯಾದಿ. ಅಕ್ಕನ ವಚನಗಳು, ಬಸವಣ್ಣನ ವಚನಗಳು ಇತ್ಯಾದಿ. ಆಧುನಿಕ ವಚನಕಾರರು ವರ್ಗೀಕರಣವನ್ನು ಸಾಮಾನ್ಯವಾಗಿ ಮಾಡುವುದಿಲ್ಲ. ಆದರೆ ಡಿಲಿಂ ಹೇಳುವ ಹಾಗೆ ಹಿಂದೆ ಭಕ್ತಿ ಪ್ರಮುಖ ವಿಷಯವಾಗಿತ್ತು. ಇಂದು ಭಕ್ತಿಯೇತರ ವಿಷಯಗಳು ಪ್ರಮುಖವಾಗಿವೆ. ಉದಾಹರಣೆಗೆ ಎಸ್.ವಿ. ಪರಮೇಶ್ವರ ಭಟ್ಟರ ಉದ್ದುಕಡಲು ಗಮನಿಸಬಹುದು. ಉದ್ದಕ್ಕೂ ವಚನಗಳಿವೆ, ವರ್ಗೀಕರಣವಿಲ್ಲ. ಸಮಯಸ್ಫೂರ್ತಿ ಬಂದಾಗ ಸಂದರ್ಭ ಒದಗಿದಾಗ ಬರೆದಿದ್ದಕ್ಕೆ ಪೂರ್ವಯೋಜಿತ ವರ್ಗೀಕರಣ ಶಕ್ಯವೇ ? (ವಚನ ದವನ, ಪುಟ ೪)

ಆದರೂ ಲಿಂಗಯ್ಯನವರು ಸ್ಥೂಲವಾಗಿ ವರ್ಗೀಕರಿಸಿದ್ದಾರೆ. ವಚನ ದವನ, ವಚನ ಹೊಂಬಾಳೆಗಳಲ್ಲಿ ವಚನಗಳ ವರ್ಗೀಕರಣ ಕಾಣುತ್ತೇವೆ. ವಚನ ರಚನ ಸಂಕಲನದಲ್ಲಿ ವರ್ಗೀಕರಣವಿಲ್ಲ.

ವಚನಗಳನ್ನು ಕರಾರುವಾಕ್ಕಾಗಿ ಒಂದು ಗುಂಪಿಗೆ ನಿರ್ದೇಶಿಸುವುದು ಸಾಹಸವಾಗುತ್ತದೆ ಎನ್ನುತ್ತಾರೆ. ಏಕೆಂದರೆ ಒಂದು ವಚನ ಒಂದು ವಿಷಯದ ಜೊತೆಗೆ ಇನ್ನೊಂದು ವಿಷಯವನ್ನು ಒಳಗೊಳ್ಳುತ್ತದೆ. ಒಂದರೊಳಗೆ ಇನ್ನೊಂದು ವಿಷಯವನ್ನು ತಳಕು ಹಾಕಿಕೊಳ್ಳುತ್ತದೆ ಎಂದು ಒಪ್ಪಿಕೊಳ್ಳುವ ಡಿ. ಲಿಂಗಯ್ಯನವರು ಅಭ್ಯಾಸದ ದೃಷ್ಟಿಯಿಂದ ಈ ವಿಭಜನೆ ಪ್ರಯೋಜನಕಾರಿಯಾಗಬಹುದೆಂದು ಭಾವಿಸಿ ಸ್ಥೂಲವಾಗಿ ವಿಂಗಡಿಸಿ ಉಪಶೀರ್ಷಿಕೆಗಳನ್ನು ಕೊಟ್ಟಿದ್ದಾರೆ. ಉಪನ್ಯಾಸಕಾರರಿಗೆ ಬರಹಗಾರರಿಗೆ ಸಂಬಂಧಪಟ್ಟ ವಿಷಯಗಳ ವಚನಗಳನ್ನು ಉದಾಹರಿಸಲು ಹುಡುಕುವ ಕಷ್ಟ ತಪ್ಪುವುದಕ್ಕಷ್ಟೆ ಈ ವಿಭಜನೆಯ ಪ್ರಯೋಜನ ಅಷ್ಟೆ.

ಡಿ. ಲಿಂಗಯ್ಯನವರ ವಚನಗಳನ್ನು ಹೆಚ್ಚಾಗಿ ಲೌಕಿಕ ವಿಷಯಗಳ ಶೀರ್ಷಿಕೆಗಳಲ್ಲಿ ವರ್ಗೀಕರಿಸಿದ್ದಾರೆ. ಇದಕ್ಕೆ ಕಾರಣ ಅಂದಿನ ವಚನಗಳಿಗೂ ಇಂದಿನ ವಚನಗಳಿಗೂ ಸಾಕಷ್ಟು ವ್ಯತ್ಯಾಸವಿದೆ, ವೈವಿಧ್ಯವಿದೆ. ಆಂಶಿಕವಾಗಿ ಹಿಂದಿನ ಧಾಟಿ ಧೋರಣೆಗಳನ್ನು ಒಳಗೊಂಡಿದ್ದರೂ ಬಹುತೇಕವಾಗಿ ಸ್ವಂತಿಕೆಯಿಂದ ಮುಂದುವರೆಯುತ್ತಿದೆ. 'ಪ್ರಾಚೀನ ಶಿವಶರಣ ವಚನಕಾರರಿಗೆ ವಚನ ಕಾವ್ಯ ಪರಿಕರವಾಗಿರಲಿಲ್ಲ, ಜೀವನ ವಿಧಾನವಾಗಿತ್ತು. ಸರ್ವ ಅಭಿವ್ಯಕ್ತಿಯ ಮಾಧ್ಯಮವಾಗಿತ್ತು. ಅರ್ವಾಚೀನ ವಚನಕಾರರಿಗೆ ವಚನ ಸಂಪೂರ್ಣ ಕಾವ್ಯ ಪ್ರಕಾರವಾಗಿದೆ. ಇತರ ಕಾವ್ಯ ಪ್ರಕಾರಗಳಂತೆ ಇದೂ ಒಂದು ರೀತಿಯಾಗಿದೆ. ಪ್ರಾಚೀನ ವಚನಕಾರರ ಎಲ್ಲ ವಚನಗಳಲ್ಲೂ ಕಾವ್ಯಾಂಶವಿಲ್ಲ. ಆಧುನಿಕ ವಚನಕಾರರಲ್ಲೂ ಅಷ್ಟೆ. ಹಿಂದೆ ಭಕ್ತಿ ಪ್ರಮುಖ ವಿಷಯವಾಗಿತ್ತು ಇಂದು ಭಕ್ತಿಯೇತರ ವಿಷಯಗಳು ಪ್ರಮುಖವಾಗಿವೆ.

ಈ ಮಾತುಗಳಲ್ಲಿ ಕೆಲವು ಅಂಶಗಳು ವಚನ ಸಾಹಿತ್ಯಕ್ಕೆ ಅಷ್ಟೇ ಅಲ್ಲ ಕೀರ್ತನ ಸಾಹಿತ್ಯಕ್ಕೂ ಅನ್ವಯಿಸುತ್ತೆ. ಹರಿದಾಸರ ಭಕ್ತಿ ವ್ಯಕ್ತಿತ್ವಗಳು ಧಾರ್ಮಿಕತೆಗೆ ಮೀಸಲಾಗಿತ್ತು. ಇಂದಿನ ಕೀರ್ತನಕಾರರು ಕೇವಲ ಕೀರ್ತನ ರಚನಾಕಾರರು ಅಷ್ಟೆ. ಹರಿದಾಸರಲ್ಲ. ಕೆಲವರು ಅಪವಾದವಷ್ಟೆ. ಕೀರ್ತನ ಸಾಹಿತ್ಯ ವಚನ ಸಾಹಿತ್ಯಕ್ಕಿಂತ ಲೌಕಿಕವಾಗಿ ಹೆಚ್ಚಾಗಿ ಬಳಕೆ ಆಗಿದೆ ಎಂದರೆ ತಪ್ಪಿಲ್ಲ. ಚಲನಚಿತ್ರ, ವಾದ್ಯಗೋಷ್ಠಿ, ನಾಟಕ ಮೊದಲಾದ ಕಲಾರಂಗಗಳಲ್ಲಿ ಸಂಗೀತದ ಕಾರಣ ಕೀರ್ತನ ಸಾಹಿತ್ಯಕ್ಕೆ ಹೆಚ್ಚು ಪ್ರಾಶಸ್ತ್ಯ. ವಚನಕ್ಕಿಂತ ವಿಷಯದಲ್ಲಿ ಭಕ್ತಿ, ಲೌಕಿಕತೆ ಕಲಬೆರಕೆ. ಡಿ. ಲಿಂಗಯ್ಯನವರು ವಚನ ದವನ ಮತ್ತು ವಚನ ಹೊಂಬಾಳೆ ವಚನ ಸಂಕಲನಗಳಲ್ಲಿ ನಿರೂಪಿಸಿರುವ ವಿಷಯ ವರ್ಗೀಕರಣ ೨೦ ಇದೆ.

ಪ್ರಕೃತಿ–ದೇವರು, ದೇಶ–ಸಂಸ್ಕೃತಿ, ಜಾನಪದ, ಕಲೆ, ಸಾಹಿತ್ಯ, ಅನುಭವ, ದೇವರು, ಬದುಕು, ವ್ಯಕ್ತಿ–ವ್ಯಕ್ತಿತ್ವ, ಹೆಣ್ಣು–ಗಂಡು, ಕನ್ನಡ–ಕನ್ನಡಿಗರು, ಸಾಂಸಾರಿಕ–ಲೈಂಗಿಕತೆ, ಧಾರ್ಮಿಕ–ರಾಜಕೀಯ, ಪೌರಾಣಿಕ–ಚಾರಿತ್ರಿಕ, ಆರ್ಥಿಕ ಇತ್ಯಾದಿ. ಇವುಗಳಲ್ಲಿ ಒಂದು ಇನ್ನೊಂದರಲ್ಲಿ ಅಂತರ್ಗತವಾಗಿದ್ದು ಯಾವುದೇ ವೈಚಾರಿಕ ವೈಜ್ಞಾನಿಕ ವಿಂಗಡನೆ ಇಲ್ಲ. ಉದಾಹರಣೆಗೆ ವಚನ ದವನ ಸಂಕಲನದಲ್ಲಿ (ಪುಟ ೧೩೨–೧೩೩).

ವ್ಯಕ್ತಿ–ವ್ಯಕ್ತಿತ್ವದಲ್ಲಿ ಗಾಂಧಿ, ಮದರ್ ತೆರೇಸಾ, ಬೇಂದ್ರೆ, ಕುವೆಂಪು, ರಾಮಾನುಜನ್ ಬಗ್ಗೆ ಪ್ರಸ್ತಾಪವಿದೆ. ವಚನ ಹೊಂಬಾಳೆಯಲ್ಲಿ (ಪುಟ ೨೭೭).

ಬುದ್ಧ–ಬಸವ–ದಾಸರು–ಮಹಾವೀರ–ಪಂಪ, ಕುವೆಂಪು, ಲಕ್ಷ್ಮೀಶ–ಹಿಟ್ಲರ್ ಬಗ್ಗೆ ವಚನಗಳಿವೆ.

ವ್ಯಕ್ತಿ ವ್ಯಕ್ತಿತ್ವದ ಬಗ್ಗೆ ಸ್ಪಷ್ಟ ಝಳಕು ಇಲ್ಲದಿರುವುದನ್ನು ಅಲ್ಲಲ್ಲಿ ಈ ವಿಭಾಗದಲ್ಲಿ ಕಾಣುತ್ತೇವೆ. ಉದಾ : (ವಚನ ಹೊಂಬಾಳೆ ವಚನ ೯೬೫).

ಬಸವ ಜಯಂತಿಯಲ್ಲಿ ಬಸವಣ್ಣನ ಪ್ರಸ್ತಾಪ
ವೇದಿಕೆಯ ಮೇಲೆ ಭಾಷಣಗಳ ಸುರಿಮಳೆ
ಬಸವ ಬೋಧೆಯ ಅನುಸರಣೆಯಿಲ್ಲ ಬೋಧಕರೆ ಎಲ್ಲಾ
ಎಲ್ಲಾ ಮಹಾತ್ಮರ ಬೋಧನೆಗೂ ಇದೇ ಗತಿ
ಸನ್ಮಿತ್ರ ಕಾಣುವುದು ಮನುಕುಲದ ಅಧೋಗತಿ
ಅನುಸರಿಸುವವರಿಲ್ಲದ ಬೋಧನೆ ವ್ಯರ್ಥ ಸರ್ವೇಶ್ವರ (೯೬೫)

ಇಲ್ಲಿ ಲೋಕನೀತಿ ಇದೆ, ವ್ಯಕ್ತಿ ವ್ಯಕ್ತಿತ್ವ ಮುಖ್ಯವಾಗಿಲ್ಲ.

**ವಚನಗಳ ವರ್ಗೀಕರಣ**

ಕನ್ನಡ ವಚನಕಾರರನ್ನು ವಚನಗಳನ್ನು ಜಾತಿಯ ಹೆಸರಿನಲ್ಲಿ ಗುರುತಿಸುವುದು ಸರಿಯಲ್ಲ ಎಂಬ ಸೊಗಸಾದ ಮಾತನ್ನು ಹೇಳಿದ್ದಾರೆ. ಈ ಮಾತು ದಾಸ ಸಾಹಿತ್ಯಕ್ಕೂ



ಅನ್ವಯಿಸುತ್ತೆ. ದಾಸ ಸಾಹಿತ್ಯವೆಂದರೆ ಬ್ರಾಹ್ಮಣ ಸಾಹಿತ್ಯವಷ್ಟೇ ಅಲ್ಲ. ಕನಕದಾಸರು, ತುಳಸೀ ರಾಮದಾಸರು, ರಾಮದಾಸರು ಹರಿದಾಸರೇ ಆಗಿದ್ದಾರೆ. ಹಾಗೆಯೇ ಆಧುನಿಕ ವಚನಕಾರರು ಎಲ್ಲ ವರ್ಗದವರೂ ಇದ್ದಾರೆ.

ಡಿ. ಲಿಂಗಯ್ಯನವರ ಆಧುನಿಕ ವಚನಗಳಲ್ಲಿ ಬಹುತೇಕ ವಿಷಯ ಸಾರ್ವತ್ರಿಕವಾದುದು, ದೇವರು ಪ್ರಕೃತಿ, ಕಲೆ, ಸಂಸ್ಕೃತಿ, ದೇಶ, ಅನುಭವ, ಹೆಣ್ಣು, ಗಂಡು ಮೊದಲಾದ ಇಡೀ ಮಾನವ ಲೋಕದ ವಸ್ತುಗಳನ್ನು ಕುರಿತು ವಚನಗಳಾಗಿವೆ. ಸುಮಾರು ೨೦–೩೦ ವಿಭಾಗಗಳಲ್ಲಿ ನಿರೂಪಿಸಿದ್ದಾರೆ. ಡಿ.ಲಿಂ. ಹೇಳುವಂತೆ, ಆಧುನಿಕ ವಚನಗಳು ಧರ್ಮಾತೀತವಾಗಿವೆ, ಜಾತ್ಯಾತೀತವಾಗಿವೆ, ರಾಷ್ಟ್ರಾತೀತವಾಗಿವೆ, ಎಲ್ಲ ರೀತಿಯ ಸಾಂಪ್ರದಾಯಿಕ ಎಲ್ಲೆಕಟ್ಟುಗಳನ್ನು ಮೀರಿವೆ. ಹಿಂದೂ ಧರ್ಮೀಯರಿಂದ ಮಾತ್ರವಲ್ಲ ಕರ್ನಾಟಕದಲ್ಲಿರುವ ಅನ್ಯ ಧರ್ಮೀಯರಿಂದಲೂ ಆಧುನಿಕ ವಚನಗಳು ರಚನೆಯಾಗುತ್ತಿವೆ. ಬಹುಧರ್ಮ ಸಂಸ್ಕೃತಿ ಇದಕ್ಕೆ ಕಾರಣ. (ವಚನ ಹೊಂಬಾಳೆ ಪುಟ xi).

ಶರಣರ ವಚನಗಳು ಒಂದರ್ಥದಲ್ಲಿ ಆಧುನಿಕವಲ್ಲ, ಇನ್ನೊಂದರ್ಥದಲ್ಲಿ ಹೌದು, ಏಕೆಂದರೆ ಶರಣರ ವಚನ ಭಕ್ತಿ ಆಧುನಿಕವಲ್ಲ, ಶರಣರ ಅನುಭಾವ ಆಧುನಿಕರದಲ್ಲ. ಶರಣರ ಸಮಸ್ಯೆ ಆಧುನಿಕರದಲ್ಲ, ಶರಣರ ಮಾನವೀಯತೆ ಆಧುನಿಕರದು ಹೌದು. ಮಾನವೀಯತೆಗೆ ಒತ್ತು ಕೊಡುವುದು ಆಧುನಿಕರ ಆದ್ಯ ಕರ್ತವ್ಯ ಸರ್ವೇಶ್ವರ (ವಚನ ಹೊಂಬಾಳೆ ೯೦೪).

ಆದರೆ ಇನ್ನೊಂದೆಡೆ ಹೇಳುತ್ತಾರೆ : (ವಚನ ೯೦೫, ವಚನ ಹೊಂಬಾಳೆ)

ಅನುಭವಾತೀತ ಬಹು ಅಂಶದ ಕಾರ್ಯಕ್ರಮಗಳಿವೆ ; ಆಧುನಿಕ ವಚನಗಳಿಗೆ ಅಂದಿಗೆ ಅದು ಚಂದ ಇಂದಿಗೆ ಇದು ಚೆಂದ.

**ಕೆಲವು ವಚನಗಳ ವಿಶ್ಲೇಷಣೆ**

ಶಿವಶರಣರ ವಚನಗಳ ಧಾಟಿಯ ಅನುಕರಣೆ ಡಿ. ಲಿಂಗಯ್ಯನವರ ಆಧುನಿಕ ವಚನಗಳಲ್ಲಿ ಅಲ್ಲಲ್ಲಿ ಸಾಕಷ್ಟು ಇವೆ. ಉದಾ: ವಚನ ೬೦೦ (ವಚನ ದವನ)ದ ವಚನ ಹೀಗಿದೆ.

ಬಸವಣ್ಣನವರ ಕರಿಘನ ಅಂಕುಶ ಕಿರಿದು ಎನ್ನಬಹುದೇ ? ಬಾರದಯ್ಯ ಎಂಬುದನ್ನು ನೆನಪಿಸುತ್ತದೆ.

ಹುಟ್ಟು ಸಹಜ, ಸಾವು ಅಸಹಜ ಎನ್ನಬಹುದೆ ? ಬಾರದಯ್ಯ
ಸುಖ ಸಹ್ಯ ದುಃಖ ಅಸಹ್ಯ ಎನ್ನಬಹುದೆ ? ಬಾರದಯ್ಯ
ಒಳಿತು ಸ್ವಾಗತ ಕೆಡಕು ತಿರಸ್ಕೃತ ಎನ್ನಬಹುದೆ ? ಬಾರದಯ್ಯ
ಹಗಲು ಕಂಡವರಿಗೆ ಇರುಳು ಅನಿವಾರ್ಯ, ಸರ್ವೇಶ್ವರ.

ಲಿಂಗಯ್ಯನವರ ವಚನಗಳ ಸಾಮಾನ್ಯ ಲಕ್ಷಣವೆಂದರೆ ಮೊದಲ ೪–೫ ಸಾಲುಗಳಲ್ಲಿ ಹಲವಾರು ಹೇಳಿಕೆಗಳನ್ನು ನೀಡಿ ಕೊನೆಗೆ ಆ ಸಾಲುಗಳ ತೀರ್ಪಿನ ಸಾಲಿನಂತೆ ಎಂದು ಹೇಳಿಕೆ ನೀಡುತ್ತಾರೆ. ಎಷ್ಟೋ ಸಲ ಅವು ಒಂದಕ್ಕೊಂದು ಸಾಮರಸ್ಯ ಹೊಂದಿರುವುದಿಲ್ಲ.

ಉದಾಹರಣೆಗೆ :
ಬರೆದರೆ ಬದುಕುವುದಿಲ್ಲ, ಬರೆಯದಿರೆ ಸಾಯುವುದಿಲ್ಲ
ಕರೆದರೆ ಬರುವುದಿಲ್ಲ, ಕರೆಯದಿರೆ ಬಾರದಿರುವುದಿಲ್ಲ
ನರೆತರೆ ಜ್ಞಾನಿಯಲ್ಲ, ನರೆಯದಿರೆ ಅಜ್ಞಾನಿಯಲ್ಲ
ಚೈತನ್ಯಕ್ಕೆ ಬಡತನ ಶತ್ರು, ಜಡಕ್ಕೆ ಚೈತನ್ಯ ಶತ್ರು ಸರ್ವೇಶ್ವರ.

೧ನೇ ಸಾಲು ಸಾಹಿತಿ ಆದವ. ಅಸಾಹಿತಿ ಆದವನು ಇಬ್ಬರೂ ಬದುಕುತ್ತಾರೆ.

೨ನೇ ಸಾಲಿನಲ್ಲಿ ಏನನ್ನು ಕರೆದರೆ, ಏನನ್ನು ಕರೆಯದಿದ್ದರೆ ಸ್ಪಷ್ಟವಿಲ್ಲ.

೩ನೇ ಸಾಲಿನಲ್ಲಿ ವಿಸ್ಮೃತಿ, ಸ್ಮೃತಿಯಾಗಿರುತ್ತದೆ, ಸ್ಮೃತಿ ವಿಸ್ಮೃತಿ ಆಗುತ್ತದೆ.

೪ನೇ ಸಾಲಿನಲ್ಲಿ ಚೈತನ್ಯಕ್ಕೆ ಜಡತನ ಶತ್ರು, ಜಡತನಕ್ಕೆ ಚೈತನ್ಯ ಶತ್ರು ಎಂದಾಗ ಪುನರುಕ್ತಿ ದೋಷವಿದೆ. ಇನ್ನು ನಾಲ್ಕು ಸಾಲುಗಳಿಗೆ, ಪರಸ್ಪರ ಹೊಂದಾಣಿಕೆ ಸ್ವಾರಸ್ಯವೇ ಇಲ್ಲ.

**ಸಿರಿ ಭೂವಲಯ**

ಈ ಮೊದಲೇ ಹೇಳಿದಂತೆ ೩೦೦೦ಕ್ಕೂ ಮಿಕ್ಕಿದ ವಚನಗಳಲ್ಲಿ ತಾವು ಪತ್ರಿಕೆಯಲ್ಲಿ ಓದಿದ ಗ್ರಂಥಗಳಲ್ಲಿ ಅಧ್ಯಯನ ಮಾಡಿದ ತಮ್ಮ ಸುತ್ತಮುತ್ತಲಿನ ಜನರ ಮಾತು ಕಥೆಗಳಲ್ಲಿ ಕಂಡ ತಮ್ಮ ಮನಸ್ಸಿಗೆ ಹೊಳೆದಿದ್ದನ್ನೆಲ್ಲ ವಚನವಾಗಿ ಮಾಡಿಬಿಟ್ಟಿದ್ದಾರೆ. ಹೀಗಾಗಿ ಅವರ ವಚನಗಳ ವಿಷಯ ವ್ಯಾಪ್ತಿ ಬಹು ವಿಸ್ತಾರ. ಇಲ್ಲಿ ಮಾದರಿಗಾಗಿ ಒಂದು ವಿಷಯಕ್ಕೆ ಮುಖ್ಯವಾಗಿ ಸಾಹಿತ್ಯ ವಿಭಾಗಕ್ಕೆ (ವಚನ ಹೊಂಬಾಳೆ ೮೬೧–೯೧೬) ಸೇರಿದ ವಚನಗಳನ್ನು ಸಮೀಕ್ಷೆ ಮಾಡಿದೆ.

'ಸಿರಿ ಭೂವಲಯ' ಕನ್ನಡ ಸಾಹಿತ್ಯದಲ್ಲಷ್ಟೇ ಅಲ್ಲ ಜಗತ್ತಿನ ವಿಶಿಷ್ಟ–ವಿಶೇಷ ಗ್ರಂಥಗಳಲ್ಲಿ ಒಂದು. ಜೈನಧರ್ಮ–ವೈದ್ಯ, ಭಾರತೀಯ ವಿದ್ಯೆ, ಶಾಸ್ತ್ರಗಳ ನಾನಾ ವಿಷಯಗಳನ್ನು ಒಳಗೊಂಡ ವಿಶ್ವಕೋಶ. ಅಂಕಿಗಳ ಮೂಲಕ, ಬಂಧಗಳ ಮೂಲಕ ಸಾಂಗತ್ಯದ ಛಂದದಲ್ಲಿ ಹತ್ತಾರು ಭಾಷೆಗಳನ್ನು ಅಂತರ್ಗತಗೊಳಿಸಿರುವ ವಿಶಿಷ್ಟ ರಚನೆ. ಅದನ್ನು ಪೂರ್ಣವಾಗಿ ಯಾರೂ ಇನ್ನೂ ಅರ್ಥೈಸಿಲ್ಲ. ಈ ಗ್ರಂಥದ ವಿಶೇಷ ಪರಿಚಯವಿಲ್ಲದ ಡಿ. ಲಿಂಗಯ್ಯನವರು ಬರೆದ ಈ ವಚನ, ಸತ್ಯ ದೂರ ಸಂಗತಿಗಳಿಂದ ಕೂಡಿದೆ.

ಈ ಗ್ರಂಥವನ್ನು ಸಂಪಾದಿಸಲು ತಮ್ಮ ಬಾಳನ್ನೇ ಮೀಸಲಿಟ್ಟ ಎಲ್ಲಪ್ಪ ಶಾಸ್ತ್ರಿ, ಕರ್ಲಮಂಗಲಂ ಶ್ರೀಕಂಠಯ್ಯ, ಕಟ್ಟೆ ನಾಗರಾಜರನ್ನು ನಾ ಬಲ್ಲೆ. ಅವರ ಶ್ರಮ, ಜ್ಞಾನ,



ಪಾಂಡಿತ್ಯ, ನಿಷ್ಠೆ ಯಾವ ವಿದ್ವಾಂಸರಿಗೂ ಕಡಿಮೆ ಇರಲಿಲ್ಲ. ಅಂಥವರ ಬಗ್ಗೆ ಹರಕು ಮುರಕು ಹಾಳೆ ಹಿಡಿದು ಗಂಟೆ ಜಾಗಟೆ ಬಾರಿಸಿದರು, ತಿರುಬೋಕಿ ಪಂಡಿತರು ಎಂದು ಬರೆದಿರುವುದು ಶೋಚನೀಯ.

ಸಿರಿ ಭೂವಲಯವ ಸುಟ್ಟು ಸುಡುಗಾಡು ಸೇರಿದರು ಮಂದಿ
ಸಿರಿ ಭೂವಲಯ ಕದ್ದು ಕುಲಗೇಡಿಗಳಾದರು ಮಂದಿ
ಸಿರಿಭೂವಲಯದ ಹೆಸರಿನಲ್ಲಿ ಹೊಟ್ಟೆ ಹೊರೆದರು ಮಂದಿ
ಕುಮುದೇಂದುವ ಕೊಂದು ಕುಲಗೆಟ್ಟರು ಮಂದಿ
ಸ್ವಾರ್ಥ ಶನಿ ಹಿಡಿದವರು ಲೋಕಕಂಟಕರು ಸರ್ವೇಶ್ವರ
(ವಚನ ಹೊಂಬಾಳೆ, ವ. ೯೧೨)

ಈ ಮಾತನ್ನು ಹೇಳಿದ ಉದ್ದೇಶವಿಷ್ಟೇ. ತೋಚಿದ್ದನ್ನೆಲ್ಲಾ ವಿವೇಚನೆಯಿಲ್ಲದೆ ವಚನರೂಪದಲ್ಲಿ ದಾಖಲಿಸುವುದು ಸರಿಯಲ್ಲ, ಯಾರೇ ಆದರೂ.

**ಮಿತಿಗಳು**

ಒಂದೇ ವಚನದಲ್ಲಿ ಒಂದೇ ಸಂಗತಿ ಸಾಮಾನ್ಯವಾಗಿ ಪ್ರಸ್ತಾಪವಾಗಿರುತ್ತದೆ. ಕೆಲವೊಮ್ಮೆ ಹಲವು ಸಂಗತಿಗಳು ಒಂದೇ ವಚನದಲ್ಲಿ ಬಂದಿರಬಹುದು. ತಪ್ಪೇನಿಲ್ಲ. ಆದರೆ ಅವುಗಳಲ್ಲಿ ಏಕತೆ, ತಾರ್ಕಿಕತೆ ಇರಬೇಕು. ಅದು ಇಲ್ಲಿಯ ಅನೇಕ ವಚನಗಳಲ್ಲಿ ಕಾಣುವುದಿಲ್ಲ, ಉದಾಹರಣೆಗೆ ವಚನ ಹೊಂಬಾಳೆ (೪೬೦).

ದುಡಿಯುವವರಿಗೆ ದುಡಿಮೆ ಇದ್ದೇ ಇರುತ್ತದೆ
ದುಡಿಯದವರಿಗೆ ದುಡಿಮೆ ಎದ್ದು ಓಡುತ್ತದೆ
ಬಯಸಿದಂತೆ ಬದುಕಾಗುತ್ತದೆ
ಬದುಕಾದಂತೆ ಬಯಕೆ ಬೆಳೆಯುತ್ತದೆ
ಬದುಕಿಗೆ ಬಯಕೆ ಪೂರಕ ಸರ್ವೇಶ್ವರ

ಇಲ್ಲಿ ದುಡಿಮೆ ಲಕ್ಷಣ, ಬಯಕೆ ಲಕ್ಷಣ ಎರಡು ಸಂಗತಿಗಳಿವೆ. ಇವೆರಡೂ ಪ್ರತ್ಯೇಕ ಘಟಕಗಳಾಗಿವೆ. ಎರಡನೇ ಸಾಲಿನ ಸರ್ವೇಶ್ವರ ಪದ ಸೇರಿಸಿದರೆ ಅದೇ ಬೇರೆ ವಚನವಾಗುತ್ತದೆ. ಬಯಕೆ–ದುಡಿಮೆ ಎರಡಕ್ಕೂ ಈ ವಚನದಲ್ಲಿ ಸಂಬಂಧವಿಲ್ಲ.

ಸಾಲು ಸಾಲಾಗಿ ಬರೆಯುವ ಭರಾಟೆಯಲ್ಲಿ ಕೆಲವು ಸಾಲುಗಳ ಅರ್ಥವನ್ನು ಗಮನಿಸುವುದಿಲ್ಲ ಡಿ. ಲಿಂಗಯ್ಯನವರು. (ವಚನ ಹೊಂಬಾಳೆ, ವಚನ ೪೪೭) ಹೆಣ್ಣಿಗೆ ಗಂಡಿನ ಹುಡುಕಾಟ ಎಂಬ ವಚನದಲ್ಲಿ ದೇಹಕ್ಕೆ ಆತ್ಮದ ಹುಡುಕಾಟ, ಆತ್ಮಕ್ಕೆ ದೇಹದ ಹುಡುಕಾಟ ಎಂದು ಹೇಳಿದ್ದಾರೆ. ದೇಹ ಆತ್ಮ ಬೇರೆ ಬೇರೆ. ಆತ್ಮ ದೇಹವನ್ನು ಹುಡುಕುವುದು, ದೇಹ ಆತ್ಮವನ್ನು ಹುಡುಕುವುದು ಅಸಂಭವ. ಅಧ್ಯಾತ್ಮ ಜಗತ್ತಿನಲ್ಲಿ ಹುಡುಕಾಟದ ಬಗ್ಗೆ ಬರೆಯುವಾಗ ಈ ಸಾಲುಗಳು ನುಸುಳಿವೆ.

ತಾರ್ಕಿಕತೆ ಇಲ್ಲದ ವಚನಗಳಿಗೆ ಇನ್ನೂ ಕೆಲವು ನಿದರ್ಶನಗಳು (೯೩೦ ವಚನ ಹೊಂಬಾಳೆ).

ಹಿರಿಯರಿಗೆ ನಂಬಿಕೆಯಾಗಿದ್ದುದು
ಕಿರಿಯರಿಗೆ ಮೂಢ ನಂಬಿಕೆ
ಹಿಂದಿನವರಿಗೆ ವಿಜ್ಞಾನವಾಗಿದ್ದುದು
ಇಂದಿನವರಿಗೆ ಅಜ್ಞಾನ
ತಿಳಿವಳಿಕೆ ನಿಂತ ನೀರಲ್ಲ ಸರ್ವೇಶ್ವರ

ನಂಬಿಕೆ ಮೂಢನಂಬಿಕೆ ಆದರೆ ವಿಜ್ಞಾನ ಅಜ್ಞಾನ ಆದರೆ ತಿಳಿವಳಿಕೆ ನಿಂತ ನೀರಾಗದೆ ಹರಿವನೀರು ಹೇಗಾಗುತ್ತೆ? ನಂಬಿಕೆ, ವಿಜ್ಞಾನ ನಿಂತ ನೀರಾಗಲಿಲ್ಲವೇ? ನಿಜವಾದ ತಿಳಿವಳಿಕೆ ಅಜ್ಞಾನವಾದರೆ ಅದರ ಪರಿಣಾಮ ಹೇಗೆ? ಯೋಚಿಸಬೇಡವೇ.

**ಜಾನಪದೀಯ ವಚನಗಳು**

ಜಾನಪದ ವಿಷಯ ಡಿ. ಲಿಂಗಯ್ಯನವರ ವಿಶೇಷ ಅಧ್ಯಯನದ ವಿಷಯ, ಆಸಕ್ತಿಯ ವಿಷಯ, ಆರಾಧನಾ ವಿಷಯ, ಆಪ್ತವಿಷಯ. ಜಾನಪದ ಸ್ಥಿತಿಗತಿ ಆಧುನಿಕ ಕಾಲದಲ್ಲಿ ಹೇಗಾಗಿದೆ ಎಂಬ ಚಿತ್ರಣ ಸುಂದರವಾಗಿ ನೀಡುವ ವಚನ ಹೀಗಿದೆ : (೯೪೫ ವಚನ ಹೊಂಬಾಳೆ)

ಜಾನಪದ ತಮಾಷೆಯ ವಿಷಯ ಪಟ್ಟಣಿಗರಿಗೆ
ಬದುಕಿನ ವಿಷಯ ಹಳ್ಳಿಗರಿಗೆ
ಅಧ್ಯಯನದ ವಿಷಯ ವಿದೇಶಿಯರಿಗೆ
ಮಾರಾಟದ ವಿಷಯ ಸ್ವದೇಶಿಯರಿಗೆ
ಬೆಂದ ಮನೆಯಲ್ಲಿ ಹಿರಿದಿದ್ದೆ ಲಾಭ
ಚೆಲ್ಲಿದ ಮುತ್ತಿಗೆ ಬೆಲೆಯಿಲ್ಲ ಸರ್ವೇಶ್ವರ

ಜಾನಪದ ಚೆಲ್ಲಿದ ಮುತ್ತಾಗಿದೆ, ಅದನ್ನು ಬೆಂದ ಮನೆಯಲ್ಲಿ ಗಳ ಹಿರಿದಂತೆ ಅನೇಕರು ಲಾಭ ಮಾಡಿಕೊಂಡಿದ್ದಾರೆ, ಅದು ವ್ಯಾಪಾರಿ ವಸ್ತು, ಪದವಿ ಗಳಿಕೆಗೆ ವಿಷಯವಾಗಿದೆ. ಬದುಕಿನ ವಿಷಯವಾಗಿಲ್ಲ ಎಂದು ಮಾರ್ಮಿಕವಾಗಿ ತಿಳಿಸಿದ್ದಾರೆ.

**'ಶರಣ' ಕಾಣಿಸಿಕೊಳ್ಳುವ ವಚನಗಳು**

ಸಾಮಾನ್ಯವಾಗಿ ಶಿವಶರಣರ ವಚನದಲ್ಲಿ ಪ್ರಭು ಸಂಹಿತೆ ಕಾಣುವುದಿಲ್ಲ, ಉಪನಿಷತ್ತುಗಳಲ್ಲಿ ಕಾಣುವ ಹಾಗೆ. ಶರಣರದು ಏನಿದ್ದರೂ ಆತ್ಮಾವಲೋಕನ, ಆಜ್ಞಾದೇಶವಲ್ಲ. ಉಪದೇಶ ಪರೋಕ್ಷವಾಗಿರುತ್ತದೆ. ಪ್ರತ್ಯಕ್ಷವಾಗಿ ವಾಚ್ಯವಾಗಿರುವುದಿಲ್ಲ. ಆಧುನಿಕ ವಚನಗಳಲ್ಲಿ ನೀತಿ ಉಪದೇಶ ಹೆಚ್ಚು ವಾಚ್ಯವಾಗಿರುತ್ತದೆ. ಈ ವಚನ ನೋಡಿ, ಇದು ಉಪದೇಶ ಮಾಲೆ ಆಗಿದೆ. ಇಲ್ಲಿ 'ಶರಣ' ಮಾಯವಾಗಿದ್ದಾನೆ. ಮಠಾಧಿಪತಿಯೊಬ್ಬ ಉಪದೇಶಕನಾಗಿರುವಂತೆ ಭಾಸವಾಗುತ್ತದೆ. ಶರಣರ ವಚನಗಳು



ಆತ್ಮಾರ್ಥಕ ಆಜ್ಞಾರ್ಥಕವಲ್ಲ ಎಂದಿಗೂ. "ಅನಾಥರಿಗೆ ಆಶ್ರಯನಾಗು, ಅಸಹಾಯಕರಿಗೆ ಆಧಾರವಾಗು, ನೊಂದವರಿಗೆ ನೆರವಾಗು, ಅಶಕ್ತರಿಗೆ ಪೋಷಕನಾಗು, ಹಸಿದವರಿಗೆ ಆಹಾರವಾಗು, ಕುಸಿದವರಿಗೆ ಉಸಿರಾಗು, ನರಳಿದವರಿಗೆ ನೆರಳಾಗು, ನಲುಗಿದವರಿಗೆ ನೆಲೆಯಾಗು, ಅಂಗವಿಕಲರಿಗೆ ಅಂಗವಾಗು, ಸಂಗರಹಿತರಿಗೆ ಸಂಘವಾಗು, ಪ್ರೀತಿ ಕೊಟ್ಟು ಪ್ರೀತಿಪಡೆ, ದ್ವೇಷ ಬಿಟ್ಟು ಪ್ರೀತಿ ಬೆಳೆ, ನೊಂದವರ ನಡುವೆ ನಂಜುಂಡನಾಗು ಸರ್ವೇಶ್ವರ".

ಇಲ್ಲಿ ೧೪ ವಾಕ್ಯಗಳಲ್ಲಿ ಒಂದೇ ಭಾವವನ್ನು ಬೇರೆ ಬೇರೆ ಮಾತುಗಳಲ್ಲಿ ಹೇಳಿರುವುದನ್ನು ಕಾಣಬಹುದು.

ಅಸಹಾಯಕರಿಗೆ ಆಧಾರವಾಗು
ಅಶಕ್ತರಿಗೆ ಪೋಷಕನಾಗು
ನೊಂದವರಿಗೆ ನೆರವಾಗು
ನೊಂದವರ ನಡುವೆ ನಂಜುಂಡನಾಗು

ಇಲ್ಲಿ ಭಾವದ ಪುನರುಕ್ತಿಯನ್ನು ಕಾಣಬಹುದು. (ಪುಟ viii)

**ವಚನದ ಗದ್ಯ ರೂಪ**

'ವಚನ ರಚನ'ದ ಮುನ್ನುಡಿಯಲ್ಲಿ ಹೇಳಿರುವ ಮಾತುಗಳಿವು : ಸಂಬೋಧನೆಯ ರೆಕ್ಕೆ ಪುಕ್ಕಗಳನ್ನು ಕಳಚಿಬಿಟ್ಟರೆ ಕೆಲವಂತೂ ಗದ್ಯದ ತುಣುಕುಗಳೇ. ಹಲವು ಸಾರಿ ಹೇಳಿಕೆಗಳ ಮೆರವಣಿಗೆಯೇ ನಡೆದಿರುತ್ತದೆ ಎಂಬ ಮಾತಿಗೆ ನೂರಾರು ವಚನಗಳು ಇವರ ವಚನ ಸಂಕಲನದಲ್ಲಿ ಸಿಗುತ್ತವೆ. ವಚನ ಎನ್ನುವುದಕ್ಕಿಂತ ಗದ್ಯದ ತುಣುಕುಗಳು ಎನ್ನಬಹುದು. ಯಾವುದೋ ಪ್ರಬಂಧದ ಒಂದು ಭಾಗ (ಪ್ಯಾರ) ಎನ್ನುವಂತೆ ಭಾಸವಾಗುತ್ತದೆ.

ಉದಾಹರಣೆಗೆ ಈ ವಚನ ನೋಡಿ (ಪುಟ ೧೩೨, ವಚನ ೪೭೮ ಗದ್ಯದ ತುಣುಕನ್ನು ವಚನವೆಂದು ಕರೆದಂತಿದೆ ಈ ವಚನ. ವಚನ ಹೊಂಬಾಳೆ) ಮನುಷ್ಯ ದುಡಿಯಬೇಕೆಂದೇ ಬದುಕನ್ನು ದೇವರು ರೂಪಿಸಿದ್ದಾನೆ. ಆದ್ದರಿಂದ ದುಡಿಯದೆ ತಿನ್ನಬಾರದು, ತಿಂದು ಬದುಕುಬಾರದು ಎಂದು ಹೇಳುತ್ತಾರೆ. ಇಲ್ಲಿ ವಿಷಯ ನಿರೂಪಣೆ ಚೆನ್ನಾಗಿದೆ. ಆದರೆ ರಚನಾ ಸ್ವರೂಪದಲ್ಲಿ ವಚನವಾಗಿಲ್ಲ ಗದ್ಯಭಾಗ ಆಗಿದೆ ಮತ್ತು ಇಲ್ಲಿ ವಚನ ಗಾತ್ರದಲ್ಲಿ ಹಿರಿದು ಸತ್ವದಲ್ಲಿ ಕಿರಿದು ಎನ್ನಬಹುದು.

"ಬತ್ತವನ್ನು ಕೊಟ್ಟ ದೇವರು ಅನ್ನವನ್ನೇ ಕೊಡಬಹುದಿತ್ತಲ್ಲ?
ಕೊಟ್ಟರೂ ದುಡಿತಕ್ಕೆ ಹಚ್ಚಿದ್ದು ಏಕೆ ?
ಬತ್ತದ ಅಗೆಹುಯ್ಯಬೇಕು, ಅಗೆ ಬೆಳೆಸಿ ಸಸಿ ಮಾಡಬೇಕು
ಸಸಿ ಕಿತ್ತು, ಹದ ಮಾಡಿ ಭೂಮಿಯಲ್ಲಿ ನೆಡಬೇಕು
ಕಳೆ ತೆಗೆಯಬೇಕು, ಬೆಳೆ ಬಂದಾಗ ಕುಯ್ಯಬೇಕು
ಕುಯ್ದುದನ್ನು ಬಡಿಯಬೇಕು, ಒಕ್ಕಣಿಸಬೇಕು

ಕಣಕ್ಕೆ ತಂದ ಬತ್ತವನ್ನು ಮಿಲ್ಲು ಮಾಡಿಸಬೇಕು
ಬಂದ ಅಕ್ಕಿಯನ್ನು ಅನ್ನ ಮಾಡಬೇಕು
ಮಾಡಿದ ಅನ್ನವನ್ನು ಮಸಾಲೆಯೊಡನೆ ಉಣ್ಣಬೇಕು
ಕೊಂಕಣ ಸುತ್ತಿ ಮೈಲಾರಕ್ಕೆ ಬರುವ ಕ್ರಿಯೆಗೆ ಏನೆನ್ನಬೇಕು ?
ದುಡಿದರೆ ಆಯಸ್ಸು ವೃದ್ಧಿ, ದುಡಿಯದಿರೆ ಆಯಸ್ಸು ಕ್ಷೀಣ
ದುಡಿಯದೆ ತಿನ್ನಬಾರದು, ತಿಂದು ಬದುಕಬಾರದು
ದುಡಿಮೆಯಿಲ್ಲದ ಬಾಳು ಬಾಳಲ್ಲ, ಬೆವರಿಳಿಯದ ಬಾಳು ಗೋಳು
ದುಡಿಯದೇ ತಿನ್ನುವಂತಿದ್ದರೆ ಬದುಕುವುದು ಬೇಕಿರಲಿಲ್ಲ ಸರ್ವೇಶ್ವರ"

ಸಂಕ್ಷಿಪ್ತತೆ, ಸ್ವಾರಸ್ಯ ವಚನದ ಲಕ್ಷಣಗಳಲ್ಲಿ ಒಂದು. ಇಲ್ಲಿ ಅದಿಲ್ಲ, ಅಷ್ಟೇ ಅಲ್ಲ, ಇಲ್ಲಿರುವುದೆಲ್ಲ ಶುದ್ಧ ಗದ್ಯ ವಾಕ್ಯಗಳು. ಇದು ವಚನದ ಗದ್ಯ ರೂಪ ಅಷ್ಟೆ. ವಚನವಲ್ಲ.

**ಸಂಖ್ಯೆ ಮುಖ್ಯವಲ್ಲ ಸತ್ವ ಮುಖ್ಯ**

ಕೊನೆಯಲ್ಲಿ ಅವರ ವಚನ ಸಂಕಲನಗಳ ಬಗ್ಗೆ ಅವರದೇ ವಚನ ಹೇಳಿದರೆ ಸಾಕು.

"ಸಾಹಿತ್ಯ ರಚನೆಯಲ್ಲಿ ಸಂಖ್ಯೆ ಮುಖ್ಯವೊ ಸತ್ವ ಮುಖ್ಯವೋ ? ವಾದಕ್ಕೆ ಯಾವುದೂ ಸರಿಯಾಗಬಹುದು, ಸರಿಯಾಗದಿರಬಹುದು. ಗಟ್ಟಿ ಕಾಳು ಉಳಿಯುತ್ತದೆ, ಜಳ್ಳು ಕಾಳು ಮರೆಯಾಗುತ್ತದೆ. ದುಡಿಮೆ ನಮ್ಮ (ಡಿಲಿಂ) ಧರ್ಮ, ಮೌಲ್ಯ ನಿರ್ಣಯ (ವಿಮರ್ಶೆ) ಕಾಲಕರ್ಮ ಸರ್ವೇಶ್ವರ. ಈ ಬಗ್ಗೆ ವಿವರಣೆ ಯಾಕೆ?

ಡಿ. ಲಿಂಗಯ್ಯನವರ ಆಧುನಿಕ ವಚನಗಳಲ್ಲಿ ಗಟ್ಟಿ ಕಾಳುಗಳಿವೆ, ಜಳ್ಳು ಕಾಳುಗಳಿವೆ. ಅವುಗಳನ್ನು ಜರಡಿ ಹಿಡಿಯಬೇಕಾಗಿದೆ. ಮೊರದಲ್ಲಿ ಕೇರಬೇಕಾಗಿದೆ. ಏಕೆಂದರೆ ಕಾವಿಲ್ಲದೆ ಕಾವ್ಯ ರಚಿಸಿದಂತೆ, ವಚನ ರಚನೆಯ ಕ್ರಿಯೆಯನ್ನು ಹತ್ತಾರು ವರ್ಷ ಒಂದೇ ಸಮನೆ ಮಾಡಿದ್ದಾರೆ. ಎಷ್ಟೋ ಸಲ ಯಾಂತ್ರಿಕವಾಗಿ ವಚನ ರಚನೆ ಮಾಡಿದಂತೆ ಕಾಣುತ್ತದೆ. ಅದರಿಂದ ಜಳ್ಳುಕಾಳು ಸೇರಿದೆ. ಅವುಗಳ ನಡುವೆ ಗಟ್ಟಿ ಕಾಳು ಸಾಕಷ್ಟಿರುವುದು. ಆಧುನಿಕ ವಚನ ಸಾಹಿತ್ಯ ಅಧ್ಯಯನ ಮಾಡುವವರು ಖಂಡಿತವಾಗಿಯೂ ಡಿ. ಲಿಂಗಯ್ಯನವರ ವಚನ ಸಂಕಲನಗಳನ್ನು ಗಮನಿಸಲೇಬೇಕಾಗುತ್ತದೆ ಮತ್ತು ಮೂರು ವಚನ ಸಂಕಲನಗಳಿಗೆ ಬರೆದಿರುವ ಮುನ್ನುಡಿಗಳು ಆಧುನಿಕ ವಿಚಾರಗಳ ವಿಶ್ಲೇಷಣೆ ತುಂಬಾ ಸೊಗಸಾಗಿದೆ.

❍



# ೭. ಪ್ರೊ. ಡಿ. ಲಿಂಗಯ್ಯನವರ ವ್ಯಕ್ತಿಚಿತ್ರ (ಗ್ರಂಥಗಳು) ಮತ್ತು ಜೀವನ ಚರಿತ್ರೆಗಳು

–ಡಾ. ವಿಜಯಾ ಸುಬ್ಬರಾಜ್*

**ಪ್ರೊ.** ಡಿ. ಲಿಂಗಯ್ಯನವರು ಕನ್ನಡ ಸಾಹಿತ್ಯ ಸಂದರ್ಭದ ಪ್ರಮುಖ ಲೇಖಕರಾಗಿರುವರಲ್ಲದೆ ಜಾನಪದ ವಿದ್ವಾಂಸರೆಂದೂ ಗುರುತಿಸಿಕೊಂಡಿದ್ದಾರೆ. ಜಾನಪದ ಕತೆ–ಕಾವ್ಯ, ವಿಮರ್ಶೆ, ಕಾದಂಬರಿಗಳಲ್ಲದೆ, ಜೀವನ ಚರಿತ್ರೆ, ವ್ಯಕ್ತಿ ಚರಿತ್ರೆಗಳ ಕ್ಷೇತ್ರದಲ್ಲಿ ತಮ್ಮ ಬಹುಮುಖ ಪ್ರತಿಭೆಯನ್ನು ಪರಿಚಯಿಸಿದ್ದಾರೆ. ಅವರು ಎಲ್ಲಾ ಪ್ರಕಾರಗಳಲ್ಲೂ ಪ್ರಯೋಗಶೀಲರಾಗಿ ಬರೆದಿದ್ದಾರಾದರೂ ಜೀವನ ಚರಿತ್ರೆ, ವ್ಯಕ್ತಿ ಚರಿತ್ರೆಗಳನ್ನು ಬರೆಯುವುದರಲ್ಲಿ ಸಿದ್ಧಹಸ್ತರಾಗಿದ್ದಾರೆ ಮತ್ತು ಆ ಪ್ರಕಾರದ ಬರವಣಿಗೆಗೆ ಉತ್ತಮ ಮಾದರಿಗಳನ್ನು ಒದಗಿಸಿದ್ದಾರೆ. ಜೀವನ ಚರಿತ್ರೆಗಳನ್ನಾಗಲೀ ವ್ಯಕ್ತಿ ಚರಿತ್ರೆಗಳನ್ನಾಗಲೀ ಬರೆಯುವುದು ಸುಲಭದ ಮಾತಲ್ಲ. ಅವುಗಳ ರಚನೆಗೆ ವಿಶೇಷವಾದ ಮನೋಧರ್ಮ, ಬದ್ಧತೆ, ಚಾರಿತ್ರಿಕತೆ, ಸಂಶೋಧನಾ ದೃಷ್ಟಿ–ಇವೆಲ್ಲವುಗಳ ಮೇಳೈಕೆಯ ಜೊತೆಗೆ, ಯಾರನ್ನು ದೃಷ್ಟಿಯಲ್ಲಿರಿಸಿಕೊಂಡು ಈ ಚರಿತ್ರೆಗಳನ್ನು ಬರೆಯುತ್ತೇವೆಯೋ, ಅವರು ಜೀವಂತವಾಗಿದ್ದಲ್ಲಿ ಅವರ ಜೊತೆಗೆ ಹತ್ತಿರದ ಸಂಪರ್ಕ, ಅವರನ್ನು ಕುರಿತಾದ ಎಲ್ಲಾ ಮಾಹಿತಿಗಳನ್ನು ನೇರವಾಗಿ ಅವರಿಂದಲೇ ಸಂದರ್ಶನಗಳ ಮೂಲಕವಾಗಿಯೂ, ಅವರ ಆತ್ಮೀಯರಿಂದ ಪರೋಕ್ಷವಾಗಿಯೂ ಅವರ ವ್ಯಕ್ತಿತ್ವ, ಮನೋಧರ್ಮ, ಅವರ ಒಡನಾಟದ ಅವಧಿಯಲ್ಲಿ ಅವರು ಗ್ರಹಿಸಿದ ವಿವರಗಳ ಮೂಲಕವಾಗಿಯೂ ಒಂದು ಸಮಗ್ರ ಅಥವಾ ಅಖಂಡ ವ್ಯಕ್ತಿತ್ವದ ಚಿತ್ರವನ್ನು ರೂಪಿಸಿಕೊಳ್ಳಬೇಕಾದ್ದು ಅನಿವಾರ್ಯವಾಗಿರುತ್ತದೆ. ಒಂದು ವೇಳೆ ಅವರು ಭೂತಕಾಲಕ್ಕೆ ಸಂದವರಾದಲ್ಲಿ, ಅವರ ಬಗ್ಗೆ ಮಾಹಿತಿ ಸಂಗ್ರಹ ಒಂದು ದೊಡ್ಡ ಸವಾಲಿನಂತಾಗುತ್ತದೆ. ಜೀವನ ಚರಿತ್ರೆ, ವ್ಯಕ್ತಿ ಚರಿತ್ರೆಗಳ ಕೇಂದ್ರ ಪಾತ್ರಗಳ ಬಗ್ಗೆ ಬರೆಯುವಾಗ ಅವರ ಸಮಕಾಲೀನ ಚಾರಿತ್ರಿಕ, ಸಾಂಸ್ಕೃತಿಕ, ರಾಜಕೀಯ ವಿವರಗಳ ಜೊತೆಗೆ ಅವರ ಸಂಪರ್ಕ, ಒಡನಾಟಗಳಲ್ಲಿ (ಯಾವುದೇ ಸನ್ನಿವೇಶ ಸಂದರ್ಭಗಳ ಮೂಲಕವಾಗಲಿ) ಇದ್ದಂತಹ ಸಂಬಂಧಗಳ ಸ್ವರೂಪವನ್ನು ಲಭ್ಯ ಮಾಹಿತಿಗಳ ಜೊತೆ ಜೊತೆಗೆ ಸೃಜನಶೀಲ ಮನಸ್ಸು, ಆ ವ್ಯಕ್ತಿಗಳ ಕುರಿತ ಕೆಲವು ಅಂಶಗಳನ್ನೂ ಊಹೆಯ ಮೂಲಕ ಕಟ್ಟಿಕೊಳ್ಳಬೇಕಾಗುತ್ತದೆ. ನೂರಾರು ಸಂಖ್ಯೆಯಲ್ಲಿ ವ್ಯಕ್ತಿ ಚರಿತ್ರೆಗಳನ್ನು (ಜ್ಞಾಪಕ

* ವಿಳಾಸ : # ೫೧, 'ಹಂಸಿ' ಮೊದಲ 'ಎ' ಕ್ರಾಸ್, ೩ನೇ ಮೇನ್, ಬನಗಿರಿನಗರ, ಬೆಂಗಳೂರು–೫೬೦೦೮೫. ಮೊಬೈಲ್ : ೯೯೮೬೯೨೮೮೭೬

ಚಿತ್ರಶಾಲೆ)' ಬರೆದ ಡಿವಿಜಿ ಅವರು ಈ ಪ್ರಕಾರಗಳನ್ನು ಕುರಿತು ಅತ್ಯಂತ ಮೌಲಿಕವಾದ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಮೂಲಭೂತವಾಗಿ ಈ ಎರಡೂ ಪ್ರಕಾರಗಳನ್ನು ಬರೆಯುವುದು ಬಹು ಕಷ್ಟದ ಕೆಲಸವೆಂಬ ಸತ್ಯವನ್ನು ಒಪ್ಪಿಕೊಂಡು, ಅವುಗಳ ಸ್ವರೂಪ, ಲಕ್ಷಣಗಳನ್ನು ತಮ್ಮದೇ ಗ್ರಹಿಕೆಯೊಂದಿಗೆ ವಿವರಿಸುತ್ತಾರೆ. ವ್ಯಕ್ತಿ ಚರಿತ್ರೆಗಳಾಗಲೀ ಜೀವನ ಚರಿತ್ರೆಗಳಾಗಲೀ ಮೊದಲಿಗೆ, ೧೯ನೇ ಶತಮಾನದಲ್ಲಿ ಫ್ರಾನ್ಸ್ ಮತ್ತು ಜರ್ಮನಿಗಳಲ್ಲಿ ಪ್ರಬಲವಾಗಿ ಕಾಣಿಸಿಕೊಂಡರೂ ಕನ್ನಡ ಸಾಹಿತ್ಯದಲ್ಲಿ ೨೦ನೇ ಶತಮಾನದಿಂದ ಪ್ರಚಲಿತವಾಯಿತೆನ್ನುತ್ತಾರೆ. ಆದರೆ ಇಂತಹ ಪ್ರಕಾರಗಳು ಹಿಂದಿನಿಂದ ಇದ್ದವಾದರೂ ಅವುಗಳನ್ನು ಇವತ್ತಿನ ಹಾಗೆ ಜೀವನ ಚರಿತ್ರೆಗಳು, ವ್ಯಕ್ತಿ ಚರಿತ್ರೆಗಳೆಂದು ಗುರುತಿಸಿ ಅವುಗಳನ್ನು ಒಂದು ಪ್ರಕಾರವೆಂದು ಪ್ರತ್ಯೇಕಿಸಿ ಅಧ್ಯಯನ ಮಾಡುತ್ತಿರಲಿಲ್ಲ.

ಡಿ.ವಿ.ಜಿ. ಹೇಳುವಂತೆ ಚರಿತ್ರೆಗಳಲ್ಲಿ ದೇಶ ಚರಿತ್ರೆ, ವ್ಯಕ್ತಿ ಚರಿತ್ರೆ, ಜೀವನ ಚರಿತ್ರೆ, ಆತ್ಮಚರಿತ್ರೆ ಹೀಗೆ ಹಲವು ಪ್ರಭೇದಗಳಿವೆ. ಇವುಗಳಲ್ಲಿ ಆತ್ಮಚರಿತ್ರೆ ವ್ಯಕ್ತಿಯೊಬ್ಬರ ಸ್ವನಿರೂಪಣೆಯಾದರೆ ಉಳಿದವು ಬೇರೊಬ್ಬರಿಂದ ನಿರೂಪಣೆಯಾಗಿರುತ್ತದೆ. ಈ ಪ್ರಭೇದಗಳಲ್ಲಿ ಕಾಣಿಸಿಕೊಳ್ಳುವ ಒಂದೊಂದು ಚರಿತ್ರೆಯ ರೂಪರೇಷೆಗಳನ್ನು ಡಿ.ವಿ.ಜಿ. ಗುರುತಿಸುತ್ತಾರೆ.

ಯಾವುದೇ ಚರಿತ್ರೆಯಾಗಲೀ ಮುಖ್ಯವಾಗಿ ಪ್ರಮಾಣಗಳಿಂದ ಸೋದಾಹರಣೆ ಗಳಿಂದ ನಿರೂಪಿತವಾಗಿರಬೇಕು. ಒಂದೊಂದು ಪ್ರಕಾರದ ಚರಿತ್ರೆಗೂ ತನ್ನದೇ ಆದ ಕೆಲವು ಲಕ್ಷಣಗಳು ಮತ್ತು ನಿರೀಕ್ಷೆಗಳು ಇರುತ್ತವೆ. ಡಿವಿಜಿ ಹೇಳುವ ದೇಶಚರಿತ್ರೆ, ಚರಿತ್ರೆಯೇ ಆಗಿದೆ. ಇದರಲ್ಲಿ ಹೊರಗಣ ಮಾಹಿತಿಗಳ ಜೊತೆ ಜೊತೆಗೆ, ಹೊರಗಣ ಮಾಹಿತಿಗೆ ಸಿಗದ ಆದರೆ ಊಹೆಗೆ ಮಾತ್ರ ತೋರುವ ಕೆಲವು ಅಂಶಗಳನ್ನೂ ಒಳಗೊಂಡಿರುತ್ತದೆ. ಒಂದು ದೇಶಕ್ಕೆ ಸಂಬಂಧಿಸಿದಂತೆ ತಾರೀಖುಗಳು, ಸ್ಥಳಗಳು, ಆಡಳಿತ ವ್ಯವಸ್ಥೆ, ನಡೆದ ಯುದ್ಧಗಳು ಇತ್ಯಾದಿಯಾಗಿ ಸಂಶೋಧನೆಯಿಂದ ಮತ್ತು ದಾಖಲೆಗಳಿಂದ ಪಡೆಯಬಹುದಾದರು ಜನರ ಮನೋಧರ್ಮ, ಐತಿಹಾಸಿಕ ವ್ಯಕ್ತಿಗಳ ಅಂತರಂಗದ ಆಶಯಗಳು, ಸಾಂದರ್ಭಿಕವಾಗಿ ಹುಟ್ಟಿಕೊಳ್ಳುವ ತಲ್ಲಣಗಳು, ರಾಜ ಮಹಾರಾಜರುಗಳ ಸ್ವಾರ್ಥ ಲಾಲಸೆಗಳು ಅಥವಾ ಔದಾರ್ಯ, ಮಾನವೀಯತೆ ಇತ್ಯಾದಿಗಳ ಬಗ್ಗೆ ಕೇವಲ ಊಹೆಯಿಂದ ಮಾತ್ರವೇ ಚಿತ್ರವನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಹಾಗಾಗಿ ಚರಿತ್ರೆ ಎನ್ನುವುದೂ ಕೂಡಾ ವಾಸ್ತವ ಮತ್ತು ಊಹೆಗಳ ಒಂದು ಸಂಕೀರ್ಣ ಬರಹವೇ ಆಗುತ್ತದೆ.

ವ್ಯಕ್ತಿ ಚರಿತ್ರೆ, ಜೀವನ ಚರಿತ್ರೆ ಇತ್ಯಾದಿ ಎಲ್ಲ ಚರಿತ್ರೆಯ ಪ್ರಕಾರಗಳನ್ನೂ ಇಂದು ಬಹು ಮುಖ್ಯವಾದ ಸಾಹಿತ್ಯ ಭಾಗವೆಂದೇ ಪರಿಗಣಿಸಲಾಗುತ್ತಿದೆ ಮತ್ತು ಅಧ್ಯಯನ ಮಾಡಲಾಗುತ್ತಿದೆ. ಡಿವಿಜಿ ಭಾವಿಸುವಂತೆ ಸೃಜನಶೀಲ ಬರಹಗಳಾದ ಕಥೆ, ಕಾದಂಬರಿ, ನಾಟಕ ಇತ್ಯಾದಿಗಳ ಜೊತೆ ಜೊತೆಗೆ ಪರಿಗಣಿಸಬೇಕಾಗಿರುವುದಕ್ಕೆ ಕಾರಣ–ಇವೆಲ್ಲವುಗಳ ಮೂಲದ್ರವ್ಯ ಒಂದೇ ಎಂಬುದು ! ಎಲ್ಲ ಪ್ರಕಾರಗಳಲ್ಲಿಯೂ ಮನುಷ್ಯ ಸನ್ನಿವೇಶಗಳು,



ವರ್ತನೆಗಳು, ಸಂಘರ್ಷಗಳು ಸಾಂಸ್ಕೃತಿಕ ಅಂಶಗಳು ಇತ್ಯಾದಿಗಳೇ ಪ್ರಮುಖವಾದ ವಸ್ತು ದ್ರವ್ಯವಾಗಿರುತ್ತದೆ. ಆದರೆ ಒಂದೇ ಒಂದು ವ್ಯತ್ಯಾಸವೆಂದರೆ ದೇಶ ಚರಿತ್ರೆಯಲ್ಲಿ ಸಮಗ್ರ ಜನಜೀವನ ಬಿಂಬಿತವಾದರೆ ವ್ಯಕ್ತಿ ಚರಿತ್ರೆ, ಜೀವನ ಚರಿತ್ರೆ, ಆತ್ಮಚರಿತ್ರೆಗಳಲ್ಲಿ ವ್ಯಕ್ತಿ ಬದುಕಿನ ಸಮಗ್ರ ಅಥವಾ ಆಂಶಿಕ ನಿರೂಪಣೆ ಇರುತ್ತದೆ. ವ್ಯಕ್ತಿ ಚರಿತ್ರೆಗಳನ್ನು, ಜೀವನ ಚರಿತ್ರೆಗಳನ್ನು ಯಾಕೆ ಬರೆಯಬೇಕು ? ಎನ್ನುವ ಪ್ರಶ್ನೆಗೆ ಡಿವಿಜಿಯವರೇ ಸಮರ್ಥನೆ ನೀಡುತ್ತಾರೆ. ಈ ಚರಿತ್ರೆಗಳಿಗೆ ವಸ್ತುವಾಗಲು ಅರ್ಹರು ಯಾರೆಂದರೆ ಅವರು ಸಮಾಜದಲ್ಲಿ ಗಣ್ಯರಾಗಿ, ಮಹಾನ್ ವ್ಯಕ್ತಿಗಳಾಗಿ ಕಲೆ, ಸಾಹಿತ್ಯ, ಸಂಸ್ಕೃತಿ, ಅಧ್ಯಾತ್ಮ ಕ್ಷೇತ್ರಗಳಲ್ಲಿ ಗುರುತಿಸಿಕೊಂಡವರಾಗಿರಬೇಕು. ಸಮಾಜಕ್ಕೆ, ರಾಷ್ಟ್ರಕ್ಕೆ ಆದರ್ಶಪ್ರಾಯರೂ ಅನುಕರಣೀಯ ವ್ಯಕ್ತಿತ್ವವುಳ್ಳವರೂ, ಗೌರವ ಪ್ರತಿಷ್ಠೆಗಳಿಗೆ ಸಾಧನೆ ಚಿಂತನೆಗಳಿಗೆ ಹೆಸರಾದವರಾಗಿರಬೇಕು. ಡಿವಿಜಿ ಅವರ ಮಾತುಗಳಲ್ಲಿಯೇ ಹೇಳುವುದಾದರೆ, "ವ್ಯಕ್ತಿ ಚರಿತ್ರೆ ಜನಜೀವನದ ಮೂಲಾಂಕುರ ಪ್ರಾಯಗಳಾದ ಮಹಾಪುರುಷರ ಪ್ರತಿಬಿಂಬ. ಸಮಾಜದಲ್ಲಿ ಆಗಿಂದಾಗ್ಗೆ ಹೊರಡುವ ಹೊಸ ಹೊಸ ಅಭಿಪ್ರಾಯಗಳು, ಹೊಸ ಹೊಸ ಸಮಾರಂಭಗಳು, ಹೊಸ ಹೊಸ ಸಂಸ್ಥೆಗಳು– ಇವಕ್ಕೆ ಪ್ರಥಮ ಕಾರಣರಾದವರು ಜನಜೀವಿತದ ಮೂಲ ಪುರುಷರು. ಅವರ ಬೋಧನೆಯಂತೆ, ಅವರು ಮಾಡಿದ ವಾದ ಪ್ರಚಾರದಂತೆ, ಅವರು ಅನುಸರಿಸಿದ ಸಂಪ್ರದಾಯದಂತೆ, ಅವರು ನಡೆದ ನಡವಳಿಕೆಯಂತೆ, ಜನಸಾಮಾನ್ಯ ನಡೆಯುತ್ತದೆ"– ಈ ಮಾತುಗಳಲ್ಲಿ ವ್ಯಕ್ತಿ ಚರಿತ್ರೆಗೆ ವಸ್ತುವಾಗಲು, ವ್ಯಕ್ತಿಯೊಬ್ಬರಲ್ಲಿ ಯಾವುದೇ ರೀತಿಯಲ್ಲಿ ಪ್ರತಿಭೆ, ಸಾಮರ್ಥ್ಯ, ದೃಷ್ಟಿ ದರ್ಶನ, ಚಾರಿತ್ರ್ಯ, ಆಲೋಚನೆ, ಚಿಂತನೆ, ಸೃಜನಶೀಲತೆ, ಉದಾತ್ತತೆ ಇತ್ಯಾದಿ ಇತ್ಯಾದಿಯಾದ ಗುಣಗಳು ಅನನ್ಯವಾಗಿರಬೇಕು; ಅನುಕರಣೀಯ ವಾಗಿರಬೇಕು.

ಜೀವನ ಚರಿತ್ರೆಗಳು ವ್ಯಕ್ತಿ ಚರಿತ್ರೆಗಳು ಹೆಚ್ಚು ಕಡಿಮೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಜೀವನ ಚರಿತ್ರೆ ಸಂಕ್ಷಿಪ್ತ ರೂಪದಲ್ಲಿ ವ್ಯಕ್ತಿಚರಿತ್ರೆಯಾದರೆ, ವ್ಯಕ್ತಿಚರಿತ್ರೆ ವ್ಯಕ್ತಿಯ ಬದುಕಿನ ಯಾವೊಂದು ಸಂಗತಿಯನ್ನು, ವಿವರವನ್ನು ಬಿಡದೆ ಹುಟ್ಟಿದಂದಿನಿಂದ ಅಂತ್ಯಕಾಲದವರೆಗಿನ ಅವರ ಬದುಕಿನ ಹೆಜ್ಜೆಗಳಿಗೆ ಸಮಗ್ರ ನಿರೂಪಣೆಯೊಂದಿಗೆ ವಿಸ್ತೃತ ರೂಪವನ್ನು ಪಡೆದಲ್ಲಿ ಅದು ಜೀವನ ಚರಿತ್ರೆಯಾಗುತ್ತದೆ.

ಜೀವನ ಚರಿತ್ರೆಯಲ್ಲಿ, ಚರಿತ್ರನಾಯಕನ ಹುಟ್ಟಿದ ತಾರೀಖು, ಸ್ಥಳ, ಕುಲ, ವಂಶಾನುಪೂರ್ವಿಕತೆ, ವಿದ್ಯಾಭ್ಯಾಸದ ಸ್ಥಳ, ಮಾಡಿದ ವಿದ್ಯಾಭ್ಯಾಸ, ಅಂದರೆ ಓದಿದ ಶಾಲೆಗಳು, ಬರೆದು ಪಾಸಾದ ಪರೀಕ್ಷೆಗಳು, ಮಾಡಿದ ಹುದ್ದೆಗಳು, ಮಾಡಿದ ಪ್ರಯಾಣಗಳು, ಮಾಡಿದ ಕೆಲಸಗಳು, ಸಾಧಿಸಿದ ಸಾಧನೆಗಳು, ಪಡೆದ ಪ್ರಶಸ್ತಿಗಳು, ನಿರ್ವಹಿಸಿದ ಜವಾಬ್ದಾರಿಗಳು, ಕಟ್ಟಿದ ಸಂಘ ಸಂಸ್ಥೆಗಳು, ಇತ್ಯಾದಿ ಇತ್ಯಾದಿ ಎಲ್ಲ ಬಗೆಯ ಬಾಹ್ಯ ಸಂಗತಿಗಳನ್ನು ಒಳಗೊಂಡಿರುವುದು ಒಂದು ನೆಲೆಯಾದರೆ ಚರಿತ್ರ ವ್ಯಕ್ತಿಯ ಸ್ವಭಾವ, ಮನೋಧರ್ಮ, ತೋರುವ ಪ್ರೀತಿ ವಾತ್ಸಲ್ಯಗಳು, ಸ್ನೇಹ ಸಂಪರ್ಕಗಳು, ಅನುಭವಿಸಿದ ನೋವು ನಲಿವುಗಳು, ಹೊಯ್ದಾಟಗಳು ಇತ್ಯಾದಿ ವಿವರಗಳು

ಮುಖ್ಯವಾದರೂ, ಇವುಗಳನ್ನು ಗ್ರಹಿಸಿ ಬರೆಯುವುದು ಕಷ್ಟದ ಕೆಲಸವಾದರೂ, ಅವರ ಬದುಕಿನ ಸನ್ನಿವೇಶ ಸಂದರ್ಭಗಳಲ್ಲಿ ನಡೆದುಕೊಳ್ಳುವ ರೀತಿಯಿಂದ ಮತ್ತು ಸ್ನೇಹಿತರು ಸಂಬಂಧಿಗಳು, ಒಡನಾಡಿಗಳು ಮುಂತಾದವರ ಜೊತೆಗಿನ ನಡವಳಿಕೆ ಸಂಬಂಧಗಳ ಹಿನ್ನೆಲೆಯಲ್ಲಿ ಊಹೆಯ ಮೂಲಕ ಅವರ ಅಂತರಂಗದ ಚಿತ್ರವನ್ನು ಕಟ್ಟಿಕೊಳ್ಳಬೇಕಾಗುತ್ತದೆ; ಮತ್ತು ಅದು ಅನಿವಾರ್ಯವೂ ಆಗುತ್ತದೆ.

ಒಟ್ಟಿನಲ್ಲಿ ವ್ಯಕ್ತಿ ಚರಿತ್ರೆಯೋ ಜೀವನ ಚರಿತ್ರೆಯೋ ಬರೆಯುವಲ್ಲಿ, ಚರಿತ್ರಾರ್ಹ ವ್ಯಕ್ತಿಯಲ್ಲಿ ಯಾವುದಾದರೂ ಒಂದು ವಿಶಿಷ್ಟ ಗುಣ ಇರಬೇಕಾದುದು ಅನಿವಾರ್ಯ ವಾಗುತ್ತದೆ. ಸ್ವಲ್ಪ ದೀರ್ಘವೆನಿಸಬಹುದಾದ ಈ ಪೀಠಿಕೆಯ ಹಿನ್ನೆಲೆಯಲ್ಲಿ ಪ್ರೊ. ಡಿ. ಲಿಂಗಯ್ಯನವರು ಬರೆದಿರುವ ಹತ್ತಕ್ಕೂ ಹೆಚ್ಚಿನ ವ್ಯಕ್ತಿ ಚಿತ್ರಗಳು, ಜೀವನ ಚಿತ್ರಗಳು ಅಥವಾ ಚರಿತ್ರೆಗಳು ಮಾದರಿ ಕೃತಿಗಳಾಗಿರುವುದರಲ್ಲಿ ಸಂಶಯವಿಲ್ಲ. ಡಿ. ಲಿಂಗಯ್ಯ ಮೂಲಭೂತವಾಗಿ ಸೃಜನಶೀಲ ಸಾಹಿತಿಗಳೂ, ಜಾನಪದ ವಿದ್ವಾಂಸರೂ ಆಗಿರುವುದರಿಂದ ಮತ್ತು ಹಲವು ದಶಕಗಳಿಂದ ಸಾಹಿತಿ ಮಿತ್ರರ, ಹಿರಿಯ ಸಾಹಿತಿಗಳು, ವಿದ್ವಾಂಸರ ಒಡನಾಟ ಹೊಂದಿರುವುದು ಮತ್ತು ಇತಿಹಾಸ, ಸಂಶೋಧನೆಗಳ ಅಧ್ಯಯನದಿಂದ, ಆಗಿಹೋದ ಸಾಹಿತಿಗಳ, ಸಂತರ, ಚಾರಿತ್ರಿಕ ವ್ಯಕ್ತಿಗಳ ವಿಷಯವಾಗಿ ಗಂಭೀರ ಅಧ್ಯಯನ ನಡೆಸಿರುವುದರಿಂದ, ಅವರ ವ್ಯಕ್ತಿ ಚರಿತ್ರೆಗಳಾಗಲೀ, ಜೀವನ ಚರಿತ್ರೆಗಳಾಗಲಿ ಅಧಿಕೃತತೆಯಿಂದ ವಂಚಿತವಾಗಿಲ್ಲ. ಎಸ್.ಕೆ. ಕರೀಂಖಾನ್, ಶಿಶುನಾಳ ಶರೀಫ, ಬಿ.ಎಂ.ಶ್ರೀ, ಕೆಂಪೇಗೌಡ ಮೊದಲಾದವರನ್ನು ಕುರಿತು ಬರೆದಿರುವ ಸಣ್ಣ ಸಣ್ಣ ಕೃತಿಗಳು ವ್ಯಕ್ತಿ ಚರಿತ್ರೆಗಳಾಗಿಯೂ ಜೀವನ ಚರಿತ್ರೆಗಳಾಗಿಯೂ ಗುರುತಿಸಿಕೊಳ್ಳುವಲ್ಲಿ ಯಾವುದೇ ಅಭ್ಯಂತರವಿರಲಾರದು. ಇವುಗಳಲ್ಲಿಯೂ ಜೀವನ ವಿವರಗಳು, ಬದುಕಿನ ಸನ್ನಿವೇಶ ಸಂದರ್ಭಗಳು ಕಾಣಿಸಿಕೊಳ್ಳುವುವಾದರೂ, ಸಮಗ್ರ ವಿವರಗಳಿಗೆ ಬದಲಾಗಿ ಸಂಕ್ಷಿಪ್ತ ರೂಪದಲ್ಲಿ ಮತ್ತು ಅತ್ಯಂತ ಪ್ರಮುಖವಾದ ಸನ್ನಿವೇಶ, ಸಂದರ್ಭಗಳನ್ನು ಮಾತ್ರವೇ ಒಳಗೊಂಡಿರುತ್ತವೆ. 'ಕರೀಂಖಾನ್' ಕುರಿತು ಒಂದು ಸಣ್ಣ ಕೃತಿಯ ಜೊತೆಗೆ ಒಂದು ಬೃಹತ್ ಗ್ರಂಥವನ್ನೂ ಬರೆದಿರುವುದು ಡಿ. ಲಿಂಗಯ್ಯನವರ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

'ಜಾನಪದ ಜಂಗಮ' ಎಂದೇ ಜಾನಪದ ಜಗತ್ತು ಹೆಮ್ಮೆಯಿಂದ ಕರೆಯುವ ಎಸ್.ಕೆ. ಕರೀಂಖಾನ್ ಅವರ ಸಂಕ್ಷಿಪ್ತ ಜೀವನ ವಿವರಗಳನ್ನು ಕೊಟ್ಟು, ಜಾನಪದ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಯ ವಿವರಗಳಿಗೆ ಹೆಚ್ಚು ಒತ್ತು ಕೊಡುತ್ತಾರೆ. ಅವರ ಸಾಹಿತ್ಯ ಸೃಷ್ಟಿ, ಚಲನಚಿತ್ರ ಕ್ಷೇತ್ರದಲ್ಲಿನ ಅವರ ದುಡಿಮೆಯ ಸ್ವರೂಪ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗಳ ಅಧ್ಯಕ್ಷರಾಗಿ ಅವರು ರೂಪಿಸಿದ ಕಾರ್ಯಕ್ರಮಗಳು, ಯೋಜನೆಗಳು, ಆ ಕಲಾಪ್ರಕಾರಗಳ ಅಭಿವೃದ್ಧಿಗೆ ಅಗತ್ಯವಾದ ಆರ್ಥಿಕ ಸಹಾಯ, ಅವುಗಳ ಉಳಿಕೆಗಾಗಿ ಅಳವಡಿಸಿದ ಹೊಸ ತಂತ್ರಜ್ಞಾನ, ಗಿರಿಜನರ ಬಗೆಗೆ ಮಾಡಿದ ಸಾಕ್ಷ್ಯಚಿತ್ರ, ಅದರ ನಿರ್ಮಾಣಕ್ಕೆ ಅವರು ಪಟ್ಟ ಸಾಹಸ–ಇತ್ಯಾದಿಗಳನ್ನೂ, ಸೂಕ್ಷ್ಮವಾಗಿ ಪ್ರಸ್ತಾಪಿಸಿದ್ದಾರೆ. ಅದೇ ರೀತಿಯಲ್ಲಿ ಬಿ.ಎಂ.ಶ್ರೀ ಬಗ್ಗೆ ಕೇವಲ ಪರಿಚಯಾತ್ಮಕ ವಿವರಗಳನ್ನು



ನೀಡಿದ್ದಾರೆ. ಮತ್ತೊಂದು ಮಹತ್ವದ ಕೃತಿಯೆಂದರೆ, ಬೆಂಗಳೂರನ್ನು ಕಟ್ಟಿಕೊಟ್ಟ ಮಹಾನ್ ಆಡಳಿತಗಾರ, ಯಲಹಂಕನಾಡು ಭೂಪಾಲರಲ್ಲಿ ಒಬ್ಬನಾದ ಬೆಂಗಳೂರು ಕೆಂಪೇಗೌಡನ ಕುರಿತಾದ 'ಬೆಂಗಳೂರು ಕೆಂಪೇಗೌಡ' ಅತ್ಯಂತ ಮಹತ್ವದ ಕೃತಿಯಾಗಿದೆ. ಕೇವಲ ೮೦ ಪುಟಗಳಷ್ಟೇ ಇರುವ, ಈ ಕೃತಿ ಸಂಶೋಧನಾಧಾರಿತ ಕೃತಿಯಾಗಿ, ಇತಿಹಾಸ ಅಧ್ಯಯನಾಸಕ್ತರಿಗೆ ಇದೊಂದು ಆಕರ ಗ್ರಂಥವೇ ಆಗಿದೆ.

ಇಷ್ಟು ಪುಟ್ಟ ಪುಸ್ತಕದಲ್ಲಿ, ಕೆಂಪೇಗೌಡನ ಜೀವನ ವಿವರಗಳ ಜೊತೆ ಜೊತೆಗೇ ಬೆಂಗಳೂರಿನ ಇತಿಹಾಸದ ಅನಾವರಣ ಆಗಿದೆ. ಬೆಂಗಳೂರು ನಗರ ಕರ್ನಾಟಕದಲ್ಲಿಯೇ ಅದರ ಅಚ್ಚುಕಟ್ಟುತನಕ್ಕೆ, ಭೌತಿಕ, ಸಾಂಸ್ಕೃತಿಕ ಶ್ರೀಮಂತಿಕೆಗೆ ನಿಸರ್ಗ ಸೌಂದರ್ಯಕ್ಕೆ, ಉದ್ಯೋಗಾವಕಾಶಗಳಿಗೆ ಹೆಸರಾಗಿದ್ದು ಎಲ್ಲರೂ ಕರುಬುವಂತಿರುವ ಬೆಂಗಳೂರಿನ ನಿರ್ಮಾಣದ ಕೆಲಸ ಸಾಧ್ಯವಾದದ್ದು ಕನಸುಗಾರ ಕೆಂಪೇಗೌಡನಿಂದ. ಆತನ ಕಾರ್ಯಯೋಜನೆಗಳು, ಅನುಷ್ಠಾನಗೊಳಿಸಿದ ಪರಿಗಳು ಎಲ್ಲವನ್ನೂ ಜೀವನ ವೃತ್ತಾಂತದ ಭಾಗವಾಗಿಯೇ, ಲಭ್ಯ ಮಾಹಿತಿಗಳೊಂದಿಗೆ ಸಾದರಪಡಿಸಿದ್ದಾರೆ. ಐತಿಹಾಸಿಕ ವ್ಯಕ್ತಿಗಳನ್ನು ಕುರಿತು ಬರೆಯುವುದೆಂದರೆ ಬಹು ದೊಡ್ಡ ಸವಾಲಿನ ವಿಷಯವೇ ಆಗಿರುತ್ತದೆ. ಎಲ್ಲಕ್ಕೂ ಸಾಕ್ಷ್ಯ, ಪ್ರಮಾಣಗಳು ಅನಿವಾರ್ಯ. ಅಂಥಾದ್ದರಲ್ಲಿ ಡಿ. ಲಿಂಗಯ್ಯನವರು ಚಾರಿತ್ರಿಕತೆಯ ಎಚ್ಚರದೊಂದಿಗೆ ಗಂಭೀರವಾದ ಅಧ್ಯಯನದೊಂದಿಗೆ ಬರೆದಿದ್ದಾರೆನ್ನು ವುದಕ್ಕೆ ತಮ್ಮ ಕೃತಿಯಲ್ಲಿನ ಪ್ರಸ್ತಾವನೆ ಭಾಗದಲ್ಲಿ ಹೇಳಿರುವ ಮಾತುಗಳೇ ನಿದರ್ಶನವಾಗಿವೆ.

"ಶ್ರೀಕೃಷ್ಣದೇವರಾಯನ ಆಡಳಿತಾವಧಿಯ ಮುಖ್ಯ ಕಾರ್ಯಯೋಜನೆಗಳನ್ನು ಆದಷ್ಟು ವಾಸ್ತವ ನೆಲಗಟ್ಟಿನಲ್ಲಿ ಸಾದರಪಡಿಸಲು ಪ್ರಸ್ತುತ ಗ್ರಂಥದಲ್ಲಿ ಪ್ರಯತ್ನಿಸಿದೆ. ಶಾಸನ, ಬಖೈರು, ಕಡತ, ಜನಪದ ಕಥನ, ಶಿಷ್ಟ ಸಾಹಿತ್ಯದ ಒಳ ಹೂರಣಗಳ ಹಿನ್ನೆಲೆಯಲ್ಲಿ ಕೆಂಪೇಗೌಡನ ಜೀವಿತ ಅವಧಿ ಹಾಗೂ ಆಡಳಿತ ಅವಧಿಯನ್ನು ಅಂದಾಜಿಸಿ ಆ ಕಾಲಮಾನದಲ್ಲಿ ಸಂಭವಿಸಿರಬಹುದಾದ ಘಟನಾವಳಿಗಳನ್ನು ಮುಂದಿಟ್ಟುಕೊಂಡು ನಾಡಪ್ರಭುವಿನ ಜೀವನ ವೃತ್ತಾಂತವನ್ನು ಕಂಡರಿಸಿದೆ" ಎಂದು ಹೇಳಿಕೊಂಡಿರುವಲ್ಲಿ ಅವರ ಐತಿಹಾಸಿಕ ಎಚ್ಚರ ಮತ್ತು ಐತಿಹಾಸಿಕ ವಾಸ್ತವತೆಯ ಬಗ್ಗೆ ಇಟ್ಟಿರುವ ನಿಷ್ಠೆಗಳು ಎದ್ದು ಕಾಣುತ್ತವೆ. ಸನ್ನಿವೇಶ, ಘಟನೆಗಳು ವಾಸ್ತವವೇ ಇದ್ದರೂ ಲೇಖಕನ ಕಲ್ಪನೆ ಮತ್ತು ಅವುಗಳ ವಿವರಗಳನ್ನು ಕಟ್ಟಿಕೊಡುವ ಸಾಮರ್ಥ್ಯ ಇಂಥಲೆಲ್ಲ ಬಹಳ ಮುಖ್ಯವೆನಿಸುತ್ತವೆ.

ಕೆಂಪೇಗೌಡರ ಜೀವನ ಮತ್ತು ಸಾಧನೆಗಳನ್ನು ವಿವರಿಸುವಾಗ, ಹಂತಹಂತವಾಗಿ ಒಂದು ಅನುಕ್ರಮಣಿಕೆಯನ್ನು ಪಾಲಿಸಲಾಗಿದೆ. ಕೆಂಪೇಗೌಡರ ಜೀವನ ಚಿತ್ರಣವೇ ಮುಖ್ಯವಾದರೂ ಕರ್ನಾಟಕದ ಅದರಲ್ಲಿಯೂ ವಿಜಯನಗರದ ಇತಿಹಾಸ ಹಿನ್ನೆಲೆಯಾಗಿದ್ದು, ಕೆಂಪೇಗೌಡರ ವಂಶವೃಕ್ಷದ ಪ್ರಸ್ತಾಪ, ವಿಜಯನಗರ ಅರಸರ ಜೊತೆಗಿನ ಅವರ ತಲೆಮಾರುಗಳ ಸಂಬಂಧ ಎಲ್ಲವನ್ನೂ ವಿವರಿಸುತ್ತಾರೆ. ಜೀವನ ಚರಿತ್ರೆಗೆ ಅನಿವಾರ್ಯವಾದ ಸರಳ ಭಾಷೆ, ನೇರ ನಿರೂಪಣೆಗಳಿದ್ದು, ಕೆಂಪೇಗೌಡರ

ಕಾಲದ ಬೆಂಗಳೂರಿಗೆ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ವ್ಯವಸ್ಥೆಯ ಮತ್ತು ನಗರ ನಿರ್ಮಾಣ ಯೋಜನೆಯ ಸ್ವರೂಪ–ಕುರಿತಂತೆ ಒಂದು ಸ್ಪಷ್ಟ ಚಿತ್ರಣ ನೀಡುವಲ್ಲಿ ಈ ಕೃತಿ ತುಂಬ ಯಶಸ್ವಿಯಾಗಿದೆ. ಭೌತಿಕ ಅಥವಾ ಬಾಹ್ಯ ವಿವರಗಳ ಜೊತೆ ಜೊತೆಗೆ ಕೆಂಪೇಗೌಡರ ಗುಣ ಸ್ವಭಾವಗಳು, ಪ್ರವೃತ್ತಿಗಳು ಎಲ್ಲವನ್ನೂ ಸನ್ನಿವೇಶ ಸಂದರ್ಭಗಳ ಹಿನ್ನೆಲೆಯಲ್ಲಿ ಅನಾವರಣಗೊಳಿಸಿದ್ದಾರೆ. ಕೆಂಪೇಗೌಡರ ದೈವಭಕ್ತಿ, ಧರ್ಮಶ್ರದ್ಧೆಗಳ ಪರಿಣಾಮವಾಗಿ ಬೆಂಗಳೂರು ದೇವಾಲಯಗಳ ನಗರ ಎನಿಸಿಕೊಳ್ಳುವಂತಾದುದೇ ಅಲ್ಲದೆ ಕೆಂಪೇಗೌಡರ ಮತಸಹಿಷ್ಣುತೆ, ಜಾತ್ಯಾತೀತತೆ, ಸಮಾನತೆಯ ದೃಷ್ಟಿಗಳು ಕಾಣಿಸಿದರೆ, ಅವರ ಯೋಜನೆಗಳು, ಅವರ ದೂರದರ್ಶಿತ್ವ, ಕಾಣ್ಕೆಗಳು ಸಾಬೀತಾಗುತ್ತವೆ.

ಇದೇ ಜಾಡಿನಲ್ಲಿ, ಸಂತಕವಿ ಶಿಶುನಾಳ ಶರೀಫರ ಬಗ್ಗೆ ಬರೆಯುವಾಗ ಅವರ ಬದುಕಿನ ಹಿನ್ನೆಲೆಯನ್ನು ಲಭ್ಯ ಮಾಹಿಗಳಿಂದ, ಕೆಲವು ಕೇಳಿಕೆಗಳಿಂದ, ಉದ್ಧೃತಿಗಳಿಂದ, ಕಟ್ಟಿಕೊಟ್ಟು, ಅವರ ಅನುಭಾವ ಸಾಹಿತ್ಯದ ಬಗ್ಗೆ ಅಥವಾ ರಚನೆಗಳ ಬಗ್ಗೆ ಬರೆಯುವಾಗ ಲಿಂಗಯ್ಯನವರೊಳಗಿನ ವಿಮರ್ಶಕ ಎದ್ದುನಿಲ್ಲುತ್ತಾನೆ. ಶಿಶುನಾಳರ ಗೀತೆಗಳು ಸಾಂದರ್ಭಿಕ ರಚನೆಗಳು, ಅವರ ಅಲೆಮಾರಿ ಬದುಕಿನ ಅವಧಿಯಲ್ಲಿ ಅವರಿಗೆ ಎದುರಾದ ಸಂದರ್ಭಗಳು ಗಳಿಸಿದ ಅನುಭವಗಳಿಗೆ ಹೊಮ್ಮಿದ ಪ್ರತಿಕ್ರಿಯೆಯಂತೆ ಸೃಷ್ಟಿಯಾದ ಗೀತೆಗಳಾದ್ದರಿಂದ ಅವುಗಳ ಹಿಂದೆ ಕಾಣುವ ಅರ್ಥಕ್ಕಿಂತ ಕಾಣದ ಧ್ವನಿಯೇ ಹೆಚ್ಚು ಗಂಭೀರವಾಗಿ ಇರುತ್ತದೆ. ಶರೀಫರ ಬದುಕಿನಲ್ಲಿ ಅನೇಕ ಪವಾಡಗಳು ನಡೆಯುತ್ತವೆ. ಮಾತು ಮಾತಿನ ಹಿಂದೆ ಅಧ್ಯಾತ್ಮಿಕ ಅರ್ಥಗಳು ಅಡಗಿರುತ್ತವೆ. ಶರೀಫರ ಜೀವನ ಘಟನೆಗಳು, ಅವರ ಅಧ್ಯಾತ್ಮಿಕ ಚಿಂತನೆಗಳು ತರ್ಕ ವಿತರ್ಕಗಳಿಂದ, ವಿದ್ವಾಂಸರ, ಗುರುಗಳ, ಮಹಾನುಭಾವರ ಒಡನಾಟ, ಭೇಟಿಗಳ ಸಂದರ್ಭದಲ್ಲಿ ನಡೆದ ಸಂವಾದ, ಸಂಭಾಷಣೆಗಳ ಮೂಲಕ ಗಳಿಸಿಕೊಂಡ ಜ್ಞಾನದ ಅಪಾರತೆ ಎಲ್ಲವನ್ನೂ ಒಂದೂ ಬಿಡದೆ ಅತ್ಯಂತ ಅಡಕವಾದ ಶೈಲಿಯಲ್ಲಿ ಶರೀಫರ ಸಮಗ್ರ ಚಿತ್ರವನ್ನು ಅಥವಾ ವ್ಯಕ್ತಿತ್ವವನ್ನು ಕಟ್ಟಿಕೊಡುತ್ತಾರೆ. ಅಲ್ಲದೆ ಶರೀಫರ ತತ್ವಪದಗಳ, ಗೀತೆಗಳ ಅವಲೋಕನದಿಂದ ಆಳವಾದ ಅಧ್ಯಯನದಿಂದ ಮೂಡಿದ ತಮ್ಮ ಅಭಿಪ್ರಾಯಗಳನ್ನು ತೀರ್ಮಾನಿಕ ನೆಲೆಯಲ್ಲಿ ಹೀಗೆ ವಿವರಿಸುತ್ತಾರೆ.

"ಶರೀಫರ ತತ್ವಪದಗಳಲ್ಲಿ ಒಗಟಿನ ಅಂಶ ಅಧಿಕವಾಗಿದೆ. ಕೇಳುಗರಲ್ಲಿ ಕುತೂಹಲ, ಆಸಕ್ತಿ, ಏಕಾಗ್ರತೆ ಹುಟ್ಟಿ ತಾತ್ವಿಕ ಬೋಧೆ ಮನದಟ್ಟಾಗಲು ಈ ಕ್ರಮವನ್ನು ಅನುಸರಿಸಿರುವಂತೆ ಕಾಣುತ್ತದೆ. ಶರೀಫರ ಗೀತೆಗಳಲ್ಲಿ ರೂಪಕ ಕ್ರಿಯೆ ದಟ್ಟವಾಗಿದೆ. ಬಸವಣ್ಣನ ವಚನಗಳಲ್ಲಿರುವಂತೆ ಶರೀಫರ ಪದಗಳಲ್ಲಿ ಪ್ರಾಣಿರೂಪಕಗಳು ಹೇರಳವಾಗಿವೆ" ಎನ್ನುವಲ್ಲಿ ತೌಲನಿಕ ದೃಷ್ಟಿಯೂ ಎದ್ದುಕಾಣುತ್ತದೆ. ಆಶುಕವಿಯೆಂದು ಶರೀಫರನ್ನು ಗುರುತಿಸುತ್ತಲೇ ಅವರ ಗೀತೆಗಳಲ್ಲಿನ ಲೋಪದೋಷಗಳನ್ನೂ ಗುರುತಿಸಿದ್ದಾರೆ. "ಶರೀಫರು ಮುಖ್ಯವಾಗಿ ಆಶುಕವಿ. ಕಂಡದ್ದನ್ನು ಕೇಳಿದ್ದನ್ನು ಕುಂತಲ್ಲಿ ನಿಂತಲ್ಲಿ ಕವಿತೆ ಕಟ್ಟುವ ಕಲೆಗಾರಿಕೆ ಅವರಿಗೆ ಕರಗತವಾಗಿತ್ತು. ಅವರ ರಚನೆಗಳಲ್ಲಿ ಕೆಲವು ಅಪೂರ್ವವಾಗಿವೆ; ಹಲವು ಆಕಾರದಲ್ಲಿ ಮಾತ್ರವೇ ಪದ್ಯಗಳಾಗಿವೆ. ಇವುಗಳಲ್ಲಿ



ಅಪೂರ್ಣ ಎನ್ನಿಸುವವೂ ಸೇರಿವೆ. ಕೆಲವು ಸಾಂಕೇತಿಕ ಕಾವ್ಯ ತಂತ್ರದ ಗರಿಷ್ಠ ಪ್ರಮಾಣ ಮುಟ್ಟಿದ್ದರೆ ಹಲವು ಸಾಧಾರಣತೆಯಿಂದ ಸಮಾಧಾನಗೊಂಡಿವೆ" ಎಂದು ನಿಷ್ಪಕ್ಷಪಾತ ನಿಲುವನ್ನು ತೋರಿದ್ದಾರೆ.

ಇಲ್ಲಿಯವರೆಗಿನ ವ್ಯಕ್ತಿ ಚರಿತ್ರೆಗಳು ಸಂಕ್ಷಿಪ್ತ ರೂಪದಲ್ಲಿದ್ದರೆ ಕನ್ನಡ ಚಾರಿತ್ರಿಕ ಕಾದಂಬರಿ ಕ್ಷೇತ್ರದ ದೈತ್ಯ ಪ್ರತಿಭೆಯಾಗಿರುವ ಸಿ.ಕೆ. ನಾಗರಾಜ್ ಅವರ ಜೀವನಚರಿತ್ರೆ, ಆಧುನಿಕ ಸಾಹಿತ್ಯ ಚರಿತ್ರೆ ಸಂದರ್ಭದಲ್ಲಿ ಅತ್ಯಂತ ಮಹತ್ವದ ಮತ್ತು ಗಮನಾರ್ಹ ಕೃತಿಯಾಗಿದೆ. ಎಲ್ಲ ಜೀವನ ಚರಿತ್ರೆಗಳಂತೆ ಸಿ.ಕೆ. ನಾಗರಾಜ್ ಅವರ ಜೀವನ ವಿವರಗಳು, ಅವರ ಕೌಟುಂಬಿಕ ಪರಿಸರ, ಆರ್ಥಿಕ ಸ್ಥಿತಿ, ವಿದ್ಯಾರ್ಜನೆಗಾಗಿ, ಉದ್ಯೋಗ ಗಳಿಸುವುದಕ್ಕಾಗಿ ಅವರು ನಡೆಸಿದ ಪ್ರಯತ್ನಗಳು, ಎದುರಾದ ಸಂಘರ್ಷಗಳು, ಮತ್ತು ಅನೇಕ ಕಾರಣಗಳಿಂದಾಗಿ ಬಿಕ್ಕಟ್ಟಿನ ಬದುಕಿನ ನಡುವೆಯೂ ನಿರಾಶೆ, ಹತಾಶೆ ಸನ್ನಿವೇಶಗಳಿಗೆ ಮುಖಾಮುಖಿಯಾಗುತ್ತಲೇ ಹೊಟ್ಟೆಪಾಡಿಗಾಗಿ ತೀರಾ ಕನಿಷ್ಠವೆನಿಸುವ ಕೆಲಸಗಳನ್ನು ಅನಿವಾರ್ಯತೆಯಿಂದಾಗಿ ನಿರ್ವಹಿಸುತ್ತಲೇ ತಮ್ಮ ಪ್ರತಿಭೆ, ಕ್ರಿಯಾಶೀಲ ಚಟುವಟಿಕೆ, ಅದಮ್ಯ ಉತ್ಸಾಹ, ಛಲಗಳಿಂದಾಗಿ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಸಾಹಿತ್ಯಕವಾಗಿ ಗುರುತಿಸಿಕೊಳ್ಳುತ್ತಲೇ ಸಂಘಟನೆ, ಸಾಹಿತ್ಯ, ಸಿನಿಮಾ ಕ್ಷೇತ್ರದಲ್ಲಿ ತಮ್ಮ ಅನನ್ಯತೆಯನ್ನು ಸ್ಥಾಪಿಸಿಕೊಳ್ಳುತ್ತಾ ಹೋದ ಪರಿ ನಿಜಕ್ಕೂ ಅದ್ಭುತವೆನಿಸುತ್ತದೆ. ಅವರ 'ಪಟ್ಟಮಹಾದೇವಿ ಶಾಂತಲಾ' ಎಂಬ ಐತಿಹಾಸಿಕ ಬೃಹತ್ ಕಾದಂಬರಿಯೊಂದೇ ಸಾಕು, ಸಾಹಿತ್ಯ ಜಗತ್ತಿನಲ್ಲಿ ಅವರ ಹೆಸರು ಚಿರಸ್ಥಾಯಿಯಾಗುವಂತೆ ಮಾಡಿತು. ಡಿ. ಲಿಂಗಯ್ಯನವರು, ಸಿ.ಕೆ. ನಾಗರಾಜರಾಯರನ್ನು ಬಹಳ ಹತ್ತಿರದಿಂದ ಬಲ್ಲವರಾಗಿದ್ದರು. ಅಲ್ಲದೆ ಸಾಕಷ್ಟು ಒಡನಾಟವೂ ಇತ್ತು. ಅವರ ಕೃತಿಗಳನ್ನು ಓದುವ ಅವಕಾಶವೂ ಇತ್ತು. ಹೀಗಾಗಿ ನಾಗರಾಜರಾಯರ ಜೀವನ ಚರಿತ್ರೆಯನ್ನು ಕಟ್ಟಿಕೊಡುವುದು, ಜೀವನ ಚರಿತ್ರೆಗಳನ್ನು ಬರೆಯುವುದರಲ್ಲಿ ಪಳಗಿದ ಪ್ರತಿಭೆಯುಳ್ಳ ಲಿಂಗಯ್ಯನವರಿಗೆ ಹೆಚ್ಚು ತ್ರಾಸದಾಯಕವಿರಲಾರದು. ಅವರ ಪರಿಚಯ ಅವರ ಕುಟುಂಬದ ಸದಸ್ಯರ, ಅವರ ಒಡನಾಡಿ ಸ್ನೇಹಿತರ, ಪರಿಚಿತರ ಜೊತೆಗೆ ನಡೆಸಿದ ಸಂವಾದ, ಮಾಡಿದ ಸಂದರ್ಶನಗಳಿಂದ, ಈ ಜೀವನ ಚರಿತ್ರೆಯ ವಿವರಗಳು ವಸ್ತುನಿಷ್ಠವೂ, ವಾಸ್ತವವೂ ಆಗಿರುವುದು ಅತಿಶಯವೆನಿಸಲಾರದು. ನಾಗರಾಜರಾಯರ ಬದುಕಿನ ಎಲ್ಲ ಮುಖಗಳ ಪರಿಚಯವನ್ನು ಕರಾರುವಾಕ್ಕಾಗಿ ಮಾಡಿಕೊಟ್ಟಿದ್ದಾರೆನ್ನುವುದು ಒಂದು ಮಹತ್ತರ ಸಂಗತಿ ಎನ್ನುವದು ಒಂದಾದರೆ, ಸಾಹಿತ್ಯ ಲೋಕಕ್ಕೆ ಅವರು ನೀಡಿದ ಕಾಣಿಕೆ ಇನ್ನೂ ಮಹತ್ತರವೆನಿಸಿರುವುದರಿಂದ, ಅವರ ಸಂಘಟನಾ ಸಾಮರ್ಥ್ಯ, ಸಂಘಟನಾ ಚಟುವಟಿಕೆ, ಸಿನಿಮಾ ಕ್ಷೇತ್ರಕ್ಕೆ ಅವರಿಂದ ಸಂದ ಕೊಡುಗೆ ಇತ್ಯಾದಿಗಳಿಗಿಂತ, ಸಾಹಿತ್ಯ ವಿಮರ್ಶೆಯ ಕಡೆಗೇ ಡಿ. ಲಿಂಗಯ್ಯನವರು ಹೆಚ್ಚು ಒತ್ತು ಕೊಟ್ಟಿದ್ದಾರೆ. ಪ್ರತಿಯೊಂದು ಜೀವನ ಚರಿತ್ರೆಗಳಲ್ಲೂ ಲಿಂಗಯ್ಯನವರು ಸಮಗ್ರ ವಿವರಗಳನ್ನು ಸಾಕಷ್ಟು ವಿಸ್ತೃತವಾದ ನೆಲೆಯಲ್ಲಿ ನೀಡುತ್ತಲೇ ಅಲ್ಲಲ್ಲಿ ಒಂದು ಕಡೆ ಚರಿತ್ರೆ ವ್ಯಕ್ತಿಯ ವ್ಯಕ್ತಿತ್ವ, ಗುಣ, ಸ್ವಭಾವ, ಸಾಧನೆ ಎಲ್ಲವನ್ನೂ ಒಳಗೊಂಡಂತೆ ಒಂದು ಸಂಕ್ಷಿಪ್ತವಾದ ಟಿಪ್ಪಣಿಯಂತೆ ತಮ್ಮ ಗ್ರಹಿಕೆಯನ್ನು

ಅಭಿವ್ಯಕ್ತಿಸುತ್ತಾರೆ. ಅಲ್ಲಲ್ಲಿ ಲೇಖಕರ ವಿಚಾರ, ವಿಮರ್ಶೆ, ಟೀಕೆ, ಅಭಿಪ್ರಾಯಗಳು ಕಾಣಿಸಿಕೊಳ್ಳುತ್ತವೆ. ಸಿ.ಕೆ. ನಾಗರಾಜರಾಯರನ್ನು ಕುರಿತಂತೆ ಅವರು ನೀಡುವ ವಿವರ ಹೀಗಿದೆ. "ಕೇವಲ ಸಮಾಜ ಸೇವೆಯಲ್ಲಿ ತೊಡಗಿದ್ದರೆ ಬದುಕು ನೀರಸವಾಗುತ್ತಿತ್ತೋ ಏನೋ. ಅದಕ್ಕಾಗಿ ನಾಟಕ, ಸಾಹಿತ್ಯ, ಕಲೆ ಇತ್ಯಾದಿಗಳ ಸಂಪರ್ಕ ಕಲಾಸೇವೆಗೆ ಹಲವು ಮಾರ್ಗಗಳುಂಟು. ನಾಗರಾಜರಾಯರು ಆರಿಸಿಕೊಂಡದ್ದು ಸರಳವಾದ ಮಾರ್ಗ; ನಮ್ಮ ಸಂಸ್ಕೃತಿಗೆ, ಪರಂಪರೆಗೆ ಪೂರಕವಾದ ಮಾರ್ಗ. ಅವರು ಕೈಗೊಂಡ ನಾಟಕ ಚಟುವಟಿಕೆಯಿಂದ ಕನ್ನಡ ನಾಟಕರಂಗಕ್ಕೆ, ಸಾಹಿತ್ಯಲೋಕಕ್ಕೆ, ಸಂಸ್ಕೃತಿ ವಿಕಾಸಕ್ಕೆ ಬಹಳ ಸಹಕಾರಿಯಾಗಿದೆ. ಅವರ ಸಾಹಿತ್ಯ ಚಟುವಟಿಕೆ ಹಲವು ಆಯಾಮಗಳದ್ದು. ಪ್ರತಿ ಹಂತದಲ್ಲೂ ಪ್ರಯೋಗಶೀಲತೆ ಪ್ರಧಾನ"– ಎನ್ನುವ ಈ ಮಾತುಗಳು ನಾಗರಾಜರಾಯರ ಬಹುಮುಖ ಪ್ರತಿಭೆಯನ್ನು ಸಮಗ್ರ ವ್ಯಕ್ತಿತ್ವವನ್ನು ಏಕಕಾಲಕ್ಕೆ ಕಟ್ಟಿಕೊಡುತ್ತದೆ.

ಬಹುಮುಖಿ ಪ್ರತಿಭೆಯಿಂದಾಗಿ, ಅವರ ಚಟುವಟಿಕೆಗಳ ಕಾರ್ಯ ಕ್ಷೇತ್ರ ಬಹಳ ವಿಸ್ತೃತವಾಗಿದ್ದು, ಹಲವು ವಲಯಗಳಲ್ಲಿನ ವಿಭಿನ್ನ ರುಚಿ, ಸ್ವಭಾವ, ಮನೋಧರ್ಮ, ಅಧಿಕಾರ, ಅಂತಸ್ತುಗಳಲ್ಲಿರುವ ವ್ಯಕ್ತಿಗಳೊಂದಿಗೆ ಸಂಬಂಧಗಳನ್ನು ಹೊಂದಿದ್ದು, ಅವರೊಡನೆ ವ್ಯವಹರಿಸುವಾಗ ಅನೇಕ ಬಗೆಯ ಭಾವಸ್ಥಿತಿಗಳಿಗೆ ಹೊಂದಿಸಿಕೊಳ್ಳ ಬೇಕಾದ ಅಗತ್ಯವಿರುತ್ತದೆ. ಅಂತಹ ಸನ್ನಿವೇಶಗಳ ಮೂಲಕ ನಾಗರಾಜರಾಯರ ಸ್ವಭಾವ, ಮನೋಧರ್ಮಗಳನ್ನು ಕಟ್ಟಿಕೊಳ್ಳುವ ಲೇಖಕರ ಮೇಲೆ ಇರುತ್ತದೆ. ನಾಗರಾಜರಾಯರಲ್ಲಿ ಕಂಡ ಸ್ನೇಹಪರತೆ, ಹಾಸ್ಯಪ್ರವೃತ್ತಿ, ಮೊದಲಾದವುಗಳನ್ನು ಲೇಖಕರು ಗುರುತಿಸಿದ್ದಾರೆ. ಅಲ್ಲದೆ ಈ ಚರಿತ್ರ ವ್ಯಕ್ತಿಯ ನಿಷ್ಠೆ, ನಂಬಿಕೆ, ವಿಶ್ವಾಸಗಳ ಬಗ್ಗೆಯೂ ಬೆಳಕು ಚೆಲ್ಲುತ್ತಾರೆ.

ಲೇಖಕರು ಗುರುತಿಸುವಂತೆ, "ದೇಶ ವಿದೇಶಗಳಲ್ಲಿ ಸುತ್ತಾಡಿದ್ದರೂ ಆಧುನಿಕ ಪರಿಸರದಲ್ಲಿ ಬದುಕುತ್ತಿದ್ದರೂ ನಮ್ಮ ಪರಂಪರೆಯ ಜೀವನ ಮೌಲ್ಯಗಳನ್ನು ನಾಗರಾಜ ರಾಯರು ಕಡೆಗಣಿಸಿಲ್ಲ. ಅವರಲ್ಲಿ ದೈವಭಕ್ತಿ ಅಧಿಕವಾಗಿದೆ. ಧರ್ಮಶ್ರದ್ಧೆ ವಿಪುಲವಾಗಿದೆ; ಗುರುಹಿರಿಯರ ಬಗೆಗೆ ಗೌರವವಿದೆ, ಬದುಕಿನ ನಿಷ್ಠೆ ಅಚಲವಾಗಿದೆ. ಅನ್ಯಧರ್ಮ ನಿಷ್ಠೆ, ತತ್ವಗಳನ್ನು ಟೀಕಿಸುವುದಕ್ಕೆ ಹೋಗುವುದಿಲ್ಲ. ಪ್ರತಿಯೊಂದು ಜೀವನ ವಿಧಾನದಲ್ಲೂ ಅದರದೇ ಕ್ರಮವಿದೆ, ಸ್ವಾರಸ್ಯವಿದೆ, ಅರ್ಥವಿದೆ, ಮೌಲ್ಯವಿದೆ ಎಂದು ಪ್ರಾಂಜಲ ಮನಸ್ಸಿನಿಂದ ಪರಿಭಾವಿಸುವ ಅಭ್ಯಾಸವನ್ನು ರಕ್ತಗತ ಮಾಡಿಕೊಂಡಿದ್ದಾರೆ. ಮೇಲು ಕೀಳು ಜಿಜ್ಞಾಸೆಗೆ ಅವಕಾಶವಿಲ್ಲ. ಅವರದು ಮುಖ್ಯವಾಗಿ ಸಮನ್ವಯ ದೃಷ್ಟಿ. ಅವರ ಬದುಕಿನ ರೀತಿಯಲ್ಲಿ, ಅವರು ಆರಿಸಿಕೊಂಡು ಬರೆದಿರುವ ಕೃತಿಗಳ ವಸ್ತುಗಳಲ್ಲಿ ಇಂಥ ವೈವಿಧ್ಯತೆ ಹಾಗೂ ವಿಶಾಲ ಭೂಮಿಕೆಯನ್ನು ಮನಗಾಣಬಹುದು." ಇದು ಲೇಖಕರು ತಾವು ಬರೆಯುತ್ತಿರುವ ಚರಿತ್ರ ವ್ಯಕ್ತಿಯ ಅಂತರಂಗದ ಅಭಿವ್ಯಕ್ತಿಯ ಅನನ್ಯ ಚಿತ್ರಣವಾಗಿದೆ. ಬಹಿರಂಗದ ಭೌತಿಕ ವಿವರಗಳೊಂದಿಗೆ 'ಅಂತರಂಗ' ಸ್ವಭಾವ, ಮನೋಧರ್ಮಗಳನ್ನು ಬೆಸೆದು ಕಡೆದಿಟ್ಟ ಸುಂದರ, ಸಮರ್ಥ ವ್ಯಕ್ತಿ ಶಿಲ್ಪವಾಗಿದೆ !



ಈ ಕೃತಿಯ ಉಳಿದ ಮತ್ತೊಂದು ಮಹತ್ವದ ಭಾಗವೆಂದರೆ ನಾಗರಾಜರಾಯರ ಸಾಹಿತ್ಯ ಕೃತಿಗಳ ಸಂಕ್ಷಿಪ್ತ ಅವಲೋಕನ. ಕಥೆ, ಕಾದಂಬರಿ, ನಾಟಕ, ವಿಮರ್ಶೆ, ಭಾಷಾಂತರ ಕೃತಿಗಳು ಸಂಪಾದಿತ ಕೃತಿಗಳು–ಇತ್ಯಾದಿಯಾಗಿ ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ತಮ್ಮ ಕೊಡುಗೆಯನ್ನು ನೀಡಿರುವ ನಾಗರಾಜರಾಯರ ಸಮಗ್ರ ಸಾಹಿತ್ಯದ ಒಂದು ಸ್ಥೂಲ ಅವಲೋಕನದ ಮೂಲಕ ಲೇಖಕರು, ಓದುಗರಿಗೆ ಅವರ ಸಾಹಿತ್ಯ ಸೇವೆಯ ಪಕ್ಷಿನೋಟವನ್ನು ನೀಡಿದ್ದಾರೆ. ಒಂದೊಂದು ಕೃತಿಯ ವಸ್ತು, ಭಾಷೆ, ಶೈಲಿ, ಕಡೆಯದಾಗಿ ಅವುಗಳ ಮೌಲಿಕತೆ–ಇಷ್ಟನ್ನೂ ಅತ್ಯಂತ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಹಾಗೆಯೇ ಆ ಕೃತಿಗಳ ರಚನೆಯಿಂದ ಆ ಕಾಲಘಟ್ಟದ ಪರಿಸರದಲ್ಲಿ, ಹೇಗೆ ಪ್ರಸ್ತುತ, ಮೌಲಿಕ ಎನ್ನುವುದನ್ನೂ ವಿವರಿಸಿದ್ದಾರೆ. ಒಂದೊಂದು ಕೃತಿಯ ರಚನೆ, ಪ್ರಕಟಣೆ ಸನ್ನಿವೇಶಗಳ ಹಿನ್ನೆಲೆಯನ್ನೂ ಸಾಧ್ಯವಾದಷ್ಟು ಮಟ್ಟಿಗೆ ವಿವರಿಸಿದ್ದಾರೆ. ಕೃತಿಗಳ ಪರಿಚಯದ ಜೊತೆ ಜೊತೆಗೆ ಲೇಖಕರು ಅಲ್ಲಲ್ಲಿ ಅಮೂಲ್ಯವಾದ ತಮ್ಮ ಅಭಿಪ್ರಾಯಗಳನ್ನೂ ದಾಖಲಿಸಿದ್ದಾರೆ. 'ಪಟ್ಟಮಹಾದೇವಿ ಶಾಂತಲಾ' ಕುರಿತಂತೆ ಲೇಕಕರು ಹೀಗೆ ಅಭಿಪ್ರಾಯಪಡುತ್ತಾರೆ. "ಇತಿಹಾಸದ ವಾಸ್ತವದ ಎಳೆಗಳ ಜೊತೆಗೆ, ಲೇಖಕರ ಕಲ್ಪನೆಯ ಎಳೆಗಳು ಹಾಸುಹೊಕ್ಕಾಗಿ ಹೆಣೆದುಕೊಂಡು ಕಲಾತ್ಮಕವಾದ ಕಾದಂಬರಿಯ ನಿರ್ಮಾಣವಾಗಿದೆ. ಚರಿತ್ರೆಯ ಪುನರ್ ಸೃಷ್ಟಿಯ ಕ್ರಿಯೆ ತನ್ಮಯತೆಯಿಂದ ಸಾಗಿ ಫಲಪ್ರದವಾಗಿದೆ; ಸಂಭವನೀಯ ಪರಿಸರ ರೂಪುಗೊಂಡಿದೆ; ಲೇಖಕರ ಶ್ರಮ ಸಾರ್ಥಕವಾಗಿದೆ. ಕಾದಂಬರಿಯಲ್ಲಿ ಸರಳವಾದ ಉಪಮೆ, ಉಪಮಾನಗಳ ಮೂಲಕ ಹೊಸ ಹೊಸ ಶಬ್ದ ಚಿತ್ರಗಳನ್ನು ಸೃಜಿಸಲು ಪ್ರಯತ್ನಿಸಿದೆ"–ಇದು ಲೇಖಕರ ಸೂಕ್ಷ್ಮ ಗ್ರಹಿಕೆಯ ಸಾಮರ್ಥ್ಯಕ್ಕೆ ವಿಮರ್ಶಾ ನಿಲುವಿಗೆ ನಿದರ್ಶನವಾಗಿದೆ.

ಸಿ.ಕೆ. ನಾಗರಾಜರಾಯರ ಜೀವನ ಚರಿತ್ರೆ ಜಾಡಿನಲ್ಲಿಯೇ ರಚಿತವಾದ ಪೂರ್ಣ ಪ್ರಮಾಣದ ಮತ್ತೊಂದು ಜೀವನ ಚರಿತ್ರೆ, ಬೆಳ್ಳಾವೆ ವೆಂಕಟನಾರಣಪ್ಪ. ೧೯೪೩ರಲ್ಲಿಯೇ ತೀರಿಕೊಂಡ ವೆಂಕಟನಾರಣಪ್ಪ ಕುರಿತ ಜೀವನ ಚರಿತ್ರೆ ಪ್ರಕಟವಾದದ್ದು ೧೯೭೪ರಲ್ಲಿ. ಅಂದರೆ ಅವರು ತೀರಿಕೊಂಡ ೩೧ ವರ್ಷಗಳ ನಂತರದಲ್ಲಿ ಬರೆಯ ಹೊರಟ ಲೇಖಕರಿಗೆ ಅವರ ಕುರಿತ ಮಾಹಿತಿ ಸಂಗ್ರಹ, ಒಂದು ದೊಡ್ಡ ಸವಾಲೆನಿಸಿದರೂ, ಲೇಖಕರ ಛಲ, ಬರೆಯಲೇಬೇಕೆಂಬ ಬದ್ಧತೆಗಳು ಸಮಸ್ಯೆ ಸವಾಲುಗಳನ್ನು ಬದಿಗಿಟ್ಟು ಮಾಹಿತಿ ಸಂಗ್ರಹ, ಅನ್ವೇಷಣೆಗಳಿಗೆ ಪ್ರಚೋದನೆ ನೀಡಿದವು. ಪರಿಚಯಸ್ಥರ ಅಭಿಪ್ರಾಯಗಳು ಕುತೂಹಲಕಾರಿಯೂ, ವಿಚಿತ್ರವೂ, ಪರಸ್ಪರ ವಿರುದ್ಧವೂ ಆಗಿದ್ದು ಒಂದು ಸಂದಿಗ್ಧದ ಪರಿಸರ ನಿರ್ಮಾಣಗೊಂಡದ್ದನ್ನು ಗ್ರಹಿಸಿದ ಲೇಖಕರು ಮತ್ತಷ್ಟು ಛಲದೊಂದಿಗೆ ಮುಂದುವರೆದರು. ವೆಂಕಟನಾರಣಪ್ಪನವರ ಚರಿತ್ರೆಯ ಹಿಂದೆ ಸತ್ಯ, ವಾಸ್ತವಗಳ ಆಧಾರ ಇರಬೇಕಾದ್ದು ಅನಿವಾರ್ಯ. ಆದರೆ ಚರಿತ್ರ ವ್ಯಕ್ತಿ ಜೀವಂತವಿಲ್ಲದ ಸಂದರ್ಭದಲ್ಲಿ ವಾಸ್ತವಕ್ಕೆ, ಸತ್ಯಕ್ಕೆ ಧಕ್ಕೆ ಬರುವ ಸಂಭವ ಹೆಚ್ಚಾಗಿರುತ್ತದೆ. ಜೀವನ ಚರಿತ್ರೆಗಳನ್ನು ಬರೆಯುವ ಲೇಖಕನಿಗೆ ಚರಿತ್ರ ವ್ಯಕ್ತಿಯ ನಿಕಟ ಪರಿಚಯ ಬೇಕೆಂಬುದು ವಾಸ್ತವವೇ. ಆದರೆ, ಎಲ್ಲರ ಪರಿಚಯ ಸಾಧ್ಯವಾಗುವುದಿಲ್ಲ. ಆದ್ದರಿಂದ ಲೇಖಕರ

ನಿಲುವಿನಲ್ಲಿ, ಚರಿತ್ರ ವ್ಯಕ್ತಿಯ ನಿಕಟ ಪರಿಚಯ ಇರಲೇಬೇಕಿಲ್ಲ. ಅಲ್ಲದೆ ನಿಕಟ ಪರಿಚಯವಿದ್ದಲ್ಲಿ ಅಪಾಯವೂ ಇದೆ; ಆ ವ್ಯಕ್ತಿಯ ಪ್ರಭಾವ ಅತಿಯಾಗಿದ್ದರೆ ನಿರೂಪಣೆ ಏಕಪಕ್ಷವಾಗುವ ಸಂಭವವಿದೆ. ಹಾಗಾದಾಗ ಗುಣದೋಷಗಳೆರಡನ್ನೂ ವಿವೇಚನೆಯಿಂದ ತೂಗಿ ನೋಡುವ ಶಕ್ತಿ ಕುಂದಬಹುದು ಎನ್ನುವ ಅಭಿಪ್ರಾಯಗಳು ವಾಸ್ತವ ಸತ್ಯ. ನಿಕಟ ಪರಿಚಯ, ಚರಿತ್ರ ವ್ಯಕ್ತಿಗಳು ಸಮಕಾಲೀನರೂ, ಜೀವಂತ ವ್ಯಕ್ತಿಗಳೂ ಆಗಿದ್ದಲ್ಲಿ ಸಾಧ್ಯವಾಗಬಹುದಾದರೂ ಗತಿಸಿಹೋದ ಚರಿತ್ರಪುರುಷರ, ಐತಿಹಾಸಿಕ ವ್ಯಕ್ತಿಗಳ ಬಗ್ಗೆ ಬರೆಯುವುದಾದರೂ ಹೇಗೆ ? ಕೇವಲ ಲಭ್ಯ ಮಾಹಿತಿಗಳಿಂದಷ್ಟೇ ಸಮಾಧಾನ ಪಟ್ಟುಕೊಳ್ಳಬೇಕಾಗುತ್ತದೆ.

ಆದರೆ ಜೀವನ ಚರಿತ್ರೆ ಬರೆಯುವ ಲೇಖಕ ಇಂಥ ಸಂದರ್ಭಗಳಲ್ಲಿ ಆದಷ್ಟು ಪ್ರಾಮಾಣಿಕ ಪ್ರಯತ್ನಗಳಿಂದ ಚರಿತ್ರೆ ವಿರೂಪಗೊಳ್ಳದಂತೆ ಎಚ್ಚರಿಕೆ ವಹಿಸಬೇಕಾಗುತ್ತದೆ. ಈ ಪ್ರಾಮಾಣಿಕತೆಯನ್ನು ಲೇಖಕರು ಕಾಯ್ದಿಟ್ಟುಕೊಂಡಿದ್ದಾರೆನ್ನುವುದಕ್ಕೆ, ಈ ಚರಿತ್ರೆಯನ್ನು ಬರೆಯುವುದಕ್ಕೆ ಮೊದಲಿನ ತಮ್ಮ ಪ್ರಯತ್ನಗಳನ್ನುಹೀಗೆ ವಿವರಿಸಿದ್ದಾರೆ. "....ನೇರವಾಗಿ ವೆಂಕಟನಾರಣಪ್ಪನವರಿಗೂ ನನಗೂ ಯಾವ ಸಂಪರ್ಕವೂ ಇಲ್ಲ; ಸಂಬಂಧವೂ ಇಲ್ಲ. ಜೀವದಿಂದಿದ್ದಾಗ ನಾನು ಅವರನ್ನು ನೋಡಿಯೂ ಇಲ್ಲ....ಆದರೆ ಅವರ ಜೀವನವನ್ನು ವಿವರವಾಗಿ ಅಭ್ಯಸಿಸಿದುದರಿಂದ ಅವರ ಇಡೀ ವ್ಯಕ್ತಿತ್ವ ನನ್ನ ಕಣ್ಮುಂದೆ ನಿಂತಂತೆ ಈಗಲೂ ಭಾಸವಾಗುತ್ತಿದೆ. ನಾನು ಅವರನ್ನು ದೇವರ ಹಾಗೆ ಕಂಡಿಲ್ಲ; ಜೀವಂತ ಬದುಕನ್ನು ಅನುಭವಿಸಿದ ಅಪರೂಪದ ವ್ಯಕ್ತಿಯ ಹಾಗೆ ಕಂಡಿದ್ದೇನೆ. ಅವರ ಬದುಕಿನ ಓರೆಕೋರೆ ಗುಣ–ದೋಷಗಳನ್ನೆಲ್ಲ ಗಮನಿಸಿ, ಅವರು ಹೇಗೆ ಅನುಕರಣೀಯ ವ್ಯಕ್ತಿಯಾಗಿ ಬಾಳಿದ್ದಾರೆ ಎನ್ನುವುದರ ಕಡೆಗೆ ಒತ್ತು ಕೊಟ್ಟಿದ್ದೇನೆ. ಯಾವ ಪೂರ್ವಗ್ರಹ ಪೀಡೆಯೂ ಇಲ್ಲದೆ ಒಂದು ಒಳ್ಳೆಯ ಕಾವ್ಯವನ್ನು ಅಭ್ಯಸಿಸುವ ಸಹೃದಯನಂತೆ, ಬೆಳ್ಳಾವೆ ವೆಂಕಟನಾರಣಪ್ಪನವರ ಬದುಕನ್ನು ಅಭ್ಯಸಿಸಿದ್ದೇನೆ'–ಎನ್ನುವ ಮಾತುಗಳಲ್ಲಿ ಅವರ ಪ್ರಾಮಾಣಿಕತೆ ಎದ್ದು ಕಾಣುತ್ತದೆ. ಅವರು ತಮ್ಮ ನಿಲುವಿನ ಬಗ್ಗೆ ಹೇಳಿದ ಮಾತುಗಳೆಲ್ಲ ಪ್ರತಿಯೊಬ್ಬ ಜೀವನ ಚರಿತ್ರೆಗಳನ್ನು ಬರೆಯುವ ಲೇಖಕನಿಗೆ ಅನ್ವಯ ವಾಗುತ್ತದೆ. ಅವರು ಹೇಳಿಕೊಂಡಿರುವಂತೆಯೇ ಎಲ್ಲಿಯೂ ವೆಂಕಟನಾರಾಣಪ್ಪನವರನ್ನು ಆರಾಧನಾ ಭಾವದಿಂದ ಕಂಡಂತಾಗಲೀ ವೈಭವೀಕರಿಸಿ ಹೊಗಳಿದ್ದಾಗಲಿ ಕಾಣುವುದಿಲ್ಲ. ವೆಂಕಟನಾರಣಪ್ಪನವರೂ ಕೂಡಾ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ ಅಷ್ಟೇನೂ ಶ್ರೀಮಂತಿಕೆಯಿಲ್ಲದ ಸಾಧಾರಣ ಪರಿಸರದಲ್ಲಿ, ಕಷ್ಟದಿಂದಲೇ ವಿದ್ಯಾಭ್ಯಾವನ್ನು ಗಳಿಸಿ, ಭೌತಶಾಸ್ತ್ರದ ಅಧ್ಯಾಪಕರಾದರು. ನಿರ್ವಂಚನೆಯಿಂದ ಪಾಠ ಮಾಡಿ ವಿದ್ಯಾರ್ಥಿಗಳಿಗೆ ಆದರ್ಶ ಅಧ್ಯಾಪಕರಾಗಿ ಕಾಣಿಸಿಕೊಂಡರು. ಅಧ್ಯಾಪಕರಾಗಿ, ವಿವಿಧ ಸ್ವಭಾವದ ವಿದ್ಯಾರ್ಥಿಗಳ, ಸಹೋದ್ಯೋಗಿ ಮಿತ್ರರೊಡನೆ ವ್ಯವಹರಿಸುವಾಗಲೂ ತಾವು ನಂಬಿದ ಶಿಸ್ತನ್ನು ಬಿಟ್ಟುಕೊಡುತ್ತಿರಲಿಲ್ಲ. ಅರ್ಥಹೀನ ಪದ್ಧತಿಗಳಿಗೆ ಸಿಟ್ಟಾಗುತ್ತಿದ್ದರು. ಶಿಸ್ತು, ನಿಯಮಪಾಲನೆ, ಸಮಯ ಪ್ರಜ್ಞೆ, ಕರ್ತವ್ಯನಿಷ್ಠೆ, ಸರಳತೆ, ವಿಜ್ಞಾನದಲ್ಲಿ ಆಳವಾದ ಪಾಂಡಿತ್ಯ, ದಕ್ಷತೆ, ಸ್ನೇಹಪರತೆ, ಪ್ರಾಮಾಣಿಕತೆ–ಇತ್ಯಾದಿ ಅನೇಕ ಗುಣಗಳನ್ನು



ರೂಢಿಸಿಕೊಂಡಿದ್ದರು. ಹಾಗೆಂದು ಅವರು ಪರಿಪೂರ್ಣ ಮಾನವರೇನೂ ಆಗಿರಲಿಲ್ಲ. ಮನುಷ್ಯ ಸಹಜವಾದ ಲೋಪದೋಷಗಳು ಅವರ ನಡವಳಿಕೆಯಲ್ಲಿ ಕಾಣುತ್ತಿದ್ದುವಾದರೂ, ಅವುಗಳ ಹಿಂದೆ ಕಾರಣಗಳು ಇರುತ್ತಿದ್ದವು. ವಿಜ್ಞಾನದ ಅಧ್ಯಾಪಕರಾಗಿಯೂ ಸಾರ್ವಜನಿಕರ ಸಂಸ್ಥೆಗಳಲ್ಲಿ ಅತ್ಯಂತ ಕ್ರಿಯಾಶೀಲವಾಗಿ ಭಾಗವಹಿಸುತ್ತಿದ್ದರು. ಅನೇಕ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದರು. ಅದರಲ್ಲಿಯೂ ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ಅವರ ನಂಟು ಗಾಢವಾಗಿತ್ತು. ಅದರ ಬಗ್ಗೆ ಅವರಿಗೆ ಅಪಾರ ಅಭಿಮಾನ; ಅದರ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ ಚರ್ಚೆಗಳು ನಡೆದಾಗ, ಟೀಕೆ, ಟಿಪ್ಪಣಿ, ವಾಗ್ವಾದಗಳು ನಡೆಯುತ್ತಿದ್ದು, ಕೆಲವೊಮ್ಮೆ ತಾವು ಸೂಚಿಸುವ ಸಲಹೆಗೆ ವಿರೋಧ ವ್ಯಕ್ತಪಟ್ಟರೆ, ಸುಲಭವಾಗಿ ಸೋಲುತ್ತಿರಲಿಲ್ಲ. ಅವರ ಹಠವೇ ಮುಂದುವರೆಯುತ್ತಿತ್ತು. ದೇವರು, ಧರ್ಮ, ಕಲೆ, ಸಾಹಿತ್ಯ ಕುರಿತಾಗಿ ತಮ್ಮದೇ ಆದ ಸ್ವತಂತ್ರ ಆಲೋಚನೆಗಳನ್ನು ಉಳ್ಳವರಾಗಿದ್ದರು. ಧರ್ಮನಿಷ್ಠರೂ ಕರ್ಮಯೋಗಿಗಳೂ ಆಗಿದ್ದ ವೆಂಕಟನಾರಣಪ್ಪ, ವಿಜ್ಞಾನ ವಿಷಯಗಳಲ್ಲಷ್ಟೇ ಅಲ್ಲದೆ ಪತ್ರಿಕೋದ್ಯಮ ಮತ್ತು ಸಾಹಿತ್ಯ ಕ್ಷೇತ್ರಕ್ಕೂ ಸಾಕಷ್ಟು ಕೊಡುಗೆಯನ್ನು ನೀಡಿದ್ದಾನೆ. ಸಾಮಾನ್ಯರಿಗೂ ವಿಜ್ಞಾನ ವಿಷಯಗಳ ಬಗ್ಗೆ ಅರಿವು ಮೂಡಿಸಬೇಕೆಂಬ ಉದ್ದೇಶದಿಂದ ಕರ್ನಾಟಕ ವಿಜ್ಞಾನ ಪ್ರಚಾರಣೀ ಸಮಿತಿಯನ್ನು ೧೯೧೭ರಲ್ಲಿ ಸ್ಥಾಪಿಸಿ ವೈಜ್ಞಾನಿಕ ಮಾಸಪತ್ರಿಕೆಯನ್ನು ಹೊರತಂತದದ್ದೇ ಅಲ್ಲದೆ ವಿಜ್ಞಾನ ವಿಷಯಗಳ ಮೇಲೆ ಉಪನ್ಯಾಸ ಕಾರ್ಯಕ್ರಮಗಳನ್ನೂ ಪ್ರದರ್ಶನಗಳನ್ನೂ ಏರ್ಪಡಿಸಿದ್ದುಂಟು. ಇವರ ಈ ಆಶಯಗಳಿಗೆ ಪೂರಕವಾಗಿ ವಿಜ್ಞಾನ ವಿದ್ವಾಂಸರು, ಸಾಹಿತ್ಯಾಸಕ್ತರು ಮುಂತಾದವರ ಒಂದು ದಂಡೇ ಇತ್ತು. ವಿಜ್ಞಾನ ಪತ್ರಿಕೆಯನ್ನು ಜನಪ್ರಿಯಗೊಳಿಸಲು ಅವರು ಪಟ್ಟ ಪಾಡು ಮರೆಯಲಾಗದ್ದು. ಇಡೀ ಕರ್ನಾಟಕದಲ್ಲೇ ಇಂತಹ ವಿಜ್ಞಾನ ಪತ್ರಿಕೆ ಮತ್ತೊಂದಿಲ್ಲವೆಂಬ ಹೆಗ್ಗಳಿಕೆಯಿದ್ದರೂ ಆರ್ಥಿಕ ಮುಗ್ಗಟ್ಟಿನಿಂದ ಅದು ಅವಸಾನದ ಹಂತ ತಲುಪಿದ್ದು ವೆಂಕಟನಾರಣಪ್ಪನವರಿಗೆ ದೊಡ್ಡ ಆಘಾತವೇ ಆದಂತೆನಿಸಿತು. ಒಬ್ಬ ವಿಜ್ಞಾನದ ವಿದ್ವಾಂಸ, ಅಧ್ಯಾಪಕ, ಸೃಜನಶೀಲ ಬರವಣಿಗೆಯಿಂದ ಸಾಹಿತಿ ಎಂದು ಕರೆಸಿಕೊಳ್ಳದಿದ್ದರೂ ಹಳಗನ್ನಡ ಗ್ರಂಥಗಳ ಸಂಪಾದನೆ, ನಿಘಂಟು ಕೆಲಸಗಳಿಂದ ಕನ್ನಡ ಸಾಹಿತ್ಯಲೋಕದಲ್ಲಿ ಗುರುತಿಸಿಕೊಂಡಿದ್ದರು. ಒಂದಷ್ಟು ಕಥೆಗಳನ್ನು ಪ್ರಯೋಗ ಪ್ರಯತ್ನವಾಗಿ ಬರೆದಿದ್ದರೂ ಅದನ್ನು ಮುಂದುವರಿಸದೆ ಅನ್ಯ ಸಾಹಿತ್ಯ ಸೇವೆಗಳಲ್ಲಿ ತೊಡಗಿಸಿಕೊಂಡರು. ಅವರು ಸಂಪಾದಿಸಿದ ಮಹತ್ವದ ಪ್ರಾಚೀನ ಕಾವ್ಯ ಕೃತಿಗಳಾದ ಆದಿಕವಿ ಪಂಪನ 'ವಿಕ್ರಮಾರ್ಜುನ ವಿಜಯ', 'ರಾಮಚಂದ್ರ ಚರಿತ ಪುರಾಣ'; 'ಸೋಮೇಶ್ವರ ಶತಕ';– 'ಶಬ್ದಮಣಿ ದರ್ಪಣ' ಮೊದಲಾದವುಗಳನ್ನು ವಿದ್ವಾಂಸರು ಇಂದಿಗೂ ಮಹತ್ವದ ಕೊಡುಗೆಯೆಂದೇ ಭಾವಿಸುತ್ತಾರೆ.

ಇವೆಲ್ಲವುಗಳ ಜೊತೆಗೆ, ಆ ಕಾಲದ ಹಿರಿಯ ಚೇತನಗಳಿಗೆ ಇದ್ದಂತೆ, ರಾಷ್ಟ್ರಭಕ್ತಿ, ರಾಜಭಕ್ತಿ ಇವರಿಗೂ ಇದ್ದುದರಲ್ಲಿ ಆಶ್ಚರ್ಯವಿಲ್ಲ. ವೆಂಕಟನಾರಣಪ್ಪನಂಥವರು ಅಧಿಕಾರ, ಶ್ರೀಮಂತಿಕೆಗಳಿಂದಲ್ಲದೆ ಅವರ ವ್ಯಕ್ತಿತ್ವ, ನಡವಳಿಕೆ, ನಂಬಿಕೊಂಡು ನಡೆದ ಮೌಲ್ಯಗಳು, ಅಮೂಲ್ಯವಾದ ವಿಚಾರ ಸರಣಿ, ಉನ್ನತ ಧ್ಯೇಯಗಳು, ಡಿವಿಜಿ ಅಂಥ ಮಹಾನ್

ಚೇತನಗಳೂ ಗೌರವದಿಂದ ಕಾಣುವಂತಾಗಿದೆ. ಅವರ ಬಗೆಗಿನ ಗೌರವದ ಪ್ರತೀಕವಾಗಿ ಡಿವಿಜಿ ತಮ್ಮ 'ಸಾಹಿತ್ಯ ಶಕ್ತಿ' ಕೃತಿಯನ್ನು ವೆಂಕಟನಾರಣಪ್ಪನವರಿಗೆ ಅರ್ಪಿಸಿದ್ದಾರೆ. "ನಾನು ಲೇಖನ ವೃತ್ತಿಗೆ ಹೊರಡುವೆನೆಂದಾಗ ಯಾವ ಹಿರಿಯರು ಅದು ಮರುಳ್ಗಾಡಿನ ಬೇಸಾಯವೆಂದು ಹೇಳಿದರೊ ಬಳಿಕ ಅದಕ್ಕೆ ಪ್ರೀತ್ಯುತ್ಸಾಹಗಳಿಂದ ನೀರೆರೆದರೋ, ಯಾರು ಕರ್ಣಾಟಕ ಸಾಹಿತ್ಯ ಪರಿಷತ್ತಿಗೆ ಅದು ಹುಟ್ಟಿದಂದಿನಿಂದ ತಮ್ಮ ಕಡೆಯ ದಿನದವರೆಗೂ ಆಧಾರ ಸ್ತಂಭದಂತಿದ್ದರೊ, ಯಾರು ಕನ್ನಡದಲ್ಲಿ ವಿಜ್ಞಾನ ಪ್ರಚಾರಕ್ಕೆ ಮಾರ್ಗದರ್ಶಕರಾದವರ ಅಗ್ರಶ್ರೇಣಿಯಲ್ಲಿದ್ದರೊ ಯಾರ ಸ್ನೇಹವು ಅದರ ಪ್ರಾಪ್ತಿಯಿದ್ದವರಿಗೆ ಪೋಷಕವಾದಂತೆ ಪಾವಕವೂ ಆಗಿದ್ದಿತೋ ಆ ಸತ್ಯನಿಷ್ಠರಾದ ಶ್ರೀ ಬೆಳ್ಳಾವೆ ವೆಂಕಟನಾರಣಪ್ಪನವರ ನಿರ್ಮಲ ಸ್ಮೃತಿಗೆ ಎಂದು ಹೇಳಿ ಸಮರ್ಪಣೆ ಮಾಡಿರುವುದನ್ನು ನೋಡಿದರಷ್ಟೇ ಸಾಕು, ವೆಂಕಟನಾರಣಪ್ಪನವರ ಉನ್ನತ ವ್ಯಕ್ತಿತ್ವ, ಅನುಕರಣೀಯ ಆದರ್ಶತ್ವ ಎಷ್ಟಿತ್ತೆಂಬುದು ತಿಳಿಯುತ್ತದೆ. ಡಿವಿಜಿಯಂಥವರೇ ಅವರಿಗೆ ತಲೆಮಣಿದು ಭಕ್ತಿ ಗೌರವ ಪ್ರೀತಿಗಳನ್ನು ತೋರಿರುವುದೇ ವೆಂಕಟನಾರಣಪ್ಪನವರಿಗೆ ಸಂದ ಬಹು ದೊಡ್ಡ ಪ್ರಶಸ್ತಿ, ಪುರಸ್ಕಾರವೆನಿಸುತ್ತದೆ. ಇಂಥವರ ಚರಿತ್ರೆಯನ್ನು ಬರೆಯ ಹೊರಟ ಲೇಖಕರಾದ ಡಿ. ಲಿಂಗಯ್ಯನವರ ಶ್ರಮ, ಸಾಹಸಗಳು ಸ್ತುತ್ಯರ್ಹವಾಗಿದೆ.

ಡಿ. ಲಿಂಗಯ್ಯನವರು ಬರೆದ ಜೀವನ ಚರಿತ್ರೆಗಳಲ್ಲಿ ಬೃಹತ್ತಾಗಿಯೂ ಮಹತ್ತಾಗಿಯೂ ಮತ್ತು ಜೀವನ ಚರಿತ್ರೆಗಳು ಸಮಗ್ರತೆಯೊಂದಿಗೆ, ಹೇಗಿರಬೇಕೆಂಬುದಕ್ಕೆ ಮಾದರಿಯಾಗಿರುವ ಕೃತಿ ರಾಷ್ಟ್ರರತ್ನ 'ಕೆಂಗಲ್ ಹನುಮಂತಯ್ಯ', ಅನ್ಯ ಕೃತಿಗಳಿಗಿಂತಲೂ ಇದು ಸ್ವಲ್ಪ ಭಿನ್ನವಾಗಿರುವುದಕ್ಕೆ ಕೃತಿಯಲ್ಲಿನ ಚರಿತ್ರ ವ್ಯಕ್ತಿ ರಾಜಕಾರಣಿ, ರಾಷ್ಟ್ರಪ್ರೇಮಿ ಮತ್ತು ರಾಜ್ಯದ ಮುಖ್ಯಮಂತ್ರಿಯಾಗಿರುವುದರ ಮೂಲಕ ಜೀವನ ಚರಿತ್ರೆಗೆ ಬಹು ಆಯಾಮಗಳು ಸೇರಿಕೊಂಡಿರುವುದಾಗಿದೆ. ೫೩ ಅಧ್ಯಾಯಗಳಲ್ಲಿ ಮೂಡಿಬಂದಿರುವ ಜೀವನ ಚರಿತ್ರೆ, ಕೆಂಗಲ್ ಹನುಮಂತಯ್ಯ ಹೇಗೆ ಸಾಮಾನ್ಯ ಬಡ ಕುಟುಂಬದಲ್ಲಿ ಹುಟ್ಟಿ, ಜೀವನ ಸಂಘರ್ಷಗಳಿಗೆ ಮುಖಾಮುಖಿಯಾಗುತ್ತ, ಬೆಂಕಿಯಲ್ಲಿ ಅರಳುತ್ತ ಎತ್ತರೆತ್ತರಕ್ಕೆ ಬೆಳೆಯುತ್ತಾ, ಇಂದಿಗೂ ಭಾರತದಲ್ಲಿ ಅದರಲ್ಲಿಯೂ ಕರ್ನಾಟಕದಲ್ಲಿ, ಜನಮಾನಸದಲ್ಲಿ ಉಳಿದಿರುವುದು ಒಂದು ಪವಾಡ ಸದೃಶ ಘಟನೆಯೇ ಆಗಿದೆ. ಸತ್ಯಾಗ್ರಹದ ಸ್ವಾತಂತ್ರ್ಯದ ಹೋರಾಟದ ಬಿರುಸಿನ ಪರಿಸರದಲ್ಲಿ, ಸ್ವಾತಂತ್ರ್ಯ ಚಳುವಳಿಯ ಮಹಾನಾಯಕ ಗಾಂಧೀಜಿಯ ಮೇರು ಸದೃಶದ ವ್ಯಕ್ತಿತ್ವ, ಹೋರಾಟದ ತಾತ್ವಿಕ ಪರಿಕಲ್ಪನೆಗಳು, ಹಿಂದೆಂದೂ ಕಾಣದ ಹೋರಾಟದ ಧೋರಣೆಗಳು ಇಡೀ ಭಾರತದ ಜನಸಮುದಾಯಗಳನ್ನು ಜಾತ್ಯಾತೀತ, ವರ್ಗಾತೀತ ನೆಲೆಗಳಲ್ಲಿ ಸೆಳೆದುಕೊಳ್ಳುತ್ತಿದ್ದ ವರ್ಚಸ್ಸು ಕೆಂಗಲ್ ಅಂಥವರನ್ನು ಆಕರ್ಷಿಸಿದ್ದು ಸ್ವಾಭಾವಿಕವೇ ಆಗಿತ್ತು. ಸ್ವಾತಂತ್ರ್ಯ ಚಳುವಳಿಯ ಕಡೆಯ ಹತ್ತು ವರ್ಷಗಳಲ್ಲಿ ನಡೆದ ವಿವಿಧ ಚಳುವಳಿಗಳಲ್ಲಿ ಭಾಗವಹಿಸಿ, ಸೆರೆಮನೆ ವಾಸ ಅನುಭವಿಸಿ, ಗಾಂಧೀಜಿಯ ತತ್ವ ಸಿದ್ಧಾಂತಗಳಿಗೆ ಮೋಹಿತರಾಗಿ, ಅನನ್ಯ ದೇಶಭಕ್ತಿಯನ್ನು ರೂಡಿಸಿಕೊಂಡು ರೂಪುಗೊಂಡವರು ಕೆಂಗಲ್ ಹನುಮಂತಯ್ಯ. ರಾಷ್ಟ್ರದ ಮಹಾನ್ ರಾಜಕಾರಣಿ, ರಾಜಕೀಯ ದಾರ್ಶನಿಕ, ನಿಷ್ಠಾವಂತ ಸತ್ಯಾಗ್ರಹಿ,



ಅಹಿಂಸಾ ಪ್ರತಿಪಾದಕ, ರಾಜ್ಯ, ರಾಷ್ಟ್ರಹಿತ ಚಿಂತಕ, ಸಾಮಾಜಿಕ, ಸಾಂಸ್ಕೃತಿಕ ವಕ್ತಾರ, ದಕ್ಷ ಆಡಳಿತಗಾರ, ವಿಧಾನಸೌಧ, ವೀರಸೌಧಗಳ ರೂವಾರಿ–ಎಂದೆಲ್ಲ ಕರೆಸಿಕೊಂಡ ಕೆಂಗಲ್ ಅವರ ಜೀವನ ಚರಿತ್ರೆಯ ರಚನೆಗೆ ಕೈ ಹಾಕುವುದು ಹಿಮಾಲಯ ಸಾಹಸವೇ ಸರಿ. ಸಾಹಿತಿಯೋ, ಕಲಾವಿದನೋ, ಸಾಮಾಜಿಕ ಕಾರ್ಯಕರ್ತನೋ, ಚಾರಿತ್ರಿಕ ಪುರುಷನೋ–ಹೀಗೇ ಯಾರನ್ನೇ ಕುರಿತು ಸ್ವಲ್ಪ ಮಟ್ಟಿನ ಶೋಧ, ಶ್ರಮಗಳಿಂದ ಜೀವನ ಚರಿತ್ರೆಯನ್ನು ಬರೆಯಬಹುದಾದರೂ, ಐದು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ, ಇಡೀ ನಾಡಿನ ಜವಾಬ್ದಾರಿಯನ್ನು ಹೆಗಲ ಮೇಲೆ ಇರಿಸಿಕೊಂಡು, ನಾಡಿನ ಸರ್ವತೋಮುಖ ಬೆಳವಣಿಗೆಗೆ ದುಡಿಯುವುದು, ವಿಶಾಲ ನಾಡಿನ ಆಡಳಿತದ ಸುವ್ಯವಸ್ಥೆಯನ್ನು ಕಾಪಾಡುವುದು, ಪ್ರಜೆಗಳ ನಿರೀಕ್ಷೆಗಳನ್ನು ಪೂರೈಸುವುದು, ಕಾಲಕಾಲಕ್ಕೆ ಉದ್ಭವಿಸುವ ಸಮಸ್ಯೆಗಳನ್ನು ಎದುರಿಸಿ ಶಾಂತಿ, ಭದ್ರತೆಗಳನ್ನು ಕಾಪಾಡುವುದು, ಹಲವು ಬಗೆಯ ಯೋಜನೆಗಳನ್ನು ರೂಪಿಸುವುದು, ಅವುಗಳನ್ನು ಅನುಷ್ಠಾನಗೊಳಿಸುವುದು, ಇಂಥಲೆಲ್ಲ ವಿಭಿನ್ನ ಸ್ವಭಾವ, ಮನೋಧರ್ಮಗಳ ಅಧಿಕಾರಿಗಳ, ಪ್ರಜಾನಾಯಕರ ಸಹಕಾರ, ಸಹಯೋಗದೊಂದಿಗೆ ಸುಗಮವಾಗಿ, ಕ್ರಿಯಾಶೀಲವಾಗಿ ಮುಂದುವರೆಯುವುದು ಮಹಾ ಪ್ರಯಾಸದ ಕೆಲಸ. ಕೆಂಗಲ್‌ರು ಇದೆಲ್ಲವನ್ನು ದಕ್ಷತೆಯಿಂದ ನಿರ್ವಹಿಸಿದರು. ಕೆಂಗಲ್‌ರು ಕೇವಲ ಮುಖ್ಯಮಂತ್ರಿ, ಆಡಳಿತಗಾರರಾಗಷ್ಟೇ ಇರಲಿಲ್ಲ. ಅವರಿಗೆ ಅವರದೇ ಆದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಚಿಂತನೆಗಳಿದ್ದವು. ಪ್ರತಿಯೊಂದು ಸನ್ನಿವೇಶ ಸಂದರ್ಭದಲ್ಲಿ ನಿರ್ದಿಷ್ಟವಾದ ನಿಲುವುಗಳನ್ನು, ವಿಚಾರಗಳನ್ನು ವ್ಯಕ್ತಪಡಿಸುತ್ತಿದ್ದರು.

ಕೆಂಗಲ್‌ರಂತಹ ವಿರಾಟ್ ಪುರುಷನ ಜೀವನ ಚರಿತ್ರೆಯನ್ನು ಬರೆಯುವುದು ಖಂಡಿತವಾಗಿಯೂ ಅಸಾಧ್ಯದ ವಿಷಯವೇ. ಆದರೆ ಡಿ. ಲಿಂಗಯ್ಯನವರಿಗೆ ಹನುಮಂತಯ್ಯನವರ ದಿನಚರಿ ಅದ್ಭುತ ಆಕರ ಸಾಮಗ್ರಿಯಾಗಿ ಕೈ ಹತ್ತಿದೆ. ಹುಟ್ಟಿನಿಂದ ಬದುಕಿನ ಕಡೆ ಗಳಿಗೆಯ ತನಕ ದಾಖಲಿಸಿದ ತಮ್ಮ ಬದುಕಿನ ವಿಸ್ತೃತ ವಿವರಗಳು, ತಮ್ಮ ಹೋರಾಟದ ಸನ್ನಿವೇಶಗಳು, ಅವುಗಳನ್ನು ಎದುರಿಸಿದ ರೀತಿಗಳು, ಒಂದೊಂದು ಸನ್ನಿವೇಶದಲ್ಲಿಯೂ ತಮ್ಮೊಳಗಿನ ಆಲೋಚನೆಗಳು, ತೋರಿದ ಪತ್ರಿಕ್ರಿಯೆಗಳು, ಹೊಮ್ಮಿಸಿದ ಚಿಂತನೆಗಳು, ಯಾವುದೇ ರಾಜಕೀಯ ಅಧ್ಯಯನಕಾರರಿಗೆ, ರಾಜಕೀಯ ಸಂಶೋಧಕರಿಗೆ ಅಮೂಲ್ಯವಾದ ಮಾಹಿತಿಗಳನ್ನು ಒದಗಿಸಿಕೊಡುವಲ್ಲಿ ಅವರ ದಿನಚರಿಯಲ್ಲಿನ ನಿರೂಪಣೆಗಳು ಅತ್ಯಂತ ಮಹತ್ವದ್ದಾಗಿವೆ. ಸ್ವಾತಂತ್ರ್ಯ ಚಳುವಳಿಯ ಕಡೆಯ ಹಂತದಲ್ಲಿ ಕಾಣಿಸಿಕೊಂಡಿದ್ದರೂ, ಗಾಂಧೀಜಿ ಅವರನ್ನು ಅನೇಕ ಸಂದರ್ಭಗಳಲ್ಲಿ ಪ್ರತ್ಯೇಕವಾಗಿ, ಪರೋಕ್ಷವಾಗಿ ಕಂಡದ್ದರಿಂದಲೂ ಅವರ ಹೋರಾಟದ ನಿಲುವುಗಳು, ಚಿಂತನೆಗಳು, ರಾಜ್ಯ, ರಾಷ್ಟ್ರ, ಸ್ವಾತಂತ್ರ್ಯ–ಇತ್ಯಾದಿ ಪರಿಕಲ್ಪನೆ ಹೋರಾಟದ ಪ್ರಮುಖ ಅಸ್ತ್ರಗಳಾಗಿ ಬಳಸಿಕೊಂಡ ಸತ್ಯಾಗ್ರಹ, ಅಹಿಂಸೆ, ಅಸಹಕಾರ, ಬಹಿಷ್ಕಾರ, ಉಪವಾಸ ಇತ್ಯಾದಿಗಳಲ್ಲದೆ, ದೀನ ದಲಿತರ, ಅಸ್ಪೃಶ್ಯರ ಉದ್ಧಾರದ ಬಗ್ಗೆ ಅವರು ಆಲೋಚಿಸುತ್ತಿದ್ದ ರೀತಿ–ಇವೆಲ್ಲವೂ ಹನುಮಂತಯ್ಯನವರು ವ್ಯಕ್ತಿತ್ವವನ್ನು ರೂಪಿಸಿ ಕೊಳ್ಳುವುದಕ್ಕೆ ಸಹಕಾಯರಿಯಾದವು.

ಸಾಂಸಾರಿಕ ಸಮಸ್ಯೆಗಳ ನಡುವಿನಿಂದಲೇ ಕಾನೂನು ಪದವೀಧರರಾದರೂ, ವಕೀಲಿ ವೃತ್ತಿಯನ್ನು ಕೈಹಿಡಿದರೂ ಸ್ವಾತಂತ್ರ್ಯ ಚಳುವಳಿಯ ಒತ್ತಡಗಳು, ಅವರಲ್ಲಿ ಮೊಳೆತಿದ್ದ ದೇಶಪ್ರೇಮ, ರಾಷ್ಟ್ರಸೇವೆ, ಸಮಾಜಸೇವೆ, ವೃತ್ತಿಯನ್ನು ಕಡೆಗಣಿಸಿ, ಪೂರ್ಣ ಪ್ರಮಾಣದಲ್ಲಿ ಸತ್ಯಾಗ್ರಹ, ಭಾಷಾ ಚಳುವಳಿ ಇತ್ಯಾದಿಗಳಿಗೇ ತಮ್ಮನ್ನು ತೊಡಗಿಸಿಕೊಂಡು ಮುಷ್ಕರಗಳು, ಪೊಲೀಸರ ಲಾಠಿ ರುಚಿ, ಸೆರೆಮನೆ ವಾಸಗಳ ಸವಿಯುಣ್ಣುತ್ತ, ರಾಜಕೀಯ ರಂಗಪ್ರವೇಶ ಮಾಡಿ ತಮ್ಮ ವ್ಯಕ್ತಿತ್ವದ ವರ್ಚಸ್ಸಿನಿಂದಾಗಿ, ದಿಟ್ಟತನ, ಪ್ರಾಮಾಣಿಕತೆ, ನೇರ ನುಡಿ, ಕೆಚ್ಚು, ಕ್ರಿಯಾಶೀಲತೆ, ದೂರದರ್ಶಿತ್ವ ಇತ್ಯಾದಿಗಳಿಂದಾಗಿ ರಾಜಕೀಯ ವಲಯದಲ್ಲಿ ಮೆಟ್ಟಿಲು ಮೆಟ್ಟಿಲಾಗಿ ಏರುತ್ತ, ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸುವುದು ಸಾಧ್ಯವಾಯಿತು. ಆಲೋಚನೆಗಳು ಎಷ್ಟೇ ಪ್ರಗತಿಗಾಮಿಯಾಗಿದ್ದರೂ ಅಧಿಕಾರ ಬಲ ಬೆಂಬಲಗಳಿಲ್ಲದಿದ್ದರೆ ಯಾವುದನ್ನೂ ಅನುಷ್ಠಾನಕ್ಕೆ ತರಲು ಸಾಧ್ಯವಾಗುವುದಿಲ್ಲ. ೧೯೩೭ರ ಸುಮಾರಿಗೇ ರಾಜಕೀಯ ರಂಗಪ್ರವೇಶವಾಗಿ ಹಲವಾರು ಅಧಿವೇಶನಗಳಲ್ಲಿ ಭಾಗವಹಿಸುತ್ತಿದ್ದುದೇ ಅಲ್ಲದೆ, ರಾಜಕೀಯ ಧುರೀಣರು, ನಾಯಕರು ಇವರುಗಳೊಂದಿಗೆ ನಡೆಸುತ್ತಿದ್ದ ಚರ್ಚೆ, ಸಂವಾದಗಳಿಂದಾಗಿ ರಾಜಕೀಯ ಆಯಾಮಗಳ ಅರಿವು ಒಬ್ಬ ದಕ್ಷ ರಾಜಕೀಯ ನಾಯಕನನ್ನು ರೂಪಿಸುತ್ತಿತ್ತು. ಅವರಲ್ಲಿದ್ದ ಮತ್ತೊಂದು ಗುಣವೆಂದರೆ ಸ್ವವಿಮರ್ಶೆ, ಯಾವುದೇ ಸಂದರ್ಭ ಸನ್ನಿವೇಶಗಳಲ್ಲಿ ಪ್ರತಿಕ್ರಿಯಿಸುವುದಕ್ಕೆ ಮೊದಲು ತಮ್ಮನ್ನು ತಾವು ವಿಶ್ಲೇಷಿಸಿಕೊಳ್ಳುತ್ತಿದ್ದರು. ಸರಿತೋರಿದಲ್ಲಿ ಮಾತ್ರವೇ ಮುಂದಾಗುತ್ತಿದ್ದರು. ನ್ಯಾಯವಾಗಿ ಕಂಡದ್ದನ್ನು ನಿಷ್ಠುರ ನುಡಿಗಳಲ್ಲಿ ಪ್ರತಿಪಾದಿಸುತ್ತಿದ್ದರು. ವ್ಯಕ್ತಿ ಎಷ್ಟೇ ದೊಡ್ಡವನಾಗಿರಲಿ, ಆತನ ರೀತಿನೀತಿಗಳು ವಿಚಾರಗಳು ಸರಿಯೆನಿಸದಿದ್ದಲ್ಲಿ ಪರಿಣಾಮಗಳಿಗೆ ಹೆದರದೆ, ಮಾತಾಡಿ ಬಿಡುತ್ತಿದ್ದರು. ಸತ್ಯಾಗ್ರಹ–ಬಿರುಸಾಗಿ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಚಳುವಳಿಯ ಮೈಸೂರು ಪ್ರಾಂತವನ್ನು ತಲ್ಲಣಗೊಳಿಸಿದಾಗ, ಪ್ರಜಾಪ್ರತಿನಿಧಿ ಸಭೆಯಲ್ಲಿ ಅವರು ಮಾಡಿದ ವಾಗ್ದಾಳಿ ಇಡೀ ಸಭೆಯನ್ನೇ ಬೆಚ್ಚಿಬೀಳಿಸಿತು. 'Maharaja Spoiled by bad Governament' ಎಂದು ಟೀಕಿಸಿ, ಅಧಿಕಾರಿಗಳು, ದಿವಾನರುಗಳ ಕೆಂಗಣ್ಣಿಗೆ ಗುರಿಯಾದರು.

ಕ್ರಿಯಾಶೀಲ ರಾಜಕೀಯ ಚಟುವಟಿಕೆಗಳ ಜೊತೆಗೆ ಉನ್ನತ ಆದರ್ಶಗಳು, ರಾಜಕೀಯವಾದ, ಸಾಂಸ್ಕೃತಿಕವಾದ ಅರ್ಥಪೂರ್ಣ ಚಿಂತನೆಗಳು ಬಹುಮುಖ್ಯವಾಗಿದ್ದವು. ಪ್ರತಿಯೊಂದು ವಿಚಾರದಲ್ಲಿಯೂ ಅವರದೇ ಆದ ಸ್ವತಂತ್ರ ದೃಷ್ಟಿ, ಸ್ವತಂತ್ರ ಅಭಿಪ್ರಾಯಗಳು ಕೆಲವು ಅಸೂಯಾ ಪರರನ್ನು ಹೊರತುಪಡಿಸಿದರೆ, ಮಿಕ್ಕೆಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದವು. ಸ್ವಾತಂತ್ರ್ಯ ಪೂರ್ವದಲ್ಲಿಯೇ ಗಾಂಧೀಜಿ ವ್ಯಕ್ತಪಡಿಸಿದ ಅನೇಕ ವಿಚಾರಗಳು ಹನುಮಂತಯ್ಯನವರಿಗೆ ಹೊಸ ಅನುಭವವನ್ನು ನೀಡಿದ್ದವು. ಯಾವುದೇ ಸರಕಾರವಾಗಲೀ, ರಾಜಕೀಯ ಸಂಸ್ಥೆಗಳಾಗಲೀ ಪ್ರಜಾಹಿತ ಚಿಂತನೆಯನ್ನೇ ಪ್ರಮುಖ ಮತ್ತು ಪ್ರಥಮ ಆದ್ಯತೆಯನ್ನಾಗಿ ಹೊಂದಿರಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. “ರಾಜಕೀಯ ಸಂಸ್ಥೆಗಳು, ಪ್ರಜೆಗಳು ಕಷ್ಟಗಳ ದೆಸೆಯಿಂದ ಬೆಳೆಯುತ್ತವೆ. ಪ್ರಜೆಗಳ ಆಶೋತ್ತರಗಳು, ಅವರ ಕಷ್ಟಗಳ ನಿವಾರಣೆಯ ಸಾಧನೆಗಳು. ಪ್ರಜೆಗಳ ಕಷ್ಟಗಳು ಕಡುತರವಾದಷ್ಟೂ



ರಾಜಕೀಯ ಸಂಸ್ಥೆಗಳು ಪ್ರಬಲವಾಗಬೇಕು” ಎಂಬುದು ಅವರ ಬಲವಾದ ನಂಬಿಕೆಯಾಗಿತ್ತು.

ರಾಜ್ಯ, ರಾಷ್ಟ್ರಗಳ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ ಶಿಕ್ಷಣ, ಕೃಷಿ, ವಿಜ್ಞಾನ, ಸಾಹಿತ್ಯ, ಸಂಸ್ಕೃತಿ, ಕಲೆ, ಭಾಷೆ–ಹೀಗೆ ಎಲ್ಲವುಗಳೂ ಅಭಿವೃದ್ಧಿಯಾಗಬೇಕು. ಅದರಲ್ಲಿಯೂ ನಮ್ಮ ರಾಜ್ಯ ಭಾಷೆ ಕನ್ನಡ, ಇಂದಿನ ಅಗತ್ಯಗಳ ಪೂರೈಕೆಗೆ ಸಾಕಷ್ಟು ಸಮರ್ಥವಾಗಿ, ಸಹಕಾರಿಯಾಗಿ ಇರಲಾಗಿಲ್ಲವೆಂಬುದರ ಬಗ್ಗೆ ಅವರಿಗೆ ತುಂಬಾ ನೋವಿತ್ತು. ರಾಜಕೀಯ ವಿಚಾರಗಳನ್ನು ಅಭಿವ್ಯಕ್ತಿಸಲು ಸಮರ್ಥವಾದ ಪದಗಳು ಇಲ್ಲವೆಂಬ ಕೊರಗಿದ್ದರೂ, ತಮಗೆ ಕನ್ನಡದ ಮೇಲಿದ್ದ ಅಭಿಮಾನದಿಂದಲೇ, ಕನ್ನಡದಲ್ಲಿ ದಿನಚರಿ ಬರೆಯಲು ಮುಂದಾಗಬೇಕಾಯಿತೆಂಬುದನ್ನು ಪ್ರಾಮಾಣಿಕವಾಗಿ ಹೇಳಿಕೊಳ್ಳುತ್ತಾರೆ. ತಮ್ಮ ಮನದಲ್ಲಿನ ಭಾಷಾ ಸಂಘರ್ಷದ ಕ್ಷಣಗಳನ್ನು ಹೀಗೆ ದಾಖಲಿಸುತ್ತಾರೆ “ಈ ಕೆಲಸಕ್ಕೆ ಬಾರದ ಕನ್ನಡವನ್ನು ತಿರಸ್ಕರಿಸಿ ಇಂಗ್ಲಿಷಿನಲ್ಲಿ ಬರೆಯಲೇ ಎಂದು ದುಡುಕುತ್ತೇನೆ. ಆದರೆ ಮಾತೃಭಾಷೆಯಲ್ಲಿ ಬರೆಯಲೇಬೇಕೆಂಬ ಸಂಕಲ್ಪ. ಈ ನನ್ನ ಸಂಕಲ್ಪವು ನಾನು ಕನ್ನಡದಲ್ಲಿ ಬರೆಯುವಂತೆ ನನ್ನನ್ನು ಬಂಧಿಸಿದೆಯೇ ಹೊರತು, ಆ ಭಾಷೆಯ ಗುಣವಲ್ಲ. ನಾನು ಬರೆಯುತ್ತಿರುವ ಕನ್ನಡದಲ್ಲಿ, ನನ್ನ ಹೃದಯದಲ್ಲಿ ತುಂಬಿ ತುಳುಕುತ್ತಿರುವ ಭಾವನೆಗಳನ್ನು ಕಾಲು ಪಾಲೂ ಹೊರಗೆಡವಲು ಅಸಾಧ್ಯವಾಗಿದೆ. ನನಗೆ ಅಸಂತೃಪ್ತಿಯಾಗುತ್ತಿದೆ. ಎಂದಿಗೆ ಈ ಕನ್ನಡ ನುಡಿಯು (ಅದರಲ್ಲಿಯೂ ನನ್ನ ಕನ್ನಡ ನುಡಿಯು) ಆಧುನಿಕ ಭಾವಗಳಿಗೆ, ಯೋಜನೆಗಳಿಗೆ, ಸಂಗತಿಗಳಿಗೆ, ಶಾಸ್ತ್ರಗಳಿಗೆ ಆಶ್ರಯವನ್ನು ಕೊಡಬಲ್ಲ ವಿಶಾಲವಾದ ಭಾಷೆಯಾಗುತ್ತದೋ ದೇವರೇ !” ಎಂಬ ನೋವಿನ ಉದ್ಗಾರದಲ್ಲಿ, ಕನ್ನಡ ಭಾಷೆ ಪೂರ್ಣ ವಿಕಸನವಾಗಲಿಲ್ಲವೆಂಬ ನೋವೂ ಮತ್ತು ಅದರ ಬಗ್ಗೆ ಅಂದಿನ ಕನ್ನಡ ಸ್ಥಿತಿಯ ಬಗ್ಗೆ ಇದ್ದ ಪ್ರಾಮಾಣಿಕ ಅಭಿಪ್ರಾಯಗಳೂ ಕಾಣಿಸುತ್ತವೆ. ಇಂಗ್ಲಿಷ್ ಭಾಷೆಯಲ್ಲಿರುವಷ್ಟು ನಿಘಂಟುಗಳೂ ವಿಶ್ವಕೋಶಗಳೂ ಕನ್ನಡದಲ್ಲಿಯೂ ಬರುವಂತಾಗಬೇಕು ಎಂಬುದು ಅವರ ನಿಜವಾದ ಹಾರೈಕೆಯಾಗಿತ್ತು. ಬಹುಶಃ ಅವರ ಈ ಅಭಿಪ್ರಾಯಗಳು, ಅವರಿಗೇ ಬಾಲಿಶವೆನ್ನುವಂತೆ ತೋರಿದ್ದು, ಕುವೆಂಪುರವರು ಬರೆದ ರಾಮಕೃಷ್ಣ ಪರಮಹಂಸರ ಜೀವನ ಚರಿತ್ರೆಯನ್ನು ಓದಿದ ಮೇಲೆ. ನಂತರವೇ ಅವರಿಗೆ ಕನ್ನಡ ಭಾಷೆಯ ಸಾಮರ್ಥ್ಯ, ಸೊಗಸು, ಲಾಲಿತ್ಯಗಳು ಮನವರಿಕೆಯಾದದ್ದು. ಆ ಭಾಷೆಗೆ ಮುಗ್ಧರಾಗಿದ್ದ ಕ್ಷಣಗಳಲ್ಲಿ, “ಕನ್ನಡ ಭಾಷೆಯಲ್ಲಿ ಅಂಥ ಪದಗಳುಂಟೆ, ಅಂಥ ಕಾವ್ಯಗಳನ್ನು ಬರೆಯಬಹುದೇ ಅಂಥ ಭಾವಗಳನ್ನು ಅಷ್ಟು ಸೊಗಸಾಗಿ ಹೊರಡಿಸಬಹುದೊ ಎಂದು ನಾನು ಮುಗ್ಧನಾದೆನು. ನನಗಿದ್ದ ಕನ್ನಡ ಭಾಷೆಯ ದಾರಿದ್ರ್ಯ ಅಭಿಪ್ರಾಯವು ಕ್ಷಣಾರ್ಧದಲ್ಲಿ, ಅಡಗಿ ಕನ್ನಡ ಭಾಷೆಯು ಎಂಥ ಸೊಂಪಿನ ಇಂಪಿನ ಭಾಷೆ, ಎಂಥ ವೀರ ರಸವತ್ತಾದ ಭಾಷೆ ಎಂದು ಎದೆಯುಬ್ಬಿತು” ಎಂದು ಹೇಳಿದ ಮಾತುಗಳಲ್ಲಿ, ತಮಗೆ ಕನ್ನಡ ಭಾಷೆಯ ಬಗೆಗಿನ ಅರಿವಿನ ಮಿತಿಯನ್ನು ಪ್ರಾಮಾಣಿಕವಾಗಿ ಒಪ್ಪಿಕೊಂಡದ್ದೇ ಅಲ್ಲದೆ, ಕನ್ನಡ ಭಾಷೆಯ ಸೊಗಸು ಸೌಂದರ್ಯಗಳಿಗೆ ಮಾರು ಹೋಗಿ ಅದರ ಅಭಿವೃದ್ಧಿಗೆ ನೋಂತರು.

ಅದೇ ರೀತಿಯಲ್ಲಿ ಏಕೀಕರಣ ಹೋರಾಟದಲ್ಲಿನ ಅವರ ಪಾತ್ರವೂ ಮಹತ್ವದ್ದೇ. ರಾಷ್ಟ್ರಮಟ್ಟದ ನಾಯಕರು ಭಾಷಾವಾರು ಪ್ರಾಂತ ರಚನೆಯನ್ನು ಸ್ವಾಗತಿಸಲಿಲ್ಲ. ಸಾಲದ್ದಕ್ಕೆ ರಾಜ್ಯದ ಕೆಲವರ ವಿರೋಧವನ್ನೇ ಸತ್ಯವೆಂದು ನಂಬಿ, ತಮ್ಮ ವಿರೋಧಿ ನಿಲುವಿಗೆ ಪೂರಕವಾಗಿ ಬಳಸಿಕೊಂಡರು. ಆದರೆ ಹನುಮಂತಯ್ಯನವರು ಅವರ ತಪ್ಪು ಕಲ್ಪನೆಗಳನ್ನು ದೂರ ಮಾಡಿ, ಭಾರತದ ಒಕ್ಕೂಟದಲ್ಲಿರುವ ಯಾವುದೇ ಕನ್ನಡ ಭಾಗ ಒಂದಾಗಲು, ಮೈಸೂರು ರಾಜ್ಯದೊಡನೆ ವಿಲೀನವಾಗಲು, ಶಾಸನ ಸಭೆಯ ಮತ್ತು ತಮ್ಮ ಒಪ್ಪಿಗೆಯೂ ಇದ್ದು, ವೈಯಕ್ತಿಕವಾಗಿ ತಾವು ಸ್ವಾಗತಿಸುತ್ತಿರುವುದಾಗಿ ಹೇಳುವುದರ ಜೊತೆಗೆ ಕರ್ನಾಟಕ ಪ್ರಾಂತ ರಚನೆಯ ಅಗತ್ಯವಿದೆಯೆಂಬ ಅಂಶವನ್ನು ಮನವರಿಕೆ ಮಾಡಿಕೊಟ್ಟರು. ರಾಜ್ಯದಲ್ಲಿಯೇ ಕೆಲವು ಶಾಸಕರ ವಿರೋಧದ ನಡುವೆಯೂ ಮುಖ್ಯಮಂತ್ರಿ ಸ್ಥಾನದಿಂದ ಏಕೀಕರಣ ಪರವಾದ ಹೇಳಿಕೆಯನ್ನು ದಿಟ್ಟವಾಗಿ ಘೋಷಿಸಿದರು.

ಅವರ ರಾಜಕೀಯ ಬದುಕಿನಲ್ಲಿ, ಮುಖ್ಯಮಂತ್ರಿ ಅಧಿಕಾರಾವಧಿಯಲ್ಲಿ ಅವರಿಗೆ ಎದುರಾದ ಸಮಸ್ಯೆಗಳು ಸಾಧಾರಣವಾದುದಾಗಿರಲಿಲ್ಲ. ಇಷ್ಟು ವಿಶಾಲವಾದ ರಾಜ್ಯದ ಹೊಣೆಯನ್ನು, ಯಾವುದೇ ಟೀಕೆ ಟಿಪ್ಪಿಣಿಗಳು, ವಿರೋಧಗಳು, ಅಗ್ನಿದಿವ್ಯಗಳು ಎದುರಾಗದೆ ಸಲೀಸಾಗಿ ನಿರ್ವಹಿಸುವುದು ಸಾಧ್ಯವಿಲ್ಲ. ಅಂತಹವುಗಳಲ್ಲಿ ವಿಧಾನಸೌಧದ ಅವರ ಪರಿಕಲ್ಪನೆ ಅದ್ಭುತವೆನಿಸಿದರೂ ಅದರಿಂದ ಉದ್ಭವಿಸಿದ ಸಮಸ್ಯೆಗಳು ಬಹಳ ಭಯಂಕರವೂ, ಗಂಭೀರವೂ ಆಗಿದ್ದವು. ಪ್ರಪಂಚದಲ್ಲಿ ನಿಷ್ಠೆ ಪ್ರಾಮಾಣಿಕತೆಗಳು ಯಾವಾಗಲೂ ಪ್ರಶ್ನಿಸಲ್ಪಡುತ್ತಲೇ ಇರುತ್ತವೆ. ಗೂಢಚಾರರ ಹೊಂಚಿಕೆ, ಗುಮಾನಿಗಳು, ಹನುಮಂತಯ್ಯನವರ ಮನೆಗೆ ಯಾರೂ ಹೋಗಬಾರದೆಂಬ ಕಟ್ಟಾಜ್ಞೆ, ಜನಮನದಿಂದ ಅವರ ನೆನಪನ್ನು ಅಳಿಸಿಹಾಕುವ ಪ್ರಯತ್ನಗಳು ಅವರು ಮಾಡಿದ ಪ್ರತಿಯೊಂದು ಕೆಲಸಕ್ಕೂ ಟೀಕೆ, ಮಾಡಿದ ಕೆಲಸಕ್ಕೆ ವಿರುದ್ಧ ರೀತಿಯಲ್ಲಿ ಕೆಲಸ, ಹೊಟ್ಟೆಕಿಚ್ಚಿನ ದಳ್ಳುರಿ– ಇಂಥ ವಾತಾವರಣದ ಮೂಲಕ ಹಾದು ಬರಬೇಕಾದ ಹನುಮಂತಯ್ಯನವರ ಮನಸ್ಥಿತಿ ಊಹಿಸಿಕೊಳ್ಳುವುದೂ ಭಯಂಕರ; ರಾಜೀನಾಮೆ ನೀಡುವಷ್ಟು ಒತ್ತಡಕ್ಕೆ ಒಳಗಾಗ ಬೇಕಾಯಿತು. ಆದರೆ ಅವರ ಪ್ರಾಮಾಣಿಕತೆ, ನಿಷ್ಠೆ, ಪ್ರಜಾಹಿತ ಚಿಂತನೆಗಳನ್ನು ಅರಿತಿದ್ದ ಅನೇಕ ಸಾಮಾಜಿಕ, ರಾಜಕೀಯ ವರಿಷ್ಠರು, ಹನುಮಂತಯ್ಯನವರ ಪರವಾಗಿ ಆಡಿದ ಮಾತುಗಳು, ಅವರ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿವೆ. ಶಿಕ್ಷಣ ತಜ್ಞ ಎಂ.ಪಿ.ಎಲ್. ಶಾಸ್ತ್ರಿಯವರು ಹನುಮಂತಯ್ಯನವರು ಇಂಥ ಭವ್ಯ ವಿಧಾನಸೌಧವನ್ನು ಕಟ್ಟದಿದ್ದರೆ ಆಡಳಿತಕ್ಕೆ ಅರ್ಹವಾದ ಭವನವೇ ಇರುತ್ತಿರಲಿಲ್ಲವೆಂದು ಅಭಿಪ್ರಾಯಪಟ್ಟರೆ, ಸಮಾಜ ಸೇವಕರಾದ ಜಿ. ನಾರಾಯಣರು, ವಿಧಾನಸೌಧದಂತಹ ಬೃಹತ್ ನಿರ್ಮಾಣದ ಮಹತ್ವವನ್ನು ಗ್ರಹಿಸಲಾರದಷ್ಟು, ನಮ್ಮ ಮೈಸೂರಿನ ರಾಜಕಾರಣಿಗಳು ಅಸಮರ್ಥರಾದರೆ ಎಂದು ವ್ಯಥೆಪಟ್ಟದ್ದೇ ಅಲ್ಲದೆ, ಮಾರ್ಮಿಕವಾದ ವಿಶ್ಲೇಷಣೆಯೊಂದನ್ನು ಇದರ ಸಂಬಂಧವಾಗಿ ಹೀಗೆ ನೀಡಿದ್ದಾರೆ." ವಿಧಾನಸೌಧಕ್ಕೆ ಒಂದು ಬಲಿ ಬೇಕಾಯಿತು. ಅದು ಪೂರ್ಣವಾಗಿ ಫಲ ಕೊಡಬೇಕಾದರೆ ಹನುಮಂತಯ್ಯನವರ ಮೈಸೂರು ರಾಜಕೀಯ ಜೀವನವೇ ಅದಕ್ಕೆ ಬಲಿಯಾಯಿತು. ಅವರು ದೂರ ಹೋದರು. ವಿಧಾನಸೌಧ ನಿಂತಿತು. ವಿಧಾನಸೌಧ



ಎಲ್ಲಿಯವರೆಗೆ ತಲೆಯೆತ್ತಿ ನಿಂತಿರುತ್ತದೆಯೋ ಅಲ್ಲಿಯವರೆಗೆ ಹನುಮಂತಯ್ಯ ಅವರ ಹೆಸರು ಶಾಶ್ವತವಾಗಿ ನಿಂತಿರುತ್ತದೆ" ಎಂದು ನುಡಿದರು. ಪ್ರಾಮಾಣಿಕ, ನಿರಪರಾಧಿ ಯಾಗಿದ್ದ ಹನುಮಂತಯ್ಯ ಅಪರಾಧಿ ಸ್ಥಾನದಲ್ಲಿ ನಿಲ್ಲಬೇಕಾದ ಪ್ರಸಂಗ ದುರಂತದ ಪರಾಕಾಷ್ಠೆಯಾಗಿ ಕಾಣಿಸುತ್ತದೆ. ನಿಜವಾಗಿಯೂ ಇದೊಂದು ರಾಜಕೀಯ ವಿಡಂಬನೆಯೇ ಸರಿ. ಸ್ವತಂತ್ರ ಭಾರತದ ನ್ಯಾಯನಿಷ್ಠ ಮುತ್ಸದ್ದಿಯ ದೂರದೃಷ್ಟಿ, ಜನೋಪಕಾರಿ ಕಾಳಜಿ, ಲೋಕಾನುಭವ, ದರ್ಶಕತ್ವ, ಸತ್ಯಾಗ್ರಹಿಯ ಧೀರ ನಿಲುವು, ನಾಡು ನುಡಿ ಸಂಸ್ಕೃತಿಗಳ ಘನತೆಯನ್ನು ಎತ್ತಿ ಹಿಡಿದ ಸಂಸ್ಕಾರ, ದೇಶಪ್ರೇಮಗಳ ಪ್ರತಿಮೂರ್ತಿಯಂತಿದ್ದ ಹನುಮಂತಯ್ಯನವರು ವಿಚಾರಣೆಗೆ ಒಳಪಟ್ಟಿದ್ದು, ನಮ್ಮ ರಾಜಕೀಯ ವ್ಯಕ್ತಿಗಳ ದುರುದ್ದೇಶ, ಸಣ್ಣತನ, ಅಸೂಯೆಗಳನ್ನು ಬಿಂಬಿಸುತ್ತದೆ.

ಆದರೆ ಪ್ರಪಂಚ ಬರಿ ಇಂಥವರಿಂದಲೇ ತುಂಬಿಲ್ಲ. ಇಂಥ ನಾಯಕನ ಯೋಗ್ಯತೆ, ಸಾಮರ್ಥ್ಯಗಳನ್ನು ಬಲ್ಲವರು ಯಾರೂ ಸುಲಭವಾಗಿ ಬಿಟ್ಟುಕೊಡುವುದಿಲ್ಲ. ದೂರುವವರು ಹತ್ತು ಮಂದಿ ಇದ್ದರೆ ಮೆಚ್ಚುವವರು ತೊಂಬತ್ತು ಮಂದಿ ಇರುತ್ತಾರೆನ್ನುವುದಕ್ಕೆ ಸಾಕ್ಷಿಯಾಗಿ ರಾಮನಗರ ಕ್ಷೇತ್ರದಿಂದ ಅಖಂಡ ಗೆಲುವಿನೊಂದಿಗೆ ಹೊರಬಂದು ಇನ್ನಷ್ಟು ದೃಢ ಚಿತ್ತದೊಂದಿಗೆ, ಕ್ರಿಯಾಶೀಲತೆಯೊಂದಿಗೆ ಪ್ರಜಾಹಿತ ಕಾರ್ಯಗಳನ್ನು ಮಾಡುತ್ತೇನೆಂದು ಗೆಲ್ಲಿಸಿದ ಮತದಾರರಿಗೆ ತಮ್ಮ ಕೃತಜ್ಞ ಸಲ್ಲಿಸಿದರು. ಮುಖ್ಯಮಂತ್ರಿಯಾಗಿ ಎರಡನೇ ಬಾರಿಯೂ ಬರಬೇಕೆಂಬುದು ಜನರ ಆಶಯವಾಗಿದ್ದರೂ ರಾಜಕೀಯ ಬೆಳವಣಿಗೆ ಗಳಿಂದಾಗಿ ಜತ್ತಿಯವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು. ಮುಖ್ಯಮಂತ್ರಿಯಾಗದಿದ್ದರೂ ಅವರ ಕ್ರಿಯಾಶೀಲ ಚೇತನಕ್ಕೆ ಮಾಡಬೇಕಾದ ಕೆಲಸಗಳು ಬೆಟ್ಟದಷ್ಟಿದ್ದವು. ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಸುಧಾರಣಾ ಚಳುವಳಿಗಳಲ್ಲಿ ತೊಡಗಿಸಿಕೊಂಡರು. ಕಾಯಕ ಯಾವುದಾದರೇನು? ಮಾಡುವ ಮನಸಿದ್ದರೆ ಎಲ್ಲವೂ ಸುಗಮವಾಗುತ್ತದೆ. ಅವರಲ್ಲಿನ ಅಂತರ್ನಿಹಿತ ಶಕ್ತಿ ಸಾಮರ್ಥ್ಯ, ಪ್ರತಿಭೆಗಳು ರಾಜ್ಯರಾಜಕಾರಣದಿಂದ ರಾಷ್ಟ್ರರಾಜಕಾರಣದತ್ತ ಸೆಳೆದುಕೊಂಡವು. ಭಾರತ ಸರ್ಕಾರದ ಸುಧಾರಣಾ ಆಯೋಗದ ಅಧ್ಯಕ್ಷರಾಗಿ, ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರಾಗಿ, ಭಾರತ ಸರ್ಕಾರದ ರೈಲ್ವೆ ಮಂತ್ರಿಯಾಗಿ ಉತ್ತಮವಾದ ರಾಜಕೀಯ, ಉತ್ತಮವಾದ ಸರ್ಕಾರ ಪದ್ಧತಿ, ಉತ್ತಮವಾದ ಆಡಳಿತ ನೀಡಬೇಕೆಂಬ ಆಶಯವನ್ನು ರೂಢಿಸಿಕೊಂಡಿದ್ದು, ಅವೆಲ್ಲವನ್ನೂ ತಮ್ಮ ದಕ್ಷ ನಿರ್ವಹಣೆಯ ಮೂಲಕ ದೇಶಕ್ಕೆ ತೋರಿಸಿಕೊಟ್ಟರು. ಅವರ ರಾಜಕೀಯ ಸಾಮಾಜಿಕ, ಸಾಂಸ್ಕೃತಿಕ ವ್ಯಕ್ತಿತ್ವವನ್ನು ದೊಡ್ಡ ದೊಡ್ಡ ವಿದ್ವಾಂಸರು ರಾಜಕಾರಣಿಗಳು, ಸಾಹಿತಿಗಳು ಮೊದಲಾದವರು ಮೆಚ್ಚಿ ಕೊಂಡಾಡಿದರು. ಇಂತಹ ದೇಶಭಕ್ತ, ಸ್ವಾತಂತ್ರ್ಯಪ್ರಿಯ, ಛಲಗಾರ, ನಿಷ್ಠಾವಂತ, ದೇಶ, ಸಮಾಜ ಸೇವಕ, ಅನನ್ಯ ರಾಜಕೀಯ ಮುತ್ಸದ್ದಿ, ಅಸಾಧಾರಣ ಪ್ರತಿಭಾವಂತ, ದೈವಭಕ್ತ, ಧರ್ಮಭೀರು ಹನುಮಂತಯ್ಯನವರಿಗೂ ಸಾವನ್ನು ಮೀರುವುದು ಸಾಧ್ಯವಾಗಲಿಲ್ಲ. ೧–೧೨–೧೯೮೦ರ ಸೋಮವಾರ ಮುಂಜಾನೆ ದೈವಾಧೀನರಾದರು. ದೇಶಕ್ಕೆ ದೇಶವೇ ಕಣ್ಣೀರಿಟ್ಟಿತು.

ಇಂತಹ ಅದ್ಭುತ ಮತ್ತು ಬಹುಮುಖ ವ್ಯಕ್ತಿತ್ವದ ಕೆಂಗಲ್ ಹನುಮಂತಯ್ಯನವರ ಜೀವನ ಚಿತ್ರವನ್ನು ವಿಸ್ತೃತವಾಗಿ, ಅವರ ವ್ಯಕ್ತಿತ್ವದ ಯಾವ ಮುಖವೂ, ಸಾಧನೆಗಳ ವಿವರಗಳು ಎಲ್ಲಿಯೂ ತಪ್ಪಿಹೋಗದಂತೆಯೂ, ಅವರ ರಾಜಕೀಯ ಸಾಂಸ್ಕೃತಿಕ, ಸಾಮಾಜಿಕ ಮೌಲ್ಯಯುತ ಚಿಂತನೆಗಳಿಗೆ ಎಲ್ಲಿಯೂ ಧಕ್ಕೆ ಬಾರದಂತೆ, ತಿರುಚಿ ಹೋಗದಂತೆ ಎಚ್ಚರ ವಹಿಸಿ, ಅವರ ದಿನಚರಿಯಲ್ಲಿನ ಪ್ರತಿಯೊಂದು ಶಬ್ದವನ್ನೂ ಕೂಲಂಕಶವಾಗಿ ಪರಿಶೀಲಿಸಿ, ಅರ್ಥೈಸಿ, ಜೀವನ ಚರಿತ್ರೆಯನ್ನು ಕಟ್ಟಿಕೊಟ್ಟ ಲಿಂಗಯ್ಯನವರು ನಿಜವಾಗಿಯೂ ಸಾಹಸಿಗಳೆಂದೇ ಹೇಳಬೇಕು.

ಇದೇ ಬಗೆಯ ಜೀವನ ಚರಿತ್ರೆಯ ಚರಿತ್ರ ವ್ಯಕ್ತಿಯೂ ಸ್ವಾತಂತ್ರ್ಯ ಹೋರಾಟಗಾರ, ಜನಪ್ರಿಯ ನಾಯಕ, ದಕ್ಷ ರಾಜಕಾರಣಿ, ಒಳ್ಳೆಯ ಸಮಾಜ ಸೇವಕ ಎಂದು ಗುರುತಿಸಿಕೊಂಡಿರುವವರು ಎಚ್.ಕೆ. ವೀರಣ್ಣಗೌಡರು. ವೀರಣ್ಣಗೌಡರು ತಮ್ಮ ಜೀವನಾವಧಿಯಲ್ಲಿಯೇ 'ಬದುಕು–ಮೆಲುಕು' ಎಂಬ 'ಆತ್ಮಕಥನ'ವನ್ನೇ ಪ್ರಮುಖ ಆಕರ ಗ್ರಂಥವಾಗಿರಿಸಿಕೊಂಡು ವೀರಣ್ಣಗೌಡರ ವಿಸ್ತೃತ ಕಾರ್ಯಕ್ಷೇತ್ರಗಳಲ್ಲಿ ಲಭ್ಯವಾದ ಮಾಹಿತಿಗಳನ್ನು ಸಾಕಷ್ಟು ಸಂಗ್ರಹಿಸಿ ಸುಮಾರು ನೂರು ಪುಟಗಳಷ್ಟು ವಿಸ್ತೃತ ಜೀವನ ಚರಿತ್ರೆಯನ್ನು ಲಿಂಗಯ್ಯನವರು ತಮ್ಮ ಪಳಗಿದ ಬರಹದ ಮೂಲಕ ಬರೆದುಕೊಟ್ಟು ಕನ್ನಡ ಸಾಹಿತ್ಯ ಲೋಕಕ್ಕೆ ಉಪಕರಿಸಿದ್ದಾರೆ. ಎಲ್ಲ ಜೀವನ ಚರಿತ್ರೆಗಳೂ ಚರಿತ್ರ ವ್ಯಕ್ತಿಯ ಚರಿತ್ರೆಯಷ್ಟೇ ಆಗದೆ ಆ ಕಾಲಘಟ್ಟದ ದೇಶ ಚರಿತ್ರೆಯೂ ಆಗುತ್ತದೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಸಾಂಸಾರಿಕ ವಿವರಗಳು, ವ್ಯಕ್ತಿಯ ಹೋರಾಟಗಳೂ ದಾಖಲಾಗುವುದರ ಜೊತೆಗೆ ಆ ವ್ಯಕ್ತಿ ಬಾಳಿ ಬದುಕುತ್ತಿರುವ ಆತನ ಸಮಕಾಲೀನ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ವಿವರಗಳೂ ಜೊತೆ ಜೊತೆಗೆ ನಿರೂಪಣೆಗೊಳ್ಳುತ್ತಾ ಹೋಗುತ್ತದೆ. ಅನೇಕ ಮುಖವಾಗಿ ಹಂಚಿಕೊಳ್ಳುವ ಚರಿತ್ರ ವ್ಯಕ್ತಿಯ ಸಾಂಸಾರಿಕ ಸಂಬಂಧಗಳು, ಸಾಮಾಜಿಕ ಸಂಬಂಧಗಳು, ರಾಜಕೀಯ ಸಂಬಂಧಗಳು ಅವರ ಜೊತೆಗಿನ ಅನೇಕ ವ್ಯಕ್ತಿಗಳ ಪರಿಚಯವನ್ನು ಮಾಡಿಸುತ್ತದೆ. ಲಿಂಗಯ್ಯನವರು ವೀರಣ್ಣ ಗೌಡರಲ್ಲಿ ಉದಾತ್ತ ಬದುಕನ್ನೂ, ಮಾನವೀಯ ಮೌಲ್ಯಗಳನ್ನೂ, ಅದಮ್ಯ ರಾಷ್ಟ್ರಪ್ರೀತಿಯನ್ನೂ, ಸಮಾಜ ಸೇವಾಧುರಂಧರತೆಯನ್ನೂ ಗುರುತಿಸುತ್ತಾರೆ. ವೀರಣ್ಣಗೌಡರಂತಹವರಿಗೆ ಕುಟುಂಬ, ಸಂಸಾರ, ವೈಯಕ್ತಿಕ ಅಗತ್ಯಗಳಿಗಿಂತಲೂ ರಾಷ್ಟ್ರಸೇವೆ, ರಾಷ್ಟ್ರನಿರ್ಮಾಣ ಇವೇ ಬಹು ಮುಖ್ಯ ಜೀವನೋದ್ದೇಶಗಳಾಗಿವೆ. ಹನ್ನೊಂದು ಅಧ್ಯಾಯಗಳಲ್ಲಿ ಹರಡಿಕೊಂಡಿರುವ ಜೀವನ ಚರಿತ್ರೆಯ ರಚನೆಯ ಹಿಂದಿನ ತಮ್ಮ ಪ್ರಯತ್ನ, ಎದುರಾದ ಸಮಸ್ಯೆಗಳ ಬಗ್ಗೆ ಹೀಗೆ ಹೇಳುತ್ತಾರೆ. "ಎಚ್.ಕೆ. ವೀರಣ್ಣಗೌಡರ ಜೀವನ ವೃಕ್ಷ ವಿವಿಧ ಶಾಖೆಗಳಲ್ಲಿ ಟಿಸಿಲೊಡೆದಿದೆ. ಅವುಗಳನ್ನೆಲ್ಲಾ ಒಂದೇ ವೃಕ್ಷ ಶಾಖೆಯಲ್ಲಿ ಅಳವಡಿಸುವುದು ಕಷ್ಟ. ವೈವಿಧ್ಯಮಯವಾದ ಬದುಕಿಗೆ ಒಂದೇ ಆಯಾಮ ಇರುವುದಿಲ್ಲ. ಹೋರಾಟದ ಹಾದಿ ಯಾವ ಸಮಯದಲ್ಲಿ ಯಾವ ತಿರುವು ಪಡೆಯುತ್ತದೆಯೋ ಹೇಳುವುದಕ್ಕಾಗುವುದಿಲ್ಲ. ಒಂದೊಂದಕ್ಕೂ ಅದರದೇ ಆದ ವೈಶಿಷ್ಟ್ಯವಿದೆ, ವಿವಿಧ್ಯವಿದೆ. ಒಂದೆರಡು ಒಂದರೊಳಗೊಂದು ಬೆರೆತುಕೊಂಡಿವೆ.



ಅವುಗಳನ್ನೆಲ್ಲ ಇಡಿಯಾಗಿ ನೋಡಿದರೆ ಒಂದು ಬಣ್ಣ, ಬಿಡಿಯಾಗಿ ನೋಡಿದರೆ ಇನ್ನೊಂದು ಬಣ್ಣ, ವೀರಣ್ಣಗೌಡರ ಸಮಗ್ರ ಜೀವನದ ಪ್ರಮುಖ ಘಟನೆಗಳ ಕಾರ್ಯಕ್ಷೇತ್ರಗಳನ್ನು ವಿಷಯವಾರು ವಿಂಗಡಿಸಿ ಪ್ರತ್ಯೇಕ ಶೀರ್ಷಿಕೆಗಳಲ್ಲಿ ಬಿಡಿ ಬಿಡಿಯಾಗಿ ಅವಲೋಕಿಸಿ ಒಟ್ಟು ಚೌಕಟ್ಟು ನಿರ್ಮಿಸಲು ಪ್ರಯತ್ನಿಸಿದೆ" ಎಂದು ಹೇಳಿ ಅವರ ಮುಂದಿದ್ದ ಸವಾಲಿನ ಸ್ವರೂಪವನ್ನು ವಿವರಿಸಿದ್ದಾರೆ. ಗೌಡರ ಶತಮಾನೋತ್ಸವ ಸಂದರ್ಭಕ್ಕಾಗಿ ಬರೆದ ಈ ಪುಟ್ಟ ಕೃತಿಯಲ್ಲಿ ಅವರ ಸಮಗ್ರ ವ್ಯಕ್ತಿತ್ವದ ಚಿತ್ರವನ್ನು ಅಚ್ಚುಕಟ್ಟಾಗಿ ಕಟ್ಟಿಕೊಟ್ಟಿದ್ದಾರೆ. ಊರಿನ ಪಟೇಲ ಕೆಂಚೇಗೌಡರ ಮಗನಾಗಿ ಚನ್ನಪಟ್ಟಣ ತಾಲ್ಲೂಕು ವಿರೂಪಾಕ್ಷಪುರ ಹೋಬಳಿ ಸಾದಹಳ್ಳಿಯಲ್ಲಿ ಹುಟ್ಟಿದ ವೀರಣ್ಣಗೌಡರು, ವಿದ್ಯಾಭ್ಯಾಸದ ಕಾಲದಲ್ಲಿಯೇ, ಉದಾತ್ತರ, ದೇಶಭಕ್ತರ, ವಿಶಿಷ್ಟ ವ್ಯಕ್ತಿಗಳ ಜೀವನ ಚರಿತ್ರೆಗಳಿಂದ ಪ್ರಭಾವಿತರಾಗಿ ಆದರ್ಶಗಳನ್ನು ಮೈಗೂಡಿಸಿಕೊಂಡು ಬೆಳೆದದ್ದೇ ಅಲ್ಲದೆ, ದೇಶಸೇವೆ ಮಾಡುವ ಭಾಗ್ಯ ತಮಗೂ ದೊರಕಲೆಂದು ಹಾರೈಸಿದ್ದೇ ಅಲ್ಲದೆ, ನಿರ್ಧಾರವನ್ನೂ ಕೈಗೊಂಡರು. ಶಿಕ್ಷಕರಾಗಿ ವಿದ್ಯಾರ್ಥಿಗಳಲ್ಲಿ ದೇಶೀಯತೆಯತ್ತ ಮನವೊಲಿಯುವಂತೆ ಮಾಡಿದರು. ಶಿಕ್ಷಕರಾಗಿದ್ದೇ ಅಲ್ಲದೆ ಪತ್ರಿಕೋದ್ಯಮದ ಕಡೆಗೂ ಒಲಿದು, 'ಒಕ್ಕಲಿಗ ಪತ್ರಿಕೆ' ಸಂಪಾದಕರಾದರು. ಜವಾಬ್ದಾರಿ ಸರಕಾರಕ್ಕಾಗಿ ನಡೆಯುತ್ತಿದ್ದ ಹೋರಾಟ ಬಿರುಸಾಗಲು ಪತ್ರಿಕೆ ಕಾರಣವೆಂದು ಭಾವಿಸಿ ಗೌಡರನ್ನು ದಸ್ತಗಿರಿ ಮಾಡಿದರು. ಪತ್ರಿಕೆ ನಡೆಸುವ ಕೆಲಸ ಆರ್ಥಿಕ ಮುಗ್ಗಟ್ಟಿನಿಂದಾಗಿ ತೊಂದರೆಯನ್ನು ಅನುಭವಿಸಬೇಕಾಗಿ ಬಂತಾದರೂ, ಸರಕಾರಕ್ಕೆ ಮಣಿಯದ ತಮ್ಮ 'ಚಿತ್ರಗುಪ್ತ' ಪತ್ರಿಕೆಯನ್ನು ಮುಂದುವರೆಸಿದ್ದೇ ಅಲ್ಲದೆ ದಿಟ್ಟ ಅಭಿಪ್ರಾಯಗಳಿಗೆ ವೇದಿಕೆಯನ್ನಾಗಿ ಮಾಡಿಕೊಂಡರು. ಚಳುವಳಿಗಳು ವೀರಣ್ಣಗೌಡರ ಬದುಕಿನ ಭಾಗವೋ ಎಂಬಂತೆ, ಮತ್ತೊಮ್ಮೆ ರೈತ ಚಳುವಳಿಯನ್ನು ಹುಟ್ಟುಹಾಕಿದರು. ಅಲ್ಲದೆ ಭಾರತಾದ್ಯಂತ ಕರ ನಿರಾಕರಣೆ, ಅಸಹಕಾರ, ದೇಶ ಬಿಟ್ಟು ತೊಲಗಿ ಇತ್ಯಾದಿ ಚಳುವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಸ್ವಾತಂತ್ರ್ಯ ಹೋರಾಟ ಒಂದು ಕಡೆಯಾದರೆ, ರೈತರ ಕಷ್ಟನಷ್ಟಗಳನ್ನೂ ಅರಿತಿದ್ದ ಗೌಡರು, ಎಲ್ಲಾ ತಾಲ್ಲೂಕುಗಳಲ್ಲಿನ ಒಂದೊಂದು ಹಳ್ಳಿಗೂ ಭೇಟಿ ಕೊಟ್ಟು ರೈತ ಚಳುವಳಿಯ ಉದ್ದೇಶಗಳನ್ನು ವಿವರಿಸಿದರು, ಭಾಷಣಗಳನ್ನು ಮಾಡಿದರು. ಸರಕಾರವನ್ನು ಪ್ರತಿಭಟಿಸಿ ನಿಂತರು. ಇರ್ವಿನ್ ನಾಲಾ ರೈತರ ಚಳುವಳಿಯ ನಂತರ, ಪ್ರಜಾಪ್ರತಿನಿಧಿಗಳ ಸಭೆಗೆ ನಡೆದ ಸಾರ್ವಜನಿಕ ಚುನಾವಣೆಗೆ ನಿಂತು ಸೋಲನ್ನು ಅನುಭವಿಸಿದರಾದರೂ ೧೯೩೪ರಲ್ಲಿ ಮೈಸೂರು ಜಿಲ್ಲಾ ಬೋರ್ಡಿಗೆ ಮಾತ್ರ ಚುನಾವಣೆಯಲ್ಲಿ ಗೆದ್ದು ಬಂದರು. ಮದ್ದೂರು ಪುರಸಭೆ ಉಪಾಧ್ಯಕ್ಷರೂ ಆದರು. ಎಂಥದೇ ರಾಜಕೀಯ ಸಭೆಗಳಾಗಲೀ, ಸಮಾವೇಶಗಳಾಗಲಿ, ವೀರಣ್ಣಗೌಡರು ಒಂದಿಷ್ಟೂ ಹಿಂಜರಿಯದೆ ಅವರ ಕಾರ್ಯವೈಖರಿಯಲ್ಲಿನ ಲೋಪದೋಷಗಳನ್ನು ಎತ್ತಿ ತೋರಿಸಿ ಪ್ರಶ್ನಿಸುತ್ತಿದ್ದರು. ಶಿವಪುರದ ಧ್ವಜಾರೋಹಣ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಮೊದಲಿಗೆ ನಾಲ್ಕಾಣೆ ಸದಸ್ಯರಾಗಿ ಕಾಂಗ್ರೆಸ್ ಪಕ್ಷ ಸೇರಿದವರು ಅದರ ಚಟುವಟಿಕೆಗಳಲ್ಲಿ ಮುಖ್ಯಪಾತ್ರ ವಹಿಸುತ್ತಾ ಬಂದು ೧೯೪೨ರಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿ ನಂತರ ೧೯೫೭ರಲ್ಲಿ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ

ಅಧ್ಯಕ್ಷರಾಗಿ, ೧೯೫೮ರಲ್ಲಿ ಮತ್ತೆ ಅದಕ್ಕೇ ಎರಡನೇ ಬಾರಿಯೂ ಆಯ್ಕೆಯಾಗಿದ್ದು ಕಾಂಗ್ರೆಸ್ ಸಂಸ್ಥೆಯ ಏಳಿಗೆಗಾಗಿ ದಕ್ಷತೆಯಿಂದ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡಿದ್ದೇ ಕಾರಣವಾಗಿತ್ತು. ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಶಾಸಕರಾಗಿದ್ದ ವೀರಣ್ಣಗೌಡರು ಸಂಸ್ಥಾನದ ಪ್ರಮುಖ ವಿಷಯಗಳ ಚರ್ಚೆಯಲ್ಲಿ ಪಾಲ್ಗೊಂಡು ತಮ್ಮ ವರ್ಚಸ್ಸನ್ನು ಬೆಳಗಿಸಿದರು. ಬಿ.ಡಿ. ಜತ್ತಿಯವರ ಕಾಲದಲ್ಲೂ ವೀರಣ್ಣಗೌಡರು ಮಂತ್ರಿಯಾಗಿದ್ದರು.

ಹೋರಾಟಗಾರರಿಗೆ ಪ್ರತಿಭಟನೆ, ಶಿಕ್ಷೆ, ಸೆರೆಮನೆ ಇತ್ಯಾದಿಗಳೆಲ್ಲವೂ ಮಾಮೂಲೇ! ಸಂಸಾರಕ್ಕಿಂತ ಸಾರ್ವಜನಿಕ ಸೇವೆಯನ್ನೇ ತಮ್ಮ ಬದುಕಿನ ಗುರಿಯಾಗಿಸಿಕೊಂಡವರಿಗೆ ಕಷ್ಟ ಕಾರ್ಪಣ್ಯಗಳು ತಪ್ಪಿದ್ದಲ್ಲವೆಂಬಂತೆ ವೀರಣ್ಣಗೌಡರೂ ಸಾಕಷ್ಟು ಈ ಬಗೆಯ ಸಂಕಷ್ಟಗಳನ್ನು ಅನುಭವಿಸಿದರು. ಮೈಸೂರಿನ ಎಲ್ಲಾ ರಾಜಕೀಯ ಹೋರಾಟಗಳು, ಸ್ವಾತಂತ್ರ್ಯ ಹೋರಾಟಗಳು–ಎಲ್ಲವುಗಳಲ್ಲಿ ಭಾಗವಹಿಸಿದರು. ರಾಜಕೀಯ ಕ್ಷೇತ್ರ, ಸಾರ್ವಜನಿಕ ಕ್ಷೇತ್ರಗಳು ಅವರ ಕ್ರಿಯಾರಂಗಗಳಾಗಿದ್ದವು. ರೈತರ ಏಳ್ಗೆಗಾಗಿ ಅವರ ಕಷ್ಟ ಕಾರ್ಪಣ್ಯಗಳ ನಿವಾರಣೆಗಾಗಿ ದುಡಿದರು. ಮೈಸೂರು ಕಾಂಗ್ರೆಸ್ಸನ್ನು ಕಟ್ಟಿ ಬೆಳೆಸಲು, ಬಲಿಷ್ಠಗೊಳಿಸಲು ತಮ್ಮನ್ನು ತೆತ್ತುಕೊಂಡರು. ಆದರ್ಶಗಳಿಗೆ, ಮೌಲ್ಯಗಳಿಗೆಂದೇ ಬಾಳಿದ ವೀರಣ್ಣಗೌಡರು ಅತ್ಯಂತ ಕ್ರಿಯಾಶೀಲರು, ದಕ್ಷರು, ನಿಸ್ಪೃಹರು, ಪ್ರಾಮಾಣಿಕರು, ದೈವಭಕ್ತರು, ಸ್ವಾತಂತ್ರ್ಯ ಸಮಾನತೆಗಳ ಚಿಂತಕರು, ರಾಷ್ಟ್ರಪ್ರೇಮಿ, ಸ್ವಾತಂತ್ರ್ಯ ವೀರರು, ಒಟ್ಟಾರೆಯಾಗಿ ವ್ಯಕ್ತಿಗತ ಸಮಷ್ಠಿ ಕಲ್ಯಾಣವನ್ನೇ ಧ್ಯೇಯವಾಗಿರಿಸಿಕೊಂಡ ಅನನ್ಯ ಆದರ್ಶ ಪುರುಷರು.

ಇಲ್ಲಿಯವರೆಗಿನವು ಡಿ. ಲಿಂಗಯ್ಯ ಬರೆದ ಜೀವನ ಚರಿತ್ರೆಗಳಾದರೆ 'ಬಾಳಿ ಬೆಳಗದವರು' ಎಂಬುದು ವ್ಯಕ್ತಿ ಚಿತ್ರಗಳ ಸಂಗ್ರಹ. ಒಂದು ರೀತಿಯಲ್ಲಿ ಇದೂ ಕೂಡಾ ಜೀವನ ಚರಿತ್ರೆಗಳ ಅತ್ಯಂತ ಸಂಕ್ಷಿಪ್ತ ರೂಪವೇ ಆಗಿದೆ. ವ್ಯಕ್ತಿಗಳ ಜೀವನಕ್ಕೆ ಸಂಬಂಧಪಟ್ಟ ವಿವರಗಳು ಸಮಗ್ರವಾಗಿ ಬರದಿದ್ದರೂ ಸಾಂದರ್ಭಿಕವಾಗಿ ಜನನ, ಬಾಲ್ಯ, ವಿದ್ಯಾಭ್ಯಾಸ, ಉದ್ಯೋಗ, ಕೌಟುಂಬಿಕ ಸ್ಥಿತಿಗತಿಗಳು ಸೂಕ್ಷ್ಮವಾಗಿ ಪ್ರಸ್ತಾಪಿತವಾಗಿ, ವ್ಯಕ್ತಿಗಳ ಗುಣ, ಸ್ವಭಾವ, ಸಾಧನೆ, ಮನೋಧರ್ಮ ಇತ್ಯಾದಿ ಅಂತರಂಗಕ್ಕೆ ಸಂಬಂಧಿಸಿದ ಕೆಲವು ಅಂಶಗಳು ಪ್ರಾಮುಖ್ಯತೆ ಪಡೆದಿರುತ್ತವೆ. ಅವರ ಒಂದೊಂದು ಮುಖದ ವಿಸ್ತೃತ ವಿವರಣೆಗೆ ಒತ್ತು ಬಿದ್ದಿರುತ್ತದೆ. ವ್ಯಕ್ತಿಚಿತ್ರಗಳು ಜೀವನ ಚರಿತ್ರೆಗಳಿಗಿಂತ ಹೆಚ್ಚಿನ ಸವಾಲುಗಳನ್ನು ಒಡ್ಡುತ್ತವೆ. ವ್ಯಾಪ್ತಿ ಚಿಕ್ಕದು, ಹೇಳಬೇಕಾದ್ದೆಲ್ಲವನ್ನೂ ಹೇಳುವುದಕ್ಕೆ ಸಾಧ್ಯವಾಗದ ಸಂದಿಗ್ಧತೆ. ಹೇಳದೆ ಇರಲೂ ಆಗದು. ಇಂತಹ ದ್ವಂದ್ವಗಳ ನಡುವಿದ್ದೂ ಸಮರ್ಥವಾದ ರೀತಿಯಲ್ಲಿ ವ್ಯಕ್ತಿ ಚಿತ್ರಗಳನ್ನು ಕಟ್ಟಿಕೊಟ್ಟಂತಹ ಪ್ರತಿಭಾವಂತ ಲೇಖಕರಿದ್ದಾರೆ. ಡಿ.ವಿ.ಜಿ. ಅವರ 'ನೆನಪಿನ ಚಿತ್ರಶಾಲೆ' ಅದ್ಭುತ ವ್ಯಕ್ತಿ ಚಿತ್ರಗಳ ಅಪಾರ ರಾಶಿಯಾಗಿದೆ. ಡಿ. ಲಿಂಗಯ್ಯನವರಿಗೂ ವ್ಯಕ್ತಿ ಚಿತ್ರಗಳ ಬರವಣಿಗೆಯ ಸವಾಲುಗಳು ಏನೆಂಬುದು ತಿಳಿದಿದೆ. ಅವುಗಳ ರಚನೆಯ ಸಂಕಷ್ಟಗಳನ್ನು ಅವರೇ ಹೀಗೆ ವಿವರಿಸಿದ್ದಾರೆ. "ವ್ಯಕ್ತಿ ಚಿತ್ರ ಸಾಹಿತ್ಯ ರಚನೆ ಕಲಾತ್ಮಕವಾದ ಕುಸುರಿ ಕೆಲಸ. ಇತಿಮಿತಿಗೆ ಒಳಪಡುವ ಕ್ರಿಯೆ. ವ್ಯಾಪ್ತಿ ಕಡಿಮೆಯಾದರೆ ಅಸ್ಪಷ್ಟ, ಹೆಚ್ಚಾದರೆ ಭಾರ. ಲಲಿತ ಪ್ರಬಂಧದಂತೆ, ಸಣ್ಣ



ಕಥೆಯಂತೆ ಅಡಕವಾಗಿರಬೇಕು, ಆಕರ್ಷಕವಾಗಿರಬೇಕು. ಸಮಗ್ರತೆಗಿಂತ ಸಾವಯವ ಸಂಬಂಧ ಸ್ವಾರಸ್ಯಕ್ಕೆ ಒತ್ತು. ಸಮಗ್ರ ಮಾಹಿತಿಯನ್ನು ಗ್ರಹಿಸುವತ್ತ ಕುತೂಹಲ ಹುಟ್ಟಿಸುವಂತಿರಬೇಕು. ನಿರ್ದಿಷ್ಟ ವ್ಯಕ್ತಿಯ ಯಾವುದಾದರೂ ಒಂದು ವಿಶೇಷ ಅಂಶವನ್ನು ಗುರಿಯಾಗಿಟ್ಟುಕೊಂಡರೂ ವ್ಯಕ್ತಿಚಿತ್ರ ರೂಪುಗೊಳ್ಳಬಹುದು. ಸಾಹಿತ್ಯಕ ವ್ಯಕ್ತಿ ಚಿತ್ರದಲ್ಲಿ ಸಾಹಿತ್ಯಾಂಶಗಳು ತುಂಬಿಕೊಂಡಿದ್ದರೆ ಸೊಗಸು. ವ್ಯಕ್ತಿಚಿತ್ರ ಪುಟ್ಟ ಶಿಲ್ಪ, ಬೃಹತ್ತು ಮುಖ್ಯವಲ್ಲ. ಚಿಕ್ಕದಾದರೂ ಚೊಕ್ಕವಾಗಿರುವುದು ಅದರ ಜಾಯಮಾನ. ಕನ್ನಡಿಯಲ್ಲಿ ಕರಿಯನ್ನು ತೋರಿಸುವ ಮೋಡಿ." ಹೀಗೆ ಲಿಂಗಯ್ಯನವರು 'ವ್ಯಕ್ತಿಚಿತ್ರ'ಗಳ ರೂಪುರೇಷೆಗಳ ಬಗ್ಗೆ ಪರಿಪೂರ್ಣ ಪರಿಭಾಷೆಯೊಂದನ್ನು 'ವ್ಯಕ್ತಿಚಿತ್ರ' ಬರೆಯುವವರಿಗೆ ಮಾರ್ಗದರ್ಶಕ ವಾಗುವಂತೆ ನೀಡಿದ್ದಾರೆ.

ಈ ವ್ಯಕ್ತಿ ಚಿತ್ರಗಳ ಸಂಕಲನದಲ್ಲಿನ ಲೇಖನಗಳು ಅವರು ವಿವರಿಸಿದ ಲಕ್ಷಣಗಳಿಗೆ ಲಕ್ಷ್ಯಗಳಾಗಿಯೋ ಮಾದರಿಗಳಾಗಿಯೋ ಇವೆ. ಇಲ್ಲಿ ಧಾರ್ಮಿಕ ಪುರುಷರು, ಕಲಾವಿದರು, ಸಾಹಿತಿಗಳು, ಮಹಾಕವಿಗಳು, ವಿದ್ವಾಂಸರು ಪತ್ರಕರ್ತರು, ಸಂಸ್ಕೃತಿ ಪುರುಷರು, ಹೀಗೆ ಹಲವಾರು ಕ್ಷೇತ್ರಗಳನ್ನು ಪ್ರತಿನಿಧಿಸುವಂತೆ, ಗುರುನಾನಕ್, ಬೆಳ್ಳಾವೆ ವೆಂಕಟನಾರಣಪ್ಪ, ರಾಷ್ಟ್ರಕವಿ ಗೋವಿಂದ ಪೈ, ಡಾ. ರಂಶಾ ದಿವಾಕರ, ಎಂ.ಜಿ. ವೆಂಕಟೇಶಯ್ಯ, ನಿಟ್ಟೂರು ಶ್ರೀನಿವಾಸರಾಯರು, ಎಚ್.ಎಲ್.ಎನ್. ಸಿಂಹ, ಕುವೆಂಪು, ಪ್ರೊ. ಜಿ.ವಿ., ಜಿ.ವಿ. ಅಯ್ಯರ್, ಕವಯಿತ್ರಿ ಮಲ್ಲಿಕಾ, ವೈಎನ್‌ಕೆ, ಟಿ. ಮಹಾಬಲೇಶ್ವರ ಭಟ್, ತೊ.ಸು. ಸುಬ್ರಹ್ಮಣ್ಯ, ಎಂ.ಎಸ್. ನಂಜುಂಡರಾವ್–ಮೊದಲಾಗಿ ಹದಿನೈದು ಮಂದಿಯ ವ್ಯಕ್ತಿಚಿತ್ರಗಳಿವೆ.

ಯಾವುದೇ ವ್ಯಕ್ತಿಯ ಚಿತ್ರಣಕ್ಕೆ ಮೊದಲು, ಮತ್ತು ಒಂದು ನಿರ್ದಿಷ್ಟ ಕ್ಷೇತ್ರಕ್ಕೆ ಅವರ ಕೊಡುಗೆ ಎಷ್ಟು ಮತ್ತು ಯಾವ ರೀತಿಯದ್ದು ಎಂದು ವಿವರಿಸುವುದಕ್ಕೆ ಮೊದಲು, ಒಂದು ಅವರ ಕಾಲದ ಸಾಮಾಜಿಕ, ಸಾಹಿತ್ಯಿಕ ಸಾಂಸ್ಕೃತಿಕ, ಧಾರ್ಮಿಕ ಪರಿಸರ ಹೇಗಿತ್ತು ಎಂಬುದನ್ನು ಐತಿಹಾಸಿಕ ವಾಸ್ತವದೊಂದಿಗೆ ವಿವರಿಸುತ್ತಾರೆ. ಗುರುನಾನಕ್ ಬಗ್ಗೆ ಬರೆಯುವ ಮುನ್ನ ಭಾರತದ ಸಾಂಸ್ಕೃತಿಕ ಪರಿಸರ ಮತ್ತು ಅದರ 'ಸನಾತನ ಧರ್ಮ' ಪರಿಸರ, ಹಿಂದು ಧರ್ಮದ ವ್ಯಾಪ್ತಿ, ಪ್ರಭಾವಗಳನ್ನು ಸೂಕ್ಷ್ಮವಾಗಿ ಪ್ರಸ್ತಾಪಿಸಿ, ಪಂಜಾಬಿನ ಬಗ್ಗೆ, ಅಲ್ಲಿನ ಜನಾಂಗಗಳು, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಪರಿಸರದ ವಿವರಗಳ ನಡುವೆಯೇ ಗುರುನಾನಕರ ಜನನ, ಬಾಲ್ಯ, ಆತನಲ್ಲಿ ಬಾಲ್ಯದಿಂದಲೇ ಮನೆ ಮಾಡಿದ್ದ ದೈವ ಪ್ರೀತಿ, ಲೌಕಿಕ ವ್ಯವಹಾರಗಳಿಂದ ಕೌಟುಂಬಿಕ ಜೀವನದಿಂದ ವಿಮುಖರಾಗಿ, ಸತ್ಯ ಸಾಕ್ಷಾತ್ಕಾರ, ದೈವಾನುಸಂಧಾನ, ದೈವೋನ್ಮಾನಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡು, ತನಗಾದ ಸತ್ಯ ಸಾಕ್ಷಾತ್ಕಾರದ ಅನುಭವಗಳನ್ನು ಜನಸಾಮಾನ್ಯರೊಂದಿಗೆ ಹಂಚಿಕೊಂಡು ಅವರ ಕಷ್ಟ ಕಾರ್ಪಣ್ಯಗಳನ್ನು ನಿವಾರಿಸಲು ಪ್ರಯತ್ನಿಸುತ್ತಾ, ಅರ್ಥಹೀನ ಕರ್ಮಕಾಂಡಗಳ, ಕರ್ಮಾಚರಣೆಗಳ, ಪಾರಂಪರಿಕ ಮೌಢ್ಯತೆಗಳನ್ನು ವಿರೋಧಿಸುತ್ತಾ, ಅವುಗಳ ಅರ್ಥಹೀನತೆಯನ್ನು ಜನರಿಗೆ ಬೋಧಿಸುತ್ತಾ, 'ಸಿಖ್' ಮತ ಸ್ಥಾಪಕರಾಗಿ, ದೇವಮಾನವರಾಗಿ ಲೋಕದ ಕಣ್ಣಲ್ಲಿ ಶಾಶ್ವತವಾಗಿ

ನೆಲೆಗೊಂಡು ವಿಭೂತಿ ಪುರುಷ, ಅವಧೂತರಾಗಿ ರೂಪಾಂತರಗೊಂಡ ಪರಿಯನ್ನು ಕೆಲವು ಮುಖ್ಯ ಘಟನೆಗಳ ಹಿನ್ನೆಲೆಯಲ್ಲಿ ಅಚ್ಚುಕಟ್ಟಾಗಿ ಚಿತ್ರಿಸಿದ್ದಾರೆ.

ಬೆಳ್ಳಾವೆ ವೆಂಕಟನಾರಣಪ್ಪನವರ ಬಗ್ಗೆ ಈಗಾಗಲೇ ಒಂದು ಪೂರ್ಣಪ್ರಮಾಣದ ಜೀವನ ಚರಿತ್ರೆಯನ್ನು ಬರೆದಿದ್ದರೂ ಮತ್ತೊಮ್ಮೆ ಈ ಲೇಖನದಲ್ಲಿ ಅವರ ಸಮಗ್ರ ವ್ಯಕ್ತಿತ್ವವನ್ನು ಅಡಕಗೊಳಿಸಿಕೊಟ್ಟಿದ್ದಾರೆ.

ಮೊದಲ ರಾಷ್ಟ್ರಕವಿ ಗೋವಿಂದ ಪೈ ಅವರ ಜೀವನ ವಿವರಗಳು ಸೂಕ್ಷ್ಮವಾಗಿ ಬಂದು ಸಂಶೊಧನ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಯ ಮಹತ್ವವನ್ನು ವಿವರಿಸಿದ್ದಾರೆ. ಆದಿಪ್ರಾಸವನ್ನು ಬಿಟ್ಟ ಮೊದಲ ಕವಿ, ಖಂಡಕಾವ್ಯವನ್ನು ರೂಢಿಗೆ ತಂದ ಪ್ರಥಮ ಕವಿಗಳಲ್ಲಿ ಅಗ್ರಗಣ್ಯರು, ಸರಳ ರಗಳೆಯನ್ನು ಕಸಿ ಮಾಡಿದವರು ೩೪ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದದ್ದು–ಇತ್ಯಾದಿಗಳ ಬಗ್ಗೆ ಒಂದು ರೀತಿಯ ಮಾಹಿತಿಗಳನ್ನು ನೀಡಿದ್ದಾರೆ.

ದಿವಾಕರರ ಸ್ವಾತಂತ್ರ್ಯ ಪ್ರೇಮ, ಹೋರಾಟದ ಮನೋಧರ್ಮ ಪತ್ರಿಕೋದ್ಯಮ ಸೇವೆ, ಗಾಂಧಿ ತತ್ವಗಳಲ್ಲಿನ ಅಚಲ ಶ್ರದ್ಧೆ, ಸ್ವಾತಂತ್ರ್ಯೋತ್ತರ ಭಾರತದಲ್ಲಿ ರಾಜಕಾರಣಿಯಾಗಿ, ಆಡಳಿತಗಾರರಾಗಿ ಮಾಡಿದ ದೇಶಸೇವೆ, ಕೇಂದ್ರ ಸರ್ಕಾರದ ಆಕಾಶವಾಣಿ ಹಾಗೂ ಸಮಾಚಾರ ಶಾಖೆಯ ಮಂತ್ರಿಯಾಗಿ, ರಾಜ್ಯಸಭಾ ಸದಸ್ಯರಾಗಿ, ಬಿಹಾರದ ರಾಜ್ಯಪಾಲರಾಗಿ, ಅನೇಕ ಅಧಿಕಾರ ಸ್ಥಾನಗಳಲ್ಲಿ ಇದ್ದು ದಕ್ಷತೆಯಿಂದ ಕೆಲಸ ನಿರ್ವಹಿಸಿದ್ದು, ರಾಜಕಾರಣಿಯಾಗಿದ್ದರೂ, ಇಂಗ್ಲಿಷ್, ಹಿಂದಿ, ಕನ್ನಡಗಳಲ್ಲಿ ಅಸಂಖ್ಯ ಕೃತಿಗಳನ್ನು ರಚಿಸಿ ಸಾಹಿತಿಯಾಗಿಯೂ ಗುರುತಿಸಿಕೊಂಡಿದ್ದು ಎಲ್ಲವನ್ನು ಪ್ರಸ್ತಾಪಿಸಿದ್ದಾರೆ. ಧಾರ್ಮಿಕ ಮನೋವೃತ್ತಿಯ ದಿವಾಕರರು, ವಚನ ಸಾಹಿತ್ಯ, ಉಪನಿಷತ್ತು, ಶೈವಾಗಮಗಳ ಬಗ್ಗೆ ಅವರು ಬರೆದ ಮೌಲಿಕ ಕೃತಿಗಳನ್ನು, ನಡೆಸಿದ ಅಧ್ಯಯನಗಳನ್ನು ಕುರಿತು ಪ್ರಸ್ತಾಪಿಸಿರುವುದರ ಜೊತೆಗೆ ಅಲ್ಲಲ್ಲಿ ಲಿಂಗಯ್ಯನವರು ಅವರ ಸಾಹಿತ್ಯದ ಬಗ್ಗೆ ನಿಷ್ಪಕ್ಷಪಾತವಾದ ಅಭಿಪ್ರಾಯಗಳನ್ನೂ ವ್ಯಕ್ತಪಡಿಸಿದ್ದಾರೆ. ವಚನಗಳಿಂದ ಸ್ಫೂರ್ತಿ ಗೊಂಡು, ಸ್ವತಃ ರಚಿಸಿದ ವಚನಗಳ ಸಂಕಲನ 'ಅಂತರಾತ್ಮನಿಗೆ' ಎನ್ನುವ ಕೃತಿಯ ಬಗ್ಗೆ 'ಇವು ವಚನಕಾರರ ಪ್ರಭಾವದಿಂದ ಪಡಿ ಮೂಡಿದ್ದರೂ ಹಿಂದಿನವರ ವಚನಗಳಲ್ಲಿ ಕಂಡುಬರುವ ಬನಿದನಿ ಇಲ್ಲ. ಎಲ್ಲವೂ ಸಾಮಾನ್ಯ ಮಟ್ಟದ ಚಿತ್ರಗಳಾಗಿವೆ, ಆದರೆ ಕವಿಯ ಪ್ರಾಮಾಣಿಕವಾದ ಆತ್ಮನಿವೇದನೆ ಎಲ್ಲ ವಚನಗಳಲ್ಲೂ ಕಂಡುಬರುತ್ತದೆ. ಶ್ರೇಷ್ಠ ವಚನಕಾರರ ಲಯ ವೈವಿಧ್ಯ, ವಿಷಯ ವೈವಿಧ್ಯ, ಅಂತರಂಗದ ಅನುಭವಗಳನ್ನು ಸರಳವಾಗಿ ಸುಲಲಿತವಾಗಿ ನಿರೂಪಿಸಿವೆ ಎಂದು ದೋಷಗಳನ್ನೂ ಗುಣ ವಿಶೇಷವನ್ನೂ ಗುರುತಿಸಿದ್ದಾರೆ.

ಕಡೆಯದಾಗಿ ದಿವಾಕರರ ಬಹುಮುಖ ವ್ಯಕ್ತಿತ್ವ, ರಾಜಕೀಯ, ಸಾಹಿತ್ಯಕ, ಸಾಮಾಜಿಕ, ಆಧ್ಯಾತ್ಮಿಕ ಕ್ಷೇತ್ರಗಳೆಲ್ಲದರಲ್ಲಿಯೂ ಹರಡಿಕೊಂಡಿರುವುದನ್ನು ಅವರ ಸಾಂಸ್ಕೃತಿಕ, ನಾಡು ನುಡಿಗಳ ಬಗೆಗಿನ ಅನನ್ಯ ಅಭಿಮಾನವನ್ನೂ ಪ್ರಸ್ತಾಪಿಸಿ ಚಿಕ್ಕ ಬರಹದ ಮೂಲಕವೇ ಸಮಗ್ರ ವ್ಯಕ್ತಿತ್ವದ ಇಣುಕು ನೋಟವನ್ನು ನೀಡಿದ್ದಾರೆ.



ವೆಂಕಟೇಶಯ್ಯ ಎಂ.ಜಿ. ಅವರ ವಿಶಿಷ್ಟ ವ್ಯಕ್ತಿತ್ವದ ಅನೇಕ ಮುಖಗಳನ್ನು ಗಮಕ ಕಲೆ, ಜ್ಯೋತಿಷ್ಯ ಶಾಸ್ತ್ರ, ಗಣಿತಶಾಸ್ತ್ರ, ಅಲ್ಲದೆ ಸಾಹಿತ್ಯ ವಲಯಕ್ಕೆ ಸೇರಿದ ಕಾದಂಬರಿ, ಸಣ್ಣ ಕಥೆ, ನಾಟಕ, ಪ್ರಬಂಧ, ಭಾಷಾ ಶಾಸ್ತ್ರ, ಸಂಶೋಧನೆ, ಛಂದಸ್ಸು, ಗ್ರಂಥ ಸಂಪಾದನೆ, ವ್ಯಾಖ್ಯಾನ ಮೊದಲಾದ ವಲಯಗಳಲ್ಲಿ ಅವರ ಸಾಹಿತ್ಯ ಸಾಧನೆ ಇವುಗಳ ಬಗ್ಗೆ ಪ್ರಸ್ತಾಪಿಸಿರುವುದರೊಂದಿಗೆ ಅವರ ಕೆಲವು ಕೃತಿಗಳಾದ ಪುಲ್ಲಯ್ಯನ ಪ್ರಬಂಧಗಳು, ಮಾಧವ ಲೀಲೆ ಶಬ್ದಾರ್ಥ ನಿರುಕ್ತ, ಪುರಾಣದ ಕೆಲವು ಕಥೆಗಳು, ಜಾರಿದ ಗಂಟು ಹರಿಶ್ಚಂದ್ರ ಕಾವ್ಯ, ರನ್ನ–ಮುಂತಾದ ಕೃತಿಗಳ ಕುರಿತು ಚಿಕ್ಕ ಚಿಕ್ಕ ಟಿಪ್ಪಣಿಗಳನ್ನು ನೀಡಿ ಓದುಗರ ಆಸಕ್ತಿಯನ್ನು ಪ್ರಚೋದಿಸಲು ಸಹಕಾರಿಯಾಗುವಂತೆ ಮಾಡಿದ್ದಾರೆ. ಇದಲ್ಲದೆ ವೆಂಕಟೇಶಯ್ಯನವರು ಬರೆದ ಇನ್ನೂ ಹಲವು ಕೃತಿಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

೨೦ನೇ ಶತಮಾನಕ್ಕೆ ಸಾಕ್ಷಿಯಾಗಿ ಶತಾಯುಷ್ಯವನ್ನು ಕಂಡ ನಿಟ್ಟೂರು ಶ್ರೀನಿವಾಸರಾಯರ ಜೀವನದ ಅತ್ಯಂತ ಸಂಕ್ಷಿಪ್ತ ವಿವರಣೆಯೊಂದಿಗೆ, ಅವರು ಕಾನೂನು ಕ್ಷೇತ್ರಕ್ಕೆ ಸಲ್ಲಿಸಿದ ಕೊಡುಗೆಯ ವಿವರಗಳನ್ನು, ಅವರ ಬಗೆಗಿನ ಹೊಗಳಿಕೆ, ಟೀಕೆಗಳನ್ನೂ ಸೂಕ್ಷ್ಮವಾಗಿ ಪ್ರಸ್ತಾಪಿಸಿದ್ದಾರೆ. ನಿಟ್ಟೂರು ಶ್ರೀನಿವಾಸರಾಯರು ವಕೀಲರಾಗಿದ್ದಾಗ ನ್ಯಾಯಾಂಗದ ಆಡಳಿತ, ಸಾರ್ವಜನಿಕ ಆಡಳಿತ, ಕಾನೂನು ವಿಷಯಗಳಿಗೆ ಆದ್ಯತೆ ಕೊಟ್ಟದ್ದನ್ನು ಬಾರ್ ಕೌನ್ಸಿಲ್ ಅಧ್ಯಕ್ಷರಾಗಿದ್ದುದನ್ನು ಅವರು ಕೇಸುಗಳನ್ನು ನಿರ್ವಹಿಸಿದ ಪರಿಯನ್ನೂ ಉದಾಹರಣೆಯೊಂದಿಗೆ ಪ್ರಸ್ತಾಪಿಸಿದ್ದಾರೆ. ನಿಟ್ಟೂರರ ವಕೀಲಿ ವೃತ್ತಿ ಜೀವನೋಪಾಯಕ್ಕಾದರೆ ಅವರ ಪ್ರವೃತ್ತಿ ಪತ್ರಿಕೋದ್ಯಮವಾಗಿದ್ದು ತಿ.ತಾ. ಶರ್ಮ ಮತ್ತು ನಿಟ್ಟೂರರು ಬೆಂಗಳೂರು ಕೋಟೆಯಲ್ಲಿ ವಿಶ್ವ ಕರ್ನಾಟಕ ಪ್ರಕಟಣಾಲಯ ಸ್ಥಾಪಿಸಿದ್ದು ಒಂದು ಮಹತ್ವದ ವಿಷಯ. ಅಲ್ಲದೆ ಮೊಟ್ಟ ಮೊದಲಿಗೆ ಗಾಂಧೀಜಿ ಅವರ ಆತ್ಮಕಥೆ ಕನ್ನಡದಲ್ಲಿ ಪ್ರಕಟವಾದದ್ದು ಮತ್ತೊಂದು ಮೈಲಿಗಲ್ಲು. ಮತ್ತೆ 'ಸತ್ಯಶೋಧನ ಪುಸ್ತಕ ಮಂದಿರ' ಎಂಬ ಪ್ರಕಾಶನ ಸಂಸ್ಥೆ ಅಸ್ತಿತ್ವಕ್ಕೆ ಬಂದು ಅದರ ಮೂಲಕ ಉದ್ದಾಮ ಸಾಹಿತಿಗಳಾದ ವಿ. ಸೀತಾರಾಮಯ್ಯ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಎಂ.ಆರ್. ಶ್ರೀನಿವಾಸಮೂರ್ತಿ ಮೊದಲಾದವರ ಗ್ರಂಥಗಳು ಪ್ರಕಟವಾದದ್ದು ಬಹು ದೊಡ್ಡ ವಿಷಯವೆಂಬಂತೆ ಅದನ್ನು ಗುರುತಿಸಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ನೇರವಾಗಿ ಭಾಗವಹಿಸಲಿಲ್ಲವಾದರೂ ಭಾಗವಹಿಸಿದ ಸತ್ಯಾಗ್ರಹಿಗಳಿಗೆ ಆಶ್ರಯ ಮತ್ತು ಪ್ರೋತ್ಸಾಹ ಕೊಟ್ಟಿದ್ದಾರೆ. ಅನೇಕ ಸಂಘ ಸಂಸ್ಥೆಗಳಿಗೆ, ವಿಶೇಷವಾಗಿ ಬಿ.ಎಂ.ಶ್ರೀ. ಪ್ರತಿಷ್ಠಾನ ಮತ್ತು ಇನ್ನೂ ಯಾವುದೇ ಸಂಸ್ಥೆಗಳಿಗೆ ಎದುರಾದ ಕಾನೂನು ಸಮಸ್ಯೆಗಳನ್ನು ನಿಟ್ಟೂರರು ಪರಿಹರಿಸಿಕೊಟ್ಟಿರುವ ಸಂದರ್ಭಗಳನ್ನು ವಿವರಿಸಿದ್ದಾರೆ. ನಿಟ್ಟೂರರ ಕ್ರಿಯಾಶೀಲ ಬದುಕಿನ, ಅವರ ಆಸಕ್ತಿಗಳ, ಭಾಷಣ ಸಾಮರ್ಥ್ಯದ, ಅದ್ಭುತವಾದ ನೆನಪಿನ ಶಕ್ತಿ ಮುಂತಾದವುಗಳನ್ನು ಸಂದರ್ಭಗಳ ಹಿನ್ನೆಲೆಯಲ್ಲಿ ವಿವರಿಸಿದ್ದಾರೆ. ಮೂರು ದಶಕಗಳಿಂದಲೂ ನಿಟ್ಟೂರರನ್ನು ಬಲ್ಲ ಡಿ. ಲಿಂಗಯ್ಯನವರು, ಕಡೆಯದಾಗಿ, ಇತರರಿಗೆ ಮಾದರಿಯಾಗಿ ಬದುಕಿದರು, ಹಲವರ ಪ್ರೀತಿಗೆ ಪಾತ್ರರಾದರು, ಇಡೀ ಶತಮಾನದ

ಜೀವನವನ್ನು ನಡೆಸಿ, ಅನುಭವವನ್ನು ಮೈ ದುಂಬಿಕೊಂಡು ಸಹೃದಯರೊಡನೆ ಹಂಚಿಕೊಂಡ ಆನಂದದಿಂದ ಕಾಲ ಕಳೆದ ಹಿರಿಯ ಚೇತನವೆಂದು ಮುಕ್ತವಾಗಿ ಹೊಗಳಿದ್ದಾರೆ.

ಹೆಚ್.ಎಲ್.ಎನ್. ಸಿಂಹ ಅವರ ರಂಗಭೂಮಿ ಮತ್ತು ಚಲನಚಿತ್ರ ಕ್ಷೇತ್ರದೊಂದಿಗಿನ ಒಡನಾಟ ಮತ್ತು ಆ ಎರಡೂ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಬಗೆಯ ವಿವರಗಳನ್ನು ನೀಡಿದ್ದಾರೆ. ನೌಕರಿಗಾಗಿ ಅಲೆದಾಡಿ ಕಡೆಗೆ ಬಹಳ ಪ್ರಯತ್ನದಿಂದ ನಾಟಕ ಶಿರೋಮಣಿ ವರದಾಚಾರ್ಯರ ಭಾರತ ಜನೋಲ್ಲಾಸಿನಿ ನಾಟಕ ಸಭಾ ಪ್ರವೇಶಿಸಿ, ತಮ್ಮ ಅದ್ಭುತ ಅಭಿನಯಕ್ಕಾಗಿ ಪಡೆದ ಮೆಚ್ಚುಗೆಗಳಿಂದಾಗಿ ಮುಂದೆ ರಂಗಭೂಮಿಯನ್ನೇ ಬದುಕಾಗಿಸಿಕೊಂಡು ಅಭಿನಯ, ನಿರ್ದೇಶನ ಮುಂತಾದವುಗಳಲ್ಲಿ ಸಾಕಷ್ಟು ಪರಿಣತಿಯನ್ನು ಪಡೆದು ಮುಂದೆ ಚಲನಚಿತ್ರ ಜಗತ್ತಿನೊಡನೆ ತಿರುಗಿ, ಕನ್ನಡ ಚಲನಚಿತ್ರ ಜಗತ್ತಿಗೆ ಉತ್ತಮವಾದ ಕನ್ನಡ ಚಿತ್ರಗಳನ್ನೂ ಡಾ. ರಾಜಕುಮಾರ್, ಜಿ.ವಿ. ಅಯ್ಯರ್, ನರಸಿಂಹರಾಜು ಮುಂತಾದ ಕಲಾವಿದರನ್ನು ಪರಿಚಯಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ತಮ್ಮ ನಾಟಕಗಳನ್ನೇ ಚಲನಚಿತ್ರಗಳಾಗಿ ನಿರ್ಮಿಸಿದ್ದೂ ಉಂಟು. ಅವರು ನಿರ್ದೇಶಿಸಿದ ಸಿನಿಮಾಗಳ ಸಂಕ್ಷಿಪ್ತ ವಿವರಗಳನ್ನೂ ಲಿಂಗಯ್ಯನವರು ನೀಡುವುದರ ಮೂಲಕ ಚಲನಚಿತ್ರ ಇತಿಹಾಸದ ಆಸಕ್ತರಿಗೆ ಸಹಾಯವಾಗಿದ್ದಾರೆ. ಡಿ. ಲಿಂಗಯ್ಯನವರು ಗುರುತಿಸುವಂತೆ, "ಬಹುಮುಖ ಪ್ರತಿಭೆಯ ಸಿಂಹ ಅವರಲ್ಲಿ ಅಭಿನಯ, ನಿರ್ದೇಶನದ ಜೊತೆಗೆ ಸಾಹಿತ್ಯ ರಚನೆಯೂ ರಕ್ತಗತವಾಗಿತ್ತು. ನಾಟಕ ರಚನೆ ಹಾಗೂ ಚಲನಚಿತ್ರ ಸಾಹಿತ್ಯ ಸೃಷ್ಟಿಯಲ್ಲಿ ಅವರ ಸಾಹಿತ್ಯ ಪ್ರತಿಭೆ ಪ್ರಕಟಗೊಂಡಿದೆ. ಅವರ ಕೃತಿಗಳಲ್ಲಿ ಸಾಮಾಜಿಕ ಜನಜೀವನದ ಹಿನ್ನೆಲೆಯಲ್ಲಿ ನವೀನ ಕಲ್ಪನೆ, ಲವಲವಿಕೆಯ ನಾಟಕೀಯತೆ ಮಡುಗಟ್ಟಿದೆ. ಕಲಾರಂಗದ ಹಲವು ಸಾಧ್ಯತೆಗಳನ್ನು ಅವರ ಕೃತಿಗಳಲ್ಲಿ ಸ್ಪಷ್ಟವಾಗಿ ಕಾಣಬಹುದು" ಎಂದು ತಮ್ಮ ವಿಶ್ಲೇಷಣೆಯನ್ನು ಮುಂದಿಟ್ಟಿದ್ದಾರೆ.

ಲಿಂಗಯ್ಯನವರ ಸಂಕ್ಷೇಪ ಬರವಣಿಗೆಯಲ್ಲೂ ಎಷ್ಟೊಂದು ಮಾಹಿತಿ ವಿವರಗಳು ಅಡಕವಾಗುತ್ತವೆನ್ನುವುದು ಒಂದು ಅಚ್ಚರಿಯೇ ಸರಿ ! ಕುವೆಂಪು ಅವರ ಬಗೆಗಿನ ಲೇಖನ ತಮ್ಮ ಬಾಲ್ಯದಿಂದಲೂ ಕುವೆಂಪು ಅವರನ್ನು ತಾವು ಕಂಡು ಗ್ರಹಿಸಿದ ಹಿನ್ನೆಲೆಯಲ್ಲಿ ಮೂಡಿ ಬಂದ ವ್ಯಕ್ತಿ ಚಿತ್ರವಾಗಿದೆ. ಶಾಲಾ ಜೀವನ, ಕಾಲೇಜು ಜೀವನ ಸಂದರ್ಭಗಳಲ್ಲಿ ಕುವೆಂಪು ಅವರನ್ನು ಕೆಲವು ಕಾರ್ಯಕ್ರಮಗಳ ಸಂಬಂಧವಾಗಿ ಭೇಟಿಯಾಗಬೇಕಾದ ಸಂದರ್ಭಗಳಲ್ಲಿ ಕುವೆಂಪು ಅವರು ನಡೆದುಕೊಂಡ ರೀತಿಯನ್ನೂ, ತಾವು ಕುವೆಂಪು ಕೃತಿಗಳನ್ನು ಓದಿ ಅಭ್ಯಾಸ ಮಾಡಿ ಗ್ರಹಿಸಿದ ಪರಿಯನ್ನು ಈ ಲೇಖನದಲ್ಲಿ ದಾಖಲಿಸಿದ್ದಾರೆ, ಅವರಿಗೆ ಬಂದ ಪ್ರಶಸ್ತಿ ಪುರಸ್ಕಾರಗಳು, ಅವರ ವಿಶ್ವಮಾನವ ಸಂದೇಶ ಇತ್ಯಾದಿಗಳ ಪ್ರಸ್ತಾಪವನ್ನೂ ಇದರಲ್ಲಿ ಮಾಡಿದ್ದಾರೆ.

ಮುಂದಿನ ಲೇಖನ ಪ್ರೊ. ಜಿ. ವೆಂಕಟಸುಬ್ಬಯ್ಯನವರದು. ಇವರೊಂದಿಗೂ ವೈಯಕ್ತಿಕ ಸಂಬಂಧಗಳು ಇದ್ದುದರಿಂದ ಇವರನ್ನು ಗಮನಿಸುವ, ಗ್ರಹಿಸುವ, ಹಲವು



ಅವಕಾಶಗಳಿದ್ದುದರಿಂದ, ಅವರ ಹೊರ ಆಕಾರವನ್ನೂ ಅವರ ಸ್ವಭಾವ, ನಡವಳಿಕೆ, ಗುಣಾದರ್ಶಗಳು, ವಿದ್ವತ್ತು, ಸಾಧನೆ, ಸಂಸ್ಕಾರ ಇತ್ಯಾದಿಗಳ ಬಗ್ಗೆ ಪ್ರಾಮಾಣಿಕ ವಿವರಣೆಯನ್ನು ನೀಡಿದ್ದಾರೆ. ಇಲ್ಲಿಯೂ ತಾವು ಜಿ.ವಿ. ಅವರನ್ನು ಕಂಡ ಸಂದರ್ಭ ಸನ್ನಿವೇಶಗಳ ಹಿನ್ನೆಲೆಯಲ್ಲಿಯೇ ವ್ಯಕ್ತಿತ್ವದ ವಿವರಣೆಯನ್ನು ನೀಡಿದ್ದಾರೆ. ಸಾಹಿತ್ಯ ಪರಷಿತ್ತಿನೊಂದಿಗೆ ಅವರ ಸಂಬಂಧ ವಹಿಸಿಕೊಂಡಿದ್ದ ಅಧಿಕಾರಸ್ಥಾನಗಳು, ನಿಘಂಟುಗಳನ್ನು ರೂಪಿಸುವಲ್ಲಿ, ಪ್ರಕಟಿಸುವಲ್ಲಿ ಅವರು ತೊಡಗಿಸಿಕೊಂಡ ಪರಿ, ಸಾಹಿತ್ಯ ಪರಿಷತ್ತಿನ ಪ್ರಚಾರಕ್ಕಾಗಿ ಅವರು ಪ್ರವಾಸಗಳನ್ನು ಕೈಗೊಂಡು, ಅದರ ಶ್ರೇಯಸ್ಸಿಗೆ ದುಡಿದದ್ದು, ಅವರು ಸಾಹಿತ್ಯಿಕ, ಸಾಂಸ್ಕೃತಿಕ ಮತ್ತು ನಿಘಂಟು ಶಾಸ್ತ್ರಕ್ಕೆ ತಮ್ಮ ಪ್ರತಿಭೆ, ಪಾಂಡಿತ್ಯಗಳ ಮೂಲಕ ನೀಡಿದ ಮಹತ್ವದ ಕೊಡುಗೆ ಇತ್ಯಾದಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಅವರಿಗೆ ಸಂದ ಪುರಸ್ಕಾರಗಳ ಪಟ್ಟಿಯನ್ನು ನೀಡುತ್ತಲೇ ಅಚ್ಚರಿ ಮೂಡಿಸಿದ್ದಾರೆ.

ವೃತ್ತಿ ರಂಗಭೂಮಿಯಿಂದ ಚಲನಚಿತ್ರರಂಗಕ್ಕೆ ದೊರೆತ ಮಹಾನ್ ಕಲಾವಿದರು, ನಿರ್ದೇಶಕರುಗಳಲ್ಲಿ ಹೆಚ್.ಎಲ್.ಎನ್. ಸಿಂಹ ಒಬ್ಬರಾದರೆ ಜಿ.ವಿ ಅಯ್ಯರ್ ಮತ್ತೊಬ್ಬರಾಗಿದ್ದಾರೆ. ವೃತ್ತಿರಂಗ ನಾಟಕಗಳಲ್ಲಿ ಅಭಿನಯ ಕಲೆಯಿಂದ ಪ್ರವೇಸಿಸಿ, ಹಂತಹಂತವಾಗಿ ಬೆಳೆದು ಚಲನಚಿತ್ರ ರಂಗಕ್ಕೆ ಪಾದಾರ್ಪಣೆ ಮಾಡಿ ಗೀತ ರಚನಾಕಾರರಾಗಿ ಮೊದಲಿಗೆ ತೊಡಗಿಸಿಕೊಂಡು, ಅವರು ತಮ್ಮ ಪ್ರತಿಭೆ, ಕಲಾದೃಷ್ಟಿ ಸಿನಿಮಾ ಮಾಧ್ಯಮದಲ್ಲಿ ಕಂಡುಕೊಂಡ ಹೊಸ ಸಾಧ್ಯತೆಗಳು ಪ್ರಯೋಗಶೀಲ ಪ್ರವೃತ್ತಿಯಿಂದಾಗಿ, ಕನ್ನಡದ ಗಡಿಗಳನ್ನು ದಾಟಿ ಸಂಸ್ಕೃತದಲ್ಲಿ ಚಿತ್ರನಿರ್ಮಾಣ ಮಾಡಿ, ರಾಷ್ಟ್ರೀಯ, ಅಂತಾರಾಷ್ಟ್ರೀಯ ಖ್ಯಾತಿಗೆ ಏರಿದ ಬಗೆಯನ್ನು ನಿರೂಪಿಸಿದ್ದಾರೆ. ರಾಮಾನುಜಾಚಾರ್ಯ, ಮಧ್ವಾಚಾರ್ಯ, ಶಂಕರಾಚಾರ್ಯ, ಭಗದ್ಗೀತೆ–ಮುಂತಾದ ಸಂಸ್ಕೃತ ಚಿತ್ರಗಳ ನಿರ್ಮಾಣ ನಿರ್ದೇಶನಗಳ ಸಾಹಸಕ್ಕೆ ಮುಂದಾದವರು ಜಿ.ವಿ. ಅಯ್ಯರ್ ಒಬ್ಬರೇ. ಆಧ್ಯಾತ್ಮಿಕ ಮನಸ್ಸು, ಸನಾತನ ಸಂಸ್ಕೃತಿ ಬಗೆಗಿನ ಶ್ರದ್ಧೆ, ಪ್ರಯೋಗಶೀಲ ಮನೋಧರ್ಮವೇ ವ್ಯಾಪಾರೀ ಸಿನಿಮಾಗಳಿಗೆ ಮುಖಾಮುಖಿಯಾಗಿಸುವ ಸಾಹಸಕ್ಕೆ ಅವರನ್ನು ದೂಡಿತೆಂಬುದರಲ್ಲಿ ಸಂಶಯವಿಲ್ಲ. ಉದಾತ್ತ ಚಿಂತನೆಗಳು, ಪ್ರೇಕ್ಷಕರಿಗೆ ಸದಭಿರುಚಿಯುಳ್ಳ ಚಿತ್ರಗಳನ್ನು ನೀಡಬೇಕೆಂಬ ತುಡಿತ, 'ಚಲನಚಿತ್ರ ಪಾತ್ರಗಳಿಗೆ ಸಾಮಾನ್ಯ ಸ್ಥಿತಿಯಿಂದ ಅಸಾಮಾನ್ಯ ಸ್ಥಿತಿಯ ಆಧ್ಯಾತ್ಮಿಕ ಹಾಗೂ ವೈಜ್ಞಾನಿಕ ಸ್ಪರ್ಶ ನೀಡಬೇಕೆಂಬ ಹಂಬಲ, ಕಥಾ ಕಲ್ಪನೆಯಲ್ಲಿ ವಿನೂತನೆಯನ್ನು ತರುವ ಪ್ರಯತ್ನ–ಇವೆಲ್ಲವೂ ಜಿ.ವಿ. ಅಯ್ಯರ್ ಅವರಿಗೆ ಚಲನಚಿತ್ರ ವಲಯದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಟ್ಟಿದೆ. ಕಲಾತ್ಮಕತೆ, ವಿನೂತನತೆ, ವೈಚಾರಿಕತೆಗಳೇ ಅವರ ದೃಷ್ಟಿ ಧರ್ಮವಾಗಿತ್ತು ಎಂಬ ಅಂಶಗಳನ್ನು ಬಹಳ ಸಮರ್ಥವಾಗಿ ಗುರುತಿಸಿ, ವಿವರಿಸಿದ್ದಾರೆ.

ಲೇಖಕಿಯರಲ್ಲಿಯೇ ಅತ್ಯಂತ ಹಿರಿಯ ಲೇಖಕಿ, ರಾಜಕಾರಣಿ, ಪತಿಯ ಒಡನಾಟದಲ್ಲಿದ್ದೂ ಹತ್ತಾರು ಕೃತಿಗಳನ್ನು ರಚಿಸಿ, ಪ್ರಶಸ್ತಿ ಪುರಸ್ಕಾರಗಳಿಗೆ ಬಾಧ್ಯರಾಗಿರುವುದು ಅವರ ಸೃಜನಶೀಲ ಪ್ರತಿಭೆಗೆ ನಿದರ್ಶನವಾಗಿದೆ. ಸಣ್ಣ ಕಥೆಗಳಿಂದ

ಪ್ರಾರಂಭವಾದ ಬರವಣಿಗೆ ಕಾದಂಬರಿಗಳಲ್ಲಿ ಮುಂದುವರೆದು 'ವಿವೇಕಾನಂದ' ಮಹಾಕಾವ್ಯದೊಂದಿಗೆ ಮುಕ್ತಾಯವಾಗಿದೆ. ಆ ಕಾಲದಲ್ಲಿ ರಚಿತವಾದ ಅವರ ಕೃತಿಗಳಲ್ಲಿಯೇ ಪುರುಷ ವ್ಯವಸ್ಥೆಯ ಟೀಕೆಗೆ ಮುಂದಾಗಿರುವುದು ಅವರ ಪ್ರಗತಿಶೀಲ ದೃಷ್ಟಿಗೆ ನಿದರ್ಶನವಾಗಿದೆ. ಡಿ. ಲಿಂಗಯ್ಯನವರು, ಮಲ್ಲಿಕಾ ಅವರ ಆಲೋಚನಾ ವಿಧಾನ, ವ್ಯಾಪಕವಾದ ವಸ್ತು ವೈವಿಧ್ಯಗಳನ್ನು ಮೆಚ್ಚುಗೆಯಿಂದ ನೋಡುತ್ತಾರಾದರೂ ಭಾಷೆಯ ಕ್ಲೀಷೆಯನ್ನು ಗಮನಿಸಿದ್ದಾರೆ. ಮತ್ತೊಂದು ಮುಖ್ಯ ಅಂಶವೆಂದರೆ ಈ ಲೇಖಕಿಯ ಬರಹಗಳ ಬಗ್ಗೆ ಯಾವುದೇ ಬಗೆಯಲ್ಲಿ ಹೆಚ್ಚಾಗಿ ಚರ್ಚೆ, ವಿಮರ್ಶೆಗಳು ನಡೆದಿಲ್ಲವಾದರೂ, ಲಿಂಗಯ್ಯನವರು ಮಲ್ಲಿಕಾ ಅವರ 'ವಿವೇಕಾನಂದ' ಮತ್ತು ಇನ್ನೂ ಕೆಲವು ಕೃತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಅಸಾಧಾರಣ ಪ್ರತಿಭೆಯ ಮಲ್ಲಿಕಾ ಅವರ ವ್ಯಕ್ತಿತ್ವವನ್ನು ಡಿ. ಲಿಂಗಯ್ಯನವರು ಹೀಗೆ ಕಟ್ಟಿ ಕೊಡುತ್ತಾರೆ. 'ಕವಯಿತ್ರಿ ಮಲ್ಲಿಕಾ ವಿಚಾರಶೀಲರಾದರೂ ಅಸಾಧಾರಣ ದೈವಭಕ್ತಿ ಉಳ್ಳವರು. ಅವರ ಬದುಕು ಬರಹಗಳಲ್ಲಿ ಧಾರ್ಮಿಕ ನಿಷ್ಠೆ ಸ್ಪಷ್ಟವಾಗಿ ಪ್ರಭಾವ ಬೀರಿದೆ. ದೇವರ ಹೆಸರಿನಲ್ಲಿ ಸಾಹಿತ್ಯ ರಚಿಸಿ, ದೇವರಿಗೆ ಸಮರ್ಪಿಸುವ ಗುಣ ಅವರದು. ವಿಮರ್ಶಕರ ಅವಜ್ಞೆಗೆ ಗುರಿಯಾಗಿರುವ ಮಲ್ಲಿಕಾ ಅವರ ಸಾಹಿತ್ಯವನ್ನು ಗಂಭೀರವಾಗಿ ಪರಿಶೀಲಿಸಿದ ಡಿ. ಲಿಂಗಯ್ಯ ಅವರು ೨೦ನೇ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸೃಜನಶೀಲ ಗದ್ಯಪದ್ಯ ಸಾಹಿತ್ಯದಲ್ಲಿ ಮಹಾಕಾವ್ಯ ಪ್ರಕಾರದಲ್ಲಿ ಮಹಾಕವಯಿತ್ರಿ ಮಲ್ಲಿಕಾ ಅವರ ಹೆಸರು ಮರೆಯುವಂಥಾದ್ದಲ್ಲ" ಎಂದು ಅವರ ಬಗ್ಗೆ ಗೌರವ ಅಭಿಮಾನಗಳಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ವಂಡರ್‌ಲ್ಯಾಂಡ್ ವೈಎನ್‌ಕೆ ಎಂಬ ಅಡ್ಡ ಹೆಸರಿನಿಂದ ಪತ್ರಿಕಾರಂಗ ಸಾಹಿತ್ಯರಂಗದಲ್ಲಿ ಸುಪರಿಚಿತರಾಗಿದ್ದ ವೈ.ಎನ್. ಕೃಷ್ಣಮೂರ್ತಿ ಅವರ ನಿಕಟ ಪರಿಚಯ ಲೇಖಕರಿಗೆ ಇಲ್ಲದಿದ್ದರೂ ವೈಎನ್‌ಕೆ ಅವರ ಪ್ರತಿಭೆ, ರೋಚಕ ವ್ಯಕ್ತಿತ್ವ, ಹಾಸ್ಯ ಪ್ರವೃತ್ತಿ, ನೇರ ನಿಷ್ಠುರ ನುಡಿ, ಅಪಾರ ಸ್ನೇಹ ಪ್ರೀತಿ, ಪ್ರಪಂಚದಲ್ಲಿ ಯಾವುದೇ ವಿಷಯ ಸಂಬಂಧಿ ಜ್ಞಾನ, ಭಾಷಣ ಕಲೆ, ಪತ್ರಿಕೆಗಳಲ್ಲಿ ಕುತೂಹಲ ಹುಟ್ಟಿಸುವ ರೀತಿಯಲ್ಲಿನ ಅಂಕಣ ಬರಹಗಳು–ಯಾರಿಗಾದರೂ ಅವರನ್ನು ಪರಿಚಯಿಸುವುದು ಅತಿಶಯೋಕ್ತಿಯೇನಲ್ಲ. ಅವರದು ಒಂದು ಬಗೆಯ ವಿಚಿತ್ರ ಸ್ವಭಾವ, ಚಂಚಲ ಮನಸ್ಸು, ಯಾವಾಗ, ಎಲ್ಲಿ, ಹೇಗೆ ಕಾಣಿಸುತ್ತಾರೋ, ಹೇಗೆ ಮಾಯವಾಗುತ್ತಾರೋ, ಬಹುಶಃ ಬ್ರಹ್ಮನಿಗೂ ತಿಳಿಯಲು ಸಾಧ್ಯವಾಗುವುದಿಲ್ಲವೇನೋ ! ಲೇಖಕರು ಕೇಳಿ ತಿಳಿದ ಅವರೊಂದಿಗಿನ ಅನೇಕ ಪ್ರಸಂಗಗಳನ್ನು ಇಲ್ಲಿ ವಿವರಿಸಿದ್ದಾರೆ. ವೈಎನ್‌ಕೆ ಅವರ ಮಾತುಗಳಲ್ಲಿ ಪನ್ ಇಲ್ಲದಿರುವುದು ಸಾಧ್ಯವೇ ಇಲ್ಲ.

ವೈಎನ್‌ಕೆ ಹರಟೆ ಮಲ್ಲರು, ಆದರೆ ವಾಗ್ಮಿಯಲ್ಲ...ಹಾಸ್ಯದಲ್ಲಿ ಹರಟೆಯಲ್ಲಿ, ಕನ್ನಡಾಂಗ್ಲಭಾಷಾ ಬಳಕೆಯಲ್ಲಿ ಟಿ.ಪಿ. ಕೈಲಾಸಂ ಅಪರಾವತಾರ...ಅವರೊಂದು ಮಿಶ್ರಭಾಷಾ ತಳಿ. ಜೋಕುಮಾರ. ಸದಾ ಲವಲವಿಕೆಯ ಮನುಷ್ಯ. ಭೂಮಿ ಮೇಲೆ



ಬದುಕು ಬೇಸರವೆಂದು ಬೇಸರಪಡುತ್ತಿದ್ದ ವೈಎನ್‌ಕೆ ಇಂಗ್ಲೆಂಡಿನಿಂದ ಇಂಡಿಯಾಕ್ಕೆ ಬರುವಾಗ ಆಕಾಶದಲ್ಲಿ ವಿಮಾನದಲ್ಲಿ ಸಾವನ್ನಪ್ಪಿದ್ದು ವ್ಯಂಗ್ಯವೇ ಸರಿ !

ಲೇಖಕರು ಕೆಲವು ಸಾಹಿತ್ಯ ಸಮಾರಂಭಗಳಲ್ಲಿ, ಕವಿಗೋಷ್ಠಿಗಳಲ್ಲಿ ವೈಎನ್‌ಕೆ ಅವರನ್ನು ಕಂಡಿದ್ದರೂ ನೇರ ಪರಿಚಯವಿಲ್ಲದಿದ್ದರೂ ಅವರ ವೃತ್ತಿಪ್ರವೃತ್ತಿ ವ್ಯಕಿತ್ವಗಳನ್ನು ಅವರ ಪನ್ ಸಂಭಾಷಣೆಗಳ ಮೂಲಕ, ಪ್ರಸಂಗಗಳ ವಿವರಣೆಗಳ ಮೂಲಕ, ತಕ್ಕಮಟ್ಟಿಗೆ ಪೂರ್ಣ ವ್ಯಕ್ತಿತ್ವಕ್ಕೆ ಹತ್ತಿರವೆನ್ನಿಸುವಂತೆ ಕೆಲವೇ ಕೆಲವು ಪುಟಗಳಲ್ಲಿ ಕಟ್ಟಿಕೊಡುವ ಪ್ರಯತ್ನಕ್ಕೆ ಮುಂದಾಗಿದ್ದಾರೆ. ಸಿರಿ ಸಜ್ಜನ ಮಹಾಬಲೇಶ್ವರ ಭಟ್ಟರು–ಲೇಖನದಲ್ಲಿ ರಾಷ್ಟ್ರಭಕ್ತರೂ, ರಾಜಕೀಯ ವ್ಯಕ್ತಿಗಳೂ ಆದವರು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಹಕಾರ ಆಂದೋಲನದಲ್ಲಿ ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಅಲ್ಲಿ ಅವರು ವಹಿಸಿದ ಪಾತ್ರದ ಮಹತ್ವ, ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅವರ ಅಂಕಣ ಬರಹಗಳು, ಅವರು ಬರೆದ 'ಸಾಹಿತ್ಯ ಶಿಲ್ಪಿಗಳು', 'ಕನ್ನಡ ಕುಲದೀಪಕರು' ಗ್ರಂಥಗಳಲ್ಲಿನ ಅವರ ಜೀವನಾನುಭವಗಳ ಮಹತ್ವವನ್ನು ಮುಖ್ಯವಾಗಿ ಗುರುತಿಸುವ ಪ್ರಯತ್ನ ಮಾಡಿದ್ದಾರೆ.

ತೊ.ಸು. ಸುಬ್ರಹ್ಮಣ್ಯಂ ಸಾಹಿತಿಗಳಲ್ಲದಿದ್ದರೂ ಸಾಹಿತ್ಯ ಸಂಘಟಕರಾಗಿ ಅವರು ಮಾಡಿದ ಕೆಲಸಗಳನ್ನು ಮೆಚ್ಚಿದ ಲೇಖಕರು, ತಾವೂ ಕರ್ನಾಟಕ ಲೇಖಕರ ಸಂಘದ ಸದಸ್ಯರೂ, ಉಪಾಧ್ಯಕ್ಷರೂ ಆಗಿ ಅಧಿಕಾರ ವಹಿಸಿಕೊಂಡಿದ್ದ ಸಂದರ್ಭದಲ್ಲಿ ಪರಿಚಿತರಾದ ಸುಬ್ರಹ್ಮಣ್ಯಂ ಅವರನ್ನು ಹತ್ತಿರದಿಂದ ಗಮನಿಸುವ ಅವಕಾಶ ದೊರೆತು, ಅವರ ಸಂಘಟನಾ ಸಾಮರ್ಥ್ಯ, ಸಂಘಟಿಸಿದ ಸಂಸ್ಥೆಗಳನ್ನು ನಿರ್ವಹಿಸಿದ ರೀತಿ, ಅವರ ಸಾಹಿತ್ಯಾಸಕ್ತಿ, ಹತ್ತಾರು ಸಂಘಟನೆಗಳಲ್ಲಿ ವಹಿಸಿಕೊಂಡಿದ್ದ ಅಧಿಕಾರ ಸ್ಥಾನಗಳು, ಪತ್ರಿಕಾ ಬರವಣಿಗೆ, ಸೃಜನಶೀಲ, ಸೃಜನೇತರ ಬರಹಗಳ ಸ್ವರೂಪ, ಇವುಗಳ ವಿವರಣೆಯಲ್ಲದೆ, ಸುಬ್ರಹ್ಮಣ್ಯಂ ಅವರು ಬರೆದ ಕಥೆ, ಕಾದಂಬರಿ, ಜೀವನ ಚರಿತ್ರೆ, ವಿಮರ್ಶೆ, ಕವನಗಳು– ಕುರಿತಾಗಿ ಪರಿಚಯಾತ್ಮಕ ಟಿಪ್ಪಣಿಗಳನ್ನು ಬರೆದಿದ್ದಾರೆ. ಸಮಗ್ರ ಸಾಹಿತ್ಯಾವಲೋಕನದ ಮೂಲಕ ಸುಬ್ರಹ್ಮಣ್ಯಂ ಅವರಲ್ಲಿ ನವೋದಯ ಕಾಲಘಟ್ಟದ ಆಶಯಗಳನ್ನು ಗುರುತಿಸುತ್ತಾರೆ.

ಈ ವ್ಯಕ್ತಿ ಚಿತ್ರಗಳು ಸಂಕಲನದ ಕಡೆಯ ಲೇಖನ–ಕಲಾರಾಧಕ ಎಂ.ಎಸ್. ನಂಜುಂಡರಾವ್ ಅವರದು. ವ್ಯಕ್ತಿ ಚಿತ್ರಗಳು ಹಲವು ಅಭಿರುಚಿ, ಪ್ರತಿಭೆ, ಮನೋಧರ್ಮಗಳನ್ನು ಉಳ್ಳವರ್ನೂ ಒಳಗೊಳ್ಳುತ್ತವೆ ಎನ್ನುವುದಕ್ಕೆ ಈ ಲೇಖನ ನಿದರ್ಶನವಾಗಿದೆ.

ಪ್ರತಿಭಾವಂತ ವಿಶಿಷ್ಟ ವ್ಯಕ್ತಿತ್ವ, ಸಾಮರ್ಥ್ಯಗಳು ಇರುವವರಿಗೆ ದಾರಿದ್ರ್ಯ ಬಡತನಗಳು ಸಹಜವೆಂಬಂತೆ ನಂಜುಂಡರಾವ್ ಅವರೂ ಬಡನತದ ಬವಣೆಗಳ ಮೂಲಕವೇ ವಿಶ್ವಾದ್ಯಂತ ಗುರುತಿಸಿಕೊಳ್ಳುವಂತೆ ಬೆಳೆದರು. ತಂದೆ ತಾಯಿಗಳ ಪ್ರೀತಿಗೆ ಕೊರತೆಯಿರದಿದ್ದರೂ ಸಾಂಸ್ಕಾರಿಕ ಸಂಕಷ್ಟಗಳು ಸಾಕಷ್ಟು ಇದ್ದವು. ನಂಜುಂಡರಾಯರು ಸ್ವಾತಂತ್ರ್ಯ ಚಳುವಳಿಯಲ್ಲಿ ಭೂಗತ  ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತಮ್ಮ ರಾಷ್ಟ್ರಪ್ರೇಮವನ್ನು ಮೆರೆದರು. ನಂತರದಲ್ಲಿ ರಾಜಕೀಯದಿಂದ ದೂರ ಸರಿದರಾದರೂ ಮಹಾತ್ಮಾ ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ರಚನಾತ್ಮಕ ಕಾರ್ಯಗಳಲ್ಲಿ

ತೊಡಗಿಕೊಂಡರು. ಮಧುಗಿರಿಯ ಹೈಸ್ಕೂಲ್ ಡ್ರಾಯಿಂಗ್ ಮೇಷ್ಟ್ರ ಸಲಹೆ ಮೇರೆಗೆ ಐದು ವರ್ಷ ಮೈಸೂರು ಶ್ರೀ ಚಾಮರಾಜೇಂದ್ರ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಕಲಾಶಿಕ್ಷಣ ಪಡೆದರು. ಕಲಾಬೋಧಕರಾಗಿದ್ದ ಗುರುಗಳ ಮಾರ್ಗದರ್ಶನದಿಂದ ಚಿತ್ರಕಲಾ ಕ್ಷೇತ್ರದಲ್ಲಿ ಅದ್ಭುತ ಸಾಧನೆಗೈದರು. ಚಿತ್ರರಚನೆಯೇ ಜೀವನಾಧಾರವಾಯಿತು. ವ್ಯಕ್ತಿ ಚಿತ್ರಗಳು, ಪ್ರಕೃತಿ ಚಿತ್ರಗಳು, ರೇಖಾ ಚಿತ್ರಗಳು, ಅದ್ಭುತ ಸೃಷ್ಟಿಯಾಗಿ ಮೂಡಿಬಂದವು. ವಿಶ್ವದ ಮಹತ್ವದ ಚಿತ್ರಕಲಾವಿದರಾಗಿ ರೂಪುಗೊಳ್ಳಬಹುದಾಗಿದ್ದ ನಂಜುಂಡರಾವ್ ಚಿತ್ರಗಳ ಬದಲಾಗಿ ಚಿತ್ರಕಲಾವಿದರ ಸೃಷ್ಟಿಗೆ ಮುಂದಾದರು.

ಮೈಸೂರು ಪ್ರದೇಶ ಚಿತ್ರಕಲಾ ಪರಿಷತ್ತಿನ ಪ್ರಾರಂಭದ ದಿನಗಳಲ್ಲಿ ಕಾರ್ಯದರ್ಶಿಯಾಗಿದ್ದವರು, ಮುಂದೆ ಚಿತ್ರಕಲಾ ಪರಿಷತ್ತಿನ ಮಹತ್ತರ ಜವಾಬ್ದಾರಿಯನ್ನು ಹೆಗಲಿಗೆ ಹೊತ್ತು ಅದರ ಅಭಿವೃದ್ಧಿಗಾಗಿ ಬಹಳ ಶ್ರಮವಹಿಸಿದರು. ಅದನ್ನು ಕಲಾ ಶಿಕ್ಷಣ ಸಂಸ್ಥೆಯಾಗಿ ರೂಪಿಸಿ, ಯುವ ಪೀಳಿಗೆಯಲ್ಲಿ ಕಲಾಪ್ರೇಮವನ್ನು, ಸಾಂಪ್ರದಾಯಿಕ ಚಿತ್ರಕಲೆಯಲ್ಲಿ ಆಸಕ್ತಿಯನ್ನು ಮೂಡಿಸಲು ಪ್ರಯತ್ನಿಸಿದರು. ಚಿತ್ರಕಲಾ ಶಿಕ್ಷಣ, ಪ್ರದರ್ಶನ, ಜಾನಪದ ಕಲಾ ಪ್ರಕಾರಗಳ ಪುನರುಜ್ಜೀವನ ಇತ್ಯಾದಿ ಕಾರ್ಯ ಯೋಜನೆಗಳನ್ನು ರೂಪಿಸಿಕೊಂಡು ಅವುಗಳನ್ನು ಕಾರ್ಯಗತಗೊಳಿಸಿ, ಇಂದು ಆ ಚಿತ್ರಕಲಾ ಸಂಸ್ಥೆ ಹೆಮ್ಮೆಯ, ಪ್ರತಿಷ್ಠಿತ ಸಂಸ್ಥೆಯಾಗಿ ನಿಲ್ಲುವಂತೆ ಮಾಡಿದ ಶ್ರೇಯಸ್ಸು ನಂಜುಂಡರಾಯರಿಗೇ ಸಲ್ಲುತ್ತದೆ.

ಲೇಖಕರಾದ ಡಿ. ಲಿಂಗಯ್ಯನವರು ಇಷ್ಟೊಂದು ಪ್ರಮಾಣದಲ್ಲಿ ಜೀವನ ಚರಿತ್ರೆಗಳನ್ನು, ವ್ಯಕ್ತಿ ಚರಿತ್ರೆಗಳನ್ನು ಬರೆದು, ನಾಡಿನ ಮತ್ತು ನಾಡಿನಾಚೆಯ ಹಲವಾರು ಮಹಾನ್ ವ್ಯಕ್ತಿಗಳ, ಸಾಧಕರ ವ್ಯಕ್ತಿಗತ ಜೀವನ ಪರಿಚಯದೊಂದಿಗೆ ಅವರು ಬಾಳಿ ಬದುಕಿದ ಪರಿಸರದ ವಿವರ, ಸಾಮಾಜಿಕ, ಚಾರಿತ್ರಿಕ, ಸಾಂಸ್ಕೃತಿಕ ಹಿನ್ನೆಲೆಯೊಂದಿಗೆ ವಿವರಿಸುವುದರ ಮೂಲಕ ಆ ವ್ಯಕ್ತಿಗಳ ಸಾಧನೆಯ ಮಹತ್ವವನ್ನು, ಅವರ ಕೊಡುಗೆಯ ಸ್ವರೂಪವನ್ನು ತೌಲನಿಕವಾಗಿ ಅರಿಯಲು ಸಾಧ್ಯವಾಗುತ್ತದೆ. ಇವರ ಈ ಕೃತಿಗಳು ವ್ಯಕ್ತಿ ಚರಿತ್ರೆಯ ಜೊತೆ ಜೊತೆಗೆ ಸಮಕಾಲೀನ ಚರಿತ್ರೆಯ ವಿವರಗಳನ್ನು ನೀಡುವುದರೊಂದಿಗೆ, ಸಾಹಿತ್ಯಾಭ್ಯಾಸಿಗಳಿಗೆ, ಚರಿತ್ರಾಧ್ಯಯನಕಾರರಿಗೆ ಏಕಕಾಲದಲ್ಲಿ ಪ್ರಯೋಜನವಾಗುತ್ತದೆ. ಸ್ವತಃ ಸಾಹಿತಿಗಳೂ ವಿದ್ವಾಂಸರೂ ಆಗಿರುವುದರಿಂದ ಲೇಖಕರು ಸಾಹಿತಿಗಳ ಸಾಹಿತ್ಯ ಕೃತಿಗಳ ಬಗ್ಗೆ ಬರೆಯುವಾಗ ಅವರಲ್ಲಿನ ವಿಮರ್ಶಕ ಜಾಗೃತಗೊಳ್ಳುವುದರಿಂದ, ಸಾಹಿತ್ಯ ವಿಮರ್ಶೆ ಮತ್ತು ಕೆಲವೊಮ್ಮೆ ಕೃತಿಗಳ ಸಂಕ್ಷಿಪ್ತ ಪರಿಚಯವೂ ಲಭ್ಯವಾಗುವುದರಿಂದ ಉಪಯುಕ್ತ ಆಕರಗಳಾಗಿಯೂ ಒದಗಿಬರುತ್ತವೆ. ಕೆಂಗಲ್‌ರ ಜೀವನ ಚರಿತ್ರೆಯಂತೂ ಅತ್ಯಂತ ಮಹತ್ವದ ಕೃತಿ. ಸ್ವಾತಂತ್ರ್ಯ ಪೂರ್ವದ, ಸ್ವಾತಂತ್ರ್ಯೋತ್ತರದ ರಾಜಕೀಯ ಇತಿಹಾಸದ ನೋಟ ಸಿಗುವುದಲ್ಲದೆ ಹನುಮಂತಯ್ಯನವರ ರಾಜಕೀಯ ಅನುಭವದ ಹಿನ್ನೆಲೆಯಲ್ಲಿ ಮೂಡಿಬಂದ ರಾಜಕೀಯ, ಸಾಮಾಜಿಕ ಸಾಂಸ್ಕೃತಿಕ ಚಿಂತನೆಗಳ ಗ್ರಹಿಕೆಗೆ, ಅಧ್ಯಯನಕ್ಕೆ, ಪರಾಮರ್ಶನಕ್ಕೆ ಅನನ್ಯ ಆಕರ ಗ್ರಂಥವಾಗುವಂತೆ, ಅವರ ಆತ್ಮಚರಿತ್ರೆಯ ಮೂಲಕವೇ ಅವರ ಜೀವನಚಿತ್ರವನ್ನು ಮಹತ್ವದ ಶಬ್ದಚಿತ್ರವಾಗಿ ಕಡೆದಿಟ್ಟಿದ್ದಾರೆ ಲೇಖಕರು.



# ೮. ಸಾಹಿತ್ಯ, ಜಾನಪದ ಕ್ಷೇತ್ರ ಎರಡರಲ್ಲಿಯೂ ಪ್ರಬುದ್ಧತೆ ಸಾಧಿಸಿದ್ದ ಪ್ರೊ. ಡಿ. ಲಿಂಗಯ್ಯ

–ರಾಮಣ್ಣ. ಎಚ್. ಕೋಡಿಹೊಸಹಳ್ಳಿ*

**ಕ**ವಿಯಾಗಿ, ಕಥೆಗಾರರಾಗಿ, ಕಾದಂಬರಿಕಾರರಾಗಿ, ನಾಟಕಕಾರರಾಗಿ, ಜೀವನ ಚರಿತ್ರೆಕಾರರಾಗಿ, ಸಂಶೋಧಕರಾಗಿ, ಸಂಪಾದಕರಾಗಿ ಕನ್ನಡ ಸಾಹಿತ್ಯದ ಬಹುತೇಕ ಎಲ್ಲ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿಗೈದಿರುವ ಪ್ರೊ. ಡಿ. ಲಿಂಗಯ್ಯ ಅವರದು ಅಪ್ಪಟ ಗ್ರಾಮೀಣ ಪ್ರತಿಭೆ. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಪೀಹಳ್ಳಿಯ ರೈತಕುಟುಂಬ ದೇವೇಗೌಡ–ಸಿದ್ದಮ್ಮ ದಂಪತಿಗಳ ಪುತ್ರರಾದ ಲಿಂಗಯ್ಯನವರು ಬಡತನದ ಬವಣೆಯಲ್ಲಿಯೇ ವ್ಯಾಸಂಗ ಮಾಡಿ ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡ ಭಾಷಾ ವಿಷಯದಲ್ಲಿ ೧೯೬೮ರಲ್ಲಿ ಸ್ನಾತಕೋತ್ತರ ಪದವಿ ಗಳಿಸಿದರು. ಅದೇ ವರ್ಷ ಬೆಂಗಳೂರಿನ ವಿಶ್ವೇಶ್ವರಪುರ ಕಾಲೇಜಿನಲ್ಲಿ ಅಧ್ಯಾಪಕರಾಗಿ ಉದ್ಯೋಗಕ್ಕೆ ಸೇರಿ ಮುಂದೆ ಕನ್ನಡ ವಿಭಾಗದ ಮುಖ್ಯಸ್ಥರಾಗಿ, ಪ್ರಾಧ್ಯಾಪಕರಾಗಿ, ಪ್ರಾಚಾರ್ಯರಾಗಿ ಕಾರ್ಯ ನಿರ್ವಹಿಸಿ ೧೯೯೭ರಲ್ಲಿ ಸೇವೆಯಿಂದ ನಿವೃತ್ತಿ ಪಡೆದರು. ಬರವಣಿಗೆಯಲ್ಲಿ ಸೈ ಎನಿಸಿಕೊಂಡಂತೆ ಅಧ್ಯಾಪಕ ವೃತ್ತಿಯಲ್ಲಿಯೂ ಪ್ರಾಮಾಣಿಕ ಹಾಗೂ ದಕ್ಷತೆಯಿಂದ ಕಾರ್ಯನಿರ್ವಹಿಸಿ ವಿದ್ಯಾರ್ಥಿಗಳ ಒಲವು ಗಳಿಸಿದ್ದವರು. ಪ್ರಾಚಾರ್ಯರಾಗಿ ಆಡಳಿತದಲ್ಲಿಯೂ ದಕ್ಷತೆ ಹಾಗೂ ಪ್ರಬುದ್ಧತೆಯನ್ನು ತೋರ್ಪಡಿಸಿದವರು.

ಸೃಜನಶೀಲ ಹಾಗೂ ಸೃಜನೇತರ ಸಾಹಿತ್ಯ ಪ್ರಕಾರ ಎರಡರಲ್ಲಿಯೂ ಹಲವಾರು ಮೌಲಿಕ ಕೃತಿಗಳನ್ನು ಕೊಡುಗೆಯಾಗಿ ನೀಡಿ ಕನ್ನಡ ಸಾಹಿತ್ಯ ಸಮೃದ್ಧಿಗೆ ಶ್ರಮಿಸಿರುವ ಪ್ರೊ. ಲಿಂಗಯ್ಯನವರು ಜಾನಪದ ಸಂಗ್ರಹಕಾರರಾಗಿ, ಸಂಶೋಧಕರಾಗಿ ಹಲವಾರು ಕೃತಿಗಳನ್ನು ಹೊರತಂದಿದ್ದು ಜಾನಪದ ಕ್ಷೇತ್ರದಲ್ಲಿ ದೊಡ್ಡ ವಿದ್ವಾಂಸರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಕೇವಲ ಸಾಹಿತ್ಯ ರಚನೆಯಲ್ಲಷ್ಟೇ ತೊಡಗದೆ, ಶಾಲಾ–ಕಾಲೇಜುಗಳ ಹಾಗೂ ಕನ್ನಡ ಸಂಘ–ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಉಪನ್ಯಾಸಕರಾಗಿ, ಅತಿಥಿಗಳಾಗಿ ಭಾಗವಹಿಸಿ ಎಲ್ಲರಿಗೂ ಮೆಚ್ಚುಗೆಯಾಗುವ ರೀತಿಯಲ್ಲಿ ವಿಷಯ ಮಂಡನೆ ಮಾಡಿ

* ವಿಳಾಸ : ಸಂಪಾದಕರು, ಬಹುಜನ ಕನ್ನಡಿಗರು, # ೧೨೪೬, ಕೋಡಿಹೊಸಹಳ್ಳಿ ಹಟ್ಟಿ, ೧ನೇ ಮಹಡಿ, ೪೫ನೇ ತಿರುವು, ೧ನೇ ಹಂತ, ಕುಮಾರಸ್ವಾಮಿ ಬಡಾವಣೆ, ಬೆಂಗಳೂರು–೫೬೦೦೭೮.
ಮೊಬೈಲ್ : ೯೮೪೫೮೯೨೮೩೭

ಜನಪ್ರಿಯರಾಗಿದ್ದಾರೆ. ಯಾವುದೇ ವಿಷಯವಾಗಿ ಕೃತಿ ರಚನೆಗೆ ತೊಡಗಿದರೂ, ಉಪನ್ಯಾಸಕ್ಕೆ ಹೋದರೂ ಆ ಬಗ್ಗೆ ಸಾಕಷ್ಟು ಅಭ್ಯಾಸ ಮಾಡಿ ವಸ್ತು–ವಿಷಯಗಳನ್ನು ಸಮರ್ಥವಾಗಿ ಮಂಡಿಸುವುದು ಲಿಂಗಯ್ಯನವರಿಗೆ ಕರಗತವಾಗಿದ್ದಿತು.

**ಕೆಲಸದಲ್ಲಿ ಅಚ್ಚುಕಟ್ಟುತನ :** ಕನ್ನಡ ಸಾಹಿತ್ಯ ಪರಿಷತ್ತಿನ ಜೊತೆ ನಿಕಟ ಸಂಪರ್ಕ ಹೊಂದಿದ್ದ ಡಿ. ಲಿಂಗಯ್ಯನವರು ೧೯೭೮ರಲ್ಲಿ ಪ್ರೊ. ಹಂಪನಾಗರಾಜಯ್ಯನವರು ಅಧ್ಯಕ್ಷರಾಗಿದ್ದಾಗ ಅದರ ಗೌರವ ಕಾರ್ಯದರ್ಶಿಯಾಗಿದ್ದರು. ಅದೇ ಅವಧಿಯಲ್ಲಿ ನಾನು ಪ್ರೊ. ಹಂಪನಾ ಅವರಿಂದ ಪರಿಷತ್ತಿನ ಮುಖವಾಣಿ, ಆಗ ಪಾಕ್ಷಿಕವಾಗಿ ಪ್ರಕಟವಾಗುತ್ತಿದ್ದ, 'ಕನ್ನಡ ನುಡಿ'ಯ ಗೌರವ ಸಂಪಾಕನಾಗಿ ನೇಮಕಗೊಂಡಿದ್ದೆ. ಪ್ರೊ. ಲಿಂಗಯ್ಯನವರು ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ ತಮಗೆ ವಹಿಸಿದ ಕೆಲಸ–ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿಕೊಂಡು ಹೋಗುತ್ತಿದ್ದರು. ಇನ್ನೊಬ್ಬ ಗೌರವ ಕಾರ್ಯದರ್ಶಿಯಾಗಿದ್ದ ಪ್ರೊ. ಜಿ. ಅಶ್ವತ್ಥನಾರಾಯಣರಂತೆ ಬೇರೆಯವರ ಕೆಲಸದಲ್ಲಿ ಮೂಗು ತೂರಿಸಿಕೊಂಡು ಹೋಗುತ್ತಿರಲಿಲ್ಲ. ಅದೇ ಸುಮಾರಿಗೆ ರಾಷ್ಟ್ರಕವಿ ಕುವೆಂಪು ಅವರಿಗೆ ೭೫ ವರ್ಷವಾಗಿದ್ದು, ಬೆಂಗಳೂರಿನ ಕೃಷ್ಣರಾಜೇಂದ್ರ ರಸ್ತೆಯಲ್ಲಿರುವ ಒಕ್ಕಲಿಗರ ಸಂಘದಲ್ಲಿ, ೭೫ನೆಯ ವರ್ಷದ ಹುಟ್ಟು ಹಬ್ಬವನ್ನು ವಿಜೃಂಭಣೆಯಿಂದ  ಆಚರಿಸಲಾಗಿತ್ತು. ನಾನು ಆ ಕಾರ್ಯಕ್ರಮದ ವರದಿಯನ್ನು ಸಂಗ್ರಹಿಸಿ 'ಕನ್ನಡ ನುಡಿ'ಯಲ್ಲಿ ವಿಸ್ತೃತವಾಗಿ ಪ್ರಕಟಿಸಿದ್ದೆ. ಪ್ರೊ. ಅಶ್ವತ್ಥನಾರಾಯಣ ಅವರು ಆ ಬಗ್ಗೆ ನನ್ನ ಬಳಿ ತಕರಾರು ತೆಗೆದು ಯಾರೋ ಮಾಡಿದ ಕಾರ್ಯಕ್ರಮದ ವರದಿಯನ್ನು 'ಕನ್ನಡ ನುಡಿ' ಯಲ್ಲೇಕೆ ಪ್ರಕಟಿಸಿದಿರಿ ಎಂದು ಪ್ರಶ್ನಿಸಿ ಸಮಜಾಯಿಸಿ ಕೇಳಿದ್ದರು. ಆಗ ನಾನು ಅವರಿಗೆ 'ಗೌರವ ಕಾರ್ಯದರ್ಶಿಯಾಗಿ ನೀವು ನಿಮ್ಮ ಕೆಲಸ ಮಾಡಿ. ನನ್ನ ಸಂಪಾದಕೀಯ ವಿಚಾರದಲ್ಲಿ ಮೂಗು ತೂರಿಸಲು ಬರಬೇಡಿ', ನನ್ನನ್ನು ಕೇಳಲು ಅಧ್ಯಕ್ಷರಿದ್ದಾರೆಂದು ಬಾಯಿ ಮುಚ್ಚಿಸಿದ್ದೆ. ಆದರೆ ನಾನು ಸಂಪಾದಕನಾಗಿದ್ದ ಮೂರು ವರ್ಷಗಳಲ್ಲಿ ಒಂದೇ ಒಂದು ಸಲವೂ ಲಿಂಗಯ್ಯನವರಿಂದ ಆ ರೀತಿಯ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ. ಪ್ರೊ. ಅಶ್ವತ್ಥನಾರಾಯಣರು ಅವಧಿ ಪೂರ್ತಿ ಗೌರವ ಕಾರ್ಯದರ್ಶಿಯಾಗಿರಲಿಲ್ಲ. ಆದರೆ ಪ್ರೊ. ಲಿಂಗಯ್ಯನವರು ಪ್ರೊ. ಹಂಪನಾ ಅವರ ಅಧ್ಯಕ್ಷತೆಯ ೨ನೇ ಅವಧಿಯಲ್ಲೂ ಗೌರವ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದರು. ರಾಜ್ಯದ ಪ್ರೌಢಶಾಲಾ ಶಿಕ್ಷಣ ಕ್ರಮದಲ್ಲಿ ಏಕೈಕ ಪ್ರಥಮ ಭಾಷೆಯಾಗಿ ಕನ್ನಡಕ್ಕೆ ಪ್ರಾಶಸ್ತ್ಯವಿತ್ತು, ಬೋಧಿಸಬೇಕೆಂಬ ತಿರುಳಿನ  ಗೋಕಾಕ್ ವರದಿಯನ್ನು ಜಾರಿಗೊಳಿಸುವಲ್ಲಿ ಸರ್ಕಾರ ವಿಳಂಬ ಧೋರಣೆ ಅನುಸರಿಸುತ್ತಿದ್ದುದನ್ನು ಪ್ರತಿಭಟಿಸಿ ರಾಜೀನಾಮೆ ನೀಡಿ ಗೋಕಾಕ್ ಚಳುವಳಿಯಲ್ಲಿ ಪಾಲ್ಗೊಂಡಿದ್ದರು.

ರಾಷ್ಟ್ರಕವಿ ಕುವೆಂಪು ಅವರ ವಿಚಾರಧಾರೆಯನ್ನು ಮೈಗೂಡಿಸಿಕೊಂಡು ಕನ್ನಡದ ಬೆಳವಣಿಗೆ ಬಗೆಗೆ ಹೆಚ್ಚು ಕಳಕಳಿ ಹೊಂದಿದ್ದ ಪ್ರೊ. ಲಿಂಗಯ್ಯನವರು ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ೧೯೬೪ರಲ್ಲಿ ಹುಟ್ಟೂರು ಪೀಹಳ್ಳಿಯಲ್ಲಿ ಕನ್ನಡ ಸಂಘ ಸ್ಥಾಪಿಸಿ ಅದರ ಮೂಲಕ ಗ್ರಂಥಾಲಯ, ವಯಸ್ಕರ ಶಿಕ್ಷಣ ತರಗತಿ ನಡೆಸಿದ್ದರು. 'ರಾಷ್ಟ್ರಭಾಷೆ'



ಹೆಸರಿನಲ್ಲಿ ಭಾರತ ಸರ್ಕಾರದ ಹಿಂದಿ ಹೇರಿಕೆಯ ನೀತಿಯನ್ನು ವಿರೋಧಿಸಿ ೧೯೬೭ರಲ್ಲಿ ಮೈಸೂರಿನಲ್ಲಿ ನಡೆದ ವಿದ್ಯಾರ್ಥಿ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಬೆಂಗಳೂರಿಗೆ ಬಂದ ಮೇಲೆ ಕನ್ನಡ ಸಾಹಿತ್ಯ ಪರಿಷತ್ತು ಸೇರಿದಂತೆ ಕೆಲವೊಂದು ಕನ್ನಡ ಪರ ಸಂಘಟನೆಗಳ ಜೊತೆ ಸಂಪರ್ಕವಿರಿಸಿಕೊಂಡು ಅವುಗಳ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು.

**ಕನ್ನಡಪರ ಚಿಂತಕರು :** ಕನ್ನಡ ಪರ ಸಂಘಟನೆಗಳಲ್ಲಿ ರಾಜಧಾನಿಯಲ್ಲಿ ತನ್ನ ವಿಶಿಷ್ಟ ಚಟುವಟಿಕೆಗಳ ಮೂಲಕ ತನ್ನದೇ ಆದ ಪ್ರತಿಷ್ಠಿತ ಸ್ಥಾನ ಗಳಿಸಿಕೊಡಿರುವ 'ಕನ್ನಡ ಸಂಘರ್ಷ ಸಮಿತಿ'ಯು ಸ್ಥಾಪನೆಗೊಂಡ ಮರುದಿನ ನವಂಬರ್ ೧, ೧೯೭೯ರಂದು ಕನ್ನಡ ಪದವೀಧರರ ನಿರುದ್ಯೋಗಿ ಸಮಸ್ಯೆ ಬಗೆಗೆ ಸರ್ಕಾರದ ಗಮನ ಸೆಳೆಯಲು ಕೆಂಪೇಗೌಡ ರಸ್ತೆಯ ಜನತಾ ಬಜಾರ್ ಮುಂಭಾಗದಲ್ಲಿ 'ಬೂಟ್ ಪಾಲಿಷ್' ಕಾರ್ಯಕ್ರಮ ನಡೆಸಿದಾಗ ಅದರಲ್ಲಿ ಭಾಗಿಯಾಗಿದ್ದರು. ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಕನ್ನಡ ಸಂಘದ ವತಿಯಿಂದ ಅವರ ಬೇಡಿಕೆಗಳ ಸಂಬಂಧವಾಗಿ ನಡೆದ ಹೋರಾಟದಲ್ಲಿಯೂ ಪಾಲ್ಗೊಂಡಿದ್ದರು. ಗೋಕಾಕ್ ವರದಿಯ ಅನುಷ್ಠಾನಕ್ಕೆ ಒತ್ತಾಯಿಸಿ ೧೯೮೨ರಲ್ಲಿ 'ಸಾಹಿತಿ ಕಲಾವಿದರ ಕ್ರಿಯಾ ಸಮಿತಿಯು ವಿಧಾನಸೌಧದ ಮುಂದಿನ ಗೋಪಾಲಗೌಡ ವೃತ್ತದ 'ಕಬ್ಬನ್ ಪಾರ್ಕ್' ಮೂಲೆಯಲ್ಲಿ ನಡೆಸಿದ ಉಪವಾಸ ಸತ್ಯಾಗ್ರಹದಲ್ಲಿಯೂ ಪಾಲ್ಗೊಂಡಿದ್ದರು. ೨೦೦೨ರಲ್ಲಿ ತಮಿಳು ನಾಡಿಗೆ ಕಾವೇರಿ ನೀರು ಬಿಡುವುದನ್ನು ಪ್ರತಿಭಟಿಸಿ ನಡೆದ ಚಳುವಳಿಯಲ್ಲಿ ಭಾಗವಹಿಸಿದ್ದರಲ್ಲದೆ, ಕಾವೇರಿ ನ್ಯಾಯಮಂಡಳಿಯ ಐತೀರ್ಪು ರಾಜ್ಯಕ್ಕೆ ಅನ್ಯಾಯವಾಗುವ ರೀತಿಯಲ್ಲಿ ಬಂದಾಗ ಅದರ ವಿರುದ್ಧ ನಡೆದ ಪ್ರತಿಭಟನಾ ಕಾರ್ಯಕ್ರಮಗಳಲ್ಲಿಯೂ ಪಾಲ್ಗೊಂಡಿದ್ದರು. ಅಲ್ಲದೆ ಕನ್ನಡಪರ ಸಂಘಟನೆಗಳ ಕಾರ್ಯಕ್ರಮಗಳಲ್ಲಿ ಕನ್ನಡ ಪರವಾದ ಉಪನ್ಯಾಸಗಳನ್ನು ಸಹ ನೀಡುವ ಮೂಲಕ ಕನ್ನಡಪರ ಚಿಂತಕರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಮುಂದೆ ನಾನು 'ಕನ್ನಡ ಸಂಘರ್ಷ ಸಮಿತಿ'ಯ ಅಧ್ಯಕ್ಷನಾದ ಬಳಿಕ ಅದರ ಆಜೀವ ಸದಸ್ಯರೂ ಆದ ಪ್ರೊ. ಲಿಂಗಯ್ಯನವರು ನಾನು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾದ (೧೯೯೫–೯೮) ಬಳಿಕ ಇನ್ನೂ ಹೆಚ್ಚು ನಿಕಟರಾಗಿ ನಮ್ಮ ಸಂಘಟನೆಯ ಹಲವಾರು ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದಾರೆ. ಮುಂದೆ ನಾನು 'ಬಹುಜನ ಕನ್ನಡಿಗರು' ಪ್ರಗತಿಪರ ಕನ್ನಡ ಪಾಕ್ಷಿಕ ಪತ್ರಿಕೆಯನ್ನು ಆರಂಭಿಸಿದ ಮೇಲೆ ಅದರ ಆಜೀವ ಚಂದಾದಾರರೂ ಆದ ಅವರು ಕನ್ನಡಕ್ಕೆ ಸಂಬಂಧಿಸಿದಂತೆ ಲೇಖನಗಳನ್ನು ಸಹ ಬರೆದಿದ್ದಾರೆ.

ಈ ರೀತಿಯಲ್ಲಿ ಕನ್ನಡಪರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಕನ್ನಡ ಸಾಹಿತ್ಯ ಪರಿಷತ್ತಿನ  ಕಾರ್ಯಕ್ರಮಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಪ್ರೊ. ಡಿ. ಲಿಂಗಯ್ಯನವರು ೧೯೮೯ರಲ್ಲಿ ಪರಿಷತ್ತಿನ ಅಧ್ಯಕ್ಷತೆಗೆ ಸ್ಪರ್ಧಿಸಿದಾಗ ಹಂಪನಾ ಬೆಂಬಲದೊಂದಿಗೆ ಸ್ಪರ್ಧಿಸಿದ್ದ ಅವರನ್ನು ಹಂಪನಾ ವಿರೋಧಿ ಬಣ ಒಗ್ಗೂಡಿ

ಪರಾಭವಗೊಳಿಸಿ, ಪರಿಷತ್ತಿನ ಚಟುವಟಿಕೆಗಳಿಂದ ದೂರವೇ ಉಳಿದಿದ್ದ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರನ್ನು ಗೆಲ್ಲಿಸಿ ಪರಿಷತ್ತು ನಾಲ್ಕು ಅವಧಿಯಲ್ಲಿ ಒಂದು ಜಾತಿಯ ಹಿಡಿತಕ್ಕೊಳಪಡುವಂತಾದುದು ವಿಪರ್ಯಾಸದ ಸಂಗತಿ.

ಎಲೆಮರೆಯ ಕಾಯಿಯಂತೆ ಸಾಹಿತ್ಯ ಚಟುವಟಿಕೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡು ಹಲವಾರು ಮೌಲಿಕ ಕೃತಿಗಳನ್ನು ರಚಿಸಿರುವ ಪ್ರೊ. ಡಿ. ಲಿಂಗಯ್ಯ ಅವರ ಕೃತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡಮಿ, ರಾಜ್ಯ ಸರ್ಕಾರದ ದೇವರಾಜ ಬಹದ್ದೂರ್ ಪ್ರಶಸ್ತಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಜಯಶ್ರೀ ಟ್ರಸ್ಟ್ ಪುರಸ್ಕಾರ, ಡಾ. ಸಿಂಪಿ. ಲಿಂಗಣ್ಣ ಪ್ರತಿಷ್ಠಾನ ಪ್ರಶಸ್ತಿ, ವಚನ ಸಾಹಿತ್ಯ ಅಕಾಡಮಿ ಪ್ರಶಸ್ತಿಗಳು ಲಭಿಸಿವೆ. ಪ್ರೊ. ಲಿಂಗಯ್ಯನವರ ಸಾಹಿತ್ಯ ಸೇವೆಯನ್ನು ಮಾನ್ಯ ಮಾಡಿ ೨೦೦೩ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ೧೯೮೫ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿಯ 'ಜಾನಪದ ತಜ್ಞ' ಪ್ರಶಸ್ತಿ, ಆದಿಚುಂಚನಗಿರಿ ಪೀಠದ ಚುಂಚ ಪ್ರಶಸ್ತಿ (೨೦೦೪), ಶರಣ ಸಾಹಿತ್ಯ ಪರಿಷತ್ತಿನಿಂದ 'ರಮಣಶ್ರೀ ಶರಣ ಪ್ರಶಸ್ತಿ'ಗಳು ಲಭಿಸಿವೆ.

ಕನ್ನಡ ಸಾಹಿತ್ಯಕ್ಕೆ ಇಪ್ಪತ್ತು ಸಂಪಾದಿತ ಕೃತಿಗಳು, ಇಪ್ಪತ್ತೆರಡು ಜಾನಪದ ಕೃತಿಗಳು ಸೇರಿದಂತೆ ಸಂಶೋಧನೆ, ಅನುವಾದದ ಹೊರತು ಬಹುತೇಕ ಸಾಹಿತ್ಯದ ಎಲ್ಲ ಪ್ರಕಾಗಳಲ್ಲಿ ಎಂಬತ್ತೈದು ಕೃತಿಗಳನ್ನು ಕೊಡುಗೆಯಾಗಿ ನೀಡಿರುವ ಪ್ರೊ. ಡಿ. ಲಿಂಗಯ್ಯ ಅವರು ಅನೀತಿ, ಅನ್ಯಾಯ, ಅಕ್ರಮಗಳನ್ನು ಕಂಡರೆ ಸಿಡಿಮಿಡಿಗೊಳ್ಳುತ್ತಿದ್ದುದರಿಂದಲೋ ಏನೋ ಕನ್ನಡ ಸಾಹಿತ್ಯ ಪರಿಷತ್ತು ಸೇರಿದಂತೆ ಕನ್ನಡ ಸಾಹಿತ್ಯ ವಲಯವು ಸಾಹಿತ್ಯ ಕ್ಷೇತ್ರದಲ್ಲಿ ಅವರಿಗೆ ನ್ಯಾಯಯುತವಾಗಿ ಸಲ್ಲಬೇಕಾಗಿದ್ದ ಸ್ಥಾನಮಾನಗಳನ್ನು ಗೌರವಾದರಗಳನ್ನು ನೀಡದೇ ಹೋದುದು ವಿಷಾದನೀಯ. ಕನ್ನಡ ಸಾಹಿತ್ಯ ಪರಿಷತ್ತು ರಾಮಕೃಷ್ಣ ಹೆಗಡೆ ಸರ್ಕಾರ ಪರಿಷತ್ತಿಗೆ ಆಡಳಿತಾಧಿಕಾರಿ ನೇಮಕ ಮಾಡಿದ್ದು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾಗಿದ್ದ ಐ.ಎಂ. ವಿಠಲಮೂರ್ತಿ ನೇತೃತ್ವದಲ್ಲಿ ಪರಿಷತ್ತಿನ ವಿಶೇಷ ಸಕಲ ಸದಸ್ಯರ ಸಭೆ ನಡೆದು, ನಿಬಂಧನೆಗಳಿಗೆ ತಿದ್ದುಪಡಿಯಾದ ಬಳಿಕ ನಡೆದ ಕ.ಸಾ.ಪ. ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿ (ಜಿಲ್ಲಾಧ್ಯಕ್ಷರು) ಚುನಾವಣೆಯಲ್ಲಿ ಡಿ. ಲಿಂಗಯ್ಯನವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದರು. ಪರಿಷತ್ತಿನ ವಾರ್ಷಿಕ ಸಕಲ ಸದಸ್ಯರ ಸಭೆಗಳೂ ಸೇರಿದಂತೆ ಎಲ್ಲ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದುದೇ ಅಲ್ಲದೆ ನಾಲ್ಕು ವರ್ಷಗಳ ಕಾಲ ಗೌರವ ಕಾರ್ಯದರ್ಶಿಯಾಗಿ ಶಿಸ್ತು ಬದ್ಧವಾಗಿ ಕಾರ್ಯನಿರ್ವಹಿಸಿದ್ದ ಡಿ. ಲಿಂಗಯ್ಯನವರನ್ನು ಆಗಿನ ಪರಿಷತ್ತಿನ ಸರ್ವ ಸದಸ್ಯರು ಗೆಲ್ಲಿಸಲಿಲ್ಲ. ಬದಲಿಗೆ ಅವರ ವಿರುದ್ಧ ಸ್ಪರ್ಧಿಸಿದ್ದ ಅದುವರೆಗೆ ಕವಿಗೋಷ್ಠಿ, ಸಾಹಿತ್ಯ ಗೋಷ್ಠಿಗಳೋ ಮೊದಲಾದವುಗಳಲ್ಲಿ ಪಾಲ್ಗೊಳ್ಳಲು ಆಹ್ವಾನಿಸಿದಾಗ ಮಾತ್ರ ಪರಿಷತ್ತಿನ ಮೆಟ್ಟಲು ಹತ್ತುತ್ತಿದ್ದು, ಉಳಿದ ಯಾವ ಚಟುವಟಿಕೆಗಳಲ್ಲಿಯೂ ಭಾಗವಹಿಸದೇ ಇದ್ದ ಆಗಿನ ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರಾಗಿ ಆ ಒಂದು ಸ್ಥಾನಮಾನ ಬಳಸಿಕೊಂಡು ರಾಜ್ಯಾದ್ಯಂತ ಸುತ್ತಾಡಿ ಮತಯಾಚಿಸಿದವರನ್ನು ಗೆಲ್ಲಿಸಿದುದು ವಿಪರ್ಯಾಸದ ಸಂಗತಿ.



ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗುವ ಅರ್ಹತೆ ಹೊಂದಿದ್ದ ಪ್ರೊ. ಡಿ. ಲಿಂಗಯ್ಯ ಅವರು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಸಹ ಆಗಲಿಲ್ಲ. ಅವರ ಜೀವಿತದ ಕೊನೆಯ ದಿನಗಳಲ್ಲಿ ಬಸವನಗುಡಿ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು ಘಟಕ ಕ್ಷೇತ್ರ ಮಟ್ಟದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿಸಿದುದು ಸಮಾಧಾನಕರ ಸಂಗತಿ. ಆದರೆ ಅವರ ತವರು ಜಿಲ್ಲೆ ಮಂಡ್ಯದ ಪರಿಷತ್ತಿನ ಜಿಲ್ಲಾ ಘಟಕವು ೨೦೦೧ರಲ್ಲೇ ಶ್ರೀರಂಗಪಟ್ಟಣದಲ್ಲಿ ಜರುಗಿದ ಜಿಲ್ಲಾ ಮಟ್ಟದ ಆರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ನೀಡಿ ಗೌರವಿಸಿ ತವರಿನ ಪ್ರೇಮವನ್ನು ಮೆರೆದಿದ್ದಿತು. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಇನ್ನೂ ಹೆಚ್ಚಿನ ಸೇವೆ ನಿರೀಕ್ಷಿಸಿದ್ದಾಗಲೇ ಅವರು ಅಧ್ಯಕ್ಷರಾಗಿದ್ದು, ಹೊಸ ಆಯಾಮವನ್ನು ನೀಡತೊಡಗಿದ್ದ ಬಿ.ಎಂ.ಶ್ರೀ. ಪ್ರತಿಷ್ಠಾನವು ಆಯೋಜಿಸಿದ್ದ ಸಾಹಿತ್ಯಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾಗಲೇ ತಮ್ಮ ಕೊನೆಯುಸಿರೆಳೆದ ಡಿ. ಲಿಂಗಯ್ಯನವರ ಸ್ಮರಣಾರ್ಥ ಪ್ರತಿಷ್ಠಾನವು ಅವರ ಬದುಕು ಬರಹ ಕುರಿತು ಒಂದು ದಿನದ ವಿಚಾರ ಸಂಕಿರಣ ಆಯೋಜಿಸಿ ನನ್ನನ್ನು ಸಮಾರೋಪ ಭಾಷಣ ಮಾಡಲು ಆಹ್ವಾನಿಸಿದುದಕ್ಕೆ ನಾನು ಆಭಾರಿಯಾಗಿರುವೆ.

# ಸ್ವರ್ಗೀಯ ಶ್ರೀ ಡಿ. ಲಿಂಗಯ್ಯನವರಿಗೆ ಅಶ್ರುತರ್ಪಣ

–ಎಂ.ಆರ್. ಶಿವರಾಮಯ್ಯ*

ಮಾನ್ಯ ಶ್ರೀ ಲಿಂಗಯ್ಯನವರೇ,
ಹೀಗೆ ಹೊರಟಿದ್ದು ಸರಿಯೇ ?
ಜಾನಪದವನು ದಾಖಲಿಸಿದಿರಿ
ಸಾಹಿತ್ಯಲೋಕವ ಬೆಳಗಿದಿರಿ

ಪ್ರತಿದಿನ ಪಠಿಸಿದಿರಿ ಬಿಎಂಶ್ರೀ ಶ್ರೀಕಾರ
ಅನುದಿನ ಜಪಿಸಿದಿರಿ ಎಂವೀಸೀ ಸಾಕಾರ
ಕಿರಿಯರ ಹರಸಿದಿರಿ ಈ ದಿನ
ಹಿರಿಯರ ಸನ್ಮಾನಿಸಿದಿರಿ ತುಂಬಿ ಮನ

ನೋವೆಂದು ನರಳಲಿಲ್ಲ
ಸಾವಿನಲೂ ಕೊರಗಲಿಲ್ಲ
ಲೌಕಿಕರೆಂದರು : ನಿಮಗಾದದ್ದು ಹೃದಯ ಸ್ತಂಭನ
ಅನುಭವಿಗಳೆಂದರು : ನಿಮ್ಮದು ತೃಪ್ತ ತುಂಬು ಜೀವನ

ನೀವೇನೋ ಹೊರಟುಬಿಟ್ಟಿರಿ ಆಕಸ್ಮಿಕವಾಗಿ
ನಾವು ಕಳೆದುಕೊಂಡದ್ದು ಅಮೂಲ್ಯನಿಧಿ
ನಿಮ್ಮ ನುಡಿಗಳೆಮಗೆ ದಿವ್ಯ ಮಂತ್ರ
ನಿಮ್ಮ ನಡೆಯೆಮಗೆ ಸಾಧನ ಸೂತ್ರ

ಶರಣರ ಗುಣ ಕಾಣುವುದಂತೆ ಮರಣದಲ್ಲಿ

ಲಿಂಗಯ್ಯನವರ ಸ್ವರ್ಗಾರೋಹಣ ಬಿಎಂಶ್ರೀ ಪ್ರತಿಷ್ಠಾನದಲ್ಲಿ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಸಕಲ ಸದಸ್ಯರ ಪರವಾಗಿ (ತಾ. ೧೨.೦೯.೨೦೧೨. ಶ್ರೀ ನಂದನನಾಮ ಸಂವತ್ಸರ–ದಕ್ಷಿಣಾಯನ–ವರ್ಷ ಋತು–ಅಧಿಕ ಭಾದ್ರಪದ ಮಾಸ–ಕೃಷ್ಣ ಪಕ್ಷ–ಏಕಾದಶಿ–ಬುಧವಾರ–ಸಂಜೆ.

* ವಿಳಾಸ : # ೫೧, ೧ನೇ ಮಹಡಿ, ೧ನೇ ಅಡ್ಡರಸ್ತೆ, ರಾಷ್ಟ್ರೀ ಕಾರ್ಖಾನೆ ಹಿಂಬದಿ, ಚಿಕ್ಕಗೌಡನ ಪಾಳ್ಯ, ಬೆಂಗಳೂರು–೫೬೦೦೬೧. ಮೊಬೈಲ್ : ೯೮೪೫೧೮೦೮೮



# ಕಲ್ಪವೃಕ್ಷ

(ದಿ. ಡಿ. ಲಿಂಗಯ್ಯ ಅವರ ನೆನಪಿಗಾಗಿ)

–ಎಂ.ಎಸ್. ಭಾಸ್ಕರ್*

ಕಲ್ಪತರು
ಇವರ ನಿಲುವು
ಅವರ ಶಿಸ್ತು
ನನಗಾಯಿತು–
ನಿಜವಾಗಲು
ಸುಸ್ತು, ಅವರು ಥಟ್ ಎಂದು
ನಮ್ಮನ್ನು ಬಿಟ್ಟಾಗ

ಯಾವಾಗಲೂ ಇಸ್ತ್ರಿ ಮಾಡಿದ
ನಶ್ಯ ಬಣ್ಣದ ಸೂಟು
ಯೋಚನೆಗೆ ಆಧಾರವಾದ
ಕನ್ನಡಕ,
ಸ್ನೇಹ ಜೀವಿ. ಈ
ಶ್ರೀ ಲಿಂಗಯ್ಯ
ಕಟ್ಟಿ ಬೆಳೆಸಿದರು
ಅವರ ನಿಲುವಿಗೆ
ತಕ್ಕಂತೆ ಸಾಹಿತ್ಯ
ಸೌಹಾರ್ದದ ಬುದಕು
ಇವರು ಕಂಡರಿಯದ
ಸಾಹಿತಿ, ರಾಜಕಾರಣಿ
ಯಾರೂ ಇಲ್ಲ

ವಿಧಾನಸೌಧದ ಶಿಲ್ಪಿ
ಹನುಮಂತಯ್ಯ

* ವಿಳಾಸ : ಬನಶಂಕರಿ, ೧ನೇ 'ಇ' ಕ್ರಾಸ್, ೩ನೇ ಮುಖ್ಯರಸ್ತೆ, ೨ನೇ ಹಂತ, ೬ನೇ ಬ್ಲಾಕ್, ಬನಶಂಕರಿ ೩ನೇ ಹಂತ, ಬೆಂಗಳೂರು–೫೬೦೦೮೫. ಮೊಬೈಲ್ : ೯೨೪೩೪೯೯೧೯೯

ಕನ್ನಡ ಕಣ್ಮಣಿ
ಕೆಂಪೇಗೌಡ
ಜಾನಪದದ ಹರಿಕಾರ
ಕರೀಂ ಖಾನ್ – ಅವರ
ಮೇರುಕೃತಿ ರಚನಕಾರ
ಈ ಶ್ರೀಲಿಂಗಯ್ಯ

ನಿಮ್ಮಂಥವರ ಆದರ್ಶ
ಮತ್ತೆ ಕಾಣಲು
ಮಾಡಿರಬೇಕು
ಈ ಕರ್ನಾಟಕ ತೀರಿಸದಷ್ಟು ಪುಣ್ಯ.



# ಪ್ರೊ. ಡಿ. ಲಿಂಗಯ್ಯ ಸಂಸ್ಮರಣ ಗೀತ

**–ಡಾ. ದೊಡ್ಡರಂಗೇಗೌಡ***

ಈ ನೆಲದ ಪದಗಳನು ಹಿಡಿದಿಟ್ಟ ಕವಿಯೇ
ಜಾನಪದ ಸಿರಿಗಂಧ ಪಸರಿಸಿದ ಸವಿಯೇ...
ನಿಮ್ಮಂಥ ಕೋಮಲರು ಇಹರೇನು ಜಗದಲ್ಲಿ ?
ನೀವೊಂದು ಸೌಮ್ಯಶ್ರೀ ರಂಗವಲ್ಲಿ !

ಎಲ್ಲಿ ನಿಮ್ಮ ಬರಹ ಮೂಡಿತೋ...
ಅಲ್ಲಿ ಈ ಮಣ್ಣ ಮಿಡಿತ–ತುಡಿತವಿದೆ ;
ಎಲ್ಲೆಲ್ಲಿ ನಿಮ್ಮ ಇಂಗಿತ ಪ್ರಕಟವಾಗಿಹುದೋ
ಅಲ್ಲಲ್ಲಿ ಹರಿದಿದೆ ನಿಮ್ಮ ಅಂತರಂಗದ ಹಾಡು !

ನಿಮ್ಮ ಸ್ವಂತಿಕೆ ಮುಂದೆ ಇನ್ನಿಲ್ಲ ಗೆಳೆಯರೇ
ನಿಮ್ಮ ಕೃತಿಗಳಿಗಿದೆ ನಮ್ಮ ನಾಡ ಸೊಗಡು ಅವರೆ !
ನಿಮ್ಮ ಬೋಧ ಜಗದಲ್ಲಿ ಎನಿತೆನಿತು ಉಪಕೃತರು ?
ನಿಮ್ಮ ಶಿಷ್ಯ ಕೋಟಿ ನಿಮ್ಮ ಹೆಸರ ಉಳಿಸಿಹರು !

ಓ ! ಪ್ರಾಚಾರ್ಯರೇ, ನೀವು ವಿದ್ವದ್ ಗಣಿಯೇ
ಸಾಹಿತ್ಯ ಸಂಪದಲ್ಲಿ ನೀವು "ಮಂಡ್ಯ ಮಣಿ"ಯೇ
ಶರಣು ಹೇಳುವೆ ಸ್ವಾಮಿ ನಿಮ್ಮ ಆತ್ಮಕ್ಕೆ
ಸರ್ವೇಶ್ವರನ ಹೃನ್ನುಡಿಗೆ ಚಿರಂತನ ರೇಖೆ !

* ವಿಳಾಸ : ಮಾನ್ಯ ವಿಧಾನಪರಿಷತ್ ಸದಸ್ಯರು, ಕೊಠಡಿ ಸಂಖ್ಯೆ ೧೬, ಶಾಸಕರ ಭವನ–೧, ಬೆಂಗಳೂರು–೫೬೦೦೦೧. ಜಂಗಮವಾಣಿ : ೯೯೦೦೨೫೩೪೯೫.

## ಪ್ರೊ. ಡಿ. ಲಿಂಗಯ್ಯ : ನಡೆದ ಬಂದ ದಾರಿ

| | | |
|---|---|---|
| ಜನನ | : | ೧೬-೧೨-೧೯೩೯ |
| ಹುಟ್ಟಿದ ಸ್ಥಳ | : | ಪೀಹಳ್ಳಿ, ಅರಕೆರೆ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ. |
| ತಂದೆ-ತಾಯಿ | : | ದೇವೇಗೌಡ, ಸಿದ್ದಮ್ಮ |
| ವಿದ್ಯಾರ್ಹತೆ | : | ಎಂ.ಎ. (ಕನ್ನಡ) ೧೯೬೮, ಮೈಸೂರು ವಿಶ್ವವಿದ್ಯಾಲಯ. |
| ಶೈಕ್ಷಣಿಕ ಸೇವೆ | : | ೧೯೬೮-೯೭ ಬೆಂಗಳೂರು ವಿಶ್ವೇಶ್ವರಪುರ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥ ; ಕನ್ನಡ ಪ್ರಾಧ್ಯಾಪಕ ; ಕಾಲೇಜಿನ ಪ್ರಾಚಾರ್ಯ; ರಾಷ್ಟ್ರೀಯ ಸೇವಾಯೋಜನಾ ಅಧಿಕಾರಿ, ವಿದ್ಯಾರ್ಥಿ ಕ್ಷೇಮಾಧಿಕಾರಿ, ಬೆಂಗಳೂರು ವಿಶ್ವವಿದ್ಯಾಲಯ ಅಕಾಡೆಮಿಕ್ ಕೌನ್ಸಿಲ್ ಸದಸ್ಯ ; ಸ್ನಾತಕ ಕನ್ನಡ ಅಧ್ಯಯನ ಮಂಡಲಿಯ ಸದಸ್ಯ, ನಿವೃತ್ತಿ : ೩೧-೧೨-೧೯೯೭. |
| ಮದುವೆ | : | ೦೩-೦೬-೧೯೬೮, ಹೆಂಡತಿ : ಕವಿತ. ಮಕ್ಕಳು : ಎಲ್. ಸವಿತಾ ಪ್ರಿಯದರ್ಶಿನಿ, ಎಲ್. ಅನಂತರಾಜ್, ಎಲ್. ರೂಪ ಪ್ರಿಯದರ್ಶಿನಿ. |

### ಪ್ರಶಸ್ತಿಗಳು

೧. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ 'ಜಾನಪದ ತಜ್ಞ ಪ್ರಶಸ್ತಿ', ೧೯೮೫.

೨. ಕರ್ನಾಟಕ ರಾಜ್ಯ ಪ್ರಶಸ್ತಿ, ೨೦೦೩.

೩. ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದಿಂದ 'ಚುಂಚಶ್ರೀ ಪ್ರಶಸ್ತಿ', ೨೦೦೪.

೪. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನಿಂದ 'ರಮಣಶ್ರೀ ಶರಣ ಪ್ರಶಸ್ತಿ', ೨೦೦೭.

೫. ಅತ್ತಿಮಬ್ಬೆ ಪ್ರತಿಷ್ಠಾನ ಟ್ರಸ್ಟ್‌ನಿಂದ 'ಚಿ.ನ. ಮಂಗಳ ಪ್ರಶಸ್ತಿ', ೨೦೦೪.



೬. ದೊಡ್ಡಮಾವಳ್ಳಿ ಪಿ. ರಾಜಮ್ಮ ಮುನಿವೆಂಕಟಪ್ಪ ಟ್ರಸ್ಟ್‌ನಿಂದ 'ಸಂಜೀವಿನಿ ಜಾನಪದ ರತ್ನ ಪ್ರಶಸ್ತಿ', ೨೦೦೪.

೭. ಕರ್ನಾಟಕ ರಕ್ಷಣಾ ವೇದಿಕೆಯಿಂದ 'ನಾಡಭೂಪಾಲ ಪ್ರಶಸ್ತಿ', ೨೦೦೫.

೮. ಹೊನ್ನಾವರ ಜಾನಪದ ಪ್ರಕಾಶನದಿಂದ 'ಕುವೆಂಪು ದೀಪ ಪ್ರಶಸ್ತಿ', ೨೦೦೬.

೯. ಬೆಂಗಳೂರು ಸುವರ್ಣ ಕಲಾಸಂಗಮದಿಂದ 'ಅಪ್ರತಿಮ ರತ್ನ ಪ್ರಶಸ್ತಿ', ೨೦೦೬.

೧೦. ಬೆಂಗಳೂರು ಬಸವನಗುಡಿ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತಿನ ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ 'ಬಸವನಗುಡಿ ರತ್ನ ಪ್ರಶಸ್ತಿ', ೨೦೦೮.

### ಬಹುಮಾನಗಳು

೧. 'ಬಯಲು ಸೀಮೆಯ ಜನಪದ ಗೀತೆಗಳು' ಗ್ರಂಥಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ, ೧೯೭೩.

೨. 'ಕರ್ನಾಟಕ ಜನಪದ ಕಾವ್ಯಗಳು' ಗ್ರಂಥಕ್ಕೆ ರಾಜ್ಯ ಸರಕಾರದ ದೇವರಾಜ ಬಹದ್ದೂರ್ ಪ್ರಶಸ್ತಿ, ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಥಮ ಬಹುಮಾನ, ೧೯೭೬.

೩. 'ಸತ್ಯಾಗ್ರಹಿಗಳ ಸಂದರ್ಶನ' ಗ್ರಂಥಕ್ಕೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಜಯಶ್ರೀ ಟ್ರಸ್ಟ್ ಪುರಸ್ಕಾರ, ೧೯೯೮.

೪. 'ಜಾನಪದ ಶೋಧನ' ಗ್ರಂಥಕ್ಕೆ ಡಾ. ಸಿಂಪಿ ಲಿಂಗಣ್ಣ ಪ್ರತಿಷ್ಠಾನ ಪ್ರಶಸ್ತಿ, ೨೦೦೦.

೫. 'ವಚನ ದವನ' ಗ್ರಂಥಕ್ಕೆ ವಚನ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ೨೦೦೦.

### ವಿವಿಧ ಸಂಘ ಸಂಸ್ಥೆಗಳಲ್ಲಿ ಸೇವೆ

೧. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ, ೧೯೭೮-೮೨.

೨. ಕರ್ನಾಟಕ ಲೇಖಕರ ಸಂಘದ ಅಧ್ಯಕ್ಷ, ೧೯೯೫ ರಿಂದ

೩. ಕರ್ನಾಟಕ ಜಾನಪದ ಪರಿಷತ್ತಿನ ಟ್ರಸ್ಟಿ, ೧೯೯೭ ರಿಂದ ೨೦೦೭.

೪. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ವ್ಯವಸ್ಥಾಪಕ ಕಾರ್ಯದರ್ಶಿ, ೧೯೯೮-೨೦೦೩.

೫. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಕೋಶಾಧಿಕಾರಿ, ೨೦೦೩-೨೦೦೪.

೬. ಶ್ರೀರಂಗಪಟ್ಟಣದಲ್ಲಿ ನಡೆದ ಆರನೇ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ, ಜೂನ್ ೨೦೦೧.

೭. 'ಚಾವುಂಡರಾಯ ಪ್ರಶಸ್ತಿ' ಆಯ್ಕೆ ಸಮಿತಿಯ ಸದಸ್ಯ, ೧೯೯೬, ೧೯೯೭.

೮. 'ಚುಂಚಶ್ರೀ ಪ್ರಶಸ್ತಿ' ಆಯ್ಕೆ ಸಮಿತಿ ಸದಸ್ಯ, ೧೯೯೯.

೯. ಕರ್ನಾಟಕ ಜಾನಪದ ಪರಿಷತ್ತಿನ ಜಾನಪದ ಮಹಾವಿದ್ಯಾಲಯದ ಗೌರವ ಪ್ರಾಚಾರ್ಯ ೧೯೯೯–೨೦೧೦.

೧೦. ಶ್ರೀಮತಿ ಭಾಗೀರಥಿ ಬಾಯಿ ನಾರಾಯಣರಾವ್ ಮಾನೆ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯ, ೨೦೦೧.

೧೧. ಡಾ. ಕೆ.ಆರ್. ಲಿಂಗಪ್ಪ ಪ್ರತಿಷ್ಠಾನ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯ, ೨೦೦೧.

೧೨. ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥ ಪ್ರಕಟಣಾ ಸಲಹಾ ಸಮಿತಿ ಸದಸ್ಯ, ೧೯೯೨–೯೫.

೧೩. 'ಜಾನಪದಶ್ರೀ ಪ್ರಶಸ್ತಿ' ಆಯ್ಕೆ ಸಮಿತಿ ಸದಸ್ಯ, ೨೦೦೨, ೨೦೦೪.

೧೪. 'ರಮಣಶ್ರೀಶರಣ ಪ್ರಶಸ್ತಿ' ಆಯ್ಕೆ ಸಮಿತಿ ಸದಸ್ಯ, ೨೦೦೫, ೨೦೦೬, ೨೦೦೮.

೧೫. ಚಿಂತಾಮಣಿಯಲ್ಲಿ ನಡೆದ ಕೋಲಾರ ಜಿಲ್ಲಾ ಪ್ರಥಮ ವಚನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ – ಜುಲೈ ೨೦೦೭.

೧೬. ಕರ್ನಾಟಕ ಕಲಾಗ್ರಾಮ ಅಭಿವೃದ್ಧಿ ಪ್ರಾಧಿಕಾರ ಟ್ರಸ್ಟ್ ಸದಸ್ಯ, ೨೦೦೯.

೧೭. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಅಧ್ಯಕ್ಷ (೨೩–೧೦–೨೦೧೦ ರಿಂದ ೧೨–೦೯–೨೦೧೨).

೧೮. ಬೆಂಗಳೂರು ಬಸವನಗುಡಿ ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ, ೮–೦೧–೨೦೧೨).

### ಕನ್ನಡ ಪರ ಸೇವೆ

೧. ಹುಟ್ಟೂರಿನಲ್ಲಿ ಕನ್ನಡ ಸಂಘ ಸ್ಥಾಪಿಸಿ, ಗ್ರಾಮೀಣ ಗ್ರಂಥಾಲಯ, ವಯಸ್ಕರ ಶಿಕ್ಷಣ ತರಗತಿಗಳನ್ನು ನಡೆಸಿದ್ದು, ೧೯೬೩.

೨. ಹಿಂದಿ ಹೇರಿಕೆ ವಿರುದ್ಧ ಮೈಸೂರಿನಲ್ಲಿ ನಡೆದ ವಿದ್ಯಾರ್ಥಿ ಚಳುವಳಿಯಲ್ಲಿ ಭಾಗವಹಿಸಿದ್ದು, ೧೯೬೭.



೩. ಕನ್ನಡ ಸಾಹಿತ್ಯ ಪರಿಷತ್ತಿನ ಅಸಾಹಿತ್ಯಕ ಚಟುವಟಿಕೆಗಳನ್ನು ಪ್ರತಿಭಟಿಸಿ 'ಸಮಕಾಲೀನ ವಿಚಾರ ವೇದಿಕೆ' ವತಿಯಿಂದ ಧರಣಿ ಮುಷ್ಕರದಲ್ಲಿ ಭಾಗವಹಿಸಿದ್ದು, ೨೪–೦೪–೧೯೭೭.

೪. ಕನ್ನಡ ನಿರುದ್ಯೋಗಿ ಪದವೀಧರರಿಗೆ ಕರ್ನಾಟಕದಲ್ಲಿ ನೌಕರಿ ಕೊಡಲು ಸರಕಾರದ ಗಮನ ಸೆಳೆಯುವುದಕ್ಕಾಗಿ 'ಕನ್ನಡ ಸಂಘರ್ಷ ಸಮಿತಿ'ಯಿಂದ ಬೆಂಗಳೂರು ಕೆಂಪೇಗೌಡ ವೃತ್ತದಲ್ಲಿ 'ಬೂಟ್ ಪಾಲಿಷ್ ಚಳುವಳಿ'ಯಲ್ಲಿ ಭಾಗವಹಿಸಿದ್ದು ೦೧–೧೧–೧೯೭೯.

೫. ಕರ್ನಾಟಕ ಕಥೋಲಿಕ್ ಕ್ರೈಸ್ತರ ಬೇಡಿಕೆಗಳಿಗೆ ಒತ್ತಾಯಿಸಿ ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಿದ್ದು, ೧೯೮೦.

೬. ಗೋಕಾಕ್ ವರದಿ ಜಾರಿಗೆ ಒತ್ತಾಯಿಸಿ ಸಾಹಿತಿ ಕಲಾವಿದರ ಕ್ರಿಯಾಸಮಿತಿ ಆಶ್ರಯದಲ್ಲಿ ಉಪವಾಸ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದು, ಗೋಕಾಕ್ ವರದಿ ಜಾರಿಗೊಳಿಸುವಲ್ಲಿ ಸರಕಾರದ ವಿಳಂಬ ನೀತಿಯನ್ನು ಪ್ರತಿಭಟಿಸಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ೧೫–೦೪–೧೯೮೨.

೭. ತಮಿಳುನಾಡಿಗೆ ಕಾವೇರಿ ನದಿ ನೀರು ಬಿಡುಗಡೆ ವಿರೋಧಿಸಿ ಬೆಂಗಳೂರಿನಲ್ಲಿ ಸಾಹಿತಿ ಕಲಾವಿದರ ಬಳಗದಿಂದ ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದು, ೨೭–೦೯–೨೦೦೨.

೮. ಹಲವು ಸಾರ್ವಜನಿಕ, ಸಾಹಿತ್ಯಕ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕನ್ನಡ, ಕನ್ನಡ ಚಳುವಳಿಗಳ ಪರವಾಗಿ ಉಪನ್ಯಾಸ ಮಾಡಿದ್ದು.

೯. ಕಾವೇರಿ ಜಾಗೃತಿ ಮೆರವಣಿಗೆ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದು ೧೮–೧೦–೨೦೦೨.

೧೦. ಬೆಂಗಳೂರು ಪುರಭವನದ ಮುಂಭಾಗದಲ್ಲಿ ೨೦–೦೨–೨೦೦೭ರಂದು ನಡೆದ ಕಾವೇರಿ ನ್ಯಾಯಮಂಡಳಿ ತೀರ್ಪು ವಿರೋಧಿಸಿ ಸಾಹಿತಿಗಳೊಡನೆ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದು.

೧೧. ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ ವತಿಯಿಂದ ಕಾವೇರಿ ಐ ತೀರ್ಪಿನ ವಿರುದ್ಧ ಸತ್ಯಾಗ್ರಹದಲ್ಲಿ ಪಾಲ್ಗೊಂಡದ್ದು. (೨೭–೦೩–೨೦೦೭).

### ಪತ್ರಿಕೆಗಳಲ್ಲಿ

ಪ್ರಬುದ್ಧ ಕರ್ನಾಟಕ, ಕನ್ನಡ ನುಡಿ, ಸಂಯುಕ್ತ ಕರ್ನಾಟಕ, ಆದಿ ಚುಂಚನಗಿರಿ, ಕನಕಸ್ಫೂರ್ತಿ, ಕರ್ನಾಟಕ ವಿಕಾಸ, ಬಹುಜನ ಕನ್ನಡಿಗರು, ಬಸವ ಪಥ, ಮಹಾಮನೆ,

ಸಂಕ್ರಮಣ, ಜಾನಪದ ಜಗತ್ತು, ಹೊಸತು, ಕರ್ಮವೀರ, 'ಕರವೇ ನಲ್ನುಡಿ' ಮೊದಲಾದ ಪತ್ರಿಕೆಗಳಲ್ಲಿ, ಸಂಭಾವನಾ ಗ್ರಂಥಗಳಲ್ಲಿ, ಸ್ಮರಣ ಸಂಚಿಕೆಗಳಲ್ಲಿ ನೂರಾರು ಲೇಖನಗಳ ಪ್ರಕಟಣೆ.

**ಆಕಾಶವಾಣಿ**

ಡಾ. ಎಚ್. ನರಸಿಂಹಯ್ಯ, ಡಾ. ರಂ.ಶ್ರೀ. ಮುಗಳಿ, ಶ್ರೀ ಸಿ.ಕೆ. ನಾಗರಾಜರಾವ್, ಶ್ರೀ ಗೊ.ರು. ಚೆನ್ನಬಸಪ್ಪ ಅವರ ಸಂದರ್ಶನ. ಚಿಂತನ, ಕನ್ನಡಭಾರತಿ, ಸಂವಾದಗಳಲ್ಲಿ ಭಾಗವಹಿಸಿದ್ದು, ಜನಪದ ಸಂಗೀತಗಾರರ ಆಯ್ಕೆ ಸಮಿತಿ ಸದಸ್ಯನಾಗಿ ಸೇವೆ ೧೯೯೩–೯೭.

ಬೆಂಗಳೂರು ಆಕಾಶವಾಣಿ ಆರ್ಕೀವ್ಸ್ ಸಂದರ್ಶನ, ೨೦–೧೨–೨೦೧೧.

**ದೂರದರ್ಶನ**

ಡಾ. ರಂ.ಶ್ರೀ. ಮುಗಳಿ, ನಾಡೋಜ ಎಚ್.ಎಲ್. ನಾಗೇಗೌಡ ಅವರ ಸಂದರ್ಶನ. ಕವಿಗೋಷ್ಠಿ, ಸಂವಾದಗಳಲ್ಲಿ ಭಾಗವಹಿಸಿದ್ದು. ಆರು ಸಾಕ್ಷ್ಯಚಿತ್ರಗಳಿಗೆ ಸಾಹಿತ್ಯ ರಚನೆ ಮಾಡಿದ್ದು.

**ಮಾರ್ಗದರ್ಶನ**

ಆರು ಮಂದಿ ಎಂ.ಫಿಲ್ ವಿದ್ಯಾರ್ಥಿಗಳಿಗೆ.

ಮೂರು ಮಂದಿ ಪಿಎಚ್.ಡಿ ವಿದ್ಯಾರ್ಥಿಗಳಿಗೆ.

**ಪ್ರೊ. ಡಿ. ಲಿಂಗಯ್ಯ ಅವರ ಗ್ರಂಥಗಳು**

**ನಾಟಕಗಳು**

೧. ದಡ್ಡ ಶಿಖಾಮಣಿ ೧೯೬೨, ೧೯೮೦

೨. ಬಡತನದ ಬಾಳು ೧೯೬೩, ೧೯೮೦.

೩. ಬ್ರಹ್ಮಚಾರಿ ೧೯೬೪, ೧೯೯೨.

೪. ಬ್ರಹ್ಮ ಬರಹ ೧೯೮೬.

**ಕಥಾಸಂಗ್ರಹಗಳು**

೫. ಆಟಿಕೆ ೧೯೬೬, ೧೯೮೦.

೬. ರಣಕಾಟಿಗಳು ೧೯೭೪, ೧೯೮೯.

೭. ಕನಸಿನ ರಾಣಿ ೧೯೮೮.



**ವಿಮರ್ಶೆ ಗ್ರಂಥಗಳು**

೮. ಕಾವ್ಯಾಸ್ವಾದನ ೧೯೬೯, ೧೯೮೯.

೯. ಕಾವ್ಯಚಿಂತನ ೧೯೮೨.

೧೦. ಕಾವ್ಯಾನುಭವ ೧೯೯೬.

೧೧. ಕಾವ್ಯಪುರುಷ ೨೦೦೬.

**ಕವನ ಸಂಗ್ರಹಗಳು**

೧೨. ಅಂತರಂಗದ ಹಾಡು ೧೯೭೦, ೧೯೯೭.

೧೩. ವೀಕ್ಷಕ ೧೯೭೪, ೧೯೮೯.

೧೪. ಕಲಬೆರಕೆ ೧೯೭೮.

೧೫. ಭಗ್ನಪ್ರತಿಮೆ ೧೯೯೨.

೧೬. ಮಹಾತ್ಮ ಗಾಂಧೀಜಿ ೧೯೯೨.

೧೭. ವಚನ ರಚನ ೧೯೯೭.

೧೮. ಚುಟಕಾಂಜಲಿ ೧೯೯೯.

೧೯. ಪುಣ್ಯಭೂಮಿ ಭಾರತ ೧೯೯೯.

೨೦. ವಚನದವನ ೨೦೦೦.

೨೧. ಚೇತನ ಚಿಲುಮೆ ೨೦೦೨.

೨೨. ಗಂಧವತಿ ೨೦೦೩.

೨೩. ವಚನ ಹೊಂಬಾಳೆ ೨೦೦೭.

**ವ್ಯಕ್ತಿಚಿತ್ರ ಗ್ರಂಥಗಳು**

೨೪. ಕನ್ನಡ ರಥಿಕರು ೧೯೭೨.

೨೫. ಕೆಂಗಲ್ ಹನುಮಂತಯ್ಯ ೧೯೮೨.

೨೬. ದೊಡ್ಡವರು ೨೦೦೧.

೨೭. ಕನ್ನಡ ನವೋದಯ ಪ್ರವರ್ತಕ ಬಿ.ಎಂ. ಶ್ರೀಕಂಠಯ್ಯ ೨೦೦೫.

೨೮. ಬಾಳಿ ಬೆಳಗಿದವರು ೨೦೦೭.

**ಜೀವನ ಚರಿತ್ರೆಗಳು**

೨೯. ಬೆಳ್ಳಾವೆ ವೆಂಕಟನಾರಣಪ್ಪ ೧೯೭೪, ೧೯೯೯.

೩೦. ಸಂತ ಶಿಶುನಾಳ ಶರೀಫ್ ೧೯೯೬.

೩೧. ಸಿ.ಕೆ. ನಾಗರಾಜರಾವ್ ೧೯೯೬.

೩೨. ಎಚ್.ಕೆ. ವೀರಣ್ಣಗೌಡ ೧೯೯೯.

೩೩. ರಾಷ್ಟ್ರರತ್ನ ಕೆಂಗಲ್ ಹನುಮಂತಯ್ಯ ೨೦೧೦.

೩೪. ಬೆಂಗಳೂರು ಕೆಂಪೇಗೌಡ ೨೦೧೧.

**ಪ್ರಬಂಧ ಸಂಕಲನಗಳು**

೩೫. ಶಿಲಾಪದ್ಮ ೧೯೮೭.

೩೬. ಶಿಕ್ಷಣದಲ್ಲಿ ಕನ್ನಡ ೧೯೯೪.

೩೭. ಚಿಂತನ ಸಿಂಧು ೧೯೯೮.

೩೮. ಕಣ್ಣಳತೆ ೨೦೦೩.

**ಚರಿತ್ರೆ (ಸ್ವಾತಂತ್ರ್ಯ ಚಳವಳಿ) ಗ್ರಂಥಗಳು**

೩೯. ಶಿವಪುರ ಧ್ವಜ ಸತ್ಯಾಗ್ರಹ ೧೯೭೯, ೧೯೯೫, ೨೦೧೧

೪೦. ಸತ್ಯಾಗ್ರಹಿಗಳ ಸಂದರ್ಶನ ೧೯೯೮.

೪೧. ಸತ್ಯಾಗ್ರಹಿಗಳ ನೆನಪುಗಳು ೧೯೯೮.

**ಕಾದಂಬರಿಗಳು**

೪೨. ಅಸಹಾಯಕರು ೧೯೮೨, ೧೯೯೨.

೪೩. ಬದುಕು ೧೯೯೮.

**ಜಾನಪದ ಗ್ರಂಥಗಳು**

೪೪. ಕೊಂತಿಪೂಜೆ ೧೯೬೭, ೧೯೭೬.

೪೫. ಮಣ್ಣಿನ ಮಿಡಿತ ೧೯೬೯, ೧೯೮೬.

೪೬. ಪಡಿನೆರಳು ೧೯೭೧.

೪೭. ಬಯಲು ಸೀಮೆಯ ಜನಪದ ಗೀತೆಗಳು ೧೯೭೩.



೪೮. ಕರ್ನಾಟಕ ಜನಪದ ಕಾವ್ಯಗಳು ೧೯೭೬.

೪೯. ಬೋರೆದೇವರು ೧೯೭೬.

೫೦. ಜನಪದ ಸಾಹಿತ್ಯ ಸಂಗ್ರಹ ಮತ್ತು ಪ್ರಕಟಣೆ ೧೯೭೭.

೫೧. ಜನಪದ ಕಥಾಸಂಗಮ ೧೯೭೮, ೧೯೭೯.

೫೨. ಪಿರಿಯಾಪಟ್ಟಣದ ಜಗಳ ೧೯೭೯, ೧೯೮೯.

೫೩. ಜನಪದ ಪ್ರಾಣಿಕತೆಗಳು ೧೯೮೦.

೫೪. ಜನಪದ ಸಾಹಿತ್ಯ ಸಂವಾದ ೧೯೮೨.

೫೫. ಕೋಲಾಟಗಳು ೧೯೮೩.

೫೬. ಕರ್ನಾಟಕದ ಗ್ರಾಮದೇವತೆಗಳು ೧೯೮೪.

೫೭. ಜಾನಪದ : ಸ್ವರೂಪ ಮತ್ತು ಸಾಹಿತ್ಯ ೧೯೯೭, ೨೦೦೬ (ಡಾ. ಕೆ.ಆರ್. ಸಂಧ್ಯಾರೆಡ್ಡಿ ಅವರೊಡನೆ)

೫೮. ಜಾನಪದ ಶೋಧನ ೨೦೦೧.

೫೯. ಎದ್ದೊಂದು ಗಳಿಗೆ ನೆನೆದೇನ ೨೦೦೧.

೬೦. ಜಾನಪದ ನೋಟಗಳು ೨೦೦೬.

೬೧. ಬಾಳುವೆ ಮಾಡಿದರೆ ಬಾ ತಂಗಿ ಅಂದಾರು ೨೦೦೮.

೬೨. ಜ್ಯೋತಿಯೇ ಆಗು ಜಗಕೆಲ್ಲ ೨೦೦೮.

೬೩. ಜಾನಪದ ಜಂಗಮ ಎಸ್.ಕೆ. ಕರೀಂಖಾನ್ ೨೦೦೮.

೬೪. ವಾಗೀಶ್ವರಿ ಶಾಸ್ತ್ರಿ ೨೦೧೦.

೬೫. ಸೋಬಾನೆ ಕೃಷ್ಣೇಗೌಡ ೨೦೧೦.

**ಸಂಪಾದಿತ ಗ್ರಂಥಗಳು**

೬೬. ರಾಜಕೀಯ ಪಟು ೧೯೭೫.

೬೭. ಆದಿಚುಂಚನಗಿರಿ ೧೯೭೬.

೬೮. ಗುರುದರ್ಶನ ೧೯೮೪.

೬೯. ಹಸಿರುನಾಡು ೧೯೭೬.

೭೦. ಸಂಗಮ ೧೯೭೮.

೭೧. ಚಿಂತನ (೧೯೭೨, ೧೯೭೩, ೧೯೭೯).

೭೨. ಚಂದನ (೧೯೮೪–೮೭).

೭೩. ಪ್ರತಿಭಾ (೧೯೭೦–೮೦).

೭೪. ಯುವಶಕ್ತಿ (೧೯೮೪–೯೬).

೭೫. ಸಾಹಿತ್ಯ ಸುಮನ–೩, ೧೯೮೦.

೭೬. ಗದ್ಯ ಕುಸುಮಾಂಜಲಿ ೧೯೮೮.

೭೭. ಪ್ರಾಚೀನ ಕಾವ್ಯಮಾರ್ಗ–೪, ೧೯೯೪.

೭೮. ಜಾನಪದ ಜಗತ್ತು (ಪತ್ರಿಕೆ) (ಇತರರೊಡನೆ) ೧೯೯೨ ರಿಂದ.

೭೯. ಬೆಳ್ಳಿ ಬಾಗಿನ ೧೯೯೪.

೮೦. ಸಾಹಿತ್ಯೋಪಾಸಕರು (ಇತರರೊಡನೆ) ೨೦೦೪.

೮೧. ಜಾಗತೀಕರಣ–ಬೆಂಗಳೂರು ೨೦೦೫.

೮೨. ಯಲಹಂಕ ನಾಡಪ್ರಭುಗಳು : ಜಾನಪದ ಸಂಪುಟ ೨೦೦೫.

೮೩. ಸುವರ್ಣ ಕನ್ನಡ ಕವಿತೆ ೨೦೦೭.

೮೪. ಸುವರ್ಣ ಕನ್ನಡ ಗದ್ಯ ೨೦೦೯.

೮೫. ಕರ್ನಾಟಕ ಜಾನಪದ ಪರಿಷತ್ತಿನ ಅರವತ್ತು ಗ್ರಂಥಗಳು (೨೦೦೬–೧೦).*

**ನಿಧನ : ೧೨–೦೯–೨೦೧೨**

---

* ಪ್ರೊ. ಡಿ. ಲಿಂಗಯ್ಯನವರು 'ನಡೆದು ಬಂದ ದಾರಿ'ಯ ವಿವರಗಳನ್ನು ನೀಡಿದವರು ಅವರ ಪುತ್ರ ಶ್ರೀ ಎಲ್. ಅನಂತರಾಜ್, ವಿಳಾಸ : # ೬೯೦, ೭ನೇ ಬ್ಲಾಕ್, ೨ನೇ ಫೇಸ್, ಬನಶಂಕರಿ ೩ನೇ ಹಂತ, ಬೆಂಗಳೂರು– ೫೬೦೦೮೫. ದೂರವಾಣಿ : ೦೮೦–೨೬೭೨೯೮೯, ಮೊಬೈಲ್ : ೯೯೦೨೪೬೮೯೯.